ಸೋಮವಾರ, ಮಾರ್ಚ್ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 71 | ಪುಟ 18

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕೇಂದ್ರದ ಮುಂದೆ ಹಲವು ಹಾದಿಗಳು...

ಕಾರ್ಯಕರ್ತರಿಂದಲೇ ಶೋಭಾಗೆ 'ಗೋ ಬ್ಯಾಕ್' 4

ರೈಲು ತಡೆದು ರೈತರ ಪ್ರತಿಭಟನೆ 11

ಪಶ್ಚಿಮ ಬಂಗಾಳ: 42 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಟಿಎಂಸಿ

7 ಸಂಸದರಿಗೆ ಕೊಕ್, 12 ಮಹಿಳೆಯರು ಕಣಕ್ಕೆ 4

ಪರಿಶ್ರಮ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್ (ರಿ)
ಪರಿಶ್ರಮ ಪಿಯು ಕಾಲೇಜು
Recg. by Dept. of PU Education, GoK
UNDER THE GUIDANCE OF PRADEEP ESHWAR

ನಿಮ್ಮ ಪಯಣ ಇಲ್ಲಿ ಪ್ರಾರಂಭ
ADMISSIONS ENQUIRY OPEN FOR 2024-25
UPCOMING COURSES PCMB & PCMC
Residential & Day Scholars
SCAN TO REGISTER
ಇಂಟಿಗ್ರೇಟೆಡ್ NEET, JEE MAIN & KCET ತರಬೇತಿ
080 24413444, 7483830545

GRACE IAS
Vijayanagara, Bengaluru - 40
KAS Prelims Online & Offline
CRASH COURSE & TEST SERIES
Starts from March 15th
Call : 7899678279

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹ 6075/gm
ಬೆಳ್ಳಿ ದರ: ₹ 74/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಮೂರನೇ ತಲೆಮಾರಿನ ಮಧ್ಯೆ ಪೈಪೋಟಿ 4

4 ವರ್ಷಗಳಲ್ಲಿ 42 ನೇಕಾರರ ಆತ್ಮಹತ್ಯೆ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎರಡು ತಿಂಗಳಿನಿಂದ ನಡೆಯದ ಪ್ರಕ್ರಿಯೆ • ಎಂಎಸ್‌ಪಿ ಯೋಜನೆ ಗಡುವಿಗೆ 20 ದಿನಗಳಷ್ಟೇ ಬಾಕಿ

ಖರೀದಿ ವಿಳಂಬ: ರೈತರು ಕಂಗಾಲು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರೈತರಿಂದ ಭತ್ತ, ರಾಗಿ ಮತ್ತು ಜೋಳ ಖರೀದಿಸುವ ಪ್ರಕ್ರಿಯೆಯ ಗಡುವು ಮುಗಿಯಲು ಕೇವಲ 20 ದಿನಗಳು ಬಾಕಿ ಉಳಿದಿದ್ದು, ರಾಜ್ಯದಲ್ಲಿ ಖರೀದಿಯೇ ಆರಂಭವಾಗಿಲ್ಲ. ಇದರಿಂದ ಲಕ್ಷಾಂತರ ರೈತರು ಕಂಗಾಲಾಗಿದ್ದಾರೆ.

ಈ ಬಾರಿ ರಾಜ್ಯದಲ್ಲಿ ಎಂಎಸ್‌ಪಿ ಯೋಜನೆ ಅಡಿಯಲ್ಲಿ 5.99 ಲಕ್ಷ ಟನ್ ರಾಗಿ, 2.5 ಲಕ್ಷ ಟನ್ ಭತ್ತ ಮತ್ತು 3 ಲಕ್ಷ ಟನ್ ಬಿಳಿ ಜೋಳ ಖರೀದಿಗೆ 2023ರ ನವೆಂಬರ್‌ನಲ್ಲೇ ಒಪ್ಪಿಗೆ ನೀಡಲಾಗಿತ್ತು. 'ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿಗಳ ಮಾಹಿತಿ ವ್ಯವಸ್ಥೆ' ಯಲ್ಲಿ (ಫ್ರೂಟ್ಸ್) ಅಡಿಯಲ್ಲಿ ಡಿಸೆಂಬರ್ 1 ರಿಂದ 31ರವರೆಗೆ ನೋಂದಣಿ ಪ್ರಕ್ರಿಯೆ ನಡೆದಿತ್ತು.

6ನೇ ಪುಟ ನೋಡಿ

ಎಂಎಸ್‌ಪಿ ಯೋಜನೆಯಡಿ ಖರೀದಿ ಗುರಿ

ಎಂಎಸ್‌ಪಿ: ರೈತರ ನೋಂದಣಿ ವಿವರ

ಆಹಾರ ಧಾನ್ಯ	ರೈತರ ಸಂಖ್ಯೆ	ಪ್ರಮಾಣ (ಕ್ವಿಂಟಲ್‌ಗಳಲ್ಲಿ)
ಭತ್ತ	118	3,279
ರಾಗಿ	1,65,418	37,77,878
ಬಿಳಿ ಜೋಳ	8,089	3,31,049

ಭತ್ತ ಮಾರುವವರಿಲ್ಲ

ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ (ಎಂಎಸ್ಪಿ) ಯೋಜನೆಯಡಿ 25 ಲಕ್ಷ ಕ್ವಿಂಟಲ್ ಭತ್ತ ಖರೀದಿಗೆ ಅವಕಾಶವಿದೆ. 118 ರೈತರು ಮಾತ್ರ ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿದ್ದು, ಕೇವಲ 3,279 ಕ್ವಿಂಟಲ್ ಭತ್ತ ಖರೀದಿಗೆ ಲಭ್ಯವಿದೆ.

ಬರಗಾಲದ ಕಾರಣದಿಂದ ರಾಜ್ಯದಲ್ಲಿ ಭತ್ತದ ಉತ್ಪಾದನೆ ಗಣನೀಯವಾಗಿ ಕುಸಿದಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಭತ್ತದ ದರ ಏರಿಕೆಯಾಗಿದೆ. ಎಂಎಸ್‌ಪಿ ದರಕ್ಕಿಂತ ಹೆಚ್ಚಿನ ದರ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಕಾರಣದಿಂದಾಗಿ ರೈತರು ಖರೀದಿ ಕೇಂದ್ರಗಳತ್ತ ಮುಖ ಮಾಡಿಲ್ಲ.

ಎಂಎಸ್‌ಪಿ ದರ (ಪ್ರತಿ ಕ್ವಿಂಟಲ್‌ಗೆ)

ಭತ್ತ (ಸಾಮಾನ್ಯ)	₹2,183
ಭತ್ತ (ಗ್ರೇಡ್-ಎ)	₹2,203
ಬಿಳಿ ಜೋಳ (ಹೈಬ್ರಿಡ್)	₹3,180
ಬಿಳಿ ಜೋಳ (ಮಾಲ್ದಂಡಿ)	₹3,225
ರಾಗಿ	₹3,846

ಎಂಎಸ್‌ಪಿ ಯೋಜನೆಯಡಿ ಖರೀದಿ ವಿಳಂಬದಿಂದ ಮಧ್ಯವರ್ತಿಗಳು ಮತ್ತು ರೈತರ ಹೆಸರಿನಲ್ಲಿ ಅಕ್ರಮವಾಗಿ ಆಹಾರ ಧಾನ್ಯ ಮಾರುವವರಿಗೆ ಅನುಕೂಲವಾಗುತ್ತದೆ. ತಕ್ಷಣ ಖರೀದಿ ಆರಂಭಿಸಬೇಕು ಮತ್ತು ಗಡುವು ವಿಸ್ತರಿಸಬೇಕು

ಬಡಗಲಪುರ ನಾಗೇಂದ್ರ, ರೈತ ಸಂಘದ ಅಧ್ಯಕ್ಷ

ಸಾತ್ವಿಕ್–ಚಿರಾಗ್ ಮುಡಿಗೆ ಫ್ರೆಂಚ್ ಕಿರೀಟ

37 ನಿಮಿಷ ಫೈನಲ್ ಹಣಾಹಣಿ ನಡೆದ ಅವಧಿ

2 ಭಾರತದ ಜೋಡಿಯು ಎರಡನೇ ಬಾರಿ ಈ ಪ್ರಶಸ್ತಿಯನ್ನು ಜಯಿಸಿದೆ

ಚಿತ್ರ: ಬಿಎಐ ಮಿಡಿಯಾ ಎಕ್ಸ್

ಪ್ಯಾರಿಸ್ (ಪಿಟಿಐ): ವಿಶ್ವದ ಅಗ್ರಮಾನ್ಯ ಜೋಡಿ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಫೈನಲ್ ನಲ್ಲಿ ಭಾರತದ ಜೋಡಿಯು ನೇರ ಗೇಮ್ ಗಳಿಂದ ಜಯಿಸಿತು.

ಫೈನಲ್ ಪಂದ್ಯದ ಫಲಿತಾಂಶ		
ಸಾತ್ವಿಕ್–ಚಿರಾಗ್ (ಭಾರತ)	21	21
ಲೀ ಜೆ–ಯಾಂಗ್ ಪೊ ಸುವಾನ್ (ಚೈನಿಸ್ ತೈಪೆ)	17	11

'ಬೊಕ್ಕಸಕ್ಕೆ ₹ 2,900 ಕೋಟಿ ನಷ್ಟ'

• ರಾಜೇಶ್ ರೈ ಚಟ್ಲ

ಬೆಂಗಳೂರು: 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ನಿರಂತರ ಎಚ್ಚರಿಕೆಗಳ ಮಧ್ಯೆಯೂ, ಅಪಾಯಕಾರಿ ಘನ ಮತ್ತು ದ್ರವ ತ್ಯಾಜ್ಯಗಳ ವಿಲೇವಾರಿಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಹೀಗಾಗಿ ಬೊಕ್ಕಸಕ್ಕೆ ₹ 2,900 ಕೋಟಿ ನಷ್ಟವಾಗಿದೆ' ಎಂದು ಮಹಾಲೆಕ್ಕ ಪರಿಶೋಧಕರು ಮತ್ತು ಮಹಾಲೇಖಪಾಲರ ಹಣಕಾಸು ಲೆಕ್ಕ ಪರಿಶೋಧನಾ ಘಟಕ (ಎಫ್‌ಎಡಬ್ಲ್ಯು) ಅಭಿಪ್ರಾಯಪಟ್ಟಿದೆ.

ಈ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಫೆಬ್ರುವರಿ 21ರಂದು ಪತ್ರ ಬರೆದಿರುವ ಪ್ರಧಾನ ಅಕೌಂಟೆಂಟ್ ಜನರಲ್, 'ಪರಿಸರಕ್ಕೆ ಆಗಿರುವ ನಷ್ಟವನ್ನು ಮರುಸ್ಥಾಪಿಸುವ ಉದ್ದೇಶದಿಂದ ಎನ್‌ಜಿಟಿ ನೀಡಿದ್ದ ಆದೇಶವನ್ನು ಪಾಲಿಸುವ ನಿಟ್ಟಿನಲ್ಲಿ ತಮ್ಮ ಮಟ್ಟದಲ್ಲಿ ತೆಗೆದುಕೊಂಡಿರುವ ಕ್ರಮಗಳ ಮಾಹಿತಿ ನೀಡಬೇಕು' ಎಂದು ಕೋರಿದ್ದಾರೆ. 'ರಾಜ್ಯ ಸರ್ಕಾರ, ಅದರಲ್ಲೂ ವಿಶೇಷವಾಗಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳಿಂದ ಪದೇ ಪದೇ ಆಗಿರುವ ವೈಫಲ್ಯಗಳು ಮತ್ತು ಎನ್‌ಜಿಟಿ ಆಗಾಗ ನೀಡಿದ್ದ ಎಚ್ಚರಿಕೆಗಳನ್ನು ಗಣನೆಗೆ ತೆಗೆದುಕೊಳ್ಳದ ಕಾರಣ ಇಷ್ಟು ದೊಡ್ಡ ಪ್ರಮಾಣದ ನಷ್ಟ ಆಗಿದೆ ಎಂದೂ ಎಫ್‌ಎಡಬ್ಲ್ಯು ಗಮನಿಸಿದೆ' ಎಂಬ ಉಲ್ಲೇಖ ಪತ್ರದಲ್ಲಿದೆ.

ಲೆಕ್ಕ ಪರಿಶೋಧನಾ ಘಟಕದ ಮಾಹಿತಿ

ಘನ ಮತ್ತು ದ್ರವ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸದೆ ಪರಿಸರಕ್ಕೆ ಹಾನಿ ಉಂಟು ಮಾಡಿದ್ದರಿಂದ ಸರ್ಕಾರಕ್ಕೆ 2022ರ ಅಕ್ಟೋಬರ್ 13ರಂದು ಎನ್‌ಜಿಟಿ ₹ 3,400 ಕೋಟಿ ದಂಡ ವಿಧಿಸಿತ್ತು. ಎರಡು ತಿಂಗಳಲ್ಲಿ ಪ್ರತ್ಯೇಕ ಖಾತೆಯಲ್ಲಿ ಹಣ ಠೇವಣಿ ಇಡಬೇಕು. ಆರು ತಿಂಗಳಲ್ಲಿ ಮುಖ್ಯ ಕಾರ್ಯದರ್ಶಿ ನಿರ್ದೇಶನದಂತೆ ಪರಿಸರಕ್ಕೆ ಆಗಿರುವ ನಷ್ಟವನ್ನು ಮರುಸ್ಥಾಪಿಸುವ ಕಾರ್ಯ ಆರಂಭಿಸಬೇಕು ಎಂದೂ ಆದೇಶಿಸಿತ್ತು.

5ನೇ ಪುಟ ನೋಡಿ

ಆಯುಕ್ತರ ನೇಮಕ: 15ಕ್ಕೆ ಸಭೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣಾ ಆಯೋಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೇಂದ್ರ ಸರ್ಕಾರವು ತ್ವರಿತಗತಿಯಲ್ಲಿ ಮುಂದಡಿ ಇರಿಸಿರುವಂತಿದೆ. ಚುನಾವಣಾ ಆಯುಕ್ತರನ್ನು ನೇಮಕ ಮಾಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿಯು ಮಾರ್ಚ್ 15ರ ಸುಮಾರಿಗೆ ಸಭೆ ಸೇರುವ ನಿರೀಕ್ಷೆ ಇದೆ.

ಚುನಾವಣಾ ಆಯುಕ್ತ ಅರುಣ್ ಗೋಯಲ್ ಅವರು ತಮ್ಮ ಸ್ಥಾನಕ್ಕೆ ಹಠಾತ್ ರಾಜೀನಾಮೆ ನೀಡಿದ್ದಾರೆ. ಇನ್ನೊಬ್ಬ ಚುನಾವಣಾ ಆಯುಕ್ತ ಆಗಿದ್ದ ಅನೂಪ್ ಪಾಂಡೆ ಅವರು ಫೆಬ್ರುವರಿಯಲ್ಲಿ ನಿವೃತ್ತರಾಗಿದ್ದಾರೆ. ಈಗ ಚುನಾವಣಾ ಆಯೋಗದ ಸಮಿತಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್ ಕುಮಾರ್ ಮಾತ್ರ ಇದ್ದಾರೆ.

ಲೋಕಸಭಾ ಚುನಾವಣೆಯ ವಿಚಾರವಾಗಿ ಗೋಯಲ್ ಅವರು ರಾಜೀವ್ ಕುಮಾರ್ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದರು ಎಂಬ ಊಹಾಪೋಹಗಳಿವೆ. ಹೀಗಾಗಿ, ಗೋಯಲ್ ಅವರ ರಾಜೀನಾಮೆಗೂ, ಅವರು ರಾಜೀವ್ ಕುಮಾರ್ ಅವರ ಜೊತೆ ಹೊಂದಿದ್ದರು ಎನ್ನಲಾದ ಭಿನ್ನಾಭಿಪ್ರಾಯಕ್ಕೂ ಸಂಬಂಧ ಇದೆಯೇ ಎಂಬ ಪ್ರಶ್ನೆಯನ್ನು ವಿರೋಧ ಪಕ್ಷಗಳು ಎತ್ತಿವೆ.

ಮಾರ್ಚ್ 5ರಂದು ಕೋಲ್ಕತ್ತದಲ್ಲಿ ನಡೆದ ಚುನಾವಣಾ ಆಯೋಗದ ಸುದ್ದಿಗೋಷ್ಠಿಯಲ್ಲಿ ಗೋಯಲ್ ಅವರು ಹಾಜರಿರಲಿಲ್ಲ. ಅವರು ಆರೋಗ್ಯದ ಸಮಸ್ಯೆಯ ಕಾರಣಕ್ಕಾಗಿ ಸುದ್ದಿಗೋಷ್ಠಿಗೆ ಬಂದಿಲ್ಲ ಎಂದು ಹೇಳಲಾಗಿತ್ತು. ಆದರೆ, ಅವರ ಅಂದಿನ ಅನುಪಸ್ಥಿತಿಯು, ರಾಜೀನಾಮೆ ನಂತರದ ಊಹಾಪೋಹಗಳಿಗೆ ಪುಷ್ಟಿ ನೀಡುತ್ತಿದೆ.

ಗೋಯಲ್ ಅವರು ರಾಜೀನಾಮೆಗೆ ಕಾರಣ ಏನು ಎಂಬುದನ್ನು ಅಧಿಕೃತವಾಗಿ ಹೇಳಿಲ್ಲ. ಸರ್ಕಾರ ಅಥವಾ ಚುನಾವಣಾ ಆಯೋಗದ ಕಡೆಯಿಂದಲೂ ವಿವರಣೆ ಲಭ್ಯವಾಗಿಲ್ಲ. ಅವರು 2027ರ ಡಿಸೆಂಬರ್‌ವರೆಗೆ ಕರ್ತವ್ಯ ಅವಧಿ ಹೊಂದಿದ್ದರು. ಅಲ್ಲದೆ, ಗೋಯಲ್ ಅವರು ಮುಂದೆ ಮುಖ್ಯ ಚುನಾವಣಾ ಆಯುಕ್ತ ಆಗುವ ಸಾಧ್ಯತೆಯೂ ಇತ್ತು. ಚುನಾವಣಾ ಆಯೋಗದಲ್ಲಿ ಸಿಇಸಿ ಮಾತ್ರ ಇದ್ದಾರೆ ಎಂಬ ಕಾರಣಕ್ಕೆ ಆಯೋಗದ ಕರ್ತವ್ಯಗಳ ನಿರ್ವಹಣೆಗೆ ಕಾನೂನಿನ ತೊಡಕೇನೂ ಇಲ್ಲ. ಪಾಂಡೆ ಅವರ ನಿವೃತ್ತಿಯ ನಂತರ ಅವರ ಸ್ಥಾನಕ್ಕೆ ಇನ್ನೊಬ್ಬರನ್ನು ನೇಮಕ ಮಾಡಲು ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಂಡಿರಲಿಲ್ಲ.

11ನೇ ಪುಟ ನೋಡಿ

ಬೇಸಿಗೆಯ ದಿನಗಳು!
ಈಗ ಮನೆಯಲ್ಲಿ ಬೇಕು
ಕೈಲಾಸ ಜೀವನ
ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್

| ಕೈ ಕಾಲು ಮತ್ತು ಕಣ್ಣುಗಳ ಉರಿತ |
| ಪಾದಗಳ ಬಿರಿತ | ಮೊಡವೆಗಳು | ಸುಡುವಿಕೆ | ಫಿಶರ್ಸ್ |
ಕೊಯ್ತು ಮೊದಲದವಕ್ಕೆ ಗುಣಕಾರಿ
Available in: 12g, 20g Tube, 30g, 60g, 120g, 230g Bottle
Manufacturer: ASUM, Pune. 020-24486865 | Customer Care: Prashant: 91300 26070
asumkj@gmail.com | www.asum.com
Also available on amazon netmeds.com
anunaad.com

ಗೋಬಿ, ಕಾಟನ್ ಕ್ಯಾಂಡಿ ಕೃತಕ ಬಣ್ಣ ಬಳಕೆ ನಿರ್ಬಂಧ

ಆಹಾರ ಸುರಕ್ಷತೆ ಕಾಯ್ದೆ ಉಲ್ಲಂಘಿಸಿದರೆ 7 ವರ್ಷಗಳಿಂದ ಜೀವಾವಧಿವರೆಗೆ ಜೈಲು, ₹ 10 ಲಕ್ಷವರೆಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗೋಬಿ ಮಂಚೂರಿ ತಯಾರಿಕೆಯಲ್ಲಿ ಕೃತಕ ಬಣ್ಣ ಬಳಸುವುದನ್ನು ಮತ್ತು ಕಾಟನ್ ಕ್ಯಾಂಡಿಯಲ್ಲಿ (ಬೊಂಬಾಯಿ ಮಿಠಾಯಿ) 'ರೋಡಮೈನ್-ಬಿ' ಹಾಗೂ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕೃತಕ ಬಣ್ಣ ಬಳಸುವುದನ್ನು ನಿರ್ಬಂಧಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

5ನೇ ಪುಟ ನೋಡಿ

ಬಿಜೆಪಿಯೊಳಗೆ 'ಬಣ' ರಾಜಕಾರಣ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಕ್ಷೇತ್ರಗಳ ಟಿಕೆಟ್‌ಗಾಗಿ ಬಿಜೆಪಿಯಲ್ಲಿ ಬಣ ರಾಜಕೀಯ ತಾರಕಕ್ಕೇರಿದೆ. ಹಾಲಿ ಸಂಸದರು ಕ್ಷೇತ್ರ ಉಳಿಸಿಕೊಳ್ಳಲು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದರೆ, ಹಲವು ಕ್ಷೇತ್ರಗಳಲ್ಲಿ ಕಾರ್ಯಕರ್ತರು, ಶಾಸಕರಿಂದ ಹಾಲಿ ಸಂಸದರು ತೀವ್ರ ಪ್ರತಿರೋಧ ಎದುರಿಸುತ್ತಿದ್ದಾರೆ.

ಚಿಕ್ಕಮಗಳೂರು- ಉಡುಪಿ ಕ್ಷೇತ್ರದ ಬಳಿಕ ತುಮಕೂರು ಕ್ಷೇತ್ರದಲ್ಲೂ 'ಗೋ ಬ್ಯಾಕ್' ಕೂಗು ಕೇಳಿಬಂದಿದೆ. ಚಿಕ್ಕಮಗಳೂರು, ತುಮಕೂರು, ಬೀದರ್, ಉತ್ತರ ಕನ್ನಡ, ಮೈಸೂರು, ಹಾವೇರಿ ಲೋಕಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಬಿಜೆಪಿ ವರಿಷ್ಠರಿಗೆ ಕಗ್ಗಂಟಾಗಿ ಪರಿಣಮಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಮೇಲೆ ಹಾಲಿ ಸಂಸದರು ಮತ್ತು ಹೊಸ ಆಕಾಂಕ್ಷಿಗಳಿಂದಲೂ ಒತ್ತಡ ಹೆಚ್ಚಾಗಿದೆ.

ಚಿಕ್ಕಮಗಳೂರು–ಉಡುಪಿ ಕ್ಷೇತ್ರದಲ್ಲಿ ಹಾಲಿ ಸಂಸದೆ ಶೋಭಾ ಕರಂದ್ಲಾಜೆ ವಿರುದ್ಧ ಆರಂಭದಿಂದಲೇ ಕಾರ್ಯಕರ್ತರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಪಕ್ಷದ ಸಭೆಯಲ್ಲೇ ಕಾರ್ಯಕರ್ತರು ಶೋಭಾ ವಿರುದ್ಧ ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ. ಒಮ್ಮೆ ಗೆದ್ದು ಹೋದ ಮೇಲೆ ಕ್ಷೇತ್ರದ ಕಡೆ ತಲೆ ಹಾಕುವುದಿಲ್ಲ ಮತ್ತು ಕಾರ್ಯಕರ್ತರ ಜತೆ ಸಂಪರ್ಕವನ್ನೂ ಇಟ್ಟುಕೊಳ್ಳುವುದಿಲ್ಲ, ಭೇಟಿಗೆ ಅವಕಾಶವೇ ಸಿಗುವುದಿಲ್ಲ. ಇವೆಲ್ಲ ಕಾರಣಗಳಿಂದಾಗಿ ಅವರು ನಮ್ಮ ಕ್ಷೇತ್ರಕ್ಕೆ ಬೇಡ ಎಂದು ಪಟ್ಟು ಹಿಡಿದಿದ್ದಾರೆ.

4ನೇ ಪುಟ ನೋಡಿ

VICCO ವಿಶ್ವಾಸಾರ್ಹ ಆಯುರ್ವೇದ 1952 ರಿಂದ
BEST BRANDS 2023
24 ಕ್ಯಾರಟ್ ಸೌಂದರ್ಯ ನೀಡುತ್ತದೆ ಬಂಗಾರದಂತಹ ಹೊಳಪನ್ನು.


ವೀಕೋ ಟರ್ಮರಿಕ್ ಕ್ರೀಮ್, ವಿಶ್ವಾಸ ಮತ್ತು ಶ್ರೇಷ್ಠ ಗುಣಮಟ್ಟದ ಪ್ರತೀಕ, ಅರಿಶಿನ ಮತ್ತು ಚಂದನದ ಗುಣದಿಂದ ಕೂಡಿದೆ. ಇದರಲ್ಲಿ ಆಯುರ್ವೇದ ಮತ್ತು ವಿಜ್ಞಾನದ ಅದ್ಭುತ ಸಮ್ಮಿಲನವಿದೆ. ಶತಶತಮಾನಗಳಿಂದ ನಮ್ಮ ಚರ್ಮಕ್ಕೆ ಅರಿಶಿನ ಸೌಂದರ್ಯವನ್ನೂ, ಚಂದನ ಕೋಮಲತೆಯನ್ನೂ ಕೊಡುತ್ತಾ ಬಂದಿವೆ. ಈ ಗುಣಗಳ ಕಾರಣವಾಗಿ ಮದುವೆಯ ಸಂದರ್ಭದಲ್ಲಿ, ಅರಿಶಿನ ಶಾಸ್ತ್ರದ ಕಾಲದಲ್ಲಿ ವಧು-ವರರು ವೀಕೋ ಟರ್ಮರಿಕ್ ಕ್ರೀಮನ್ನು ಬಳಸಿ ತಮ್ಮ ಚರ್ಮಕ್ಕೆ ಹೊಳಪು ಕೊಡಬಹುದು. ಇದಲ್ಲದೆಯೆವೀಕೋಟರ್ಮರಿಕ್‌ಕ್ರೀಮ್ ಮೊಡವೆಗಳು, ಚರ್ಮದ ಗುಳ್ಳೆಗಳು, ಬೊಕ್ಕೆಗಳು, ಕಲೆಗಳನ್ನು ಹಾಗೂ ಚರ್ಮ ಒಣಗುವಂತಹ ಸಮಸ್ಯೆಗಳನ್ನುನಿವಾರಿಸುವಲ್ಲಿ ನೆರವಾಗುತ್ತದೆ. ವೀಕೋ ಟರ್ಮರಿಕ್ ಕ್ರೀಮ್ ಚರ್ಮಕ್ಕೆ ಕೋಮಲತೆ, ಅನುಪಮ ಸೌಂದರ್ಯ ಹಾಗೂಬಂಗಾರದಂತಹ ಹೊಳಪನ್ನು ನೀಡುತ್ತದೆ.
• Follow us on @viccolabs • Like us on /ViccoLabs
• Shop online at https://viccolabs.com • Customer Care No. 0712-2420890

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

ಹನುಮಂತನಗರ ಮುಖ್ಯ ರಸ್ತೆಯಲ್ಲಿ ಕಸ ಹಾಕಿರುವುದು

‘ಕಸದ ಸಮಸ್ಯೆಗೆ ಮುಕ್ತಿ ನೀಡಿ’

ಬಸವನಗುಡಿ ವಿಧಾನಸಭಾ ಕ್ಷೇತ್ರದ ಅನೇಕ ರಸ್ತೆಗಳ ತಿರುವಿನಲ್ಲಿ ಕಸದ ರಾಶಿಗಳನ್ನು ಹಾಕಲಾಗುತ್ತಿದೆ. ಹಿಂದೆ ಮನೆ ಮನೆಗೆ ಬಂದು ಕಸ ಸಂಗ್ರಹಿಸಲಾಗುತ್ತಿತ್ತು. ಕಸದ ವಾಹನದವರು ಗಂಟೆ ಅಥವಾ ವಿಸಿಲ್ ಬಾರಿಸುತ್ತಿದ್ದರು. ಆದರೆ, ಈಗ ವಾಹನಗಳು ಯಾವಾಗ, ಎಷ್ಟು ಹೊತ್ತಿಗೆ ಬರುತ್ತವೆ ಎನ್ನುವುದು ತಿಳಿಯದಾಗಿದೆ. ಇದರಿಂದಾಗಿ ಜನರು ಕಸವನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಕಸ ಸಂಗ್ರಹಿಸುವ ವಿಚಾರದಲ್ಲಿ ಸರಿಯಾದ ಮಾರ್ಗೋಪಾಯಗಳನ್ನು ಅನುಸರಿಸದಿದ್ದರೆ ಬೆಂಗಳೂರು ನಗರ ಮತ್ತೊಮ್ಮೆ ತಿಪ್ಪೇ ನಗರವಾಗಿ ಬದಲಾಗಿ, ತನ್ನ ಗೌರವವನ್ನು ಕಳೆದುಕೊಳ್ಳುತ್ತದೆ.

ಕೆ.ಎಸ್. ನಾಗರಾಜ್, ಹನುಮಂತನಗರ ನಿವಾಸಿ

‘ಪಾದಚಾರಿ ಮಾರ್ಗ ದುರಸ್ತಿಪಡಿಸಿ’

ಹೆಬ್ಬಾಳ ಕೆಂಪಾಪುರ ಮುಖ್ಯ ರಸ್ತೆಯ ಪಾದಚಾರಿ ಮಾರ್ಗ ಅದ್ವಾನವಾಗಿ ವರ್ಷವೇ ಕಳೆದಿದೆ. ಆದರೂ ಅದನ್ನು ಸರಿಪಡಿಸಿಲ್ಲ. ಪಾದಚಾರಿ ಮಾರ್ಗದ ಮುಂಭಾಗದಲ್ಲಿ ಸಿಂಧಿ ಸ್ಕೂಲ್ ಹಾಗೂ ಕಾಲೇಜು ಇದೆ. ಇದರಿಂದಾಗಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ಓಡಾಡುತ್ತಾರೆ. ಪಾದಚಾರಿ ಮಾರ್ಗದ ಕಲ್ಲು ಹಾಸು ಕಿತ್ತು ಹೋಗಿರುವುದರಿಂದ ಮೋರಿ ತೆರೆದುಕೊಂಡಿದ್ದು, ಕಸದ ತೊಟ್ಟಿಯಾಗಿ ಪರಿವರ್ತನೆಯಾಗಿದೆ. ದಾರಿ ಹೋಕರು ತ್ಯಾಜ್ಯ ಮತ್ತು ಕಸ ಕಡ್ಡಿಗಳನ್ನು ತೆರೆದ ಮೋರಿಯಲ್ಲಿ ಬಿಸಾಡುವುದು ಸಾಮಾನ್ಯವಾಗಿದೆ. ಮಳೆಗಾಲದಲ್ಲಿ ಮೋರಿಯಲ್ಲಿ ನೀರು ತುಂಬಿ, ರಸ್ತೆಗೆ ಕೊಳಚೆ ನೀರು ಬರಲಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈಗಾಲಾದರೂ ಈ ಬಗ್ಗೆ ಗಮನ ಹರಿಸಿ, ಸಮಸ್ಯೆಯನ್ನು ನಿವಾರಿಸಬೇಕು.

ಶಿವಪ್ರಸಾದ್ ಎಸ್., ಕೆಂಪೇಗೌಡ ರಸ್ತೆ ಬಡಾವಣೆ ನಿವಾಸಿ

ಹೆಬ್ಬಾಳ ಕೆಂಪಾಪುರ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದ ಕಲ್ಲು ಹಾಸು ಕಿತ್ತು ಹೋಗಿರುವುದು

ವೆಂಕಟೇಶಪ್ಪ ಲೇಔಟ್ ರಸ್ತೆಯೊಂದರಲ್ಲಿ ಕಸಕ್ಕೆ ಬೆಂಕಿ ಹಾಕಿರುವುದು

‘ಕಸಕ್ಕೆ ರಸ್ತೆಯಲ್ಲಿಯೇ ಬೆಂಕಿ’

ಬಾಬುಸಾಬ್ ಪಾಳ್ಯ ವೆಂಕಟೇಶಪ್ಪ ಲೇಔಟ್ ರಸ್ತೆಗಳಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ. ರಸ್ತೆಗಳು ಅಕ್ಷರಶಃ ಕಸದ ತೊಟ್ಟಿಯಂತಾಗಿವೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಇವು ಕ್ರಮೇಣ ಕೊಳೆತು ದುರ್ನಾತ ಬೀರುತ್ತವೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆ ಆಗುತ್ತಿದೆ. ಕಸದ ರಾಶಿಗೆ ರಸ್ತೆಯ ಮೇಲೆ ಎಲ್ಲೆಂದರಲ್ಲಿ ಬೆಂಕಿಯನ್ನೂ ಇಡಲಾಗುತ್ತಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಆಕಾಶ್, ವೆಂಕಟೇಶಪ್ಪ ಲೇಔಟ್ ನಿವಾಸಿ

ಮಲ್ಲತ್ತಹಳ್ಳಿ ಮುಖ್ಯರಸ್ತೆಯಿಂದ ಬಾಲಾಜಿ ಬಡಾವಣೆಗೆ ಹೋಗುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು

‘ಗುಂಡಿಗಳಿಂದ ಕೂಡಿದ ರಸ್ತೆ’

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಲ್ಲತ್ತಹಳ್ಳಿ ಮುಖ್ಯ ರಸ್ತೆಯಿಂದ ಬಾಲಾಜಿ ಬಡಾವಣೆಗೆ ಹೋಗುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದಾಗಿ ವಾಹನ ಸಂಚಾರ ದುಸ್ತರವಾಗಿದ್ದು, ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ. ಗುಂಡಿಮಯ ರಸ್ತೆಗಳಿಂದ ವಾಹನ ಸವಾರರಿಗೆ ವಿಪರೀತ ತೊಂದರೆಯಾಗುತ್ತಿದೆ. ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ. ಚಾಲಕರು ಗುಂಡಿಗಳನ್ನು ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಈ ರಸ್ತೆಯ ಮೂಲಕ ಓಡಾಡುವುದು ಕಷ್ಟ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಗಮನ ಹರಿಸುವ ಗೋಜಿಗೆ ಹೋಗಿಲ್ಲ. ಈಗಲಾದರೂ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಂ. ಲಿಂಗರಾಜು ಗೌಡ, ಮಲ್ಲತ್ತಹಳ್ಳಿ ನಿವಾಸಿ

ಬ್ಯಾನರ್: ‘ಕೈ’ ಮುಖಂಡನಿಗೆ ₹50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಲಯ ವಸಂತನಗರ ವ್ಯಾಪ್ತಿಯ ಸ್ಯಾಂಕಿ ರಸ್ತೆಯ, ರೇನ್ ಟ್ರಿ ಬೊಲೆವಾರ್ಡ್ ಕಟ್ಟಡ ಹತ್ತಿರ ಅಳವಡಿಸಿದ್ದ ಬ್ಯಾನರ್ ಅನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದ್ದು, ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರಿಗೆ ₹50 ಸಾವಿರ ದಂಡ ವಿಧಿಸಿದ್ದಾರೆ.

ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ, ಎ.ಬಿ.ಡಿ. ಗ್ರೂಪ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ರಾಜೀವ್ ಗೌಡ ಅವರು, ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರ ಸಚಿವರಾದ ಕೆ.ಎಚ್. ಮುನಿಯಪ್ಪ ಅವರಿಗೆ ಜನ್ಮದಿನದ ಶುಭಾಶಯವನ್ನು ಕೋರಿ ಅನಧಿಕೃತವಾಗಿ ಬ್ಯಾನರ್ ಅಳವಡಿಸಿದ್ದರು.

ಈ ಬ್ಯಾನರ್‌ಗೆ ಪಾಲಿಕೆ ವತಿಯಿಂದ ಅನುಮತಿ ಪಡೆದಿಲ್ಲ. ಆದ್ದರಿಂದ, ರಾಜೀವ್ ಗೌಡ ಅವರಿಗೆ ₹50 ಸಾವಿರ ದಂಡ ವಿಧಿಸಿ, ಪಾಲಿಕೆ ಮುಖ್ಯ ಆಯುಕ್ತರ ಖಾತೆಗೆ ಹಣ ಪಾವತಿಸುವಂತೆ ವಸಂತನಗರದ ಸಹಾಯಕ ಕಂದಾಯ ಅಧಿಕಾರಿ ಪತ್ರದ ಮೂಲಕ ಸೂಚಿಸಿದ್ದಾರೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಕಟಣೆ ತಿಳಿಸಿದೆ.

सत्यमेव जयते
Government of India

ಪ್ರಪಂಚದ ಯಾವುದೇ ಮೂಲೆಯಲ್ಲಿ ಬಿಕ್ಕಟ್ಟು ಉಂಟಾದರೂ
ನೀವು ನಮ್ಮ ಮಕ್ಕಳನ್ನು
ಸುರಕ್ಷಿತವಾಗಿ ಮನೆಗೆ ಕರೆತಂದಿರಿ

ಆಪರೇಷನ್ ವಂದೇ ಭಾರತ್
ಕೊರೋನಾ ಅವಧಿಯಲ್ಲಿ 2.17 ಲಕ್ಷ ವಿಮಾನ ಹಾರಾಟಗಳು 1.83 ಕೋಟಿ ಪ್ರಯಾಣಿಕರಿಗೆ ನೆರವಾದವು.

ಆಪರೇಷನ್ ರಾಹತ್ (ಯೆಮನ್)
4,748 ಭಾರತೀಯರ ಸುರಕ್ಷಿತ ವಾಪಸಾತಿ

ಆಪರೇಷನ್ ಗಂಗಾ
ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ 18,282 ಭಾರತೀಯರನ್ನು ಸುರಕ್ಷಿತವಾಗಿ ತವರಿಗೆ ಕರೆತರಲಾಯಿತು.

ಆಪರೇಷನ್ ಕಾವೇರಿ
ಸುಡಾನ್‌ನಿಂದ 3,900 ನಾಗರಿಕರ ಸುರಕ್ಷಿತ ವಾಪಸಾತಿ

ಜಗತ್ತಿನೆಲ್ಲೆಡೆ ಭಾರತದ ಕೀರ್ತಿ
ನನ್ನ ಭಾರತ, ನನ್ನ ಪರಿವಾರ

dtr 2201/13/0344/2324

ಸೋಮವಾರ, ಮಾರ್ಚ್ 11, 2024 | ಬೆಂಗಳೂರು | ₹ 7.00 | ಸಂಪುಟ 00 | ಸಂಚಿಕೆ 71 | ಪುಟ 00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗುವಿನ ಹೊಳಪು
ಮುಂಬೈನಲ್ಲಿ ನಡೆದ 'ಮಿಸ್ ವರ್ಲ್ಡ್ 2024' ಕಾರ್ಯಕ್ರಮದಲ್ಲಿ ನಟ ಪೂಜಾ ಹೆಗ್ಡೆ ಮಿಂಚಿದ್ದು ಹೀಗೆ...

ತಂತ್ರಜ್ಞಾನ ವಿನಿಮಯಕ್ಕೆ ತೀರ್ಮಾನ 5
ಹೋಟೆಲ್ ಉದ್ಯಮಕ್ಕೂ 'ಜಲಕ್ಷಾಮ' 3A
ಕ್ಯಾನ್ಸರ್ ಹೊಸ ಪ್ರಕರಣ ಏರಿಕೆ 5A

ಬೆಂಗಳೂರಿನ 24 ಕಾಲೇಜುಗಳಲ್ಲಿ ತಂಡಗಳ ರಚನೆ • ಜಾಗೃತಿ, ವಿಶೇಷ ಕಾರ್ಯಾಚರಣೆ ಗುರಿ

ಡ್ರಗ್ಸ್ ಜಾಲ: 'ವಿದ್ಯಾರ್ಥಿ ಮಾರ್ಷಲ್'

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದಲ್ಲಿ ಮಾದಕ ವಸ್ತು (ಡ್ರಗ್ಸ್) ಸಾಗಣೆ ಹಾಗೂ ಮಾರಾಟ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕೆಲ ಶಾಲಾ-ಕಾಲೇಜು ವಿದ್ಯಾರ್ಥಿಗಳು ಡ್ರಗ್ಸ್ ಜಾಲಕ್ಕೆ ಸಿಲುಕಿ ವ್ಯಸನಿಗಳಾಗುತ್ತಿದ್ದಾರೆ. ಇಂಥ ವಿದ್ಯಾರ್ಥಿಗಳನ್ನು ರಕ್ಷಿಸಲು ಹಾಗೂ ಡ್ರಗ್ಸ್ ಜಾಲವನ್ನು ಬುಡಸಮೇತ ಮಟ್ಟಹಾಕಲು ಪ್ರಮುಖ ಕಾಲೇಜುಗಳಲ್ಲಿ 'ವಿದ್ಯಾರ್ಥಿ ಮಾರ್ಷಲ್'ಗಳ ತಂಡಗಳನ್ನು ರಚಿಸಲಾಗಿದೆ.

ಪೊಲೀಸರು ಮೇಲಿಂದ ಮೇಲೆ ವಿಶೇಷ ಕಾರ್ಯಾಚರಣೆ ನಡೆಸಿದರೂ ಡ್ರಗ್ಸ್ ಜಾಲದ ಕೃತ್ಯಕ್ಕೆ ಸಂಪೂರ್ಣ ಲಗಾಮು ಬೀಳುತ್ತಿಲ್ಲ. ಶಾಲೆ- ಕಾಲೇಜುಗಳ ಅಕ್ಕ-ಪಕ್ಕದಲ್ಲಿ ಡ್ರಗ್ಸ್, ತಂಬಾಕು ಉತ್ಪನ್ನಗಳ ಮಾರಾಟ ಯಥೇಚ್ಛವಾಗಿ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಲು ನಗರದ ಪೊಲೀಸರು, ಸಾರ್ವಜನಿಕ ಸಹಭಾಗಿತ್ವದ 'ವಿದ್ಯಾರ್ಥಿ ಮಾರ್ಷಲ್' ಪರಿಕಲ್ಪನೆಯ ಮೊರೆ ಹೋಗಿದ್ದಾರೆ.

'ಇಂದಿನ ಯುವ ಸಮೂಹ, ಡ್ರಗ್ಸ್ ಹಾಗೂ ತಂಬಾಕು ಉತ್ಪನ್ನಗಳ ವ್ಯಸನಿಗಳಾಗಿ ದಾರಿ ತಪ್ಪುತ್ತಿದ್ದಾರೆ. ಮಕ್ಕಳ ಭವಿಷ್ಯದ ಬಗ್ಗೆ ಕನಸು ಕಟ್ಟಿಕೊಂಡ ಪೋಷಕರು ಕಣ್ಣೀರಿಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಯುವಜನತೆಯನ್ನು ರಕ್ಷಿಸುವ ಕರ್ತವ್ಯ ನಮ್ಮದು. ಇದೇ ಕಾರಣಕ್ಕೆ, ಶಾಲೆ-ಕಾಲೇಜು ಹಂತದಲ್ಲಿ ಡ್ರಗ್ಸ್ ಹಾಗೂ ತಂಬಾಕು ಉತ್ಪನ್ನಗಳ ಮಾರಾಟ ತಡೆಯಲು ವಿದ್ಯಾರ್ಥಿಗಳ ಮೂಲಕವೇ ಕಾರ್ಯತಂತ್ರ ರೂಪಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

50 ವಿದ್ಯಾರ್ಥಿಗೊಬ್ಬ ಪೊಲೀಸ್ ಮಾರ್ಷಲ್: 'ಆರೋಹಣ ಫೌಂಡೇಷನ್ ಸಹಾಯದಿಂದ ಕಾಲೇಜುಗಳನ್ನು ಗುರುತಿಸಲಾಗಿದೆ. 50 ವಿದ್ಯಾರ್ಥಿಗಳಿಗೆ ಒಬ್ಬರನ್ನು 'ಮಾರ್ಷಲ್' ಮಾಡಲಾಗುತ್ತಿದೆ. ಸಹಪಾಠಿಗಳು ಅನುಭವಿಸುತ್ತಿರುವ ತೊಂದರೆ, ಅವರಿಗೆ ಬೇಕಾದ ನೆರವು ಬಗ್ಗೆ ಮಾರ್ಷಲ್‌ಗಳಿಗೆ ತಿಳಿವಳಿಕೆ ಮೂಡಿಸಲಾಗುತ್ತಿದೆ. ಸಹಪಾಠಿಗಳ ರಕ್ಷಣೆಗಾಗಿ ಕೆಲಸ ಮಾಡುವಂತೆಯೂ ಅವರನ್ನು ಹುರಿದುಂಬಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಒಡನಾಟ, ಡ್ರಗ್ಸ್ ಹಾಗೂ ತಂಬಾಕು ಉತ್ಪನ್ನ ಸೇವನೆ, ಅಪರಾಧಗಳು ಸೇರಿ ಎಲ್ಲ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಮಾರ್ಷಲ್‌ಗಳು ನಿಗಾ ವಹಿಸಲಿದ್ದಾರೆ. ವಿದ್ಯಾರ್ಥಿಗಳ ದಾರಿ ತಪ್ಪಿಸುವ ವ್ಯಕ್ತಿಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಿ ಆಯಾ ಠಾಣೆ ಇನ್‌ಸ್ಪೆಕ್ಟರ್‌ಗಳಿಗೆ ಮಾಹಿತಿ ನೀಡಲಿದ್ದಾರೆ. ಅದೇ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಲಿದ್ದಾರೆ' ಎಂದು ಹೇಳಿದರು.

'ಸಹಪಾಠಿಗಳ ಪ್ರತಿಯೊಂದು ಚಟುವಟಿಕೆಯೂ ವಿದ್ಯಾರ್ಥಿ ಮಾರ್ಷಲ್‌ಗಳಿಗೆ ಗೊತ್ತಿರುತ್ತದೆ. ಜೊತೆಗೆ, ಸಹಪಾಠಿಗಳು ನೋವು-ನಲಿವುಗಳನ್ನು ಮಾರ್ಷಲ್‌ಗಳ ಬಳಿ ಹಂಚಿಕೊಳ್ಳುತ್ತಾರೆ. ಇದರಿಂದ ವಿದ್ಯಾರ್ಥಿಗಳ ಮಾನಸಿಕ ಸಮಸ್ಯೆಗಳ ಆಪ್ತ ಸಮಾಲೋಚನೆಗೂ ಅನುಕೂಲವಾಗುತ್ತದೆ' ಎಂದು ತಿಳಿಸಿದರು.

3,500 ವಿದ್ಯಾರ್ಥಿ ಮಾರ್ಷಲ್‌ಗಳು: 'ಬೆಂಗಳೂರಿನ ಈಶಾನ್ಯ, ಪೂರ್ವ, ದಕ್ಷಿಣ, ಆಗ್ನೇಯ, ವೈಟ್‌ಫೀಲ್ಡ್ ಹಾಗೂ ಉತ್ತರ ವಿಭಾಗದ 24 ಕಾಲೇಜುಗಳಲ್ಲಿ 'ವಿದ್ಯಾರ್ಥಿ ಮಾರ್ಷಲ್' ತಂಡಗಳಿವೆ. ಜವಾಬ್ದಾರಿ ನಾಗರಿಕರಾಗಿ 3,500 ವಿದ್ಯಾರ್ಥಿಗಳು 'ಮಾರ್ಷಲ್' ಕೆಲಸ ಮಾಡುತ್ತಿದ್ದಾರೆ. ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಬಿಡುವಿನ ವೇಳೆಯನ್ನು ಸಹಪಾಠಿಗಳ ರಕ್ಷಣೆಗೆ ಮೀಸಲಿಡುತ್ತಿದ್ದಾರೆ' ಎಂದು ಆರೋಹಣ ಫೌಂಡೇಷನ್ ಸಹ ಸಂಸ್ಥಾಪಕ ವಿನಯ್ ಹೇಳಿದರು.

'ಸಹಪಾಠಿಗಳು ಎದುರಿಸುವ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದು, ಸಹಪಾಠಿಗಳು ವ್ಯಸನಿಗಳಾಗಿದ್ದರೆ ಅವರ ಪುನರ್ವಸತಿಗೆ ನೆರವು ನೀಡುವುದು. ಡ್ರಗ್ಸ್-ತಂಬಾಕು ಉತ್ಪನ್ನ ಮಾರಾಟಗಾರರ ಬಗ್ಗೆ ಪೊಲೀಸರಿಗೆ ಮಾಹಿತಿ ತಿಳಿಸುವುದು, ಡ್ರಗ್ಸ್ ಹಾಗೂ ಸೈಬರ್ ಅಪರಾಧಗಳ ಬಗ್ಗೆ ಸಹಪಾಠಿಗಳಲ್ಲಿ ಜಾಗೃತಿ ಮೂಡಿಸುವುದು ವಿದ್ಯಾರ್ಥಿ ಮಾರ್ಷಲ್‌ಗಳ ಕೆಲಸ' ಎಂದರು. 'ಕಾಲೇಜಿನಲ್ಲಿ ಶೇ 80ರಷ್ಟು ಜಾಗೃತಿ ಮೂಡಿಸಿದರೆ, ಶೇ 20ರಷ್ಟು ಕಾರ್ಯಕ್ರಮಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಮ್ಮಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ. ಬೀದಿ ನಾಟಕ, ಕರಪತ್ರ ಹಂಚಿಕೆ, ಪೊಲೀಸ್ ಸಹಾಯವಾಣಿ ಪ್ರಚಾರ ಸೇರಿದಂತೆ ಎಲ್ಲ ಬಗೆಯ ಕೆಲಸಗಳನ್ನು ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ಜೊತೆಗೆ, ವಿದ್ಯಾರ್ಥಿ ಮಾರ್ಷಲ್‌ಗಳನ್ನು ಠಾಣೆಗಳು ಹಾಗೂ ಪೊಲೀಸ್ ಹಿರಿಯ ಅಧಿಕಾರಿಗಳ ಬಳಿ ಕರೆದೊಯ್ದು ಕಾನೂನು ಅರಿವು ಸಹ ಮೂಡಿಸಲಾಗುತ್ತಿದೆ' ಎಂದು ವಿನಯ್ ತಿಳಿಸಿದರು.

'24 ಕಾಲೇಜುಗಳಲ್ಲಿ ಮಾತ್ರ ವಿದ್ಯಾರ್ಥಿ ಮಾರ್ಷಲ್‌ಗಳು ಇದ್ದಾರೆ. ಮುಂದಿನ ದಿನಗಳಲ್ಲಿ ನಗರದ ಎಲ್ಲ ಪ್ರಮುಖ ಕಾಲೇಜುಗಳನ್ನು ವಿದ್ಯಾರ್ಥಿ ಮಾರ್ಷಲ್‌ಗಳ ತಂಡ ರಚಿಸಿ, ಬೆಂಗಳೂರನ್ನು ಡ್ರಗ್ಸ್ ಮುಕ್ತ ನಗರ ಮಾಡುವ ಕನಸಿದೆ' ಎಂದು ಹೇಳಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ವಿಶೇಷ ಅಭಿಯಾನದಲ್ಲಿ ಡ್ರಗ್ಸ್ ಹಾಗೂ ಸೈಬರ್ ಅಪರಾಧ ಜಾಗೃತಿ ಫಲಕಗಳನ್ನು 'ವಿದ್ಯಾರ್ಥಿ ಪೊಲೀಸ್ ಮಾರ್ಷಲ್'ಗಳು ಪ್ರದರ್ಶಿಸಿದರು

'ತಂಡದ ಮಾಹಿತಿಯಿಂದ ದಾಳಿ'

'ವಿದ್ಯಾರ್ಥಿ ಮಾರ್ಷಲ್‌ಗಳು ನೀಡಿದ್ದ ಮಾಹಿತಿ ಆಧರಿಸಿ ಡ್ರಗ್ಸ್ ಹಾಗೂ ತಂಬಾಕು ಉತ್ಪನ್ನ ಅಕ್ರಮ ಮಾರಾಟದ ವಿರುದ್ಧ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳ ಮಾಹಿತಿ ಆಧರಿಸಿ ಇದು ವರೆಗೂ ಸುಮಾರು 30 ಎಫ್‌ಐಆರ್‌ಗಳು ದಾಖಲಾಗಿವೆ' ಎಂದು ವಿನಯ್ ತಿಳಿಸಿದರು. 'ಶಾಲೆ- ಕಾಲೇಜು ಅಕ್ಕ-ಪಕ್ಕದ ಮಳಿಗೆಗಳ ಮೇಲೂ ಪೊಲೀಸರು ದಾಳಿ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಾರಾಟದ ಬಗ್ಗೆ ಮಾಹಿತಿ ನೀಡುವ ವಿದ್ಯಾರ್ಥಿಗಳ ವೈಯಕ್ತಿಕ ವಿವರವನ್ನು ಗೋಪ್ಯವಾಗಿರಿಸಲಾಗುತ್ತಿದೆ' ಎಂದರು.

ಭವಿಷ್ಯ ಹಾಳಾಗದಂತೆ ಎಚ್ಚರ!

'ಶಾಲೆ- ಕಾಲೇಜು ಹಂತದಲ್ಲಿ ಯುವಜನತೆ ದಾರಿ ತಪ್ಪಿದರೆ, ಅವರ ಭವಿಷ್ಯ ಹಾಳಾಗುತ್ತದೆ. ವಿದ್ಯಾರ್ಥಿಗಳನ್ನು ಒಳ್ಳೆಯ ನಾಗರಿಕ ರನ್ನಾಗಿ ಮಾಡಲು 'ಮಾರ್ಷಲ್' ಪರಿಕಲ್ಪನೆ ಪರಿಚಯಿಸಲಾಗಿದೆ' ಎಂದು ಆರೋಹಣ ಫೌಂಡೇಷನ್ ಸಹ ಸಂಸ್ಥಾಪಕಿ ಮನೀಶಾ ಭಟ್ ತಿಳಿಸಿದರು.

ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ ಎಂದು ಆರೋಪಿಸಿ ಮಂಡ್ಯದಲ್ಲಿ ಭಾನುವಾರ ಪ್ರತಿಭಟಿಸುತ್ತಿದ್ದ ರೈತರನ್ನು ಪೊಲೀಸರು ಬಂಧಿಸಿ ಕರೆದೊಯ್ದರು

ತಮಿಳುನಾಡಿಗೆ ಕಾವೇರಿ ನೀರು ಬಿಡುವ ಪ್ರಶ್ನೆಯೇ ಇಲ್ಲ: ಡಿಕೆಶಿ

ಮಂಡ್ಯ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸದಸ್ಯರು ಭಾನುವಾರ ತೋಳಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನಗರಕ್ಕೆ ಭೇಟಿ ನೀಡಿದ್ದ ಹಿನ್ನೆಲೆಯಲ್ಲಿ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಬರಗಾಲ ಪರಿಸ್ಥಿತಿಯಲ್ಲಿ ನಮ್ಮ ಜನರಿಗೆ, ರೈತರಿಗೆ ನೀರು ಕೊಡಲು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಪ್ರಶ್ನೆಯೇ ಇಲ್ಲ. ಈ ವಿಚಾರದಲ್ಲಿ ಜನರ ದಿಕ್ಕು ತಪ್ಪಿಸುತ್ತಿರುವ ಬಿಜೆಪಿ, ಜೆಡಿಎಸ್ ಮುಖಂಡರಿಗೆ ಬುದ್ಧಿ ಭ್ರಮಣೆಯಾಗಿದೆ' ಎಂದು ಆರೋಪಿಸಿದರು.

'ಬಿಜೆಪಿ ಮುಖಂಡರು, ಎಚ್.ಡಿ.ದೇವೇಗೌಡರು ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿ. ಬಳಿಕ ಕಾವೇರಿ ವಿಚಾರ ಮಾತನಾಡಲಿ' ಎಂದು ಸವಾಲೆಸೆದರು. 'ಬೆಂಗಳೂರು ಜನರಿಗೆ ಪೂರೈಸಲೆಂದೇ ಕೆಆರ್‌ಎಸ್ ಜಲಾಶಯದಿಂದ ನೀರು ಬಿಡುಗಡೆ ಮಾಡಲಾಗಿದೆ. ಬಿಜೆಪಿ ತನ್ನ ತಪ್ಪು ಮುಚ್ಚಿಕೊಳ್ಳಲು ಜನರಿಗೆ ತಪ್ಪು ಸಂದೇಶ ನೀಡುತ್ತಿದೆ' ಎಂದರು.

'ನಾವು ಈವರೆಗೂ ತಮಿಳುನಾಡು ಸರ್ಕಾರಕ್ಕೆ ಬಗ್ಗಿಲ್ಲ. ಕಾನೂನು ಹೋರಾಟ ಮುಂದುವರಿಸಿದ್ದೇವೆ. 66 ಟಿಎಂಸಿ ಅಡಿ ನೀರುಸಂಗ್ರಹವಾಗುವ ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಬಿಜೆಪಿಯುವರು ಅನುಮತಿ ಕೊಡಿಸಿದರೆ ತಮಿಳುನಾಡಿನವರು ಕೇಳಿದಾಗ ನೀರು ಕೊಡಬಹುದು' ಎಂದರು.

ನಕಲಿ ಡಿಟರ್ಜೆಂಟ್ ಪೌಡರ್ ಮಾರಾಟ: ಮಾಲೀಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಡಿಟರ್ಜೆಂಟ್ ಪೌಡರ್ ತಯಾರಿಸಿ ಪ್ರತಿಷ್ಠಿತ ಕಂಪನಿಗಳ ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದ ಮಳಿಗೆ ಮೇಲೆ ಮಲ್ಲೇಶ್ವರ ಠಾಣೆ ಪೊಲೀಸರು ದಾಳಿ ಮಾಡಿದ್ದು, ಮಳಿಗೆ ಮಾಲೀಕ ಅರ್ಜುನ್ ಜೈನ್ ಅವರನ್ನು ವಶಕ್ಕೆ ಪಡೆದಿದ್ದಾರೆ.

'ಮಲ್ಲೇಶ್ವರ ಹಾಗೂ ಸುತ್ತಮುತ್ತಲ ಪ್ರದೇಶಗಳ ಅಂಗಡಿಗಳಲ್ಲಿ ನಕಲಿ ಡಿಟರ್ಜೆಂಟ್ ಪೌಡರ್ ಮಾರಲಾಗುತ್ತಿತ್ತು. ಈ ಬಗ್ಗೆ ದೂರು ಬಂದಿತ್ತು. ಎಫ್‌ಐಆರ್ ದಾಖಲಿಸಿಕೊಂಡು, ನಕಲಿ ಡಿಟರ್ಜೆಂಟ್ ತಯಾರಿಕೆ ಮಳಿಗೆ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'₹20 ಲಕ್ಷ ಮೌಲ್ಯದ ಡಿಟರ್ಜೆಂಟ್ ವಸ್ತುಗಳು, ಕಂಪನಿಗಳ ಪೊಟ್ಟಣಗಳು ಹಾಗೂ ಪೌಡರ್ ಮಿಶ್ರಣ ಯಂತ್ರ ಜಪ್ತಿ ಮಾಡಲಾಗಿದೆ. ಅರ್ಜುನ್ ಹಲವು ತಿಂಗಳಿನಿಂದ ನಕಲಿ ಡಿಟರ್ಜೆಂಟ್ ಮಾರುತ್ತಿದ್ದುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ಆರ್‌ಟಿಐ ಕಾರ್ಯಕರ್ತ ನಾಗರಾಜ್ ಕೊಲೆಗೆ ಯತ್ನ, ಆರೋಪಿಗಳ ಬಂಧನ

ಕೊಲೆಗೆ ₹5 ಲಕ್ಷ ಸುಪಾರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದಕ್ಕೆ ಕೊಲೆಗೆ ಯತ್ನ
- ಆಸ್ತಿಗಳ ಅಕ್ರಮ ನೋಂದಣಿಯ ಮಾಹಿತಿ ಕೋರಿದ್ದ ನಾಗರಾಜ್


ಕೆ. ನಾಗರಾಜ್


ಸತೀಶ್

ಗೋವಿಂದರಾಜು

ಮನೀಶ್

ಕೃಷ್ಣ

ಶಶಿಕುಮಾರ್

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದ ಕಾರಣಕ್ಕೆ ಆರ್‌ಟಿಐ ಕಾರ್ಯಕರ್ತ ಕೆ. ನಾಗರಾಜ್ ಕೊಲೆಗೆ ಯತ್ನಿಸಿದ್ದ ಆರೋಪದಡಿ ಆರು ಮಂದಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುಂಬಳಗೋಡು ಕಣಿಮಿಣಿಕೆಯ ಕೆ.ಜಿ. ಗೋವಿಂದರಾಜು, ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಸತೀಶ್ (44), ನಾಗರಬಾವಿ ಭೈರವೇಶ್ವರನಗರದ ರೌಡಿ ಕೃಷ್ಣ (30), ಮನೀಶ್ ಪೂಜಾರಿ (28), ವಿ. ಶಶಿಕುಮಾರ್ ರೆಡ್ಡಿ (20) ಹಾಗೂ ಎ. ವೇಣುಗೋಪಾಲ್ ಅಲಿಯಾಸ್ ಕುಮಾರಸ್ವಾಮಿ (51) ಬಂಧಿತರು.

'ಕುಂಬಳಗೋಡಿನ ಕೆ. ನಾಗರಾಜ್ ಅವರ ಮೇಲೆ ಫೆ.29ರಂದು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿತ್ತು. ಈ ಬಗ್ಗೆ ನಾಗರಾಜ್ ದೂರು ನೀಡಿದ್ದರು. ಅಪರಾಧ ಸಂಚು, ಕೊಲೆಗೆ ಯತ್ನ ಹಾಗೂ ಜೀವ ಬೆದರಿಕೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ಆರು ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಆಸ್ತಿಗಳ ಮಾಹಿತಿ ಕೋರಿ ಅರ್ಜಿ: 'ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಆಸ್ತಿಗಳ ಅಕ್ರಮ ನೋಂದಣಿ ಬಗ್ಗೆ ಮಾಹಿತಿ ಕೋರಿ ನಾಗರಾಜ್ ಅರ್ಜಿ ಸಲ್ಲಿಸಿದ್ದರು. ಅಂಥ ಆಸ್ತಿಗಳ ಪೈಕಿ ಕೆಲ ಆಸ್ತಿಗಳನ್ನು ಗೋವಿಂದರಾಜು ಕಬಳಿಸಿದ್ದರೆಂಬ ಮಾಹಿತಿ ಇದೆ. ಅರ್ಜಿ ಸಲ್ಲಿಕೆ ವಿಷಯ ತಿಳಿದುಕೊಂಡಿದ್ದ ಗೋವಿಂದರಾಜು, ತನ್ನ ಅಕ್ರಮ ಆಸ್ತಿ ಸಂಗತಿ ಬಹಿರಂಗವಾಗುತ್ತದೆಂದು ಹೆದರಿದ್ದ' ಎಂದು ಪೊಲೀಸರು ತಿಳಿಸಿದರು.

'ಅಕ್ರಮ ಆಸ್ತಿ ನೋಂದಣಿಯಲ್ಲಿ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಸತೀಶ್ ಪಾತ್ರವೂ ಇತ್ತು ಎಂಬುದು ತಿಳಿದುಬಂದಿದೆ. ಹೀಗಾಗಿ, ಗೋವಿಂದರಾಜು ಹಾಗೂ ಸತೀಶ್, ಆರ್‌ಟಿಐ ಕಾರ್ಯಕರ್ತ ನಾಗರಾಜ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು. ಚಂದ್ರಾಲೇಔಟ್ ಠಾಣೆಯ ರೌಡಿ ಪಟ್ಟಿಯಲ್ಲಿ ಹೆಸರಿರುವ ಕೃಷ್ಣ ಹಾಗೂ ಅಪರಾಧ ಹಿನ್ನೆಲೆಯುಳ್ಳ ಮನೀಶ್ ಪೂಜಾರಿಯನ್ನು ಸಂಪರ್ಕಿಸಿದ್ದರು' ಎಂದು ಹೇಳಿದರು.

ವಾಹನ ಅಡ್ಡಗಟ್ಟಿ ಕೃತ್ಯ: 'ನಾಗರಾಜ್ ಅವರನ್ನು ಕೊಲೆ ಮಾಡಿದರೆ ₹ 5 ಲಕ್ಷ ನೀಡುವುದಾಗಿ ಗೋವಿಂದರಾಜು ಹಾಗೂ ಸತೀಶ್, ಸುಪಾರಿ ನೀಡಿದ್ದರು. ಅದಕ್ಕೆ ಒಪ್ಪಿದ್ದ ಕೃಷ್ಣ, ಮನೀಶ್ ಹಾಗೂ ಸಹಚರರು, ಕೆಂಗೇರಿ ರೈಲ್ವೆ ಕೆಳ ಸೇತುವೆ ಬಳಿ ನಾಗರಾಜ್ ಅವರ ದ್ವಿಚಕ್ರ ವಾಹನ ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹೊಡೆದಿದ್ದರು' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳ ಕೈಯಿಂದ ತಪ್ಪಿಸಿಕೊಂಡು ಸ್ಥಳದಿಂದ ಹೋಗಿದ್ದ ನಾಗರಾಜ್ ಅವರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ನಂತರ ಅವರು, ಠಾಣೆಗೆ ಬಂದು ದೂರು ನೀಡಿದ್ದರು' ಎಂದರು.

ಸುವರ್ಣ ಸಂಭ್ರಮ: ಜಾಗೃತಿ ಓಟ

ಪ್ರಜಾವಾಣಿ ವಾರ್ತೆ

ಪೊಲೀಸ್ ಇಲಾಖೆ ಭಾನುವಾರ ಹಮ್ಮಿಕೊಂಡಿದ್ದ 'ಸುವರ್ಣ ಸಂಭ್ರಮ ಓಟ'ದಲ್ಲಿ ಪಾಲ್ಗೊಂಡಿದ್ದ ಜನ – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆ ಸ್ಥಾಪನೆಯ ಸುವರ್ಣ ಮಹೋತ್ಸವದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ 'ಸುವರ್ಣ ಸಂಭ್ರಮ ಓಟ'ಕ್ಕೆ ಜನರಿಂದ ಉತ್ತಮ ಸ್ಪಂದನ ವ್ಯಕ್ತವಾಯಿತು.

ಡ್ರಗ್ಸ್ ಹಾಗೂ ಸೈಬರ್ ಅಪರಾಧ ಜಾಗೃತಿಗಾಗಿ ಹಮ್ಮಿಕೊಂಡಿದ್ದ ಓಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಸೌಧದಲ್ಲಿ ಬೆಳಿಗ್ಗೆ ಚಾಲನೆ ನೀಡಿದರು. ವಿಧಾನಸೌಧದಿಂದ ಆರಂಭವಾದ 5 ಕಿ.ಮೀ ಹಾಗೂ 10 ಕಿ.ಮೀ ಓಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು.

ಡ್ರಗ್ಸ್ ಹಾಗೂ ಸೈಬರ್ ಅಪರಾಧ ಜಾಗೃತಿ ಕುರಿತು ಫಲಕಗಳನ್ನು ಪ್ರದರ್ಶಿಸಿದರು.

5 ಕಿ.ಮೀ ಓಟದಲ್ಲಿ 90 ವರ್ಷ ವಯಸ್ಸಿನ ಜನಾರ್ದನ್ ಬ್ಯಾಲಹಳ್ಳಿ, 94 ವರ್ಷ ವಯಸ್ಸಿನ ದತ್ತಾತ್ರೇಯ ಹಾಗೂ 74 ವರ್ಷ ವಯಸ್ಸಿನ ಮರಿಯಮ್ಮ ಜಾರ್ಜ್ ಭಾಗವಹಿಸಿ ಜನರ ಗಮನ ಸೆಳೆದರು. ಪೊಲೀಸರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಿಬ್ಬಂದಿ ಹಾಗೂ ಸಾರ್ವಜನಿಕರ ವಿಭಾಗದಲ್ಲಿ ಓಟ ಏರ್ಪಡಿಸಲಾಗಿತ್ತು. ಓಟದಲ್ಲಿ ಕ್ರಮವಾಗಿ ಮೊದಲ, ಎರಡನೇ ಹಾಗೂ ನಾಲ್ಕನೇ ಸ್ಥಾನ ಪಡೆದವರಿಗೆ ಬಹುಮಾನ ವಿತರಿಸಲಾಯಿತು.

ಓಟಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಇಂದಿನ ಹಲವು ಯುವಕರು ಮಾದಕ ವ್ಯಸನಿಗಳಾಗುತ್ತಿದ್ದಾರೆ. ಇಂಥ ಯುವಕರನ್ನು ರಕ್ಷಿಸಿ, ಜಾಗೃತಿ ವಹಿಸಲು ಜನರು ಸರ್ಕಾರದ ಜೊತೆ ಕೈ ಜೋಡಿಸಬೇಕು. ಡ್ರಗ್ಸ್ ಮುಕ್ತ ರಾಜ್ಯ ನಿರ್ಮಿಸಲು ಸಹಕರಿಸಬೇಕು' ಎಂದು ಕರೆ ನೀಡಿದರು.

ಗೃಹ ಸಚಿವ ಜಿ. ಪರಮೇಶ್ವರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಅವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬಾಲಕಿ ಅಪಹರಣಕ್ಕೆ ಯತ್ನ: ದೂರು

ಮಾಗಡಿ: ನಗರದ ಕೆಂಪೇಗೌಡ ವೃತ್ತದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ 16 ವರ್ಷದ ಬಾಲಕಿಯೊಬ್ಬಳನ್ನು ಅಪಹರಿಸಲು ಯತ್ನಿಸಿದ ಘಟನೆ ಈಚೆಗೆ ನಡೆದಿದೆ. ಮಾಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕಿ ಮನೆಗೆ ಹೋಗಲು ಆಟೊಗಾಗಿ ಕಾಯುತ್ತಿದ್ದಳು. ಕಾರಿನಲ್ಲಿ ಬಂದ ವ್ಯಕ್ತಿ, 'ಬಾ, ಮನೆಗೆ ಡ್ರಾಪ್ ಮಾಡುತ್ತೇನೆ' ಎಂದಿದ್ದಾನೆ. ಅದಕ್ಕೆ ಬಾಲಕಿ, 'ನಿಮ್ಮ ಪರಿಚಯವಿಲ್ಲ. ಬರುವುದಿಲ್ಲ' ಎಂದಿದ್ದಾಳೆ. 'ನಿಮ್ಮ ಭಾವ, ದೊಡ್ಡಮ್ಮ ನನಗೆ ಗೊತ್ತು' ಎಂದು ಕಾರಿಗೆ ಹತ್ತಿಸಿಕೊಂಡಿದ್ದಾನೆ.

'ನಿನಗೆ ಬಟ್ಟೆ, ಚಪ್ಪಲಿ, ಪಾನಿಪುರಿ ಕೊಡಿಸುತ್ತೇನೆ' ಎಂದು ಹೇಳಿದ ವ್ಯಕ್ತಿ, ರಸ್ತೆ ಬದಿ ಪಾನಿಪುರಿ ಅಂಗಡಿ ಬಳಿ ಕಾರು ನಿಲ್ಲಿಸಿದ್ದಾನೆ. ಪಾನಿಪುರಿ ತಿನ್ನಲು ನಿರಾಕರಿಸಿದ ಬಾಲಕಿ ಕಾರಿನಿಂದಿಳಿದು ಹೊರಡಲು ಮುಂದಾದಾಗ, ಆಕೆಯನ್ನು ಒಳಕ್ಕೆ ದೂಡಿ ಕಾರನ್ನು ಚಲಾಯಿಸಿಕೊಂಡು ಹೋಗಿದ್ದಾನೆ.

ಗಾಬರಿಗೊಂಡ ಬಾಲಕಿ ನೆರವಿಗೆ ಕೂಗಿಕೊಂಡಾಗ, ಎನ್‌ಇಎಸ್ ವೃತ್ತದ ಬಳಿ ಸಾರ್ವಜನಿಕರು ಕಾರು ಅಡ್ಡಗಟ್ಟಿದ್ದಾರೆ. ಬಾಲಕಿ ಕಾರಿನಿಂದಿಳಿದಿದ್ದಾಳೆ. ವ್ಯಕ್ತಿ ಸಾರ್ವಜನಿಕರ ಕೈಗೆ ಸಿಗದೆ ಪರಾರಿಯಾಗಿದ್ದಾನೆ ಎಂದು ಬಾಲಕಿಯ ಸಹೋದರಿ ದೂರು ಕೊಟ್ಟಿದ್ದಾರೆ.

ಮಗನ ಕೊಂದು ಆತ್ಮಹತ್ಯೆ ನಾಟಕ: ಸಿಕ್ಕಿಬಿದ್ದ ತಂದೆ

ಪ್ರಜಾವಾಣಿ ವಾರ್ತೆ

ಪ್ರಕಾಶ್

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಯೋಗೇಶ್ (21) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಕೃತ್ಯ ಎಸಗಿದ್ದ ಆರೋಪದಡಿ ತಂದೆ ಪ್ರಕಾಶ್ ಅವರನ್ನು ಬಂಧಿಸಿದ್ದಾರೆ.

'ಬಸವೇಶ್ವರನಗರದ ಯೋಗೇಶ್, ನಗರದ ಕಾಲೇಜೊಂದರಲ್ಲಿ ಬಿಬಿಎ ಮೂರನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮಾರ್ಚ್ 6ರಂದು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಮರಣೋತ್ತರ ಪರೀಕ್ಷೆ ವರದಿ ಆಧರಿಸಿ ಕೊಲೆ ಆರೋಪದಡಿ ತಂದೆ ಪ್ರಕಾಶ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

ಮದ್ಯದ ವಿಚಾರಕ್ಕೆ ಗಲಾಟೆ: 'ಆರೋಪಿ ಪ್ರಕಾಶ್, ಪಾನಿಪುರಿ ವ್ಯಾಪಾರಿ. ಪತ್ನಿ ಹಾಗೂ ಒಬ್ಬನೇ ಮಗ ಯೋಗೇಶ್ ಜೊತೆ ವಾಸವಿದ್ದರು. ಯೋಗೇಶ್ ಕೆಲ ದಿನಗಳಿಂದ ಮದ್ಯ ಕುಡಿಯಲಾರಂಭಿಸಿದ್ದರು. ವಿಷಯ ತಿಳಿಯುತ್ತಿದ್ದಂತೆ ಪ್ರಕಾಶ್, ಮದ್ಯ ಕುಡಿಯದಂತೆ ಮಗನಿಗೆ ಬುದ್ಧಿವಾದ ಹೇಳಿದ್ದರು. ಅಷ್ಟಾದರೂ ಯೋಗೇಶ್ ಮಾತು ಕೇಳಿರಲಿಲ್ಲವೆಂದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮಾರ್ಚ್ 5ರಂದು ಬೆಳಿಗ್ಗೆ ಮನೆಯಿಂದ ಹೊರ ಹೋಗಿದ್ದ ಯೋಗೇಶ್, ರಾತ್ರಿ ವಾಪಸು ಬಂದಿರಲಿಲ್ಲ. ಮರುದಿನ ಮಾರ್ಚ್ 6ರಂದು ಬೆಳಿಗ್ಗೆ ಮನೆಗೆ ಬಂದಿದ್ದರು. ಪರೀಕ್ಷೆ ಇದ್ದಿದ್ದರಿಂದ ಕಾಲೇಜಿಗೆ ಹೋಗಲು ಸಜ್ಜಾಗಿದ್ದರು. ಆದರೆ, ಮನೆಯಲ್ಲಿ ಪರೀಕ್ಷೆ ಪ್ರವೇಶ ಪತ್ರ ಸಿಕ್ಕಿರಲಿಲ್ಲ. ಅದಕ್ಕಾಗಿ ಹುಡುಕಾಡುತ್ತಿದ್ದರು' ಎಂದು ಹೇಳಿದರು.

'ರಾತ್ರಿ ಮದ್ಯ ಕುಡಿದು ಮಲಗಿ, ಈಗ ಮನೆಗೆ ಬಂದಿದ್ದಿಯಾ' ಎಂದು ತಂದೆ ಪ್ರಶ್ನಿಸಿದ್ದರು. ಇದಾದ ನಂತರ, ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಕೋಪಗೊಂಡಿದ್ದ ತಂದೆ, ಯೋಗೇಶ್ ಕುತ್ತಿಗೆಗೆ ವೇಲ್‌ನಿಂದ ಬಿಗಿದಿದ್ದರು. ಬಳಿಕ, ಯೋಗೇಶ್ ಸ್ಥಳದಲ್ಲೇ ಕುಸಿದು ಬಿದ್ದು ಪ್ರಜ್ಞೆ ತಪ್ಪಿದ್ದರು.'

'ತಂದೆಯೇ ಮಗನನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಯೋಗೇಶ್ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದ್ದರು. ಸಾವಿನ ಬಗ್ಗೆ ಠಾಣೆಗೆ ದೂರು ನೀಡಿದ್ದ ತಂದೆ, 'ನನ್ನ ಮಗ ಪರೀಕ್ಷೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದಿದ್ದರು. ಅದೇ ದೂರಿನಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಮೃತದೇಹದ ಮರಣೋತ್ತರ ಪರೀಕ್ಷೆ ವರದಿ ಬಂದಾಗ, ಕೊಲೆ ಎಂಬುದು ಗೊತ್ತಾಗಿತ್ತು. ಸ್ಥಳೀಯರೂ ಈ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ತಂದೆಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು' ಎಂದು ಪೊಲೀಸರು ಮಾಹಿತಿ ನೀಡಿದರು.

ಐಟಿಎಂಎಸ್ ತಪ್ಪುಗ್ರಹಿಕೆ ಪೊಲೀಸರಿಂದ ಮರು ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪತ್ತೆಗಾಗಿ ನಗರದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಸಂಚಾರ ನಿರ್ವಹಣಾ ವ್ಯವಸ್ಥೆಯಡಿ (ಐಟಿಎಂಎಸ್) ಆಧುನಿಕ ಕ್ಯಾಮೆರಾ ಅಳವಡಿಸಲಾಗಿದೆ. ಕೆಲ ಸಂದರ್ಭದಲ್ಲಿ ಕ್ಯಾಮೆರಾಗಳು ತಪ್ಪಾಗಿ ಗ್ರಹಿಸಿ ದಂಡ ಬೀಳುತ್ತಿತ್ತು, ಇಂಥ ಪ್ರಕರಣಗಳನ್ನು ಸಂಚಾರ ಪೊಲೀಸರು ಮರುಪರಿಶೀಲಿಸುತ್ತಿದ್ದಾರೆ.

ಹೆಲ್ಮೆಟ್ ರಹಿತ ಸವಾರ, ಮೊಬೈಲ್‌ನಲ್ಲಿ ಮಾತನಾಡುತ್ತ ಚಾಲನೆ ಹಾಗೂ ಇತರೆ ಕ್ಯಾಮೆರಾದಲ್ಲಿ ಸೆರೆಯಾಗಿರುವ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಮರು ಪರಿಶೀಲಿಸಲು 19 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸಿಬ್ಬಂದಿಯು ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸಿ ಕ್ಯಾಮೆರಾ ಫೋಟೊಗಳನ್ನು ಪರಿಶೀಲಿಸುತ್ತಿದ್ದು, ತಪ್ಪು ಗ್ರಹಿಕೆಯ ಪ್ರಕರಣಗಳನ್ನು ರದ್ದುಪಡಿಸುತ್ತಿದ್ದಾರೆ.

'2023ರಲ್ಲಿ ಕ್ಯಾಮೆರಾ ಮೂಲಕ 89.99 ಲಕ್ಷ ಪ್ರಕರಣಗಳು ವರದಿಯಾಗಿದ್ದವು. ಪರಿಶೀಲನೆ ನಡೆಸಿದಾಗ, ₹87.47 ಲಕ್ಷ ಪ್ರಕರಣಗಳು ನಿಖರವಾಗಿದ್ದವು. ಉಳಿದವು, ಕ್ಯಾಮೆರಾದ ತಪ್ಪು ಗ್ರಹಿಕೆಯಿಂದ ದಾಖಲಾದ ಪ್ರಕರಣಗಳಾಗಿದ್ದವು ಎಂಬುದು ಗೊತ್ತಾಯಿತು' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಅವರು ಹೇಳಿದರು.

ಕ್ಯಾಮೆರಾಗಳ ಪ್ರಕರಣಗಳು ಶೇ 97ರಷ್ಟು ಮಾತ್ರ ಖಚಿತವಾಗಿರುತ್ತವೆ. ಉಳಿದವುಗಳ ಪರಿಶೀಲನೆ ಅಗತ್ಯವಾಗಿದೆ ಎಂದು ಅನುಚೇತ್ ಅವರು ಮಾಹಿತಿ ನೀಡಿದರು.

ಯುವ ಕಾಂಗ್ರೆಸ್‌ನಿಂದ ಜಾಥಾ

ವಾಹನ ಜಾಥಾಕ್ಕೆ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ ಚಾಲನೆ ನೀಡಿದರು

ಬೆಂಗಳೂರು: ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಿಧಾನಸೌಧ ಮುಂಭಾಗದಲ್ಲಿರುವ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿಯಿಂದ ಯುವ ಕಾಂಗ್ರೆಸ್ ವತಿಯಿಂದ ಭಾನುವಾರ ದ್ವಿಚಕ್ರ ವಾಹನ ಮತ್ತು ಕಾರು ಜಾಥಾ ಭಾನುವಾರ ನಡೆಯಿತು. ರಾಜ್ಯ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ ಅವರು ಜಾಥಾಕ್ಕೆ ಚಾಲನೆ ನೀಡಿದರು.

ಜಾಥಾವು ವಿಧಾನಸೌಧದಿಂದ ಚಾಲುಕ್ಯ ವೃತ್ತ, ಸ್ಯಾಂಕಿ ರಸ್ತೆ, ಮೇಖ್ರಿ ವೃತ್ತ, ಮತ್ತೆ ಚಾಲುಕ್ಯ ವೃತ್ತ, ಅರಮನೆ ರಸ್ತೆ, ಕೆ.ಆರ್. ವೃತ್ತ ಮಾರ್ಗವಾಗಿ ಕಂಠೀರವ ಕ್ರೀಡಾಂಗಣದಲ್ಲಿ ಮುಕ್ತಾಯವಾಯಿತು.

ಮಂಜುನಾಥ್ ಗೌಡ, 'ಕಾಂಗ್ರೆಸ್ ಪಕ್ಷ ಮಹಿಳೆಯ ಪರವಿದ್ದು ಪಕ್ಷದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡುತ್ತಿದೆ. ಇಂದಿರಾಗಾಂಧಿ ಅವರ ಆಡಳಿತ ಮತ್ತು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಅವರ ಕಾರ್ಯವೈಖರಿ ಮಹಿಳೆಯರಿಗೆ ಸ್ಫೂರ್ತಿ' ಎಂದರು.

ದಿ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ

ಆರ್ಥಿಕತೆಗೆ ಹೊಸ ದಿಕ್ಕು: ಡಿವಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತೇ ಆರ್ಥಿಕ ಹಿಂಜರಿತಕ್ಕೆ ಒಳಗಾಗಿದ್ದಾಗ ಭಾರತವನ್ನು ಸಹಕಾರ ಕ್ಷೇತ್ರ ಕಾಪಾಡಿತ್ತು ಎಂದು ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ ದಿ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘2008ರಲ್ಲಿ ಆರ್ಥಿಕ ಕುಸಿತವು ಎಲ್ಲ ದೇಶಗಳನ್ನು ಕಾಡಿತ್ತು. ಅಮೆರಿಕ ಸಹಿತ ಅನೇಕ ಮುಂದುವರಿದ ದೇಶಗಳು ತತ್ತರಿಸಿದ್ದವು. ಆದರೆ, ಭಾರತದಲ್ಲಿ ಯಾವುದೇ ಪರಿಣಾಮಗಳು ಉಂಟಾಗಿರಲಿಲ್ಲ. ನಮ್ಮ ದೇಶದ ಸಹಕಾರ ಸಂಸ್ಥೆಗಳು ಆರ್ಥಿಕತೆಗೆ ಹೊಸ ದಿಕ್ಕನ್ನು ತೋರಿದ್ದು ಕಾರಣ’ ಎಂದು ವಿಶ್ಲೇಷಿಸಿದರು.

‘ಇರುವ ಆದಾಯದಲ್ಲಿಯೇ ಕುಟುಂಬದ ಎಲ್ಲರನ್ನು ಸಂಭಾಳಿಸುವ ತಾಯಿಯ ಗುಣ, ಕೃಷಿಕರು ಸಹಕಾರ ಬ್ಯಾಂಕ್‌ಗಳಲ್ಲಿಯೇ ವ್ಯವಹಾರಗಳನ್ನು ನಡೆಸಿರುವುದು ಮತ್ತು ಎಷ್ಟೇ ಕಡಿಮೆ ಆದಾಯವಿದ್ದರೂ ಅದರಲ್ಲಿ ಒಂದಂಶ ಉಳಿಸುವ ಜನರ ಮನಃಸ್ಥಿತಿಯು ಆರ್ಥಿಕ ಹಿಂಜರಿತವನ್ನು ತಡೆದಿದ್ದವು’ ಎಂದು ಹೇಳಿದರು.

ಇವೆಲ್ಲವನ್ನು ನೋಡಿ ಪ್ರಧಾನಿ ನರೇಂದ್ರ ಮೋದಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಆರಂಭಿಸಿದ್ದಲ್ಲದೇ ಆಧುನಿಕ ಚಾಣಕ್ಯ ಅಮಿತ್ ಶಾ ಅವರನ್ನು ಈ ಇಲಾಖೆಯ ಸಚಿವರನ್ನಾಗಿ ಮಾಡಿದರು ಎಂದು ತಿಳಿಸಿದರು.

ಶಾಸಕ ಸಿ.ಎನ್. ಅಶ್ವಥನಾರಾಯಣ ಮಾತನಾಡಿ, ‘ಉಳ್ಳವರು ಮತ್ತು ಇಲ್ಲದವರು ಒಂದಾಗಬೇಕು, ಸಂಪತ್ತು ಹಂಚಿಕೆಯಾಗಬೇಕು ಎಂಬ ಕಾರಣಕ್ಕೆ ಸ್ವಾತಂತ್ರ್ಯ ಪೂರ್ವದಲ್ಲಿ ಹಲವು ಸಹಕಾರ ಸಂಸ್ಥೆಗಳು ಆರಂಭ ಆಗಿದ್ದವು. ಅವುಗಳಲ್ಲಿ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್ ಪ್ರಧಾನವಾದುದು’ ಎಂದು ಹೇಳಿದರು.

ಬ್ಯಾಂಕ್ ಅಧ್ಯಕ್ಷ ಬಿ. ರಮೇಶ್ ಮಾತನಾಡಿ, ‘ಈ ಪ್ರದೇಶದಲ್ಲಿ ಬ್ಯಾಂಕಿಂಗ್ ಸೇವೆಗಳ ಕೊರತೆಯನ್ನು ನೀಗಿಸಲು ನಮ್ಮ ಹಿರಿಯರು 1920ರಲ್ಲಿ ಈ ಸಹಕಾರ ಬ್ಯಾಂಕ್ ಅನ್ನು ಸ್ಥಾಪಿಸಿದ್ದರು. 2020ಕ್ಕೆ 100 ವರ್ಷವಾಗಿತ್ತು. ಕೋವಿಡ್ ಕಾರಣದಿಂದ ಆಗ ಶತಮಾನೋತ್ಸವ ಆಚರಿಸಲು ಆಗಿರಲಿಲ್ಲ’ ಎಂದು ಮಾಹಿತಿ ನೀಡಿದರು.

ಹಿರಿಯ ಸದಸ್ಯರು, 25ಕ್ಕೂ ಅಧಿಕ ವರ್ಷಗಳಿಂದ ನಿರ್ದೇಶಕರಾಗಿದ್ದವರು, ಮಾಜಿ ನಿರ್ದೇಶಕರು, ನಿವೃತ್ತ ಸಿಬ್ಬಂದಿಯನ್ನು ಮತ್ತು ಸಹಕಾರ ಕ್ಷೇತ್ರದಲ್ಲಿ 100 ವರ್ಷ ಪೂರೈಸಿದ ಸಂಸ್ಥೆಗಳನ್ನು ಸನ್ಮಾನಿಸಲಾಯಿತು.

ಮಾಜಿ ಸಚಿವ ರಾಮಚಂದ್ರ ಗೌಡ, ಸಂಸ್ಥೆಯ ಉಪಾಧ್ಯಕ್ಷ ಶಂಕರ್ ವಿ., ನಿರ್ದೇಶಕರು ಉಪಸ್ಥಿತರಿದ್ದರು.

ದಿ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ ಸಮಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಬಿ. ರಮೇಶ್ ಅವರನ್ನು ಶಾಸಕ ಸಿ.ಎನ್. ಅಶ್ವಥ್ ನಾರಾಯಣ ಸನ್ಮಾನಿಸಿದರು. ಬ್ಯಾಂಕ್ ನಿರ್ದೇಶಕರಾದ ಎನ್.ಎಂ. ಸುರೇಶ್, ಸಿ.ಎಸ್. ವಾರುಣಿ, ಕೆ. ವಿ. ಅರುಣಾ, ಅನಂತ ಪದ್ಮನಾಭನ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘ಬಿಜೆಪಿ–ಜೆಡಿಎಸ್ ಅಪವಿತ್ರ ಮೈತ್ರಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಅಪವಿತ್ರ ಮೈತ್ರಿ ಮಾಡಿಕೊಂಡಿರುವ ಬಿಜೆಪಿ ಹಾಗೂ ಜೆಡಿಎಸ್‌ಗೆ ಮುಂಬರುವ ಲೋಕಸಭೆ ಚುನಾವಣೆಯಲ್ಲಿಯೂ ಪ್ರಜ್ಞಾವಂತ ಶಿಕ್ಷಕರು ಬುದ್ಧಿ ಕಲಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪುಟ್ಟಣ್ಣ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಇಲ್ಲಿನ ಸೂಲಿಕೇರಿ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಶಿಕ್ಷಕರ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ಈ ಉಪಚುನಾವಣೆಯ ಫಲಿತಾಂಶ ಲೋಕಸಭೆ ಚುನಾವಣೆಯ ದಿಕ್ಸೂಚಿಯಾಗಲಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದ್ದರು. ಶಿಕ್ಷಕರ ಈ ತೀರ್ಮಾನವನ್ನು ಅಪವಿತ್ರ ಮೈತ್ರಿ ಪಕ್ಷಗಳು ಒಪ್ಪಲಿವೆಯೇ’ ಎಂದು ಚುಚ್ಚಿದರು.

‘ಬೆಂಗಳೂರು ಗ್ರಾಮಾಂತರದಿಂದ ಡಿ.ಕೆ. ಸುರೇಶ್ ಅವರು ನಾಲ್ಕನೇ ಬಾರಿ ಖಂಡಿತ ಗೆಲುವು ಸಾಧಿಸಲಿದ್ದಾರೆ. ಬಿಜೆಪಿಯವರು ನರೇಂದ್ರ ಮೋದಿಯವರ ಹೆಸರಿನಲ್ಲಿ ಗೆಲ್ಲುವ ವಿಶ್ವಾಸದಲ್ಲಿದ್ದಾರೆಯೇ ಹೊರತು ಬಿಜೆಪಿಯವರಿಗೆ ಜನರ ಬಳಿ ಹೋಗಲು ವಿಷಯಗಳೇ ಇಲ್ಲ’ ಎಂದರು.

‘ರಾಜ್ಯದ ನೀರಾವರಿ ಯೋಜನೆಗಳು, ಬರ ಪರಿಹಾರ ಹಾಗೂ ಜಿಎಸ್‌ಟಿ ಹಣ ಬಿಡುಗಡೆ ಹೋರಾಟಕ್ಕೆ ಬೆಂಬಲ ನೀಡದೆ ರಾಜ್ಯದ ಜನರ ದಿಕ್ಕು ತಪ್ಪಿಸುತ್ತಿದೆ. ರಾಜ್ಯಕ್ಕೆ ಬರಬೇಕಾದ ಪಾಲು ಕೇಳಿದರೆ ಸಂಸದ ಡಿ.ಕೆ. ಸುರೇಶ್ ವಿರುದ್ಧ ದೇಶದ್ರೋಹದ ಕಳಂಕ ಹೊರಿಸುತ್ತಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಪುಟ್ಟಣ್ಣ ಮಾತನಾಡಿ, ‘ಶಿಕ್ಷಕರ ಬೇಡಿಕೆ ಹಾಗೂ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಕೆಲ ದಿನಗಳಲ್ಲೇ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಚರ್ಚೆ ನಡೆಸಿ, ಪರಿಹಾರ ಕಂಡುಕೊಳ್ಳಲಾಗುವುದು’ ಎಂದು ಹೇಳಿದರು.

ಸಚಿವರಾದ ಎನ್. ಚಲುವರಾಯಸ್ವಾಮಿ, ರಾಮಲಿಂಗಾರೆಡ್ಡಿ, ಶಾಸಕ ಎಚ್.ಸಿ. ಬಾಲಕೃಷ್ಣ, ಸಂಸದ ಡಿ.ಕೆ. ಸುರೇಶ್, ಮುಖಂಡರಾದ ಆನೇಕಲ್ ರಾಮೋಜಿ ಗೌಡ, ಕುಸುಮಾ ಹನುಮಂತರಾಯಪ್ಪ ಇದ್ದರು.

ಮೂವರು ಯುವತಿಯರ ರಕ್ಷಣೆ

ಗೋಕರ್ಣ: ಸಮೀಪದ ಕುಡ್ಲೆ ಬೀಚಿನಲ್ಲಿ ಭಾನುವಾರ ಈಜಲು ಸಮುದ್ರಕ್ಕಿಳಿದ ಬೆಂಗಳೂರು ಮೂಲದ ಮೂವರು ಯುವತಿಯರು ಅಲೆಯ ಸುಳಿಗೆ ಸಿಲುಕಿ ಮುಳುಗುತ್ತಿದ್ದಾಗ ಜೀವರಕ್ಷಕ ಸಿಬ್ಬಂದಿ ರಕ್ಷಿಸಿದ್ದಾರೆ.

ಬೆಂಗಳೂರಿನ ಜಯನಗರದ ಸ್ಮಿತಾ ರವಿಚಂದ್ರನ್ (23), ನಿಹಾರಿಕಾ ಗಿರಿ (22) ಮತ್ತು ಪವಿತ್ರಾ ಸುಂದರ (22) ಅಪಾಯದಿಂದ ಪಾರಾದವರು.

ಜೀವ ರಕ್ಷಕ ಸಿಬ್ಬಂದಿ ವೀನ್ ಅಂಬಿಗ, ಮಂಜುನಾಥ್ ಹರಿಕಂತ್ರ, ಕುಡ್ಲೆ ವಾಟರ್ ಸ್ಪೋರ್ಟ್ಸ್, ಮೈ ಸ್ಟಿಕ್ ಗೋಕರ್ಣದ ಸಿಬ್ಬಂದಿ ಇದ್ದರು.

ಎಚ್ಚರಿಕೆ ನೋಟಿಸ್

ರತೀಶ್ ಎ.ಕೆ.
(ಮಾಜಿ ಉದ್ಯೋಗಿ)

ನನ್ನ ಕಕ್ಷಿದಾರರಾದ **ಮೆ. ಪ್ರಿನ್ಸ್ ಗೋಲ್ಡ್ ಅಂಡ್ ಡೈಮಂಡ್ಸ್ ಇಂಡಿಯಾ ಪ್ರೈ. ಲಿ., (ಬ್ರಾಂಡ್– ಪ್ರಿನ್ಸ್ ಜ್ಯುವೆಲ್ಲರಿ)** ಇವರ ಪರವಾಗಿ ಸದರಿ ಎಚ್ಚರಿಕೆ ನೋಟಿಸ್ ಹೊರಡಿಸಲಾಗಿದ್ದು, ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಬೆಂಗಳೂರು ಶಾಖೆಯ ಬ್ರಾಂಚ್ ಮ್ಯಾನೇಜರ್ ಆಗಿದ್ದ ಶ್ರೀ ರತೀಶ್ ಎ.ಕೆ. ಎಂಬುವರನ್ನು ಅವರ ಮೋಸದ ಚಟುವಟಿಕೆಗಳ ಕಾರಣದಿಂದಾಗಿ ನಮ್ಮ ಕಂಪನಿಯಿಂದ ವಜಾಗೊಳಿಸಿರುತ್ತೇವೆ. ಇವರ ಮೋಸಗಾರಿಕೆಗೆ ಸಂಬಂಧಿಸಿದಂತೆ ಜಯನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದ್ದು, ಕ್ರೈಮ್ ನಂ. 41/2024 ಅಡಿಯಲ್ಲಿ ಎಫ್‌ಐಆರ್ ದಾಖಲಾಗಿರುತ್ತದೆ.

ಆದ್ದರಿಂದ, ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಶ್ರೀ ರತೀಶ್ ಎ.ಕೆ. ಎಂಬ ವ್ಯಕ್ತಿಯೊಂದಿಗೆ ನಮಗೆ ಇನ್ನು ಮುಂದೆ ಯಾವುದೇ ಸಂಬಂಧವಿರುವುದಿಲ್ಲ ಮತ್ತು ಸದರಿ ಶ್ರೀ ರತೀಶ್ ಎ.ಕೆ. ಜೊತೆಗೆ ಯಾರಾದರೂ ವ್ಯವಹಾರ ಮಾಡಿದಲ್ಲಿ, ಅದು ಅವರ ಸ್ವಯಂ ಜವಾಬ್ದಾರಿ ಆಗಿರುತ್ತದೆ ಮತ್ತು ಇವರ ಜೊತೆಗಿನ ವ್ಯವಹಾರದಿಂದಾಗಿ ಯಾರಿಗಾದರೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯ ಹಾನಿ ಅಥವಾ ನಷ್ಟ ಉಂಟಾದಲ್ಲಿ, ಅಂತಹುದಕ್ಕೆ ಮೆ. ಪ್ರಿನ್ಸ್ ಗೋಲ್ಡ್ ಅಂಡ್ ಡೈಮಂಡ್ಸ್ ಪ್ರೈ. ಲಿ., ಕಂಪನಿಯಾಗಲಿ ಅಥವಾ ಈ ಕಂಪನಿಯ ಇತರೆ ಸಹವರ್ತಿ ಕಂಪನಿಗಳಾಗಲಿ/ಸಮೂಹ ಸಂಸ್ಥೆಗಳಾಗಲಿ ಹೊಣೆಯಾಗಿರುವುದಿಲ್ಲ.

ಥಾಮಸ್ ಜಾಕೋಬ್ (ವಕೀಲರು)
ಫ್ಲಾಟ್ ನಂ. 1–ಎ, ಸಿದ್ಧಾರ್ಥ ಪ್ಲುಟೊ, ನಂ. 10, 14ನೇ ಸ್ಟ್ರೀಟ್,
ಜಿ ಬ್ಲಾಕ್, ಅಣ್ಣಾನಗರ, ಚೆನ್ನೈ–600 040.

'ನೀರು ಉಳಿಸಿ': ವಾಕಥಾನ್

'ವಾಕಥಾನ್'ನಲ್ಲಿ ಭಾಗಿಯಾಗಿದ್ದ ಬೇಗೂರಿನ ನೋಬಲ್ ರೆಸಿಡೆನ್ಸಿ ನಿವಾಸಿಗಳು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ನೀರಿನ ದುರ್ಬಳಕೆ ನಿಲ್ಲಿಸಿ, ಭವಿಷ್ಯದ ಜನಾಂಗಕ್ಕಾಗಿ ಜೀವಜಲ ಉಳಿಸಿ' ಎಂಬ ಘೋಷಣೆಯಡಿ ಬೇಗೂರಿನ ನೋಬಲ್ ರೆಸಿಡೆನ್ಸಿ ನಿವಾಸಿಗಳು ಭಾನುವಾರ 'ವಾಕಥಾನ್' ನಡೆಸಿದರು.

ವಿವಿಧ ಬಡಾವಣೆಗಳ ನಿವಾಸಿಗಳ ಸಂಘಗಳು ಸೇರಿ ರಚಿಸಿಕೊಂಡಿರುವ ಬ್ಯೂಟಿಫುಲ್ ಬೇಗೂರು ಒಕ್ಕೂಟದಡಿ ನೀರಿನ ಸದ್ಬಳಕೆಯ ಮಹತ್ವದ ಕುರಿತು ಜಾಗೃತಿ ಮೂಡಿಸಲು ಬೇಗೂರು ಕೊಪ್ಪ ರಸ್ತೆ ಮತ್ತು ಬೇಗೂರು ರಸ್ತೆಯಲ್ಲಿ ಮೆರವಣಿಗೆ ನಡೆಸಿದ ನಿವಾಸಿಗಳು, ಭಿತ್ತಿಪತ್ರ ಹಿಡಿದು, ಘೋಷಣೆ ಕೂಗಿದರು. ಮಹಿಳೆಯರು, ಹಿರಿಯ ನಾಗರಿಕರು, ಮಕ್ಕಳು ಭಾಗವಹಿಸಿದ್ದರು.

'ಸಾವಿರಾರು ಕೆರೆಗಳಿದ್ದರೂ ಬೆಂಗಳೂರು ನಗರ ನೀರಿನ ಹಾಹಾಕಾರ ಎದುರಿಸುತ್ತಿರುವುದು ಆತಂಕದ ವಿಚಾರ. ನೀರು ಪೂರೈಕೆಗೆ ಸರ್ಕಾರವನ್ನು ಆಗ್ರಹಪಡಿಸುವ ಜತೆಗೆ, ನೀರಿನ ಮಿತ ಬಳಕೆ ಮತ್ತು ಸದ್ಬಳಕೆಯ ಬಗ್ಗೆ ನಾಗರಿಕರಾಗಿ ನಮಗೂ ಜವಾಬ್ದಾರಿ ಇದೆ. ಹೀಗಾಗಿ ಈ ಅಭಿಯಾನ ಹಮ್ಮಿಕೊಂಡಿದ್ದೇವೆ' ಎಂದು ನಡಿಗೆಯಲ್ಲಿ ಪಾಲ್ಗೊಂಡವರು ಹೇಳಿದರು.

ಬ್ಯೂಟಿಫುಲ್ ಬೇಗೂರು ಒಕ್ಕೂಟದ ಮುಖ್ಯಸ್ಥ ಪ್ರಕಾಶ್ 'ನಗರದಲ್ಲಿ ಅಂತರ್ಜಲ ಪೂರ್ತಿಯಾಗಿ ಕುಸಿದಿದ್ದರೂ, ಕೊಳವೆಬಾವಿ ಕೊರೆದು ನೀರಿನ ಕೊರತೆ ನೀಗಿಸಿಕೊಳ್ಳುವ ಸರ್ಕಾರದ ನಿರ್ಧಾರ ಕೇವಲ ಕಣ್ಣೊರೆಸುವ ತಂತ್ರವಷ್ಟೆ. ಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ನೀರಿಗಾಗಿ ಜನ ಹೋರಾಟ ನಡೆಸಬೇಕಾಗಬಹುದು' ಎಂದು ತಿಳಿಸಿದರು. 'ನೀರಿನ ಮಿತ ಬಳಕೆ ಕುರಿತು ನಾಗರಿಕರಲ್ಲಿ ಜಾಗೃತಿಯ ಅಗತ್ಯವಿದೆ' ಎಂದು ಹಾಯ್ ಕಲ್ಪ ಶಿಕ್ಷಣ ಸಂಸ್ಥೆ ಮುಖ್ಯಸ್ಥೆ ಶಾಲಿನಿ ಹೇಳಿದರು.

ಹಾಯ್ ಕಲ್ಪ ಶಿಕ್ಷಣ ಸಂಸ್ಥೆ, ಕಾವೇರಿ ಆಸ್ಪತ್ರೆ ಈ ಅಭಿಯಾನಕ್ಕೆ ಕೈಜೋಡಿಸಿದವು.

ಕೊಳವೆಬಾವಿ: ಅನುಮತಿ ಕಡ್ಡಾಯ

ಬೆಂಗಳೂರು: ನಗರದಲ್ಲಿ ಅನುಮತಿ ಇಲ್ಲದೆ ಕೊಳವೆಬಾವಿಗಳನ್ನು ಕೊರೆದರೆ, ಮಾಲೀಕರು ಹಾಗೂ ಕೊರೆಯುವ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷರು ತಿಳಿಸಿದ್ದಾರೆ.

ಮಳೆಯ ಕೊರತೆಯಿಂದ ಅಂತರ್ಜಲ ಮಟ್ಟ ಕುಸಿದಿದ್ದು, ಸಾಕಷ್ಟು ಕೊಳವೆಬಾವಿಗಳು ಬತ್ತಿ ಹೋಗಿವೆ. ವೈಯಕ್ತಿಕ ಅಥವಾ ಇನ್ನಿತರೆ ಬಳಕೆಗೆ ಕೊಳವೆಬಾವಿಗಳನ್ನು ಕೊರೆಯುವ ಮುನ್ನ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಯಮ ಹಾಗೂ ನಿಯಂತ್ರಣ) ಕಾಯ್ದೆಯಂತೆ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಅವೈಜ್ಞಾನಿಕವಾಗಿ ಕೊಳವೆಬಾವಿಗಳನ್ನು ಕೊರೆಯುತ್ತಿರುವುದು ಮತ್ತು ಅನುಮತಿ ಪಡೆಯದೆ ಕೊಳವೆಬಾವಿ ಕೊರೆಯುತ್ತಿರುವುದರಿಂದ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಅನುಮತಿ ಪಡೆಯದೇ ಇದ್ದರೆ ಕಾಯ್ದೆಯಂತೆ ರಿಗ್ ಪಡೆಯಲು ನೀಡಿರುವ ಅನುಮತಿಯನ್ನು ರದ್ದುಪಡಿಸಿ, ಕಾನೂನುಕ್ರಮ ಕೈಗೊಳ್ಳಲಾಗುತ್ತದೆ. ಕೊಳವೆಬಾವಿ ಕೊರೆಸುವ ಮಾಲೀಕರ ವಿರುದ್ಧ ನಿಯಮ ಉಲ್ಲಂಘನೆ ದೂರು ದಾಖಲಿಸಿ, ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಆದೇಶದಲ್ಲಿ ತಿಳಿಸಿದ್ದಾರೆ.

ಮಾರ್ಚ್ 15ರಿಂದ ಈ ಆದೇಶ ಜಾರಿಗೆ ಬರಲಿದ್ದು, ಅಂದಿನಿಂದ ಕೊಳವೆಬಾವಿ ಕೊರೆಯಲು ಅನುಮತಿಗಾಗಿ ಅರ್ಜಿ ಸಲ್ಲಿಸಬಹುದು. ಅಗತ್ಯ ಹಾಗೂ ತಜ್ಞರ ವರದಿ ಆಧರಿಸಿ, ಸಂಬಂಧಪಟ್ಟವರಿಂದ ಸ್ಥಳ ಪರಿಶೀಲಿಸಿ ನಿಯಮಾನುಸಾರ ಅನುಮತಿ ನೀಡಲಾಗುವುದು ಎಂದಿದ್ದಾರೆ.

ಬತ್ತಿದ ಕೊಳವೆ ಬಾವಿಗಳು • ದುಪ್ಪಟ್ಟಾದ ಟ್ಯಾಂಕರ್ ನೀರಿನ ದರ

ಹೋಟೆಲ್ ಉದ್ಯಮಕ್ಕೂ 'ಜಲಕ್ಷಾಮ'

• ಖಲೀಲಅಹ್ಮದ ಶೇಖ

ಹೋಟೆಲ್ ಒಂದರಲ್ಲಿ ಗ್ರಾಹಕರು ಊಟ ಮಾಡುತ್ತಿರುವ ದೃಶ್ಯ —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬನ್ನೇರುಘಟ್ಟ ರಸ್ತೆಯ ಐಸಿರಿ ಕೆಫೆಯಲ್ಲಿ ಅಡಿಕೆ ತಟ್ಟೆ ಮತ್ತು ಬಾಳೆ ಎಲೆ ಬಳಕೆ ಮಾಡುತ್ತಿರುವುದು —ಪ್ರಜಾವಾಣಿ ಚಿತ್ರ:

ಬೆಂಗಳೂರು: 'ಹೋಟೆಲ್‌ನಲ್ಲಿದ್ದ ಕೊಳವೆ ಬಾವಿ ಬತ್ತಿ ಹೋಗಿದೆ. ಇದರಿಂದ ನೀರಿನ ಅಭಾವ ಹೆಚ್ಚಾಗಿದೆ. ಪ್ರತಿದಿನ 6 ಸಾವಿರ ಲೀಟರ್ ನೀರಿಗೆ ₹1500 ನೀಡಿ ನೀರು ತರಿಸಿಕೊಂಡು ಉದ್ಯಮ ನಡೆಸುವ ಪರಿಸ್ಥಿತಿ ಎದುರಾಗಿದೆ'...

ಬನ್ನೇರುಘಟ್ಟ ರಸ್ತೆಯಲ್ಲಿರುವ ಐಸಿರಿ ಕೆಫೆಯ ವ್ಯವಸ್ಥಾಪಕ ಉದಯ್ ಅಡಿಗ ಅವರ ಬೇಸರದ ನುಡಿಗಳಿವು. 'ನಾವು ಗಳಿಸುವ ಬಹುತೇಕ ಲಾಭವನ್ನು ನೀರಿನ ಪೂರೈಕೆಗೆ ವೆಚ್ಚ ಮಾಡಬೇಕಾಗಿದೆ' ಎಂದರು.

ರಾಜಧಾನಿ ಬೆಂಗಳೂರಿನಲ್ಲಿ ಮಾರ್ಚ್ ಮೊದಲ ವಾರದಲ್ಲಿಯೇ ಕುಡಿಯುವ ನೀರಿನ ಅಭಾವ ಎದುರಾಗಿದ್ದು, ಹೋಟೆಲ್ ಉದ್ಯಮಕ್ಕೂ ಇದರ ಬಿಸಿ ತಟ್ಟಿದೆ. ನಿಗದಿತ ಸಮಯಕ್ಕೆ ನೀರು ಸಿಗದೇ ಇರುವುದರಿಂದ ಗ್ರಾಹಕರಿಗೆ ಬಗೆ-ಬಗೆಯ ತಿನಿಸು ನೀಡುವುದು ಹೋಟೆಲ್ ಮಾಲೀಕರಿಗೆ ಸವಾಲಾಗಿದೆ.

ಹೋಟೆಲ್‌ಗಳಲ್ಲಿ ನೀರಿನ ಬಳಕೆ ಹೆಚ್ಚು. ಆದರೆ, ನಗರದಲ್ಲಿರುವ ಬಹುತೇಕ ಹೋಟೆಲ್‌ಗಳಲ್ಲಿದ್ದ ಕೊಳವೆ ಬಾವಿಗಳಲ್ಲಿ ನೀರು ಬರುತ್ತಿಲ್ಲ. ಕಾವೇರಿ ನೀರು ಸಹ ಐದಾರೂ ದಿನಗಳವರೆಗೆ ಪೂರೈಕೆ ಆಗುತ್ತಿಲ್ಲ. ಇದರಿಂದ ಹೋಟೆಲ್‌ನ ಮಾಲೀಕರು ಅನಿವಾರ್ಯವಾಗಿ ಟ್ಯಾಂಕರ್ ನೀರನ್ನು ಅವಲಂಬಿಸುತ್ತಿದ್ದಾರೆ. ಟ್ಯಾಂಕರ್ ನೀರಿನ ದರ ಹೆಚ್ಚಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಬನ್ನೇರುಘಟ್ಟ ರಸ್ತೆಯ ಅರಕೆರೆ, ಶಾಂತಿನಿಕೇತನ್ ಲೇಔಟ್, ಬಿಟಿಎಸ್ ಬಡಾವಣೆಯ ಮುಖ್ಯರಸ್ತೆ, ಕನಕಪುರ ರಸ್ತೆ, ಗಾಂಧಿನಗರ, ಜಯನಗರ ಹಾಗೂ ಬಿಟಿಎಂ ಲೇಔಟ್, ಮಹದೇವಪುರ, ಕೆ.ಆರ್. ಪುರ ಸೇರಿದಂತೆ ನಗರದ ಹೊರವಲಯದಲ್ಲಿರುವ ಹೋಟೆಲ್‌ಗಳು ನೀರಿನ ಕೊರತೆ ಎದುರಿಸುತ್ತಿವೆ. ಹೋಟೆಲ್ ಉದ್ಯಮ ನಡೆಸುವುದು ಕಷ್ಟವಾಗಿದೆ. ನೀರಿನ ಬವಣೆಯನ್ನು ನೀಗಿಸಲು ಕೆಲ ದೊಡ್ಡ ಹೋಟೆಲ್‌ಗಳು ಬಳಸಿ ಬೀಸಾಡುವ (ಯೂಸ್ ಅಂಡ್ ಥ್ರೋ) ತಟ್ಟೆ ಮತ್ತು ಲೋಟಗಳನ್ನು ಬಳಕೆ ಮಾಡುತ್ತಿವೆ.

ಅಂತರ್ಜಲಮಟ್ಟ ಕುಸಿದಿದ್ದು ಹೋಟೆಲ್‌ಗಳಲ್ಲಿದ್ದ ಕೊಳವೆಬಾವಿಗಳು ಬತ್ತಿವೆ. ಅನಿವಾರ್ಯವಾಗಿ ಹೋಟೆಲ್ ಮಾಲೀಕರು, ಟ್ಯಾಂಕರ್‌ನಲ್ಲಿ ನೀರು ತರಿಸಿಕೊಳ್ಳುತ್ತಿದ್ದಾರೆ. ಒಂದು ಹೋಟೆಲ್ ಅಥವಾ ರೆಸ್ಟೋರೆಂಟ್‌ಗೆ ಪ್ರತಿದಿನ 10 ರಿಂದ 12 ಸಾವಿರ ಲೀಟರ್ ನೀರು ಬೇಕಾಗುತ್ತದೆ. ಮಾರ್ಚ್‌ನಲ್ಲಿಯೇ ಜಲಕ್ಷಾಮ ಉಂಟಾಗಿದೆ. ಮುಂದಿನ ಮೂರು ತಿಂಗಳು ಉದ್ಯಮ ನಡೆಸುವುದೇ ದೊಡ್ಡ ಸವಾಲಾಗಿದೆ' ಎಂದು ಹೋಟೆಲ್ ಉದ್ಯಮಿಗಳು ಹೇಳಿದರು.

'ಅಡುಗೆ ಸಿದ್ಧಪಡಿಸಲು, ಪಾತ್ರೆ ತೊಳೆಯಲು, ಗ್ರಾಹಕರಿಗೆ ಕುಡಿಯಲು ಸೇರಿದಂತೆ ಪ್ರತಿಯೊಂದು ಕೆಲಸಕ್ಕೂ ನೀರು ಬೇಕು. ನಗರದಲ್ಲಿ ನೀರಿನ ಕೊರತೆ ಹೆಚ್ಚಾಗಿದ್ದು, ಹೋಟೆಲ್ ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ. ಇದರಿಂದ, ತಿಂಡಿ-ತಿನಿಸುಗಳನ್ನು ಸಿದ್ಧಪಡಿಸಲು ತಡವಾಗುತ್ತಿದೆ. ಹೋಟೆಲ್‌ಗಳ ತಿಂಡಿ-ತಿನಿಸುಗಳನ್ನು ನೆಚ್ಚಿಕೊಂಡಿರುವ ನಗರದ ಸಾವಿರಾರು ಮಂದಿಗೂ ಇದರ ಬಿಸಿ ತಟ್ಟಿದೆ' ಎಂದು ತಿಳಿಸಿದರು.

ಶುದ್ಧ ನೀರಿನ ಘಟಕಗಳಲ್ಲಿ ಹೆಚ್ಚಿದ ದರ: ಕುಡಿಯುವ ನೀರಿನ ಅಭಾವ ಹೆಚ್ಚಾದಂತೆ, ನಗರದ ಹಲವೆಡೆ ಶುದ್ಧ ಕುಡಿಯುವ ನೀರಿನ ಘಟಕಗಳು ನೀರಿನ ದರ ಹೆಚ್ಚಿಸಿವೆ. ಇದರಿಂದ ಬೀದಿ ಬದಿ ಹೋಟೆಲ್ ನಡೆಸುವವರ ಖರ್ಚಿನಲ್ಲಿ ಏರಿಕೆಯಾಗಿದೆ. 'ಗಾಂಧಿನಗರ, ಮೆಜೆಸ್ಟಿಕ್, ರಾಜಾಜಿನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಹಲವು ಘಟಕಗಳಲ್ಲಿ 20 ಲೀಟರ್ ನೀರಿಗೆ ₹5 ಇದ್ದ ಬೆಲೆ, ಇದೀಗ ₹ 10ಕ್ಕೆ ಏರಿಸಲಾಗಿದೆ' ಎಂದು ಹೋಟೆಲ್‌ವೊಂದರ ಮಾಲೀಕರು ತಿಳಿಸಿದರು.

'ಹೋಟೆಲ್‌ಗಳಲ್ಲಿ ಅಡುಗೆ ಮಾಡುವುದಕ್ಕೆ, ಪಾತ್ರೆ ತೊಳೆಯುವುದಕ್ಕೆ ಸೇರಿದಂತೆ ಪ್ರತಿಯೊಂದು ಕೆಲಸಕ್ಕೂ ನೀರು ಬೇಕು. ಹತ್ತು ನಿಮಿಷ ನೀರು ಬರದಿದ್ದರೆ, ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗುತ್ತದೆ. ಹೋಟೆಲ್‌ನಲ್ಲಿ ನೀರಿಲ್ಲದಿದ್ದರೆ ಲಕ್ಷ್ಮಿಯೇ ಇಲ್ಲದಂತೆ ಲೆಕ್ಕ' ಎಂದು ನೃಪತುಂಗ ರಸ್ತೆಯಲ್ಲಿರುವ ನಿಸರ್ಗ ಗ್ರ್ಯಾಂಡ್ ಹೋಟೆಲ್‌ನ ಮಾಲೀಕ ಕೃಷ್ಣರಾಜು ಹೇಳಿದರು.

ನೀರಿನ ಮಿತ ಬಳಕೆಗೆ ಸೂಚನೆ



ಪಿ.ಸಿ ರಾವ್

ನಗರದಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳಿದ್ದು, ನೀರನ್ನು ಮಿತವಾಗಿ ಬಳಸುವ ಕುರಿತು ಗುರುವಾರ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್ ಹೇಳಿದರು. ಹೋಟೆಲ್‌ಗಳಲ್ಲಿ ತಿಂಡಿ-ಕಾಫಿಗೆ ಬಳಸಿ ಬೀಸಾಡುವ ತಟ್ಟೆ ಮತ್ತು ಪಾತ್ರೆಗಳನ್ನು ಬಳಸಲಾಗುತ್ತಿದೆ. ಹೋಟೆಲ್‌ನಲ್ಲಿ ಜಗ್‌ಗಳಲ್ಲಿ ನೀರು ತುಂಬಿಸಿ ಇಡಲಾಗುತ್ತಿದೆ. ಗ್ರಾಹಕರು ತಮಗೆ ಎಷ್ಟು ನೀರು ಬೇಕು ಅಷ್ಟು ಮಾತ್ರ ಲೋಟದಲ್ಲಿ ಹಾಕಿಕೊಂಡು ಕುಡಿಯಬೇಕು ಎಂಬ ಜಾಗೃತಿ ಫಲಕಗಳನ್ನು ಹಾಕುತ್ತಿದ್ದೇವೆ' ಎಂದರು.

ಜಲ ಜಂಜಾಟ

ಮಾಲೀಕರು ಹೇಳೋದೇನು?

ಒಂದು ಹೋಟೆಲ್/ರೆಸ್ಟೋರೆಂಟ್ ನಡೆಯಬೇಕಾದರೆ ಪ್ರತಿದಿನ 7 ರಿಂದ 8 ಟ್ಯಾಂಕರ್ ನೀರು ಬೇಕಾಗುತ್ತದೆ. ಹಿಂದೆ ಒಂದು ಟ್ಯಾಂಕರ್ ನೀರಿಗೆ ₹800 ನೀಡಲಾಗುತ್ತಿತ್ತು. ಈಗ ಒಂದು ಟ್ಯಾಂಕರ್‌ಗೆ ₹1500 ನೀಡಬೇಕಾಗಿದೆ. ನಮಗೆ ತಕ್ಷಣಕ್ಕೆ ನೀರು ಬೇಕೆಂದರೆ ದುಪ್ಪಟ್ಟು ಹಣ ನೀಡಲೇಬೇಕು.
ಕೃಷ್ಣರಾಜು, ನಿಸರ್ಗ ಗ್ರ್ಯಾಂಡ್ ಹೋಟೆಲ್‌ನ ಮಾಲೀಕ

ನೀರಿನ ಅಭಾವ ನೀಗಿಸಲು ಹೋಟೆಲ್‌ನಲ್ಲಿ ಅಡಿಕೆ ತಟ್ಟೆ, ಪ್ಲಾಸ್ಟಿಕ್ ಲೋಟಗಳನ್ನು ಬಳಸುತ್ತಿದ್ದೇವೆ. ಹಿಂದೆ 12 ಸಾವಿರ ಲೀಟರ್ ನೀರು ಬೇಕಾಗುತ್ತಿತ್ತು. ಈಗ 6 ಸಾವಿರ ಲೀಟರ್ ನೀರಿನಲ್ಲಿ ಉದ್ಯಮ ನಡೆಸುತ್ತಿದ್ದೇವೆ.
ಉದಯ್ ಅಡಿಗ, ಬನ್ನೇರುಘಟ್ಟ ರಸ್ತೆಯ ಐಸಿರಿ ಕೆಫೆ ವ್ಯವಸ್ಥಾಪಕ

ಏಪ್ರಿಲ್, ಮೇನಲ್ಲಿ ಪ್ರಾರಂಭವಾಗುತ್ತಿದ್ದ ನೀರಿನ ಸಮಸ್ಯೆ ಮಾರ್ಚ್‌ನಲ್ಲೇ ಶುರುವಾಗಿದೆ. ಕಾವೇರಿ ನೀರು ಸರಿಯಾದ ಸಮಯಕ್ಕೆ ಪೂರೈಕೆಯಾಗುತ್ತಿಲ್ಲ. ಇದರಿಂದ, ನಮ್ಮಂತಹ ಚಿಕ್ಕ ಹೋಟೆಲ್‌ನವರಿಗೆ ಹೆಚ್ಚು ಸಮಸ್ಯೆ ಆಗಿದೆ.
ಶ್ರೀನಿವಾಸ್, ಬೀದಿಬದಿ ಹೋಟೆಲ್ ಮಾಲೀಕ, ಗಾಂಧಿನಗರ

ಪ್ರತಿನಿತ್ಯ ಟ್ಯಾಂಕರ್ ಮೂಲಕ ಡ್ರಮ್‌ಗಳಲ್ಲಿ ನೀರು ತುಂಬಿಕೊಂಡು ಹೋಟೆಲ್ ನಡೆಸುತ್ತಿದ್ದೇವೆ. ನಮ್ಮ ಭಾಗದಲ್ಲಿ ನೀರಿನ ಸಮಸ್ಯೆ ಹೆಚ್ಚಿದ್ದು, ಸಮಯಕ್ಕೆ ಸರಿಯಾಗಿ ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ.
ರಾಜು, ಬೀದಿಬದಿ ಹೋಟೆಲ್ ಮಾಲೀಕ ಬಿಟಿಎಸ್ ಬಡಾವಣೆ

ನೀರನ್ನು ಮಿತವಾಗಿ ಬಳಸಿ

ಸುಧಾ, ಮಯೂರ ಓದಿರಿ

ಅಪಾರ್ಟ್‌ಮೆಂಟ್‌ಗೆ 35 ಸಾವಿರ ಲೀಟರ್ ನೀರು

ಹೊರವಲಯದ ಪ್ರದೇಶಗಳಿಗೆ ಜಲಮಂಡಳಿ ಅಧ್ಯಕ್ಷರ ಭೇಟಿ • ನೀರಿನ ಸರಬರಾಜು ವ್ಯವಸ್ಥೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆ ನಿಯಮಾವಳಿಗಳ ಪ್ರಕಾರ, ಅಪಾರ್ಟ್‌ಮೆಂಟ್‌ಗೆ ದೈನಂದಿನ ಕುಡಿಯುವ ಮತ್ತು ಅಡುಗೆ ಅಗತ್ಯಗಳಿಗಾಗಿ ವಾರಕ್ಕೆ 35 ಸಾವಿರ ಲೀಟರ್ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಭರವಸೆ ನೀಡಿದರು.

ಶನಿವಾರ ಮತ್ತು ಭಾನುವಾರ ನಗರದ ಹೊರವಲಯದ ಪ್ರದೇಶದಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಪರಿಶೀಲಿಸಿ, ನಾಗರಿಕರ ಸಮಸ್ಯೆಗಳನ್ನು ಆಲಿಸಿ ಅವರು ಮಾತನಾಡಿದರು.

ಕಮ್ಮನಹಳ್ಳಿಯ ಅಮೋದ ವಾಲ್‌ಮಾರ್ಟ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘದ ಸದಸ್ಯರು ಕೊಳವೆಬಾವಿಗಳು ಬತ್ತಿರುವುದರಿಂದ ಉಂಟಾಗಿರುವ ಸಮಸ್ಯೆಗಳನ್ನು ವಿವರಿಸಿದರು. ಅಪಾರ್ಟ್‌ಮೆಂಟ್‌ಗೆ ಕಾವೇರಿ ನೀರು ಸಂಪರ್ಕಕ್ಕಾಗಿ 2013ರಲ್ಲಿ ನೀರಿನ ಸಂಪರ್ಕಕ್ಕಾಗಿ ಬಿಲ್ಡರ್ ಈಗಾಗಲೇ ಅಗತ್ಯ ಶುಲ್ಕವನ್ನು ಮಂಡಳಿಗೆ ಪಾವತಿಸಿದ್ದಾರೆ ಎಂದು ತಿಳಿಸಿದರು.

'ಕಮ್ಮನಹಳ್ಳಿ ಗ್ರಾಮವು ಬಿಬಿಎಂಪಿಯ 110 ಗ್ರಾಮಗಳ ವ್ಯಾಪ್ತಿಗೆ ಬರುತ್ತಿದ್ದು, ಕಾವೇರಿ 5ನೇ ಹಂತ ಕಾರ್ಯಾರಂಭವಾದ ಮೇಲೆ ನೀರು ಸಿಗುತ್ತದೆ' ಎಂದು ಅಧ್ಯಕ್ಷರು ಹೇಳಿದರು.

ಕಮ್ಮನಹಳ್ಳಿ ಕೆರೆಯ ಪಕ್ಕದಲ್ಲಿ ಫಿಲ್ಟರ್ ಬೋರ್‌ವೆಲ್ ಕೊರೆದು, ಸಮೀಪದ ಅಪಾರ್ಟ್‌ಮೆಂಟ್‌ಗಳಿಗೆ ಕುಡಿಯಲು ಮತ್ತು ಅಡುಗೆ ಹೊರತುಪಡಿಸಿ ಇತರೆ ಅಗತ್ಯಗಳಿಗಾಗಿ ನೀರು ಪೂರೈಸಲು ಅಧಿಕಾರಿಗಳಿಗೆ ಸೂಚಿಸಿದರು.

ಹೊಂಗಸಂದ್ರದ ಗಾರ್ವೆಭಾವಿಪಾಳ್ಯದಲ್ಲಿರುವ ಪೂರ್ವವೆಸ್ಟೆಂಡ್ ಸಮೀಪದ ಅಗರ ಮತ್ತು ಚಿಕ್ಕಬೇಗೂರು ಕೆರೆಗಳ ಬಳಿ ಫಿಲ್ಟರ್ ಬೋರ್‌ವೆಲ್ ಕೊರೆದು ನೀರು ಪೂರೈಸಲು ಹೇಳಿದರು.

ನಗರದ ಹೊರ ವಲಯದ ಪ್ರದೇಶದಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಪರಿಶೀಲಿಸಿ, ಸ್ಥಳೀಯರೊಂದಿಗೆ ಮಾತುಕತೆ ನಡೆಸಿದರು

ಹೆಚ್ಚುವರಿ ಟ್ಯಾಂಕ್ ಅಳವಡಿಸಲು ಸೂಚನೆ: ವಸಂತಪುರ ವಾರ್ಡ್‌ನ ಯಾದಳಂ ನಗರದ ಕೊಳೆಗೇರಿಯಲ್ಲಿ ಸ್ಥಳೀಯರೊಂದಿಗೆ ಚರ್ಚಿಸಿದ ಅಧ್ಯಕ್ಷರು, ಚಿಕ್ಕ ಗಲ್ಲಿಗಳಲ್ಲಿನ ಮನೆಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಮುಖ್ಯ ಎಂಜಿನಿಯರ್ ಎಸ್.ವಿ.ವೆಂಕಟೇಶ್ ಅವರಿಗೆ ಸೂಚನೆ ನೀಡಿದರು. ಜನರ ಮನವಿಯಂತೆ ಹೆಚ್ಚಿನ ಟ್ಯಾಂಕ್ ಅಳವಡಿಸಲು ಹೇಳಿದರು.

ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರದ ಗುಲ್ಬರ್ಗ ಕಾಲೊನಿಯ ಜನರೊಂದಿಗೆ ಮಾತುಕತೆ ನಡೆಸಿ, ಕಾಲೊನಿ ಮತ್ತು ಇತರ ಅಗತ್ಯವಿರುವ ಪ್ರದೇಶಗಳಲ್ಲಿ ಹೆಚ್ಚುವರಿ 2 ಸಾವಿರ ಲೀಟರ್ ಟ್ಯಾಂಕ್‌ಗಳನ್ನು ಅಳವಡಿಸಬೇಕು. ಈಗಿರುವ ಕೊಳವೆಬಾವಿಗಳನ್ನು ದುರಸ್ತಿ ಮಾಡಿ, ಪೈಪ್‌ಲೈನ್ ಬದಲು ಟ್ಯಾಂಕ್‌ನಿಂದ ನೀರು ಸಂಗ್ರಹಿಸಲು ಜನರಿಗೆ ಅನುವು ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗುಬ್ಬಲಾಳದ ಮಂತ್ರಿ ಟ್ರಾಂಕ್ವಿಲ್ ವಸತಿ ಸಮುಚ್ಚಯದಲ್ಲಿ ಉದ್ಭವಿಸಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಶೀಲಿಸಿದ ರಾಮ್ ಪ್ರಸಾತ್ ಮನೋಹರ್, ಕುಡಿಯುವ ನೀರು ಪೂರೈಸುವುದಾಗಿ ಭರವಸೆ ನೀಡಿದರು. ಇನ್ನಿತರ ಬಳಕೆಗೆ ತ್ಯಾಜ್ಯ ನೀರನ್ನು ಸಂಸ್ಕರಿಸಿ ಬಳಸಬೇಕು ಎಂದು ಸೂಚನೆ ನೀಡಿದರು.

ಸುಬ್ರಮಣ್ಯಪುರ ಹಾಗೂ ದೊರಕೆರೆ ಅಂಗಳದಲ್ಲಿ ನೀರು ಸಂಸ್ಕರಣ ಘಟಕಗಳನ್ನು ನಿರ್ಮಿಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಾಧ್ಯತೆಯನ್ನು ತಜ್ಞರೊಂದಿಗೆ ಪರಿಶೀಲಿಸಿ ದೀರ್ಘಕಾಲದ ಪರಿಹಾರವಾಗಿ ಪರಿಗಣಿಸಲು ಅಧಿಕಾರಿಗಳಿಗೆ ಆದೇಶಿಸಿದರು. ಅಗರ ಕೆರೆ ಬಳಿಯ ಎಸ್‌ಟಿಪಿಯಲ್ಲಿ ನೀರು ಶುದ್ಧೀಕರಿಸಿ ಪೂರೈಕೆ ಮಾಡುತ್ತಿರುವುದನ್ನು ಪರಿಶೀಲಿಸಿ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆದರು.

ಎ.ನಾರಾಯಣಪುರ, ಕೆ.ಆರ್.ಪುರ, ವಿಜ್ಞಾನ ನಗರ, ಎಚ್‌ಎಎಲ್ ವಾರ್ಡ್‌ಗೆ ಟ್ಯಾಂಕರ್ ನೀರು ಸರಬರಾಜು ವ್ಯವಸ್ಥೆ ಪರಿಶೀಲಿಸಿದರು. ಕೃಷ್ಣನಗರದ ಕೊಳೆಗೇರಿಗೆ ಭೇಟಿ ನೀಡಿ, ಹೆಚ್ಚುವರಿಯಾಗಿ ಒಂದು ಟ್ಯಾಂಕ್ ಅಳವಡಿಸಲು ಸೂಚಿಸಿದರು.

'ಕೆರೆ ತುಂಬಿಸದ ಕಾರಣ ನೀರಿನ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ತುಂಬಿಸಬೇಕು ಎಂದು ಮೂರು ತಿಂಗಳ ಹಿಂದೆಯೇ ಮನವಿ ಮಾಡಿಕೊಂಡಿದ್ದರೂ, ಜಲಮಂಡಳಿ ಅಧಿಕಾರಿಗಳು ಕ್ರಮ ಕೈಗೊಳ್ಳಲಿಲ್ಲ. ಹೀಗಾಗಿ ಇಂದು ನೀರಿನ ಸಮಸ್ಯೆ ಹೆಚ್ಚಾಗಿದೆ' ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಹೇಳಿದ್ದಾರೆ.

'1250 ಎಂಎಲ್‌ಡಿ ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ಹರಿಸಿ ಅದನ್ನು ತುಂಬಿಸಬೇಕು. ಈ ವರ್ಷ ಮಳೆಯಾಗಿಲ್ಲ, ನೀರಿನ ಸಮಸ್ಯೆ ಉಂಟಾಗಬಹುದು. ಈಗಲೇ ಕ್ರಮ ಕೈಗೊಂಡರೆ ಕೊಳವೆಬಾವಿಗಳಲ್ಲಿ ನೀರು ಇರುವಂತೆ ನೋಡಿಕೊಳ್ಳಬಹುದು ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಮೂರು ತಿಂಗಳ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಜಲಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಹೇಳಿದ್ದರು. ಆದರೆ, ಈವರೆಗೂ ಆ ಕೆಲಸ ಆಗಿಲ್ಲ' ಎಂದು ದೂರಿದ್ದಾರೆ.

'ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ತುಂಬಿಸಲು ಇದೀಗ ಕ್ರಮ ಕೈಗೊಳ್ಳುವುದಾಗಿ ಜಲಮಂಡಳಿ ಅಧ್ಯಕ್ಷರು ಹೇಳುತ್ತಿದ್ದಾರೆ. ಇದನ್ನು ಕಳೆದ ವರ್ಷವೇ ಮಾಡಿದ್ದರೆ ನೀರಿನ ಸಮಸ್ಯೆ ಉಂಟಾಗುತ್ತಿರಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯ, ವಿಳಂಬ ಧೋರಣೆಯಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಈಗಲಾದರೂ ಯುದ್ಧೋಪಾದಿಯಲ್ಲಿ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಆಸ್ಪತ್ರೆಗಳಲ್ಲಿ ನೀರಿನ ವ್ಯವಸ್ಥೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಸೇರಿ ನಗರದ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿನ ನೀರಿನ ವ್ಯವಸ್ಥೆಯ ಬಗ್ಗೆ ಜಲಮಂಡಳಿ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಭಾನುವಾರ ಪರಿಶೀಲನೆ ನಡೆಸಿದರು.

ಆಸ್ಪತ್ರೆಗಳ ನೀರಿನ ಮೂಲ ಹಾಗೂ ನೀರಿನ ಮಟ್ಟದ ಬಗ್ಗೆ ತಿಳಿದುಕೊಂಡ ಅವರು, ರೋಗಿಗಳಿಗೆ ನೀರು ಸಿಗುತ್ತಿದೆಯೇ ಇಲ್ಲವೇ ಎನ್ನುವುದನ್ನು ಖಚಿತಪಡಿಸಿಕೊಂಡರು. ಶಾಸಕರ ಅನುದಾಡಿ ಆಸ್ಪತ್ರೆಗಳ ಆವರಣದಲ್ಲಿ ನಿರ್ಮಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನೂ ಪರಿಶೀಲಿಸಿದರು.

'ಸರ್ಕಾರಿ ಆಸ್ಪತ್ರೆ ಆವರಣದಲ್ಲಿರುವ ಕಾವೇರಿ ನೀರಿನ ಹಾಗೂ ಕೊಳವೆ ಬಾವಿಯ ಶುದ್ಧ ನೀರು ಘಟಕಗಳನ್ನು ಪರಿಶೀಲನೆ ಮಾಡಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಆಸ್ಪತ್ರೆಗಳಲ್ಲಿ ನೀರಿನ ವ್ಯತ್ಯಯವಾಗುತ್ತಿಲ್ಲ. ಮುಂದಿನ ದಿನಗಳಲ್ಲಿಯೂ ಸಮಸ್ಯೆಯಾಗದಂತೆ ಕ್ರಮವಹಿಸಲಾಗುವುದು' ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

'ಚುನಾವಣಾ ಹೊಂದಾಣಿಕೆಗಾಗಿ ತಮಿಳುನಾಡಿಗೆ ನೀರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜಲ ಸಂಕಷ್ಟಕ್ಕೆ ಸ್ಪಂದಿಸದ ಕಾಂಗ್ರೆಸ್ ಸರ್ಕಾರ ಡಿಎಂಕೆ ಜತೆಗೆ ಚುನಾವಣಾ ಹೊಂದಾಣಿಕೆಗಾಗಿ ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಹರಿಸುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ರಾಜ್ಯದಲ್ಲಿ ಕುಡಿಯಲು ನೀರಿಲ್ಲದೇ ಜನ ತತ್ತರಿಸಿದ್ದಾರೆ. ಜನಸಾಮ್ಯಾನರು ಖಾಲಿ ಬಿಂದಿಗೆ ಹಿಡಿದು ಬೀದಿಗೆ ಇಳಿದಿದ್ದಾರೆ. ಬೆಂಗಳೂರು ಮಹಾನಗರದ ಜನ ಕುಡಿಯುವ ನೀರಿನ ಅಭಾವದಿಂದ ಕಂಗಾಲಾಗಿ ಹೋಗಿದ್ದಾರೆ ಎಂದು ಕಿಡಿಕಾರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಇಂತಹ ನಾಚಿಕೆಗೆಟ್ಟ ಸರ್ಕಾರ ಹಿಂದೆಂದೂ ಇರಲಿಲ್ಲ. ಒಂದು ಕಡೆ ವೋಟಿಗಾಗಿ ಅಲ್ಪಸಂಖ್ಯಾತರನ್ನು ಓಲೈಸುವ ಕೆಲಸ ಮಾಡುತ್ತಿದ್ದು, ಮತ್ತೊಂದು ಕಡೆ ಚುನಾವಣೆ ಹೊಂದಾಣಿಕೆಗಾಗಿ ನೀರು ಬಿಟ್ಟು ಕಾಂಗ್ರೆಸ್ ಸರ್ಕಾರ ಕನ್ನಡ ನಾಡಿಗೆ ದ್ರೋಹ ಎಸಗಿದೆ ಎಂದರು.

'ಮೇಕೆದಾಟು ಯೋಜನೆ ಜಾರಿ ಮಾಡುತ್ತೇವೆ ಎಂದು ಹೋರಾಟ ಮಾಡಿ, ಈಗ ಕೇಂದ್ರ ಸರ್ಕಾರ ಮಾಡಬೇಕು ಎನ್ನುತ್ತಿದ್ದಾರೆ. ಆಯವ್ಯಯದಲ್ಲಿ ಮೇಕೆದಾಟು ಯೋಜನೆಗೆ ನಯಾಪೈಸೆ ನೀಡಿಲ್ಲ. ಇವರಿಗೆ ಮಾನ ಮರ್ಯಾದೆ ಇದ್ದರೆ ಈ ಯೋಜನೆಗೆ ₹10 ಸಾವಿರ ಕೋಟಿ ಮೀಸಲಿಡಬೇಕಿತ್ತು. ಜನರಿಗೆ ಕಲುಷಿತ ನೀರು ಪೂರೈಕೆ ಮಾಡುವ ಮೂಲಕ ಬೆಂಗಳೂರಿನ ಮಾನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಾಜು ಹಾಕಿದ್ದಾರೆ. ಸರ್ಕಾರದ ಪ್ರತಿಯೊಬ್ಬರೂ ಖಜಾನೆ ಲೂಟಿ ಮಾಡುವುದರಲ್ಲಿ ನಿರತರಾಗಿದ್ದಾರೆ' ಎಂದು ಅಶೋಕ ಹರಿಹಾಯ್ದರು.

'ಈಗಿನ ಸರ್ಕಾರ ಪಾಪರ್ ಆಗಿದ್ದು, ಕುಡಿಯುವ ನೀರು ಪೂರೈಕೆ ಮಾಡಲೂ ಸರ್ಕಾರದ ಬಳಿ ಹಣವಿಲ್ಲ. ಕುಡಿಯುವ ನೀರು ಪೂರೈಕೆ ಮಾಡಲು ಯೋಗ್ಯತೆ ಇಲ್ಲವಾದರೆ ಕುರ್ಚಿ ಬಿಟ್ಟು ತೊಲಗಲಿ. ನಾವು ಸರ್ಕಾರ ನಡೆಸುವ ಸಂದರ್ಭದಲ್ಲಿ ಕೇಂದ್ರದ ಕಡೆ ನೋಡದೇ ರೈತರಿಗೆ ಅಧಿಕ ಮೊತ್ತದಲ್ಲಿ ಪರಿಹಾರ ವಿತರಣೆ ಮಾಡಿದ್ದೆವು. ಪಾಪರ್ ಸರ್ಕಾರದಲ್ಲಿ ರೈತರಿಗೆ ಕೊಡಲು ಹಣವಿಲ್ಲ' ಎಂದು ಅಶೋಕ ಹೇಳಿದರು.

'ಬರ ಪರಿಹಾರಕ್ಕೆ ಚುನಾವಣಾ ನೀತಿ ಸಂಹಿತೆ ಅನ್ವಯವಾಗುವುದಿಲ್ಲ. ಎಸ್‌ಡಿಆರ್‌ಎಫ್ ಹಣ ಈಗಾಗಲೇ ರಾಜ್ಯ ಸರ್ಕಾರಕ್ಕೆ ತಲುಪಿದೆ. ಎನ್‌ಡಿಆರ್‌ಎಫ್ ಹಣವನ್ನು ಕೇಂದ್ರ ಸರ್ಕಾರ ಒಟ್ಟಿಗೆ ತೀರ್ಮಾನ ಮಾಡಿ ಎಲ್ಲ ರಾಜ್ಯಗಳಿಗೂ ನೀಡುತ್ತದೆ. ಹಿಂದೆ ಮನಮೋಹನ್ ಸಿಂಗ್ ಸರ್ಕಾರ ಇದ್ದಾಗ ಇದೇ ರೀತಿ ತಡವಾಗಿ ಪರಿಹಾರ ನೀಡಲಾಗಿತ್ತು. ಆಗ ಬಾಯಿ ಬಡಿದುಕೊಳ್ಳದ ಕಾಂಗ್ರೆಸ್ ಈಗ ಮಾತ್ರ ಬಾಯಿ ಬಡಿದುಕೊಳ್ಳುತ್ತಿದೆ' ಎಂದು ಟೀಕಿಸಿದರು.

'ಸಿದ್ದರಾಮಯ್ಯ ಕೇಂದ್ರದೊಂದಿಗೆ ಉತ್ತಮ ಸಂಬಂಧ ಇಟ್ಟುಕೊಳ್ಳದೇ ರಾಜಕೀಯ ಮಾಡುತ್ತಿದ್ದಾರೆ. ಆದರೆ, ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಪ್ರಧಾನಿಯವರ ಬಗ್ಗೆ ಒಳ್ಳೆಯ ಮಾತನಾಡಿದ್ದಾರೆ. ಕರ್ನಾಟಕದ ನಾಯಕರು ಅವರಿಂದ ಪಾಠ ಹೇಳಿಸಿಕೊಳ್ಳಲಿ' ಎಂದರು.

'ಟ್ಯಾಂಕರ್ ಮಾಫಿಯಾಗೆ ಸರ್ಕಾರದ ಬೆಂಬಲ'

ಕಾಂಗ್ರೆಸ್ ಸರ್ಕಾರ ನೀರಿನ ಟ್ಯಾಂಕರ್ ಮಾಫಿಯಾಗೆ ಬಹಿರಂಗವಾಗಿ ಬೆಂಬಲ ನೀಡುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. 'ಟ್ಯಾಂಕರ್ ನೀರಿಗೆ ಸರ್ಕಾರ ವಿಧಿಸಿದ್ದ ಷರತ್ತುಗಳೆಲ್ಲವೂ ಕಣ್ಕಟ್ಟಿಗೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಇದು ನಿದ್ರಾವಸ್ಥೆಯಲ್ಲಿರುವ ಸರ್ಕಾರ. ಷರತ್ತುಗಳೇ ಇಲ್ಲದ ಆದೇಶ ಹೊರಡಿಸಿರುವ ಸರ್ಕಾರ ಟ್ಯಾಂಕರ್ ಮಾಲೀಕರ ಜತೆ ಕೈಜೋಡಿಸಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ' ಎಂದು 'ಎಕ್ಸ್' ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದೆ. 'ನಿಮಗೆ ನಿಜಕ್ಕೂ ಕಾಳಜಿ ಇದ್ದರೆ ಮೊದಲು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಜಾರಿಗೊಳಿಸಬೇಕು' ಎಂದೂ ಆಗ್ರಹಿಸಿದೆ.

ನಗರದಲ್ಲಿ ಇಂದು

ನೂತನ ಸಂಘದ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಕೆ. ಶಾಂತಕುಮಾರಿ, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಒಕ್ಕೂಟ, ಸ್ಥಳ: ಶಾಸಕರ ಭವನ ಸಮ್ಮೇಳನ ಸಭಾಂಗಣ, ಬೆಳಿಗ್ಗೆ 11

'ಸಂವಿಧಾನ ಉಳಿಸಿ-ದೇಶ ಉಳಿಸಿ' ರಾಜ್ಯಮಟ್ಟದ ಮತದಾರರ ಜಾಗೃತಿ ಸಮಾವೇಶ: ಉದ್ಘಾಟನೆ: ಸಿದ್ದನಗೌಡ ಪಾಟೀಲ, ಅಧ್ಯಕ್ಷತೆ: ಆರ್. ಮೋಹನ್‌ರಾಜು, ಮುಖ್ಯ ಅತಿಥಿಗಳು: ಕೆ. ಶರೀಫಾ, ವೀರಸಂಗಯ್ಯ, ರಾಜು ಎಂ. ತಳವಾರ್, ಸ್ವಪ್ನ ಮೋಹನ್, ರಾಜಕುಮಾರ್ ಮೂಲಭಾರತಿ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಆರನೇ ವರ್ಷದ ವಾರ್ಷಿಕೋತ್ಸವ ಹಾಗೂ ಸನ್ಮಾನ ಸಮಾರಂಭ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ನಾಟಕ ಪ್ರದರ್ಶನ: 'ಪ್ರಚಂಡ ರಾವಣ', ಆಯೋಜನೆ: ಸಾಯಿ ಕಲಾವೃಂದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ತುಂಬಾಡಿ ರಾಮಯ್ಯ ಅವರ 'ಜಾಲ್ಗಿರಿ' ಕಾದಂಬರಿ ಬಿಡುಗಡೆ: ಧರಣೀದೇವಿ ಮಾಲಗತ್ತಿ, ಅಧ್ಯಕ್ಷತೆ: ಎಂ.ಎಸ್. ಮೂರ್ತಿ, ಪುಸ್ತಕದ ಬಗ್ಗೆ ಮಾತು: ರಘುನಾಥ ಚ.ಹ., ಮುಖ್ಯ ಅತಿಥಿಗಳು: ರವಿಕುಮಾರ್ ನೀಹ, ಶ್ರೀಪಾದ ಎಸ್. ಬಿ., ಆಯೋಜನೆ: ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

'ಶ್ರೀಮದ್ಭಾಗವತ' ಪ್ರವಚನ: ಉಡುಪಿ ಕೃಷ್ಣಾಚಾರ್ಯ, ಆಯೋಜನೆ: ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 6

ರಾಘವೇಂದ್ರ ಸ್ವಾಮಿಗಳವರ ಪಟ್ಟಾಭಿಷೇಕ ಮತ್ತು ವರ್ಧಂತಿ ಉತ್ಸವ: ಹರಿದಾಸ ಮಂಜರಿ: ಗಾಯನ: ರೂಪಾ ಪ್ರಭಂಜನ, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಚಾಮರಾಜಪೇಟೆ, ಸಂಜೆ 6.30

ರಾಘವೇಂದ್ರ ಗುರುಸಾರ್ವಭೌಮರ ಪಟ್ಟಾಭಿಷೇಕ ಮತ್ತು ವರ್ಧಂತಿ ಉತ್ಸವ: ಉದ್ಘಾಟನೆ ಮತ್ತು ಆಶೀರ್ವಚನ: ವಿಶ್ವವಲ್ಲಭತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರ ನಗರ, ಮಲ್ಲೇಶ್ವರ, ಸಂಜೆ 6.30

ಮಹಿಳಾ ದಿನಾಚರಣೆ ಸಂಭ್ರಮ ಹಾಗೂ ವೀರಶೈವ ಸಮಾಜದ 223ನೇ ತಿಂಗಳ ಸಮಾವೇಶ: ಸನ್ಮಾನ: ಸುಜಾತ ರಾಜಣ್ಣ, ಮಾನಸ ಮನೋಹರ್, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ ಹಾಲ್, ಸದಾಶಿವನಗರ ಕ್ಲಬ್, ಸದಾಶಿವನಗರ, ಸಂಜೆ 6.30

'ಲೀಕ್ ಔಟ್' ರಂಗ ಪ್ರಯೋಗ: ಕಥೆ ಮತ್ತು ಕಥನ ಪ್ರದರ್ಶನ: ಅಕ್ಷತಾ ಪಾಂಡವಪುರ, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

PROPERTY CORNER
FOR SALE
MULTI STORIED COMMERCIAL BUILDING
Situated on Tumkur Road, BANGALORE
FETCHING VERY-GOOD RENTAL INCOME
Parties who can invest Rs. 70 Crores, may contact owner: 9880737490

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES
General
NEED AUDIO Visual Technician, Photo & Videographer, Qualification- PUC I, PUC II Pass, ITI Electrical Pass or Fail. 8904442902

Wanted
WANTED MALE/ Female Office Adminstrative Assistant Below 40 Years Known Kannada English Hindi in and Around Rajajinagar Contact: 9108458798/ 080-23384085

BUILDERS ESSENTIAL
Water Proofing
"BUILDING SOLUTIONS" Waterproofing Roof, Sump, Bathroom, Skylight,Swimming pool, Heat resistant coating, House painting. 9448572697

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/- PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

POWERED BY
NPCI
भारतीय राष्ट्रीय भुगतान निगम
NATIONAL PAYMENTS CORPORATION OF INDIA

“ನನಗನಿಸುತ್ತದೆ BHIM
ಸುರಕ್ಷಿತವಾಗಿದೆ

ನನಗನಿಸುತ್ತದೆ BHIM
ಸರಳವಾಗಿದೆ

ನನಗನಿಸುತ್ತದೆ BHIM
ತಡೆರಹಿತವಾಗಿದೆ

ವಿಶ್ವಾಸಾರ್ಹ ಡಿಜಿಟಲ್ ಪಾವತಿ ಆಪ್
ಆಗಿ BHIM ಮುಂದುವರೆಯುತ್ತದೆ
ಎನ್ನುವುದು ನನ್ನ ನಂಬಿಕೆ”

ಡೌನ್‌ಲೋಡ್ ಮಾಡಿ

BHIM
BHARAT INTERFACE FOR MONEY

GET IT ON Google Play

Available on the App Store

BHIM
BHARAT INTERFACE FOR MONEY

ಸಂಕ್ಷಿಪ್ತ ಸುದ್ದಿ

‘ಹಿಂದೂಪರ ಕೆಲಸ ಮಾಡುವವರಿಗೆ ಮತಹಾಕಿ’

ಮಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಎಲ್ಲ ಹಿಂದೂಗಳೂ ಮತದಾನ ಮಾಡಬೇಕು. ಹಿಂದೂಗಳಿಗಾಗಿ ಕೆಲಸ ಮಾಡುವವರಿಗೆ ಹಾಗೂ ರಾಷ್ಟ್ರವಾದಿ ಚಿಂತನೆ ಹೊಂದಿರುವವರಿಗೆ ಮತ ಹಾಕಬೇಕು. ಕೆಲವು ಸುಶಿಕ್ಷಿತರು ನೋಟಾ ಚಲಾಯಿಸುತ್ತಾರೆ. ದಯವಿಟ್ಟು ಹಾಗೆ ಮಾಡಬೇಡಿ’ ಎಂದು ವಿಶ್ವಹಿಂದೂ ಪರಿಷತ್‌ನ ಕೇಂದ್ರೀಯ ಸಹಪ್ರಧಾನ ಕಾರ್ಯದರ್ಶಿ ಸ್ಥಾನು ಮಲಯನ್ ಹೇಳಿದರು.

ಇಲ್ಲಿ ಎರಡು ದಿನ ನಡೆದ ಪರಿಷತ್‌ನ ದಕ್ಷಿಣ ಪ್ರಾಂತ ಸಭೆಯ ನಂತರ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಸಂಘಟನೆಗೆ 60 ವರ್ಷ ತುಂಬುತ್ತಿದ್ದು, 15,000 ಕಡೆ ವಿಸ್ತರಣಾ ಕಾರ್ಯ ಕೈಗೊಳ್ಳುವುದು, 1 ಲಕ್ಷ ಗ್ರಾಮಗಳನ್ನು ತಲುಪುವುದು ನಮ್ಮ ಉದ್ದೇಶ’ ಎಂದರು.

‘ಸರ್ಕಾರ ಬೀಳಿಸಲು ಶಾಸಕರಿಗೆ ₹ 50 ಕೋಟಿ ಆಮಿಷ’

ಬೆಂಗಳೂರು: ‘ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಮ್ಮ ಶಾಸಕರಿಗೆ ತಲಾ ₹ 50 ಕೋಟಿ ಕೊಟ್ಟು ಸರ್ಕಾರ ಬೀಳಿಸಲು ಬಿಜೆಪಿಯವರು ಬಿಲ್ಲು ಬಾಣ ತೆಗೆದುಕೊಂಡಿದ್ದರು. ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರನ್ನೂ ಸಂಪರ್ಕಿಸಿದ್ದರು. ಆದರೆ, ಇದ್ಯಾವುದೂ ಸಾಧ್ಯವಾಗಲಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷರು ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ ಸರ್ಕಾರ ಬೀಳಿಸುವ ವಿಚಾರದಲ್ಲಿ ಬಿಜೆಪಿಯವರು ತಿರುಕನ ಕನಸು ಕಾಣುತ್ತಿದ್ದಾರೆ’ ಎಂದು ತಿಳಿಸಲು ಬಯಸುತ್ತೇನೆ. ನಾವು ಜನಾಶೀರ್ವಾದದಿಂದ 135 ಕ್ಷೇತ್ರಗಳನ್ನು ಗೆದ್ದಿದ್ದೇವೆ ಮೂವರು ಪಕ್ಷೇತರರ ಬೆಂಬಲವಿದೆ. ಹೀಗಾಗಿ ನಮ್ಮ ಸರ್ಕಾರ ಬೀಳಿಸಲಾಗದು’ ಎಂದರು.

‘ಮೋದಿ ಹೆಸರಿನಲ್ಲಿ ಗೆಲ್ಲುತ್ತೇವೆ ಎನ್ನುವವರಷ್ಟು ಮೂರ್ಖರಿಲ್ಲ’: ಬೆಂಗಳೂರು: ‘ನರೇಂದ್ರ ಮೋದಿಯವರ ಹೆಸರಿನ ಮೇಲೆ ಗೆಲ್ಲುತ್ತೇವೆ ಎಂದು ಬಿಜೆಪಿ ಭಾವಿಸಿದೆ. ಅವರ ಹೆಸರಿನ ಮೇಲೆಯೇ ಗೆಲ್ಲುತ್ತೇವೆ ಎನ್ನುವವರಷ್ಟು ಮೂರ್ಖರು ಯಾರೂ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ನರೇಂದ್ರ ಮೋದಿಯವರು ಪಾದಯಾತ್ರೆ ಮಾಡಿದ್ದರೂ ನಮಗೆ 136 ಸ್ಥಾನ ದೊರೆತವು. ಮೋದಿಯವರು ಪ್ರಚಾರ ಮಾಡಿದ್ದ ಯಾವ ಕ್ಷೇತ್ರದಲ್ಲೂ ಬಿಜೆಪಿ ಗೆಲ್ಲಲೇ ಇಲ್ಲ. ಹೀಗಾಗಿ, ನರೇಂದ್ರ ಮೋದಿಯವರ ಹೆಸರಿನ ಮೇಲೆಯೇ ಗೆಲ್ಲುತ್ತೇವೆ ಎನ್ನುವ ಇವರಷ್ಟು ಮೂರ್ಖರಾರು ಇಲ್ಲ’ ಎಂದು ಲೇವಡಿ ಮಾಡಿದರು

‘ಎಎಪಿ ಜೊತೆ ಧರ್ಮವಿದೆ’

ಚಂಡೀಗಢ (ಪಿಟಿಐ): ‘ನಮ್ಮ ಪಕ್ಷದ ಜೊತೆ ಧರ್ಮವಿದೆ’ ಎಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ‘ಧರ್ಮ ಅಥವಾ ಅಧರ್ಮ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಿ’ ಎಂದು ಹರಿಯಾಣದ ಕುರುಕ್ಷೇತ್ರದಲ್ಲಿ ಭಾನುವಾರ ಹೇಳಿದರು.

ಲೋಕಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿ ಸುಶೀಲ್ ಗುಪ್ತಾ ಪರವಾಗಿ ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮತಯಾಚಿಸಿದರು. ಈ ವೇಳೆ ಮಹಾಭಾರತದ ಕೆಲ ಸನ್ನಿವೇಶಗಳನ್ನು ಉಲ್ಲೇಖಿಸಿದ ಅವರು, ಕುರುಕ್ಷೇತ್ರವು ಧರ್ಮಯುದ್ಧ ನಡೆದ ಪವಿತ್ರ ಕ್ಷೇತ್ರ. ಕೌರವರ ಬಳಿ ಎಲ್ಲವೂ ಇತ್ತು. ಆದರೆ ಪಾಂಡವರು ಯುದ್ಧವನ್ನು ಗೆದ್ದರು. ಪಾಂಡವರ ಬಳಿ ಇದ್ದದ್ದು ಶ್ರೀಕೃಷ್ಣ ಮಾತ್ರ. ಹಾಗೆಯೇ, ನಮ್ಮದು ಚಿಕ್ಕ ಪಕ್ಷ. ನಮ್ಮ ಜೊತೆಯೂ ಶ್ರೀಕೃಷ್ಣ ಇದ್ದಾನೆ’ ಎಂದರು.

ಪಶ್ಚಿಮ ಬಂಗಾಳ: ‘ಇಂಡಿಯಾ’ ಮೈತ್ರಿಕೂಟ ಕೈಬಿಟ್ಟ ಟಿಎಂಸಿ • ರಾಜ್ಯದ ಎಲ್ಲಾ 42 ಕ್ಷೇತ್ರಗಳಿಗೂ ಅಭ್ಯರ್ಥಿಗಳ ಘೋಷಣೆ

7 ಸಂಸದರಿಗೆ ಕೊಕ್, 12 ಮಹಿಳೆಯರು ಕಣಕ್ಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಕೋಲ್ಕತ್ತದಲ್ಲಿ ಭಾನುವಾರ ನಡೆದ ಟಿಎಂಸಿ ಬೃಹತ್ ರ‍್ಯಾಲಿಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾತನಾಡಿದರು —ಪಿಟಿಐ ಚಿತ್ರ

ಕೋಲ್ಕತ್ತ: ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಭಾನುವಾರ ಪಶ್ಚಿಮ ಬಂಗಾಳದ 42 ಲೋಕಸಭಾ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ್ದು, ಏಳು ಹಾಲಿ ಸಂಸದರನ್ನು ಕೈಬಿಟ್ಟಿದೆ.

ಮಾಜಿ ಕ್ರಿಕೆಟಿಗರಾದ ಯೂಸುಫ್ ಪಠಾಣ್, ಕೀರ್ತಿ ಆಜಾದ್ ಅವರಂತಹ ಹಲವು ಹೊಸ ಮುಖಗಳಿಗೆ ಮಣೆಹಾಕಿದೆ. ಟಿಎಂಸಿ ಹಾಲಿ 23 ಸಂಸದರ ಪೈಕಿ 16 ಜನರಿಗೆ ಟಿಕೆಟ್ ಘೋಷಿಸಿದ್ದು, ಒಟ್ಟು 12 ಮಹಿಳಾ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ಹಳೆ ಬೇರು, ಹೊಸ ಚಿಗುರು ಎಂಬಂತೆ ಅನುಭವಿ ನಾಯಕರು ಮತ್ತು ಹೊಸ ಪ್ರತಿಭೆಗಳನ್ನು ಗಣನೆಗೆ ತೆಗೆದುಕೊಂಡಿದೆ.

ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಟಿಎಂಸಿ ಬೃಹತ್ ರ‍್ಯಾಲಿಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಘೋಷಿಸಲಾಯಿತು. ಈ ವೇಳೆ ಮಾತನಾಡಿದ ಟಿಎಂಸಿ ವರಿಷ್ಠೆ ಮಮತಾ ಬ್ಯಾನರ್ಜಿ, ‘ನಾನು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇನೆ. ಕೆಲವರನ್ನು ಕೈಬಿಡಲಾಗಿದ್ದು, ಅವರಿಗೆ ವಿಧಾನಸಭಾ ಚುನಾವಣೆ ಸಮಯದಲ್ಲಿ ಅವಕಾಶ ಕಲ್ಪಿಸಲಾಗುವುದು’ ಎಂದರು.

ಟಿಎಂಸಿ ಏಕಾಂಗಿಯಾಗಿ ಅಭ್ಯರ್ಥಿಗಳ ಹೆಸರು ಘೋಷಿಸಿದ ಕಾರಣ, ಬಂಗಾಳದಲ್ಲಿ ಎಡರಂಗದ ಜತೆ ಕಾಂಗ್ರೆಸ್ ಸೀಟು ಹಂಚಿಕೆಯನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ. ಈ ಸಂಬಂಧ ಸೋಮವಾರ ಸಿಪಿಎಂ ಪಾಲಿಟ್ ಬ್ಯೂರೊ ಸಭೆ ನಡೆಯಲಿದ್ದು, ಕಾಂಗ್ರೆಸ್ ಜತೆಗಿನ ಸೀಟು ಹಂಚಿಕೆ ಕುರಿತು ಚರ್ಚೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ಯೂಸುಫ್ ಪಠಾಣ್ ಕಣಕ್ಕೆ: ಬಹರಂಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಅವರ ಹೆಸರನ್ನು ಘೋಷಿಸಲಾಗಿದೆ. ಈ ಕ್ಷೇತ್ರವು ರಾಜ್ಯ ಕಾಂಗ್ರೆಸ್ ಮುಖ್ಯಸ್ಥರಾಗಿರುವ, ಐದು ಬಾರಿಯ ಸಂಸದ ಅಧೀರ್ ರಂಜನ್ ಚೌಧುರಿ ಅವರ ಭದ್ರಕೋಟೆ. ಅಧೀರ್ ರಂಜನ್ ಅವರು ಮಮತಾ ಅವರ ಪ್ರಮುಖ ಟೀಕಾಕಾರರೂ ಹೌದು. ಟಿಎಂಸಿ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಡೈಮಂಡ್ ಹಾರ್ಬರ್ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಲಿದ್ದಾರೆ.

ಸಚಿವರು, ಶಾಸಕರು, ನಟರು ಅಖಾಡಕ್ಕೆ: ಮಮತಾ ಅವರ ಸಂಪುಟದ ಸಚಿವರಾದ ಪಾರ್ಥ ಭೌಮಿಕ್ (ಬ್ಯಾರಕ್‌ಪುರ) ಮತ್ತು ಬಿಪ್ಲವ್ ಮಿತ್ರ (ಬಾಲೂರ್ ಘಾಟ್) ಸೇರಿದಂತೆ ಒಂಬತ್ತು ಹಾಲಿ ಶಾಸಕರು ಲೋಕಸಭಾ ಚುನಾವಣಾ ಅಖಾಡಕ್ಕೆ ಇಳಿಯಲಿದ್ದಾರೆ. ನಟರೂ ಆದ ಹಾಲಿ ಶಾಸಕಿ ಜೂನ್ ಮಲಿಯಾ (ಮೇದಿನಿಪುರ), ಸಯೋನಿ ಘೋಷ್ (ಜಾದವ್‌ಪುರ), ರಚನಾ ಬ್ಯಾನರ್ಜಿ (ಹೂಗ್ಲಿ) ಅವರು ಕಣಕ್ಕಿಳಿಯಲಿದ್ದಾರೆ. ಅವರಲ್ಲದೆ ನಟರಾದ ದೇವ್ (ಘಟಾಲ್) ಮತ್ತು ಶತಾಬ್ದಿ ರಾಯ್ (ಬಿರ್‌ಭೂಮ್) ಮರುಆಯ್ಕೆ ಬಯಸಿ ಸ್ಪರ್ಧಿಸಲಿದ್ದಾರೆ.

ಅಸನ್ಸೋಲ್ ಕ್ಷೇತ್ರದ ಉಪ ಚುನಾವಣೆಯಲ್ಲಿ (2022) ಗೆದ್ದಿದ್ದ ಶತ್ರುಘ್ನ ಸಿನ್ಹಾ ಅವರು ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಮಾಜಿ ಕ್ರಿಕೆಟಿಗ ಮತ್ತು ಟಿಎಂಸಿ ನಾಯಕರಾದ ಕೀರ್ತಿ ಆಜಾದ್ ಅವರು ಬರ್ಧಮಾನ್– ದುರ್ಗಾಪುರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಅವರು 2019ರಲ್ಲಿ ಬಿಜೆಪಿ ಎದುರು ಸೋತಿದ್ದರು. ಇವರಿಬ್ಬರ ಜತೆಗೆ ಪಠಾಣ್ ಟಿಎಂಸಿಯಿಂದ ಕಣಕ್ಕಿಳಿಯಲಿರುವ ಮೂರನೇ ಬಂಗಾಳಿಯೇತರ ಅಭ್ಯರ್ಥಿಯಾಗಿದ್ದಾರೆ.

ಸಂದೇಶ್‌ಖಾಲಿ ಇರುವ ಬಸೀರ್‌ಹಾಟ್ ಲೋಕಸಭಾ ಕ್ಷೇತ್ರದ ಟಿಎಂಸಿಯ ಹಾಲಿ ಸಂಸದೆ, ನಟಿ ನುಸ್ರತ್ ಜಹಾನ್ ಅವರಿಗೆ ಟಿಕೆಟ್ ಕೈತಪ್ಪಿದ್ದು, ಆ ಕ್ಷೇತ್ರದಿಂದ ಮಾಜಿ ಸಂಸದ ಹಾಜಿ ನೂರುಲ್ ಇಸ್ಲಾಂ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದೆ.

ಮಹುವಾ ಮೊಯಿತ್ರಾಗೆ ಟಿಕೆಟ್: ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಹಣ ಪಡೆದಿದ್ದಾರೆ ಎಂಬ ಆರೋಪಪಡಡಿ ಲೋಕಸಭೆಯಿಂದ ಉಚ್ಚಾಟಿತರಾಗಿದ್ದ ಮಹುವಾ ಮೊಯಿತ್ರಾ ಅವರನ್ನು ಮತ್ತೆ ಕೃಷ್ಣನಗರ ಕ್ಷೇತ್ರದಿಂದ ಟಿಎಂಸಿ ಅಭ್ಯರ್ಥಿಯನ್ನಾಗಿ ಘೋಷಿಸಿದೆ.

ಬಿಜೆಪಿಯಿಂದ ಟಿಎಂಸಿ ಸೇರಿರುವ ಬಿಸ್ವಜಿತ್ ದಾಸ್ ಮತ್ತು ಮುಕುಟ್ ಮಣಿ ಅಧಿಕಾರಿ ಅವರು ಕ್ರಮವಾಗಿ ಬನ್‌ಗ್ರಾಮ ಮತ್ತು ರಾಣಾಘಾಟ್ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಮತುಅ ಸಮುದಾಯದ ಭದ್ರಕೋಟೆಯಾಗಿರುವ ಈ ಎರಡೂ ಕ್ಷೇತ್ರಗಳು 2019ರಲ್ಲಿ ಬಿಜೆಪಿ ಪಾಲಾಗಿದ್ದವು.

ಮೂರು ಬಾರಿ ಸಂಸದರಾದ ಸುದೀಪ್ ಬಂಡೋಪಾಧ್ಯಾಯ, ಸೌಗತ ರಾಯ್, ಸತಾಬ್ದಿ ರಾಯ್, ಕಲ್ಯಾಣ್ ಬ್ಯಾನರ್ಜಿ, ಕಾಕೋಲಿ ಘೋಷ್ ದಸ್ತಿದಾರ್ ಅವರನ್ನು ಕ್ರಮವಾಗಿ ಉತ್ತರ ಕೋಲ್ಕತ್ತ, ಡಮ್ ಡಮ್, ಬೀರ್‌ಭೂಮ್, ಸೆರಾಂಪೋರ್ ಮತ್ತು ಬಾರಾಸತ್ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ.

ಹೊಸ ಮುಖಗಳಾದ ಸಯೋನಿ ಘೋಷ್, ದೇಬಾಂಕ್ಷು ಭಟ್ಟಾಚಾರ್ಯ, ಗೋಪಾಲ್ ಲಾಮಾ, ಶಾಸಕ ಜುನ್ ಮಲಿಯಾ, ಬಾಪಿ ಹಲ್ದಾರ್, ನಟಿ ರಚನಾ ಬ್ಯಾನರ್ಜಿ ಅವರಿಗೆ ಟಿಕೆಟ್ ನೀಡಲಾಗಿದೆ. ಕಂಠಿ ಮತ್ತು ತಮ್ಲುಕ್‌ನ ಟಿಎಂಸಿ ಸಂಸದರಾದ ಸಿಸಿರ್ ಅಧಿಕಾರಿ, ದಿವ್ಯೇಂದು ಅಧಿಕಾರಿ ಹೆಸರುಗಳು ಅಭ್ಯರ್ಥಿಗಳ ಪಟ್ಟಿಯಲ್ಲಿ ಇಲ್ಲ. ಸುವೇಂದು ಅಧಿಕಾರಿ 2020ರಲ್ಲಿ ಕೇಸರಿ ಪಕ್ಷ ಸೇರಿದ ಬಳಿಕ ಇವರು ಟಿಎಂಸಿಯಿಂದ ಅಂತರ ಕಾಯ್ದುಕೊಂಡಿದ್ದರು.

ಬಿಜೆಪಿ ಸಂಸದರ ಪತ್ನಿಗೆ ಟಿಕೆಟ್: ಬಿಷ್ಣುಪುರ ಕ್ಷೇತ್ರದಿಂದ ಸುಜಾತಾ ಮೊಂಡಲ್ ಖಾನ್ ಸ್ಪರ್ಧಿಸಲಿದ್ದಾರೆ. ಅವರು ಅಲ್ಲಿನ ಬಿಜೆಪಿ ಸಂಸದ ಸೌಮಿತ್ರಾ ಖಾನ್ ಅವರ ಪತ್ನಿ. ಮಾಜಿ ಐಪಿಎಸ್ ಅಧಿಕಾರಿ ಪ್ರಸೂನ್ ಬ್ಯಾನರ್ಜಿ ಅವರು ಮಾಲ್ಡಾ ಉತ್ತರ ಕ್ಷೇತ್ರದಲ್ಲಿ ಕಣಕ್ಕಿಳಿಯಲಿದ್ದಾರೆ. ಅವರು ಈಚೆಗಷ್ಟೇ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಟಿಕೆಟ್ ಕೈತಪ್ಪಿದ ಸಂಸದರು

ಸಿಸಿರ್ ಅಧಿಕಾರಿ, ದಿವ್ಯೇಂದು ಅಧಿಕಾರಿ, ಮಿಮಿ ಚಕ್ರವರ್ತಿ, ನುಸ್ರತ್ ಜಹಾನ್, ಅಪರೂಪ ಪೋದ್ದಾರ್, ಸುನಿಲ್ ಮಂಡಲ್ ಮತ್ತು ಚೌಧರಿ ಮೋಹನ್ ಜಟುಆ

ಟಿಎಂಸಿಯೊಂದಿಗೆ ಸೀಟು ಹಂಚಿಕೆ ನಮಗೆ ಬೇಕಿತ್ತು. ಈ ಕುರಿತು ಒಮ್ಮತದ ನಿರ್ಧಾರಕ್ಕೆ ಬರಲು ಸಾಧ್ಯವಾಗದೆ ಇರುವುದು ವಿಷಾದದ ಸಂಗತಿ.

ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ

ಮುಖ್ಯಾಂಶಗಳು

- ರಾಜ್ಯದ ಎಲ್ಲ ಕ್ಷೇತ್ರಗಳಲ್ಲಿ ಟಿಎಂಸಿ ಏಕಾಂಗಿ ಸ್ಪರ್ಧೆ
- ಉಚ್ಚಾಟಿತ ಸಂಸದೆ ಮಹುವಾಗೆ ಟಿಕೆಟ್
- ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಅಖಾಡಕ್ಕೆ

ಬಾಗಿಲು ತೆರೆದಿದೆ: ಖರ್ಗೆ ಆಹ್ವಾನ

ನವದೆಹಲಿ (ಪಿಟಿಐ): ‘ಟಿಎಂಸಿಗಾಗಿ ಕಾಂಗ್ರೆಸ್‌ನ ಬಾಗಿಲು ಯಾವಾಗಲೂ ತೆರೆದಿರುತ್ತದೆ. ಅಭ್ಯರ್ಥಿಗಳ ನಾಮಪತ್ರ ಹಿಂಪಡೆಯುವ ಕೊನೆಯ ದಿನದವರೆಗೂ ಮೈತ್ರಿ ಸಾಧ್ಯತೆ ಇದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಟಿಎಂಸಿ ಪಶ್ಚಿಮ ಬಂಗಾಳದ ಎಲ್ಲ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಬೆನ್ನಲ್ಲೇ ಅವರು ಪ್ರತಿಕ್ರಿಯಿಸಿದ್ದಾರೆ.

‘ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಜತೆಗೆ ಸಿಟು ಹಂಚಿಕೆ ಒಪ್ಪಂದ ಮಾಡಿಕೊಳ್ಳಲು ಕಾಂಗ್ರೆಸ್ ಸಿದ್ಧ ಇದೆ ಎಂಬುದನ್ನು ಈಗಾಗಲೇ ಹಲವು ಬಾರಿ ಹೇಳಿದ್ದೇವೆ. ಯಾವುದೇ ಒಪ್ಪಂದವನ್ನು ಮಾತುಕತೆಗಳ ಮೂಲಕ ಅಂತಿಮಗೊಳಿಸಬೇಕೇ ಹೊರತು ಏಕಪಕ್ಷೀಯ ಘೋಷಣೆಗಳಿಂದಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷವು ಯಾವಾಗಲೂ ‘ಇಂಡಿಯಾ’ ಮೈತ್ರಿ ಕೂಟವು ಒಟ್ಟಾಗಿ ಬಿಜೆಪಿ ವಿರುದ್ಧ ಹೋರಾಡಲು ಬಯಸುತ್ತದೆ ಎಂದು ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿನ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಟಿಎಂಸಿ ನಾಯಕರ ನಡುವೆ ಇತ್ತೀಚಿನ ದಿನಗಳಲ್ಲಿ ಮಾತಿನ ಸಮರ ನಡೆದಿತ್ತು. ಟಿಎಂಸಿ ಪಕ್ಷವು ಕಾಂಗ್ರೆಸ್‌ಗೆ ಎರಡಕ್ಕಿಂತ ಹೆಚ್ಚು ಸ್ಥಾನಗಳನ್ನು ನೀಡಲು ಸಾಧ್ಯವಿಲ್ಲ ಎಂದು ಹೇಳಿತ್ತು. ಕಾಂಗ್ರೆಸ್ ಹೆಚ್ಚಿನ ಸ್ಥಾನಕ್ಕೆ ಬೇಡಿಕೆ ಸಲ್ಲಿಸಿತ್ತು. ಇದಕ್ಕೆ ಒಪ್ಪದ ಟಿಎಂಸಿ, ಏಕಾಂಗಿಯಾಗಿ ರಾಜ್ಯದ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿತ್ತು.

ಹಾಸನ: ಪ್ರಜ್ವಲ್‌ಗೆ ಸ್ಪರ್ಧೆ ನೀಡಲೆಂದೇ ಶ್ರೇಯಸ್ ಪಟೇಲ್‌ಗೆ ಕಾಂಗ್ರೆಸ್ ಟಿಕೆಟ್

ಮೂರನೇ ತಲೆಮಾರಿನ ಮಧ್ಯೆ ಪೈಪೋಟಿ

• ಚಿದಂಬರಪ್ರಸಾದ

ಹಾಸನ: ಲೋಕಸಭೆ ಚುನಾವಣೆಗೆ ದಿನಗಣನೆ ಶುರುವಾಗಿದ್ದು, ಹಾಸನ ಕ್ಷೇತ್ರದಲ್ಲಿ ಈ ಬಾರಿ, ಬದ್ಧ ಎದುರಾಳಿಗಳಾದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಮಾಜಿ ಸಚಿವ ದಿ.ಪುಟ್ಟಸ್ವಾಮಿಗೌಡರ ಕುಟುಂಬದ 3ನೇ ತಲೆಮಾರಿನ ನಡುವೆ ಪೈಪೋಟಿಗೆ ವೇದಿಕೆ ಸಿದ್ಧವಾಗಿದೆ. ಆದರೆ, ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅನರ್ಹತೆಯ ಪ್ರಕರಣ ಕುರಿತು ಸುಪ್ರೀಂ ಕೋರ್ಟ್ ನೀಡುವ ತೀರ್ಪಿನ ಆಧಾರದಲ್ಲಿ ಇದು ನಿರ್ಧಾರ ಆಗಲಿದೆ.

ಎಚ್.ಡಿ. ದೇವೇಗೌಡರ ಮೊಮ್ಮಗ ಪ್ರಜ್ವಲ್ ರೇವಣ್ಣ ಮತ್ತು ಮಾಜಿ ಸಚಿವ ಪುಟ್ಟಸ್ವಾಮಿಗೌಡರ ಮೊಮ್ಮಗ ಶ್ರೇಯಸ್ ಪಟೇಲ್ ಎದುರಾಳಿಗಳಾಗುವುದು ಬಹುತೇಕ ನಿಶ್ಚಿತ ಎನ್ನಲಾಗುತ್ತಿದೆ.

ದೇವೇಗೌಡರ ಜೊತೆಗಿನ ಆರಂಭದ ಸ್ನೇಹವನ್ನು ಕಡಿದುಕೊಂಡು ಹೊರಬಂದಿದ್ದ ಪುಟ್ಟಸ್ವಾಮಿಗೌಡರು, ಪ್ರತಿ ಚುನಾವಣೆಯಲ್ಲೂ ದೇವೇಗೌಡರಿಗೆ ಸ್ಪರ್ಧೆ ಒಡ್ಡುತ್ತಲೇ ಬಂದಿದ್ದರು. ಅವರ ನಂತರವೂ ಹೊಳೆನರಸೀಪುರದಲ್ಲಿ ಎಚ್.ಡಿ. ರೇವಣ್ಣ ಅವರ ವಿರುದ್ಧ 2 ಬಾರಿ ಸ್ಪರ್ಧಿಸಿದ್ದ ಪುಟ್ಟಸ್ವಾಮಿಗೌಡರ ಸೊಸೆ ಅನುಪಮಾ ಸೋಲು ಅನುಭವಿಸಿದ್ದರು. 2023ರ ವಿಧಾನಸಭೆ ಚುನಾವಣೆಯಲ್ಲಿ ಎಚ್.ಡಿ. ರೇವಣ್ಣ ಅವರ ವಿರುದ್ಧ ಸ್ಪರ್ಧಿಸಿದ್ದ ಶ್ರೇಯಸ್ ಪಟೇಲ್ 3,500 ಮತಗಳ ಅಂತರದಿಂದ ಸೋಲು ಅನುಭವಿಸಿದ್ದರು.

‘ದೇವೇಗೌಡರ ಕುಟುಂಬಕ್ಕೆ ಪೈಪೋಟಿ ನೀಡಲು ಶ್ರೇಯಸ್ ಅವರನ್ನೇ ಕಣಕ್ಕೆ ಇಳಿಸಬೇಕು. ಮತದಾರರ ಅನುಕಂಪವೂ ಕೈಹಿಡಿಯಲಿದೆ’ ಎನ್ನುವ ಲೆಕ್ಕಾಚಾರ ಅಂದಿನಿಂದಲೇ ಕಾಂಗ್ರೆಸ್‌ನಲ್ಲಿ ಆರಂಭವಾಗಿತ್ತು. ಇದೀಗ ಅದನ್ನೇ ಕಾಂಗ್ರೆಸ್ ಹೈಕಮಾಂಡ್ ಬಳಸಿಕೊಂಡು ‘ಲಾಭ’ದ ನಿರೀಕ್ಷೆಯಲ್ಲಿದೆ.

ಮುಗಿಯದ ಹಗ್ಗಜಗ್ಗಾಟ: ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಘೋಷಿಸಿದ್ದರೂ, ಬಿಜೆಪಿ–ಜೆಡಿಎಸ್ ನಾಯಕರ ಮಧ್ಯೆ ಇನ್ನೂ ಹಗ್ಗಜಗ್ಗಾಟ ಮುಂದುವರಿದಿದೆ.

ಒಂದೆಡೆ ಪ್ರಜ್ವಲ್ ರೇವಣ್ಣ, ‘ಬಿಜೆಪಿ ನಾಯಕರ ಜೊತೆಗೆ ಮಾತನಾಡುತ್ತಿದ್ದೇನೆ. ಪ್ರೀತಂ ಗೌಡ ಜೊತೆಗೂ ಮಾತನಾಡುತ್ತೇನೆ’ ಎಂದು ಸ್ನೇಹದ ಹಸ್ತ ಚಾಚಿದ್ದು, ಬಿಜೆಪಿ ನಾಯಕರು ಮಾತ್ರ, ‘ಮೈತ್ರಿಯ ಬಗ್ಗೆ ನಮಗೆ ಯಾವುದೇ ಸೂಚನೆ ಬಂದಿಲ್ಲ’ ಎನ್ನುತ್ತಿದ್ದಾರೆ.

ಬಿಜೆಪಿಯ ಬಹುತೇಕ ನಾಯಕರಿಗೆ ಹಾಸನ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಮನಸ್ಸಿಲ್ಲ. ಆದರೆ, ಬಿಜೆಪಿ ವರಿಷ್ಠರ ಜೊತೆಗೆ ದೇವೇಗೌಡರು ಹೊಂದಿರುವ ಉತ್ತಮ ಬಾಂಧವ್ಯದಿಂದಾಗಿ ಏನೂ ಮಾಡಲು ಆಗುತ್ತಿಲ್ಲ.

‘ಜಿಲ್ಲೆಯಲ್ಲಿ ಪಕ್ಷ ಸದೃಢವಾಗಿದೆ. ಜೆಡಿಎಸ್ ತೊರೆದು ಬಿಜೆಪಿ ಸೇರಿರುವ ಎ.ಟಿ. ರಾಮಸ್ವಾಮಿ ಸಮರ್ಥ ಅಭ್ಯರ್ಥಿ ಆಗಲಿದ್ದಾರೆ. ಅವರಿಗೆ ಟಿಕೆಟ್ ನೀಡಿದರೂ ಒಳ್ಳೆಯದು ಎಂಬ ಮಾತನ್ನು ವರಿಷ್ಠರ ಬಳಿ ಹೇಳಿದ್ದೇವೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ ತಿಳಿಸಿದ್ದಾರೆ.

ಟಿಕೆಟ್ ಘೋಷಣೆ ಆದಮೇಲೆ ಎರಡೂ ಪಕ್ಷದವರು ಸೇರಿ ಎಲ್ಲ ಭಾಗಗಳಲ್ಲೂ ಸಭೆ ನಡೆಸುತ್ತೇವೆ. ಯಾವುದೇ ಗೊಂದಲಗಳಿದ್ದರೂ ಬಗೆಹರಿಸಿಕೊಳ್ಳುತ್ತೇವೆ

ಪ್ರಜ್ವಲ್ ರೇವಣ್ಣ, ಸಂಸದ

ಜಿಲ್ಲೆಯಲ್ಲಿ ಬಿಜೆಪಿ ಸದೃಢವಾಗಿದ್ದು, ಪಕ್ಷದ ಅಭ್ಯರ್ಥಿ ಹಾಕಲು ವರಿಷ್ಠರನ್ನು ಕೇಳಿದ್ದೇವೆ. ಮೈತ್ರಿ ಬಗ್ಗೆ ನಮ್ಮ ನಾಯಕರು ಯಾವುದೇ ಸೂಚನೆ ನೀಡಿಲ್ಲ.

ಸಿದ್ದೇಶ್ ನಾಗೇಂದ್ರ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬಕ್ಕೆ ಸಾಕಷ್ಟು ಅಧಿಕಾರ ನೀಡಿದ್ದೀರಿ. ನಿಮ್ಮ ಸೇವೆ ಸಲ್ಲಿಸಲು ನನಗೂ ಒಂದು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೇಯಸ್ ಪಟೇಲ್, ಕಾಂಗ್ರೆಸ್ ಅಭ್ಯರ್ಥಿ

ಓಡಾಟ ಚುರುಕು

ಟಿಕೆಟ್ ಘೋಷಣೆ ಆಗುತ್ತಿದ್ದಂತೆಯೇ ಕಾಂಗ್ರೆಸ್ ನಾಯಕರು ಕ್ಷೇತ್ರದಲ್ಲಿ ಚುರುಕಿನ ಓಡಾಟ ಆರಂಭಿಸಿದ್ದಾರೆ. ಶ್ರೇಯಸ್ ಪಟೇಲ್ ಅವರು ಶನಿವಾರ ಚನ್ನರಾಯಪಟ್ಟಣಕ್ಕೆ ಭೇಟಿ ನೀಡಿ, ಪ್ರಮುಖ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ, ಬೆಂಬಲ ಕೋರಿದರು. ಅರಸೀಕೆರೆ ಕ್ಷೇತ್ರಕ್ಕೂ ಭೇಟಿ ನೀಡಿದ ಶ್ರೇಯಸ್ ಪಟೇಲ್, ಶಾಸಕ ಕೆ.ಎಂ. ಶಿವಲಿಂಗೇಗೌಡ ಬೆಂಬಲ ಕೋರಿದ್ದಲ್ಲದೇ, ಮತಯಾಚನೆಯನ್ನೂ ಆರಂಭಿಸಿದ್ದಾರೆ.

‘ಗ್ಯಾರಂಟಿ ಹೆಸರಲ್ಲಿ ಜಾತ್ರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೀವ್ರ ಬರಗಾಲದಿಂದ ರಾಜ್ಯದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಆದರೆ, ಜನರ ಕಷ್ಟಕ್ಕೆ ಸ್ಪಂದಿಸಬೇಕಿದ್ದ ಸರ್ಕಾರ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಜಾತ್ರೆ ಮಾಡುತ್ತಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

‘ಗ್ಯಾರಂಟಿ’ ಯೋಜನೆಗಳ ಫಲಾನುಭವಿಗಳ ಸಮಾವೇಶ ಕುರಿತು ‘ಎಕ್ಸ್’ ಖಾತೆಯಲ್ಲಿ ಭಾನುವಾರ ಪ್ರತಿಕ್ರಿಯಿಸಿರುವ ಅವರು, ‘ರಾಜ್ಯದ ಜನ ಬರದಿಂದ ಕಂಗೆಟ್ಟಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೊರೆ ನೀರೋನಂತೆ ವರ್ತಿಸುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ರಾಜ್ಯವನ್ನು ಜಲಕ್ಷಾಮ ಆವರಿಸಿದೆ. ಜನರು ನೀರಿಗೆ ಪರದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸರ್ಕಾರವು ತೆರಿಗೆಯ ಹಣದಲ್ಲಿ ಕೋಟಿಗಟ್ಟಲೆ ರೂಪಾಯಿಗಳನ್ನು ಸುರಿದು ಗ್ಯಾರಂಟಿ ಸಮಾವೇಶಗಳನ್ನು ಮಾಡುತ್ತಿದೆ. ಇದು ಲಜ್ಜೆಗೇಡಿನ ವರ್ತನೆ’ ಎಂದಿದ್ದಾರೆ. ‘ರೈತರಿಗೆ ಪರಿಹಾರ ನೀಡಲು ಸರ್ಕಾರದ ಬಳಿ ಹಣವಿಲ್ಲ. ಆದರೆ, ಗ್ಯಾರಂಟಿ ಸಮಾವೇಶಗಳ ಪ್ರಚಾರಕ್ಕೆ ಕೋಟ್ಯಂತರ ರೂಪಾಯಿ ವ್ಯಯಿಸಲಾಗುತ್ತಿದೆ. ಈ ವೆಚ್ಚದ ಕುರಿತು ಶ್ವೇತಪತ್ರ ಪ್ರಕಟಿಸಬೇಕು. ಆಗ ಸರ್ಕಾರದ ಅಸಲಿ ಬಣ್ಣ ಜನರಿಗೆ ಗೊತ್ತಾಗುತ್ತದೆ’ ಎಂದಿದ್ದಾರೆ.

‘ಸತ್ಯ ಒಪ್ಪಿದ್ದಕ್ಕೆ ಅಭಿನಂದನೆ’

‘2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಸೋಲಿಗೆ ಕಾಂಗ್ರೆಸ್ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡ್ಯದಲ್ಲಿ ನಡೆದ ಗ್ಯಾರಂಟಿ ಸಮಾವೇಶದಲ್ಲಿ ಹೇಳಿದ್ದಾರೆ. ಸತ್ಯ ಒಪ್ಪಿಕೊಂಡಿದ್ದಕ್ಕೆ ಅವರಿಗೆ ಅಭಿನಂದನೆಗಳು’ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

‘ಸತ್ಯ ಬಿಸಿ ತುಪ್ಪದಂತೆ. ಈಗ ಹೊರಬಂದಿದೆ. ಸುಮಲತಾ ಗೆದ್ದಿದ್ದು ಕಾಂಗ್ರೆಸ್ ಬೆಂಬಲದಿಂದ ಗೆದ್ದಿದ್ದು ಎಂಬುದು ಬಹಿರಂಗವಾಗಿದೆ. ಮುಖ್ಯಮಂತ್ರಿಯವರ ಗೋಮುಖವ್ಯಾಘ್ರತನವು ಹೊರಬಂದಿದೆ’ ಎಂದು ಟೀಕಿಸಿದ್ದಾರೆ.

ಬಿಜೆಪಿಯೊಳಗೆ ‘ಬಣ’ರಾಜಕಾರಣ ಉಲ್ಬಣ

ಒಂದನೇ ಪುಟದಿಂದ...

ಈ ಕ್ಷೇತ್ರದ ಮೇಲೆ ಸಿ.ಟಿ.ರವಿ ಅವರೂ ಕಣ್ಣು ಹಾಕಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಗೂ ಮೊದಲೇ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದ ಪ್ರಮೋದ್ ಮಧ್ವರಾಜ್ ಅವರೂ ಆಕಾಂಕ್ಷಿ. ಶೋಭಾ ಹೊರ ಜಿಲ್ಲೆಯವರು. ಜಿಲ್ಲೆಯವರಿಗೆ ಅವಕಾಶ ನೀಡಬೇಕು ಎನ್ನುತ್ತಾರೆ ಕ್ಷೇತ್ರದ ಕಾರ್ಯಕರ್ತರು. ಶೋಭಾ ಅವರಿಗೆ ಈಗ ಉಳಿದಿರುವ ಆಸರೆ ಕೇವಲ ಯಡಿಯೂರಪ್ಪ. ಅವರು ಮಾತ್ರ ದಡ ದಾಟಿಸಬಲ್ಲರು. ಆದರೆ, ಕಾರ್ಯಕರ್ತರು ಕೈ ಹಿಡಿಯಬಲ್ಲರೇ ಎಂಬ ಪ್ರಶ್ನೆ ಪಕ್ಷವನ್ನು ಕಾಡುತ್ತಿದೆ.

ತುಮಕೂರು ಕ್ಷೇತ್ರದ ಟಿಕೆಟ್ ಸಿಗಬಹುದು ಎಂಬ ಕಾರಣಕ್ಕೆ ವಿ.ಸೋಮಣ್ಣ ಕ್ಷೇತ್ರದಲ್ಲಿ ಈಗಾಗಲೇ ಪ್ರಚಾರ ಆರಂಭಿಸಿದ್ದಾರೆ. ಆದರೆ, ಜಿಲ್ಲೆಯಲ್ಲಿ ಹೊರಗಿನವರು ಬರ ಬಾರದು ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದ್ದಾರೆ. ಮಾಧುಸ್ವಾಮಿಗೆ ಟಿಕೆಟ್ ನೀಡಬಾರದು ಎಂದು ಹಾಲಿ ಸಂಸದ ಜಿ.ಎಸ್. ಬಸವರಾಜು ಪಟ್ಟು ಹಿಡಿದಿದ್ದಾರೆ. ಭಾನುವಾರ ಮಾಧುಸ್ವಾಮಿ ಅವರ ಬೆಂಬಲಿಗರು ತಿಪಟೂರಿನಲ್ಲಿ ಪ್ರತಿಭಟನೆ ನಡೆಸಿ, ತಮ್ಮ ನಾಯಕನಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸುವುದರ ಜತೆಗೆ ‘ ‘ಗೋ ಬ್ಯಾಕ್ ಸೋಮಣ್ಣ’ ಎಂಬ ಘೋಷಣೆ ಮೊಳಗಿಸಿದ್ದಾರೆ.

ಬೀದರ್‌ನಲ್ಲಿ ಹಾಲಿ ಸಂಸದ ಭಗವಂತ ಖೂಬಾ ಅವರನ್ನು ಮತ್ತೆ ಕಣಕ್ಕಿಳಿಸುವುದನ್ನು ಜಿಲ್ಲೆಯ ಬಹುಪಾಲು ಶಾಸಕರು ಮತ್ತು ಮಾಜಿ ಶಾಸಕರು ವಿರೋಧಿಸುತ್ತಿದ್ದಾರೆ. ಪರ್ಯಾಯ ಅಭ್ಯರ್ಥಿ ಆಯ್ಕೆ ಮಾಡಬೇಕೆಂಬ ಹೋರಾಟದ ನೇತೃತ್ವವನ್ನು ಶಾಸಕ ಪ್ರಭು ಚವ್ಹಾಣ್ ವಹಿಸಿದ್ದಾರೆ.

ಮೈಸೂರಿನಲ್ಲಿ ತಮಗೆ ಟಿಕೆಟ್ ತಪ್ಪಬಹುದು ಎಂದು ಆತಂಕಕ್ಕೆ ಒಳಗಾಗಿರುವ ಸಂಸದ ಪ್ರತಾಪ್ ಸಿಂಹ ಅವರು ಸುದ್ದಿಗೋಷ್ಠಿ ಮಾಡಿ ತಮ್ಮ ಸಾಧನೆಯ ಪಟ್ಟಿ ಮುಂದಿಟ್ಟಿದ್ದಾರೆ. ಈ ಕ್ಷೇತ್ರದಿಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೇ ಟಿಕೆಟ್ ಸಿಗಬಹುದು ಎಂಬ ಮಾತುಗಳು ದೆಹಲಿಯಲ್ಲಿ ದಟ್ಟವಾಗಿ ಹಬ್ಬಿರುವ ಕಾರಣ ಪ್ರತಾಪ್ ಆತಂಕಕ್ಕೆ ಒಳಗಾಗಿದ್ದಾರೆ. ಮೈಸೂರು ಮತ್ತು ಕೊಡಗು ಜಿಲ್ಲೆಯ ಪಕ್ಷದ ಮಾಜಿ ಶಾಸಕರು ಪ್ರತಾಪ್ ಅವರಿಗೆ ಟಿಕೆಟ್ ನೀಡುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪರ ಕೆಲಸ ಮಾಡಲಿಲ್ಲ ಎಂಬ ಮುನಿಸು ಎಲ್ಲ ಮಾಜಿ ಶಾಸಕರದು ಎಂದು ಬಿಜೆಪಿ ಮೂಲಗಳು ಹೇಳಿವೆ.

ಹಾವೇರಿಯಲ್ಲಿ ತಮ್ಮ ಪುತ್ರ ಕಾಂತೇಶ್‌ಗೆ ಟಿಕೆಟ್ ನೀಡಬೇಕು ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಪಟ್ಟು ಹಿಡಿದಿದ್ದಾರೆ. ‘ಬಸವರಾಜ ಬೊಮ್ಮಾಯಿ ಈಗಾಗಲೇ ಶಾಸಕರಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಪಕ್ಷ ಹೇಳಿದಂತೆ ಕೇಳಿದ್ದೇನೆ. ನನ್ನ ಪುತ್ರನಿಗೆ ಅವಕಾಶ ನೀಡಬೇಕು’ ಎಂಬ ವಾದವನ್ನು ಈಶ್ವರಪ್ಪ ಮಂಡಿಸಿದ್ದಾರೆ.

ಮಂಗಳೂರು ಕ್ಷೇತ್ರದಲ್ಲಿ ನಳಿನ್ ಕುಮಾರ್ ಕಟೀಲ್ ವಿರುದ್ಧ ಅಸಮಾಧಾನ ಇದ್ದರೂ, ಅದು ಸ್ಫೋಟಗೊಂಡಿಲ್ಲ. ಆದರೆ, ನಳಿನ್ ಕುಮಾರ್ ಕಟೀಲ್ ಅವರು ಇತರ ಸಂಸದರಂತೆ ಜಿದ್ದಿಗೆ ಬಿದ್ದಿಲ್ಲ. ಪಕ್ಷವು ಅವಕಾಶ ನೀಡಿದರೆ ಸ್ಪರ್ಧಿಸುವುದು; ಟಿಕೆಟ್ ನಿರಾಕರಿಸಿದರೆ ವರಿಷ್ಠರ ತೀರ್ಮಾನವನ್ನು ಒಪ್ಪಿಕೊಳ್ಳುವುದು ಎಂಬ ಯೋಚನೆಯಲ್ಲಿ ಅವರು ಇದ್ದಾರೆ ಎಂದು ಮೂಲಗಳು ಹೇಳಿವೆ.

ಅನಂತಕುಮಾರ್ ಹೆಗಡೆ ‘ಬಿಸಿ ತುಪ್ಪ’

ಉತ್ತರ ಕನ್ನಡ ಕ್ಷೇತ್ರದ ಹಾಲಿ ಸಂಸದ ಅನಂತಕುಮಾರ್ ಹೆಗಡೆ ಅವರು ಬಿಜೆಪಿ ಪಾಲಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದ್ದಾರೆ. ಅವರ ಬಾಯಿಂದ ಹೊರಡುವ ಪ್ರತಿಯೊಂದು ವಿವಾದಾತ್ಮಕ ಮಾತೂ ಪಕ್ಷವನ್ನು ಮುಜುಗರಕ್ಕೆ ಸಿಲುಕಿಸುತ್ತಿರುವುದು ಮಾತ್ರವಲ್ಲದೇ, ಹಿನ್ನಡೆಗೂ ಕಾರಣವಾಗುತ್ತಿದೆ ಎಂಬ ಆತಂಕ ಬಿಜೆಪಿಯೊಳಗೆ ವ್ಯಕ್ತವಾಗುತ್ತಿದೆ.

ಐದು ವರ್ಷ ರಾಜಕೀಯವಾಗಿ ಮರೆಗೆ ಸರಿದಿದ್ದ ಹೆಗಡೆ, ಚುನಾವಣೆ ಹತ್ತಿರವಾಗುತ್ತಿದ್ದಂತೆ ಸಕ್ರಿಯರಾದರು. ಆದರೆ, ಅವರ ಸಕ್ರಿಯತೆ ಪಕ್ಷಕ್ಕೆ ದುಬಾರಿಯಾಗಿ ಪರಿಣಮಿಸಿದೆ. 2018ರ ವಿಧಾನಸಭೆ ಚುನಾವಣೆಯಲ್ಲೂ ಅವರ ಈ ರೀತಿಯ ಮಾತುಗಳು ಪಕ್ಷಕ್ಕೆ ಹಿನ್ನಡೆ ಉಂಟು ಮಾಡಿದ್ದವು ಎಂದು ಬಿಜೆಪಿ ಮೂಲಗಳು ಹೇಳಿವೆ.

ಸುಮಲತಾಗೆ ಬೆಂಬಲ: ದರ್ಶನ್ ಸುಳಿವು

ಉಳ್ಳಾಲ: ಕುತ್ತಾರು ದೆಕ್ಕಾಡುವಿನ ಕೊರಗಜ್ಜ ಆದಿಸ್ಥಳಕ್ಕೆ ದರ್ಶನ್, ಚಿಕ್ಕಣ್ಣ ಸಹಿತ ಹಲವು ನಟರು ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ದರ್ಶನ್, ‘ಮಂಡ್ಯ ಸಂಸದೆ ಸುಮಲತಾ ಚುನಾವಣೆಗೆ ಸ್ಪರ್ಧಿಸಿದರೆ, ಅವರ ಪರ ಪ್ರಚಾರ ಕೈಗೊಳ್ಳುವ ಕುರಿತ ಪ್ರಶ್ನೆಗೆ, ‘ಹೆತ್ತ ತಾಯಿಯನ್ನು ಎಂದಾದರೂ ಬಿಟ್ಟು ಕೊಡಲಿಕ್ಕಾಗುತ್ತದೆಯೇ’ ಎಂದು ಪ್ರತಿಕ್ರಿಯಿಸಿದರು.

‘ಮೊನ್ನೆಯವರೆಗೂ ಸುಮಲತಾ ಅಮ್ಮನ ಜೊತೆ ಇದ್ದೆ. ಈಗ ಅವರ ಕೈ ಬಿಟ್ಟರೆ ಆಗುತ್ತದೆಯೇ ಸರ್. ನಿಮ್ಮ ಮನೆಯಲ್ಲಿ ನಿಮ್ಮ ತಾಯಿಯನ್ನು ಬಿಟ್ಟು ಬಿಡುತ್ತೀರಾ. ಸುಮಲತಾ ಅಮ್ಮ ಅಮ್ಮನೇ ಸಾರ್’ ಎಂದರು.

‘ಮಂಗಳೂರಿಗೆ ಸುಮಾರು ಸಲ ಬಂದಿದ್ದೇನೆ. ಆದರೆ ಕುತ್ತಾರಿಗೆ ಬರುವುದಕ್ಕೆ ಆಗಿರಲಿಲ್ಲ. ಈ ಕ್ಷೇತ್ರದ ಬಗ್ಗೆ ಅನೇಕರು ಹೇಳುತ್ತಿದ್ದರು. ಹಾಗಾಗಿ ಭೇಟಿ ನೀಡಿ ಪ್ರಾರ್ಥಿಸಿದ್ದೇನೆ. ಇದಕ್ಕೆ ಯಾವುದೇ ನಿರ್ದಿಷ್ಟ ಕಾರಣ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ಏನು ಪ್ರಾರ್ಥನೆ ಮಾಡಿದಿರಿ’ ಎಂಬ ಪ್ರಶ್ನೆಗೆ ತುಸು ಸಿಟ್ಟಾದ ನಟ, ‘ಅದನ್ನು ಹೇಳಿದರೆ ನೀವು ನಡೆಸಿಕೊಡುತ್ತೀರಾ’ ಎಂದು ಮರುಪ್ರಶ್ನೆ ಹಾಕಿದರು.ಹಾಸ್ಯ ನಟ ಚಿಕ್ಕಣ್ಣ, ಪ್ರಶಾಂತ್ ಮಾರ್ಲ, ಮಹಾಬಲ ಶೆಟ್ಟಿ , ವಿದ್ಯಾಚರಣ್ ಶೆಟ್ಟಿ, ದೇವಿಪ್ರಸಾದ್ ಶೆಟ್ಟಿ, ಪ್ರೀತಮ್ ಶೆಟ್ಟಿ ಹಾಗೂ ದೆಕ್ಕಾಡು ಕೊರಗಜ್ಜ ಆದಿಸ್ಥಳದ ಟ್ರಸ್ಟಿಗಳು ಭಾಗ ವಹಿಸಿದ್ದರು.

ರಜಾ ದಿನವಾದ ಭಾನುವಾರ ಕೊರಗಜ್ಜನ ದರ್ಶನಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು. ದರ್ಶನ್ ಜೊತೆ ಸೆಲ್ಫಿ ತೆಗೆಯಲು ಜನ ಮುಗಿಬಿದ್ದರು. ಕೆಲವು ಅಭಿಮಾನಿಗಳ ಜೊತೆ ದರ್ಶನ್ ಫೋಟೊ ತೆಗೆಸಿಕೊಂಡರು.

ಚಿಕ್ಕಮಗಳೂರು: ಸ್ಥಳೀಯರಿಗೆ ಟಿಕೆಟ್ ನೀಡಲು ಆಗ್ರಹ • ಪಕ್ಷದ ಕಚೇರಿಯಲ್ಲಿ ಗದ್ದಲ

ಕಾರ್ಯಕರ್ತರಿಂದಲೇ ಶೋಭಾಗೆ ‘ಗೋ ಬ್ಯಾಕ್’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಸಂಸದೆ ಶೋಭಾ ಕರಂದ್ಲಾಜೆ ವಿರುದ್ಧ ಪತ್ರ ಚಳವಳಿ, ಜಾಲತಾಣಗಳಲ್ಲಿ ನಡೆಯುತ್ತಿದ್ದ ‘ಗೋ ಬ್ಯಾಕ್ ಶೋಭಕ್ಕ’ ಚಳವಳಿ ಜಿಲ್ಲೆಯಲ್ಲಿ ಈಗ ತೀವ್ರಗೊಂಡಿದ್ದು, ಬಿಜೆಪಿ ಕಾರ್ಯಕರ್ತರು ಪಕ್ಷದ ಕಚೇರಿಯಲ್ಲೇ ಭಾನುವಾರ ಗದ್ದಲ ಎಬ್ಬಿಸಿ ಆಕ್ರೋಶ ವ್ಯಕ್ತಪಡಿಸಿದರು.

ಅಭ್ಯರ್ಥಿ ಆಯ್ಕೆಗೆ ಅಭಿಪ್ರಾಯ ಸಂಗ್ರಹಕ್ಕಾಗಿ ಚುನಾವಣಾ ಉಸ್ತುವಾರಿ ಸಂಚಾಲಕ ಭಾನುಪ್ರಕಾಶ್ ಹಾಗೂ ಆರಗ ಜ್ಞಾನೇಂದ್ರ ನೇತೃತ್ವದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯ ಸಭೆ ಭಾನುವಾರ ನಡೆಯಿತು. ಆರಂಭದಲ್ಲೇ ವೇದಿಕೆ ಬಳಿಗೆ ಬಂದ ಕಾರ್ಯಕರ್ತರು, ‘ಶೋಭಾ ಕರಂದ್ಲಾಜೆ ಅವರನ್ನು ಅಭ್ಯರ್ಥಿ ಮಾಡಬಾರದು. ಚಿಕ್ಕಮಗಳೂರು ಜಿಲ್ಲೆಯವರಿಗೇ ಟಿಕೆಟ್ ನೀಡಬೇಕು. 10 ವರ್ಷಗಳಿಂದ ಸಂಸದೆಯಾಗಿರುವ ಶೋಭಾ ಅವರಿಗೆ ಪಕ್ಷದ ಬ್ಲಾಕ್ ಸಮಿತಿ ಮುಖಂಡರ ಪರಿಚಯವೇ ಇಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಿಕ್ಕಮಗಳೂರಿನ ಬಿಜೆಪಿ ಕಚೇರಿ ನಡೆದ ಸಭೆಯಲ್ಲಿ ಶೋಭಾಕರಂದ್ಲಾಜೆಗೆ ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಲೋಕಸಭೆ ಟಿಕೆಟ್ ನೀಡುವ ಕುರಿತು ಕೆಲಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು

‘ಅಭ್ಯರ್ಥಿ ಯಾರು ಎಂಬುದು ಇನ್ನೂ ನಿರ್ಣಯ ಆಗಲಿಲ್ಲ. ಶೋಭಾ ಅವರು 3 ಲಕ್ಷ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಶೋಭಾ ಅವರೇ ಅಭ್ಯರ್ಥಿ ಎಂಬುದು ಇದರ ಅರ್ಥವಲ್ಲವೇ’ ಎಂದ ಕಾರ್ಯಕರ್ತರು ‘ಗುಂಪುಗಾರಿಕೆಯಿಂದಾಗಿ ವಿಧಾನಸಭೆ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ್ದೇವೆ. ನಗರಸಭೆಯ ಅಧ್ಯಕ್ಷ ಸ್ಥಾನವೂ ಕೈತಪ್ಪಿದೆ. ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ನೀಡಿದರೂ ಗೆದ್ದು ತೋರಿಸುತ್ತೇವೆ. ಕಾರ್ಯಕರ್ತರನ್ನು ಕಡೆಗಣಿಸಿದರೆ ಶೋಭಾ ಅವರ ಸೋಲು ಖಚಿತ’ ಎಂದು ಹೇಳಿದರು.

ಕಾರ್ಯಕರ್ತರನ್ನು ಸಮಾಧಾನಪಡಿಸಲು ಮುಖಂಡರು ನಡೆಸಿದ ಪ್ರಯತ್ನ ಯಶಸ್ವಿಯಾಗಲಿಲ್ಲ. ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂತೋಷ್ ಕೋಟ್ಯಾನ್, ಮುಖಂಡರಾದ ಅನಿಲ್, ಮುತ್ತಯ್ಯ ಮತ್ತಿತರರು ಕಚೇರಿಯಿಂದ ಹೊರಬಂದು ಬಾಗಿಲ ಬಳಿ ಧರಣಿ ನಡೆಸಿದರು. ಜಿಲ್ಲಾ ಘಟಕದ ಅಧ್ಯಕ್ಷ ದೇವರಾಜಶೆಟ್ಟಿ, ಟಿ.ರಾಜಶೇಖರ್, ಪ್ರೇಮ್‌ಕುಮಾರ್, ರವೀಂದ್ರ ಬೆಳವಾಡಿ, ಸುಧೀರ್, ಚಿಕ್ಕದೇವನೂರು ರವಿ, ಪುಷ್ಪರಾಜ್ ಸಭೆಯಲ್ಲಿ ಪಾಲ್ಗೊಂಡಿದ್ದರು.

‘ಮೋದಿ ಪ್ರಧಾನಿಯಾಗುವುದೇ ಗುರಿ’

‘ಪಕ್ಷದ ಅಭ್ಯರ್ಥಿ ಆದರೂ ನರೇಂದ್ರ ಮೋದಿಯವರೇ ಅಭ್ಯರ್ಥಿ ಎಂದುಕೊಂಡು ಕಾರ್ಯಕರ್ತರು ಕೆಲಸ ಮಾಡಬೇಕು. ನಮ್ಮ ವೈಮನಸ್ಸು ದೇಶಕ್ಕೆ ಆಪತ್ತು ತರಬಾರದು’ ಎಂದು ಬಿಜೆಪಿ ಮುಖಂಡ ಸಿ.ಟಿ ರವಿ ಹೇಳಿದರು.

‘ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂಬುದು ನಮ್ಮ ಗುರಿ. ಜೆಡಿಎಸ್ ಕಾರ್ಯಕರ್ತರನ್ನು ವಿಶ್ವಾಸಕ್ಕೆ ಪಡೆಯಬೇಕು. ನಮ್ಮ ಪಕ್ಷದ ಒಡಕಿನ ಲಾಭ ಕಾಂಗ್ರೆಸ್‌ಗೆ ಆಗದಂತೆ ಎಚ್ಚರ ವಹಿಸಬೇಕು’ ಎಂದು ಹೇಳಿದರು.

‘ನನ್ನ ಗ್ರಹಚಾರ ಸರಿ ಇರಲಿಲ್ಲ ಸೋತೆ’: ‘ನನ್ನ ಸೋಲಿಗೆ ಮತ್ತೊಬ್ಬರನ್ನು ಬೊಟ್ಟು ಮಾಡಿ ತೋರಿಸುವುದು ಸರಿಯಲ್ಲ. ಗೆಲ್ಲುವ ಅತಿಯಾದ ವಿಶ್ವಾಸವಿತ್ತು ನನ್ನ ಗ್ರಹಚಾರ ಸರಿ ಇರಲಿಲ್ಲ, ಸೋತೆ’ ಎಂದು ಸಿ.ಟಿ.ರವಿ ಹೇಳಿದರು.

ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆಯಾದಾಗ ಕೇಂದ್ರ ಕೃಷಿ ಖಾತೆ ಸಚಿವೆಯಾಗಿ ಒಮ್ಮೆಯೂ ಭೇಟಿ ಮಾಡಿ ಪರಿಹಾರ ನೀಡಲಿಲ್ಲ. ಪಕ್ಷದ ಕಾರ್ಯಕರ್ತರನ್ನು ಕಡೆಗಣಿಸಿದ್ದಾರೆ. ಶೋಭಾಗೆ ಈ ಕ್ಷೇತ್ರದ ಟಿಕೆಟ್ ನೀಡಿದಲ್ಲಿ ಸೋಲು ನಿಶ್ಚಿತ

ಅನಿಲ್‌ಕುಮಾರ್, ಬಿಜೆಪಿ ಮುಖಂಡ

‘ಗೋ ಬ್ಯಾಕ್ ಸೋಮಣ್ಣ’ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು): ತುಮಕೂರು ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ, ಮಾಜಿ ಸಚಿವ ವಿ. ಸೋಮಣ್ಣ ವಿರುದ್ಧ ಬಿಜೆಪಿ ಕಾರ್ಯಕರ್ತರು ಭಾನುವಾರ ‘ಗೋ ಬ್ಯಾಕ್ ಸೋಮಣ್ಣ’ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ತಿಪಟೂರು, ಚಿಕ್ಕನಾಯಕನ ಹಳ್ಳಿ, ತುರುವೇಕೆರೆ, ಗುಬ್ಬಿ ತಾಲ್ಲೂಕಿನ ನೂರಾರು ಬಿಜೆಪಿ ಕಾರ್ಯಕರ್ತರು ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ಹೊರಹಾಕಿದರು.

ತುಮಕೂರು ಸಂಸದ ಜಿ.ಎಸ್. ಬಸವರಾಜು ಹಾಗೂ ವಿ.ಸೋಮಣ್ಣ ವಿರುದ್ಧ ಧಿಕ್ಕಾರ ಕೂಗಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಗೆ ಟಿಕೆಟ್ ನೀಡುವಂತೆ ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದರು.

ಮಾಧುಸ್ವಾಮಿ ಅವರ ಅಭಿಮಾನಿಯೊಬ್ಬ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಮುಂದಾದ. ತಕ್ಷಣ ಪೊಲೀಸರು ಆತನನ್ನು ತಡೆದರು.

‘ಹೊರಗಿನವರಿಗೆ ಟಿಕೆಟ್ ನೀಡಿದರೆ ಗೆಲ್ಲುವುದು ಕಷ್ಟ. ತುಮಕೂರು ಕ್ಷೇತ್ರದಿಂದ ಇದುವರೆಗೂ ಹೊರಗಿನ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆದ್ದ ಉದಾಹರಣೆ ಇಲ್ಲ. ಸಂಸದ ಬಸವರಾಜು ವೈಯಕ್ತಿಕ ಹಿತಾಸಕ್ತಿಗಾಗಿ ಪಕ್ಷವನ್ನು ಬಲಿ ಕೊಡಲು ಹೊರಟಿದ್ದಾರೆ’ ಎಂದು ಪ್ರತಿಭಟನಕಾರರು ವಾಗ್ದಾಳಿ ನಡೆಸಿದರು.

ಸ್ಥಳೀಯ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಸಂಸದ ಮತ್ತು ಮಠಾಧೀಶರನ್ನು ಭೇಟಿಯಾದರೆ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯ ಎಂದು ಆಕ್ರೋಶ ಹೊರ ಹಾಕಿದರು.

ಸೋಮಣ್ಣ ಅವರಿಗೆ ಟಿಕೆಟ್ ನೀಡದಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಗುಬ್ಬಿ ತಾಲ್ಲೂಕಿನ ಹಾಗಲವಾಡಿಯಲ್ಲೂ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

‘ಸಂಸದ ಜಿ.ಎಸ್. ಬಸವರಾಜು ಅವರ ಚಿತಾವಣೆಯಿಂದ ಸೋಮಣ್ಣ ಅವರಿಗೆ ಟಿಕೆಟ್ ನೀಡಿದರೆ ಬಿಜೆಪಿ ಸೋಲು ಖಚಿತ’ ಎಂದು ಕಾರ್ಯಕರ್ತರು ಬಹಿರಂಗವಾಗಿ ಎಚ್ಚರಿಕೆ ನೀಡಿದರು.

ತಂತ್ರಜ್ಞಾನ ವಿನಿಮಯಕ್ಕೆ ತೀರ್ಮಾನ

ಬಂಡೀಪುರ: ಮಾನವ ವನ್ಯಜೀವಿ ಸಂಘರ್ಷ ತಡೆ, ಕರ್ನಾಟಕ, ಕೇರಳ ಅರಣ್ಯ ಸಚಿವರ ಸಭೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಸಂರಕ್ಷಿತ ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿ ಮಾನವ–ವನ್ಯಜೀವಿ ಸಂಘರ್ಷಕ್ಕೆ ಕಡಿವಾಣ ಹಾಕಿ, ಜೀವಹಾನಿ ತಡೆಯುವ ನಿಟ್ಟಿನಲ್ಲಿ ಪರಸ್ಪರ ಸಹಕಾರ, ಸಮನ್ವಯ ಸಾಧಿಸಲು ಮತ್ತು ತಂತ್ರಜ್ಞಾನಗಳ ವಿನಿಮಯಕ್ಕೆ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳು ಸಮ್ಮತಿಸಿವೆ.

ಬಂಡೀಪುರದಲ್ಲಿ ಭಾನುವಾರ ರಾಜ್ಯದ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ಕೇರಳದ ಅರಣ್ಯ ಸಚಿವ ಎ.ಕೆ.ಶಶೀಂದ್ರನ್ ಸಮ್ಮುಖದಲ್ಲಿ ನಡೆದ ಅಂತರರಾಜ್ಯ ಅರಣ್ಯ ಸಚಿವರ ಸಮನ್ವಯ ಸಮಿತಿಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

ಮಾನವ ವನ್ಯಜೀವಿ ಸಂಘರ್ಷ ತಡೆ ಮತ್ತು ಜೀವ ಹಾನಿ ತಪ್ಪಿಸಲು ಪಾಲಿಸಬೇಕಾದ ನಿಯಮಗಳನ್ನು ಒಳಗೊಂಡ ಪತ್ರಕ್ಕೆ (ಸನ್ನದು) ಉಭಯ ಸಚಿವರು ಸಹಿ ಹಾಕಿದರು. ಮೂರೂ ರಾಜ್ಯಗಳ ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಖಂಡ್ರೆ, 'ವನ್ಯಜೀವಿ ಸಂರಕ್ಷಣಾ ಕಾಯ್ದೆ, ಅರಣ್ಯ ಸಂರಕ್ಷಣಾ ಕಾಯ್ದೆಗಳಿಂದಾಗಿ ಅರಣ್ಯ, ವನ್ಯಜೀವಿಗಳ ಸಂರಕ್ಷಣೆ ಆಗುತ್ತಿದೆ. ಇದರಿಂದ ಪ್ರಾಣಿಗಳ ಸಂಖ್ಯೆ ಹೆಚ್ಚಾಗಿದೆ. ನಗರೀಕರಣದ ಕಾರಣಕ್ಕೆ ವನ್ಯಜೀವಿ–ಮಾನವ ಸಂಘರ್ಷವೂ ಜಾಸ್ತಿಯಾಗಿದೆ. ಈ ವರ್ಷ ರಾಜ್ಯದಲ್ಲಿ ಪ್ರಾಣಿಗಳ ದಾಳಿಯಿಂದಾಗಿ 52 ಮಂದಿ ಪ್ರಾಣ ಕಳೆದುಕೊಂಡಿದ್ದು, ಹಲವರು ಗಾಯಗೊಂಡಿದ್ದಾರೆ. ಅಪಾರ ಬೆಳೆ ಹಾನಿಯೂ ಆಗಿದೆ. ವನ್ಯಜೀವಿ, ಅರಣ್ಯ ಸಂರಕ್ಷಣೆಯ ಜೊತೆಗೆ, ಪ್ರಾಣ ಹಾನಿ ತಡೆಯುವ ಜವಾಬ್ದಾರಿಯೂ ಸರ್ಕಾರಕ್ಕಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಈ ಸಭೆ ನಡೆಸಲಾಯಿತು' ಎಂದು ತಿಳಿಸಿದರು.

'ಸಮನ್ವಯ ಸಾಧನೆ, ಕೃತಕ ಬುದ್ಧಿಮತ್ತೆ ಮತ್ತು ಆಧುನಿಕ ತಂತ್ರಜ್ಞಾನ ಬಳಕೆ, ಡ್ರೋನ್ ಕ್ಯಾಮೆರಾ ಬಳಕೆ, ಮಾಹಿತಿ ವಿನಿಮಯ, ಕಾರ್ಯಾಚರಣೆಗಳಲ್ಲಿ ಸಹಕಾರ, ಸಂಘರ್ಷ ತಡೆಗೆ ಮಾದರಿ ಪ್ರಯೋಗ ಅಳವಡಿಕೆ, ಅಧಿಕಾರಿಗಳ ನಡುವೆ ನಿರಂತರ ಸಂಪರ್ಕ ಸೇರಿದಂತೆ ಹಲವು ನಿಯಮಗಳ ಪಾಲನೆಗೆ ತೀರ್ಮಾನಿಸಲಾಯಿತು' ಎಂದರು.

ಬಂಡೀಪುರದಲ್ಲಿ ಭಾನುವಾರ ನಡೆದ ಅಂತರರಾಜ್ಯ ಅರಣ್ಯ ಇಲಾಖೆ ಸಮನ್ವಯ ಸಮಿತಿ ಸಭೆಯಲ್ಲಿ ಕೇರಳದ ಅರಣ್ಯ ಸಚಿವ ಎ.ಕೆ.ಶಶೀಂದ್ರನ್ ಮತ್ತು ರಾಜ್ಯದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಮಾನವ ವನ್ಯಜೀವಿ ಸಂಘರ್ಷ ತಡೆಗೆ ಪಾಲಿಸಬೇಕಾದ ನಿಯಮಗಳನ್ನೊಳಗೊಂಡ ಪತ್ರವನ್ನು (ಸನ್ನದು) ಪ್ರದರ್ಶಿಸಿದರು. ರಾಜ್ಯ ಅರಣ್ಯ ಇಲಾಖೆಯ ಆನೆ ಯೋಜನೆಯ ಎಪಿಸಿಸಿಎಫ್ ಮನೋಜ್ ಆರ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್‌ಕುಮಾರ್, ಪಿಸಿಸಿಎಫ್ ಮತ್ತು ಮುಖ್ಯ ವನ್ಯಜೀವಿ ವಾರ್ಡನ್ ಸುಭಾಷ್ ಕೆ.ಮಾಲ್ಖೆಡೆ, ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥ) ಬ್ರಿಜೇಶ್ ಕುಮಾರ್ ದೀಕ್ಷಿತ್ ಭಾಗವಹಿಸಿದ್ದರು

'ಪರಿಹಾರ ನಿರಾಕರಣೆ'

'ರಾಜ್ಯದಲ್ಲಿ ಸೆರೆ ಹಿಡಿದು ರೇಡಿಯೊ ಕಾಲರ್ ಅಳವಡಿಸಿ ಬಂಡೀಪುರ ಅರಣ್ಯಕ್ಕೆ ಬಿಟ್ಟಿದ್ದ ಮಖ್ನಾ ಆನೆ ಕೇರಳದ ವಯನಾಡು ಜಿಲ್ಲೆಯಲ್ಲಿ ನಡೆಸಿದ ದಾಳಿಯಲ್ಲಿ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ರಾಜ್ಯ ಸರ್ಕಾರ ಘೋಷಿಸಿದ್ದ ₹15 ಲಕ್ಷ ಪರಿಹಾರವನ್ನು ಕುಟುಂಬ ತಿರಸ್ಕರಿಸಿದೆ' ಎಂದು ಸಚಿವ ಖಂಡ್ರೆ ಹೇಳಿದರು.

'ಮಾನವೀಯ ಆಧಾರದಲ್ಲಿ ಪರಿಹಾರ ನೀಡಲು ನಿರ್ಧರಿಸಿದ್ದೆವು. ಬಿಜೆಪಿ ಅದನ್ನು ರಾಜಕೀಯಕರಣಗೊಳಿಸಿತು. ಹೀಗಾಗಿ ಕುಟುಂಬವು ಪರಿಹಾರ ಬೇಡವೆಂದಿತು' ಎಂದರು.

ಸಹಕಾರ ನೀಡದ ಕೇಂದ್ರ: ಆರೋಪ

'ಅರಣ್ಯ, ವನ್ಯಜೀವಿ ಸಂರಕ್ಷಣೆಯಲ್ಲಿ ರಾಜ್ಯ ಸರ್ಕಾರಗಳಂತೆ ಕೇಂದ್ರ ಸರ್ಕಾರಕ್ಕೂ ಜವಾಬ್ದಾರಿ ಇದೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವೂ ರಾಜ್ಯಗಳಿಗೆ ಸಹಕಾರ ನೀಡಬೇಕು. ಕೇಂದ್ರದ ಪರಿಹಾರಾತ್ಮಕ ನಿಧಿಯಲ್ಲಿ (ಕಾಂಪಾ) ಸಾಕಷ್ಟು ಹಣ ಇದೆ. ಆದರೆ, ಕೇಂದ್ರ ಸರ್ಕಾರ ಕೊಡುತ್ತಿಲ್ಲ' ಎಂದು ಸಚಿವ ಈಶ್ವರ ಖಂಡ್ರೆ ದೂರಿದರು.

'ಸಂಘರ್ಷ ತಡೆಗೆ ರೈಲ್ವೆ ಕಂಬಿ ಬೇಲಿ ನಿರ್ಮಾಣಕ್ಕೆ 'ಕಾಂಪಾ' ಅಡಿ ₹50 ಕೋಟಿ ನೀಡುವಂತೆ ನಾವು ಸಲ್ಲಿಸಿದ್ದ ಪ್ರಸ್ತಾವವನ್ನು ಕೇಂದ್ರ ತಿರಸ್ಕರಿಸಿದೆ. ಹಳೆಯ ರೈಲ್ವೆ ಕಂಬಿಗಳನ್ನು ಶೇ 50ರ ಕಡಿಮೆ ಬೆಲೆಗೆ ನೀಡುವಂತೆ ಕೋರಿದ್ದೇವೆ, ಅದಕ್ಕೂ ಸ್ಪಂದಿಸಿಲ್ಲ' ಎಂದು ತಿಳಿಸಿದರು.

ಕಾಯ್ದೆ ತಿದ್ದುಪಡಿಗೆ ಪ್ರಸ್ತಾವ

'ಆನೆ ಸೇರಿದಂತೆ ವನ್ಯಪ್ರಾಣಿಗಳು ದಾಳಿ ನಡೆಸಿದ ಸಂದರ್ಭದಲ್ಲಿ ಅವುಗಳ ನಿಯಂತ್ರಣಕ್ಕಾಗಿ ವಿವಿಧ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಸದ್ಯ ಮುಖ್ಯ ವನ್ಯಜೀವಿ ವಾರ್ಡನ್ ಅವರಿಗಷ್ಟೇ ಇದೆ. ಈ ಅಧಿಕಾರವನ್ನು ಕೆಳಹಂತದ ಅಧಿಕಾರಿಗಳಿಗೆ ನೀಡಬೇಕು. ಇದಕ್ಕಾಗಿ ಅರಣ್ಯ ಸಂರಕ್ಷಣೆ ಕಾಯ್ದೆಯ ಸೆಕ್ಷನ್ 11(1ಎ) ಮತ್ತು 11 (1ಬಿ)ಗಳಿಗೆ ತಿದ್ದುಪಡಿ ತರಬೇಕು ಎಂಬ ಪ್ರಸ್ತಾವವನ್ನು ಕೇಂದ್ರಕ್ಕೆ ಸಲ್ಲಿಸಬೇಕು ಎನ್ನುವ ಸಲಹೆಯನ್ನು ಕೇರಳದ ಅರಣ್ಯ ಸಚಿವ ಶಶೀಂದ್ರನ್ ನೀಡಿದ್ದಾರೆ. ಮೂರು ರಾಜ್ಯಗಳೂ ಒಟ್ಟಾಗಿ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಖಂಡ್ರೆ ಹೇಳಿದರು.

ರಥೋತ್ಸವ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ದೋಟಿಹಾಳದಲ್ಲಿ ಭಾನುವಾರ ಜರುಗಿದ ಅವಧೂತ ಶುಕಮುನಿಸ್ವಾಮಿ ಮಹಾರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಸೇರಿದ ಬಿಜೆಪಿ ಸಂಸದ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ/ನವದೆಹಲಿ: ಲೋಕಸಭಾ ಚುನಾವಣೆಗೂ ಮುನ್ನ ಹರಿಯಾಣದ ಹಿಸಾರ್ ಕ್ಷೇತ್ರದ ಬಿಜೆಪಿ ಸಂಸದ ಬ್ರಿಜೇಂದ್ರ ಸಿಂಗ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಭಾನುವಾರ ರಾಜೀನಾಮೆ ನೀಡಿ, ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅವರ ತಂದೆ, ಕೇಂದ್ರದ ಮಾಜಿ ಸಚಿವ ಬಿರೇಂದರ್ ಸಿಂಗ್ ಅವರೂ ಕಾಂಗ್ರೆಸ್‌ಗೆ ಮರಳಲು ಸಿದ್ಧರಾಗಿದ್ದಾರೆ.

ರಾಜೀನಾಮೆ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಬಳಿಕ ಬ್ರಿಜೇಂದ್ರ ಅವರು ನವದೆಹಲಿಯಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮನೆಗೆ ಹೋಗಿ ಕಾಂಗ್ರೆಸ್ ಸೇರಿದರು. ಈ ವೇಳೆ ಕಾಂಗ್ರೆಸ್‌ನ ಹಿರಿಯ ನಾಯಕರಾದ ಅಜಯ್ ಮಾಕನ್, ಮುಕುಲ್ ವಾಸ್ನಿಕ್, ದೀಪಕ್ ಬಬಾರಿಯಾ ಉಪಸ್ಥಿತರಿದ್ದರು.

'ರಾಜಕೀಯ ಕಾರಣಗಳಿಗಾಗಿ ನಾನು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ. ಹಿಸಾರ್‌ನ ಕ್ಷೇತ್ರದ ಸದಸ್ಯನಾಗಿ ಸೇವೆ ಸಲ್ಲಿಸಲು ನನಗೆ ಅವಕಾಶ ನೀಡಿದ ಬಿಜೆಪಿಗೆ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಹಿಸಾರ್‌ನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಬ್ರಿಜೇಂದ್ರ ಅವರು ಕಣಕ್ಕಿಳಿಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

'ನಾನು ಆ ಪಕ್ಷದಲ್ಲಿ ಸಂತೋಷವಾಗಿ ಇರಲಿಲ್ಲ. ಅದಕ್ಕೆ ಕೆಲವು ಕಾರಣಗಳಿವೆ. ಕೆಲ ಸೈದ್ಧಾಂತಿಕ ನಿಲುವುಗಳು ಮತ್ತು ಕುಸ್ತಿಪಟುಗಳ ಪ್ರತಿಭಟನೆ ಹಾಗೂ ರೈತರ ಸಮಸ್ಯೆಗಳನ್ನು ನಿಭಾಯಿಸಿದ ರೀತಿಯನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಬ್ರಿಜೇಂದ್ರ ಸುದ್ದಿಗಾರರಿಗೆ ತಿಳಿಸಿದರು.

'ಈ ಹಿಂದೆಯೇ ಜೆಜೆಪಿಯೊಂದಿಗೆ ಮೈತ್ರಿ ಕಡಿದುಕೊಳ್ಳುವಂತೆ ಬಿಜೆಪಿ ನಾಯಕರಿಗೆ ನಾನು ಮತ್ತು ನನ್ನ ತಂದೆ ಒತ್ತಾಯಿಸಿದ್ದೆವು. ಆದರೆ ಅದು ಆಗಲಿಲ್ಲ. ಮೈತ್ರಿಕೂಟದಲ್ಲಿ ಜೆಜೆಪಿ ಮುಂದುವರಿಕೆ ಕೂಡ ನನ್ನ ನಿರ್ಗಮನಕ್ಕೆ ಒಂದು ಕಾರಣ' ಎಂದು ಅವರು ಪ್ರತಿಕ್ರಿಯಿಸಿದರು.

ಬಿರೇಂದರ್ ಸಿಂಗ್ ಅವರು ಕಾಂಗ್ರೆಸ್ ಸೇರಲಿದ್ದಾರೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖಜಾಂಚಿ ಅಜಯ್ ಮಾಕನ್ ಅವರು, ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಸೇರುವುದಾಗಿ ಅವರು ಹೇಳಿದ್ದಾರೆ ಎಂದು ತಿಳಿಸಿದರು. ಬಿರೇಂದರ್ ಸಿಂಗ್ ಅವರು 42 ವರ್ಷಗಳವರೆಗೆ ಕಾಂಗ್ರೆಸ್‌ನಲ್ಲಿ ಸೇವೆ ಸಲ್ಲಿಸಿದ್ದವರು. 2014ರಲ್ಲಿ ಬಿಜೆಪಿ ಸೇರಿದ್ದರು.

ಶಾಸಕ, ರಾಜ್ಯಸಭಾ ಸದಸ್ಯರಾಗಿದ್ದ ಬಿರೇಂದರ್ ಅವರು ಮೋದಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಟಿಕೆಟ್ ವಂಚಿತರಾಗಿರುವ ರಾಜಸ್ಥಾನದ ಮತ್ತೊಬ್ಬ ಬಿಜೆಪಿ ಸಂಸದ ರಾಹುಲ್ ಕಸ್ವಾನ್ ಅವರನ್ನೂ ಕಾಂಗ್ರೆಸ್ ಸೇರಿಸಿಕೊಳ್ಳುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಹಿಸಾರ್ ಸಂಸದ ಬ್ರಿಜೇಂದ್ರ ಸಿಂಗ್ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ವಾಗತಿಸಿದರು –ಪಿಟಿಐ ಚಿತ್ರ

ರಾಜಸ್ಥಾನ: ಬಿಜೆಪಿ ಸೇರಿದ ಕಾಂಗ್ರೆಸ್‌ನ ಮಾಜಿ ಸಚಿವರು

ಜೈಪುರ (ಪಿಟಿಐ): ಮಾಜಿ ಸಚಿವರಾದ ರಾಜೇಂದ್ರ ಯಾದವ್, ಲಾಲ್ ಚಂದ್ ಕಟಾರಿಯಾ ಸೇರಿದಂತೆ ರಾಜಸ್ಥಾನದ ಹಲವು ಕಾಂಗ್ರೆಸ್ ಮುಖಂಡರು ಲೋಕಸಭಾ ಚುನಾವಣೆಗೂ ಮುನ್ನ ಭಾನುವಾರ ಬಿಜೆಪಿ ಸೇರಿದರು.

ಕಾಂಗ್ರೆಸ್‌ನ ಮಾಜಿ ಶಾಸಕರಾದ ರಿಚ್‌ಪಾಲ್ ಮಿರ್ಧಾ, ವಿಜಯಪಾಲ್ ಮಿರ್ಧಾ, ಖಿಲಾಡಿ ಬೈರ್ವಾ, ಪಕ್ಷೇತರ ಮಾಜಿ ಶಾಸಕ ಅಲೋಕ್ ಬೇನಿವಾಲ್, ರಾಜಸ್ಥಾನದ ಕಾಂಗ್ರೆಸ್ ಸೇವಾದಳದ ಮಾಜಿ ಮುಖ್ಯಸ್ಥ ಸುರೇಶ್ ಚೌಧರಿ, ನಾಯಕರಾದ ರಾಂಪಾಲ್ ಶರ್ಮಾ, ರಿಜು ಜುಂಜುನ್‌ವಾಲಾ ಸೇರಿದಂತೆ ಕೆಲವರು ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿ ಸೇರ್ಪಡೆಗೊಂಡರು.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಈ ನಾಯಕರುಗಳನ್ನು ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಪಿ. ಜೋಶಿ, ಕೇಂದ್ರ ಸಚಿವ ಭೂಪೇಂದ್ರ ಯಾದವ್ ಪಕ್ಷಕ್ಕೆ ಬರಮಾಡಿಕೊಂಡರು.

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿಯಲ್ಲಿ ಭಾನುವಾರ ಬಸವೇಶ್ವರ ಮತ್ತು ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ವೈಭವದಿಂದ ನೆರವೇರಿತು –ಪ್ರಜಾವಾಣಿ ಚಿತ್ರ/ ಕೆ.ಸೋಮಶೇಖರ್

ರಾಜ್ಯ ಸರ್ಕಾರದಿಂದ ಹಿಂದೂ ವಿರೋಧಿ ಧೋರಣೆ: ಆರೋಪ

ಪ್ರಜಾವಾಣಿ ವಾರ್ತೆ

ಮಂಗಳೂರು: 'ತಾನು ಅಲ್ಪಸಂಖ್ಯಾತರ ಪರ ಎಂಬುದನ್ನು ಹೆಜ್ಜೆ ಹೆಜ್ಜೆಗೂ ತೋರಿಸಿಕೊಡುವ ಮೂಲಕ ರಾಜ್ಯ ಸರ್ಕಾರವು ಹಿಂದೂ ವಿರೋಧಿ ಧೋರಣೆಯನ್ನು ಅನುಸರಿಸುತ್ತಿದೆ' ಎಂದು ಆರೋಪಿಸಿರುವ ವಿಶ್ವ ಹಿಂದೂ ಪರಿಷತ್ (ವಿಹಿಂಪ), ಇದನ್ನು ಖಂಡಿಸುವ ನಿರ್ಣಯವನ್ನು ಇಲ್ಲಿ ನಡೆದ ದಕ್ಷಿಣ ಪ್ರಾಂತದ ಸಭೆಯಲ್ಲಿ ಭಾನುವಾರ ಕೈಗೊಂಡಿದೆ.

ಎರಡು ದಿನಗಳ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ವಿಹಿಂಪ ದಕ್ಷಿಣ ಪ್ರಾಂತ ಕಾರ್ಯಾಧ್ಯಕ್ಷ ಎಂ.ಬಿ.ಪುರಾಣಿಕ್, 'ಇಲ್ಲಿನ ಜೆರೋಸಾ ಶಾಲೆಯಲ್ಲಿ ಹಿಂದೂ ದೇವರಿಗೆ, ಹಿಂದೂ ಧರ್ಮಕ್ಕೆ ಅಪಮಾನ ಮಾಡಿದ ಶಿಕ್ಷಕಿಯನ್ನು ಬಂಧಿಸದೇ, ನ್ಯಾಯದ ಪರ ಇದ್ದ ಶಾಸಕರ ವಿರುದ್ಧ ಹಾಗೂ ಪ್ರತಿಭಟನೆ ನಡೆದ ಸ್ಥಳದಲ್ಲೇ ಇಲ್ಲದ ಇನ್ನೊಬ್ಬ ಶಾಸಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇದು ಸರಿಯೇ' ಎಂದು ಪ್ರಶ್ನಿಸಿದರು.

'ಅಲ್ಪಸಂಖ್ಯಾತರಿಗೆ ಬಜೆಟ್‌ನಲ್ಲಿ ₹ 10 ಸಾವಿರ ಕೋಟಿ ರೂಪಾಯಿ ಮೀಸಲಿಡುತ್ತೇವೆ ಎಂದು ಹೇಳಿ ಹಿಂದೂ ಹಾಗೂ ಅಲ್ಪಸಂಖ್ಯಾತರ ನಡುವೆ ವೈಮನಸ್ಸು ಮೂಡಿಸಲಾಗುತ್ತಿದೆ. ರಂಜಾನ್‌ಗೆ ಮುಸ್ಲಿಂ ವಿದ್ಯಾರ್ಥಿಗಳಿಗೆ ಬೇರೆಯೇ ನಿಯಮ ರೂಪಿಸುವ ಮೂಲಕ ಬೆಳೆಯುವ ಮಕ್ಕಳಲ್ಲೂ ಪ್ರತ್ಯೇಕತೆಯ ವಿಷ ಬೀಜ ಬಿತ್ತಲಾಗಿದೆ. ಸರ್ಕಾರದ ಇಂತಹ ತುಷ್ಟೀಕರಣ ನೀತಿಯಿಂದಾಗಿಯೇ ವಿಧಾನಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗುವ ಹಾಗೂ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಆರೋಪಿಸಿದರು.

'ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಪಶುಸಂಗೋಪನಾ ಇಲಾಖೆಯ 2 ಎಕರೆ ಜಾಗವನ್ನು ಅಲ್ಪಸಂಖ್ಯಾತರ ಇಲಾಖೆಗೆ ಹಸ್ತಾಂತರಿಸಬಾರದು. ಪರಿಶಿಷ್ಟ ಸಮುದಾಯಗಳಿಗೆ ಮೀಸಲಿಟ್ಟ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದು ಎಂಬ ನಿರ್ಣಯವನ್ನೂ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'2024ರ ಧಾರ್ಮಿಕ ಮತ್ತು ದತ್ತಿ ತಿದ್ದುಪಡಿ ಮಸೂದೆಯ ಪ್ರಕಾರ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷರನ್ನು ಸರ್ಕಾರವೇ ನೇಮಿಸಲಿದೆ. ಈ ಹಸ್ತಕ್ಷೇಪ ಕೈಬಿಟ್ಟು ವ್ಯವಸ್ಥಾಪನಾ ಸಮಿತಿಯೇ ಅಧ್ಯಕ್ಷರನ್ನು ಆಯ್ಕೆ ಮಾಡುವ ವಿಧಾನ ಮುಂದುವರಿಸಬೇಕು. ದೇವಸ್ಥಾನಗಳ ಮೂಲಸೌಕರ್ಯ ಒದಗಿಸುವುದು ಸರ್ಕಾರದ ಹೊಣೆ. ಅದಕ್ಕಾಗಿ ದೇವಸ್ಥಾನದ ಹಣ ಬಳಸಬಾರದು. ದೇವಸ್ಥಾನದ ಆಸ್ತಿ ಅನ್ಯ ಉದ್ದೇಶಕ್ಕೆ ಉಪಯೋಗಿಸಬಾರದು' ಎಂದು ಒತ್ತಾಯಿಸಿದರು.

ವಿಎಚ್‌ಪಿಯ ಕೇಂದ್ರೀಯ ಸಮಿತಿಯ ಸಹಪ್ರಧಾನ ಕಾರ್ಯದರ್ಶಿ ಸ್ಥಾನು ಮಲಯನ್, ಪ್ರಾಂತ ಸಹ ಕಾರ್ಯದರ್ಶಿಗಳಾದ ಶರಣ್ ಪಂಪ್‌ವೆಲ್ ಹಾಗೂ ಸುರೇಶ್ ಬಿ.ಇ ಅವರು ಸುದ್ದಿಗೋಷ್ಠಿಯಲ್ಲಿ ಇದ್ದರು.

ವಾಗ್ವಾದಕ್ಕೆ ವೇದಿಕೆಯಾದ 'ಮುಕ್ತ ಸಂವಾದ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಾದಿಗರ ಸಾಂಸ್ಕೃತಿಕ ಸಂಘವು ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಜನಾಂಗದ ಸಾಂಸ್ಕೃತಿಕ ನೆಲೆಗಳು' ವಿಷಯ ಕುರಿತ ಮುಕ್ತ ಸಂವಾದ ಕಾರ್ಯಕ್ರಮವು ಸಮುದಾಯದ ಮುಖಂಡರ ನಡುವಿನ ವಾಗ್ವಾದಕ್ಕೆ ವೇದಿಕೆಯಾಯಿತು.

ಸಂವಾದ ನಿಗದಿಪಡಿಸಿದ್ದ ಇಲ್ಲಿನ ಪತ್ರಕರ್ತರ ಭವನದ ಸಭಾಂಗಣಕ್ಕೆ ಬೀಗ ಹಾಕಿದ್ದರಿಂದ ವಾರ್ತಾ ಇಲಾಖೆ ಕಚೇರಿ ಎದುರು ಶಾಮಿಯಾನ ಹಾಕಿ ಸಂವಾದ ಪ್ರಾರಂಭಿಸಲಾಯಿತು. ಮತ್ತೊಂದು ಬಣದವರು ಸಂವಾದ ವಿರೋಧಿಸಿದ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಈ ವೇಳೆ ಸ್ಥಳಕ್ಕೆ ಬಂದ ಪೊಲೀಸರು ಸರ್ಕಾರಿ ಜಾಗದಲ್ಲಿ ಅನುಮತಿ ಇಲ್ಲದೆ ಕಾರ್ಯಕ್ರಮ ನಡೆಸಲು ಅವಕಾಶವಿಲ್ಲ ಎಂದು ತಿಳಿಸಿದರು.

'ಮಾದಿಗ ಸಮುದಾಯದ್ದು ಮೂಲತಃ ಅವೈದಿಕ ಪರಂಪರೆ. ಬುದ್ಧ, ಶಿವಶರಣ ಮಾದಾರ ಚನ್ನಯ್ಯ ಹಾಗೂ ಮರುಳಸಿದ್ಧರ ಆಲೋಚನಾ ಕ್ರಮಗಳಿಗೆ ವಿರುದ್ಧವಾಗಿ ಮಾದಿಗ ಪೀಠಾಧ್ಯಕ್ಷರು ನಡೆದುಕೊಳ್ಳುತ್ತಿದ್ದಾರೆ. ಮಠದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳು ವಿಸ್ತರಿಸಿವೆ. ಪೀಠಾಧ್ಯಕ್ಷರು ಸಮುದಾಯದ ಭಕ್ತರ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ' ಎಂದು ಸಂಘ ಆರೋಪಿಸಿತು.

ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಶಿವಶರಣ ಮಾದಾರ ಚನ್ನಯ್ಯ ಸೇವಾ ಸಮಿತಿಯ ನೂರಾರು ಸದಸ್ಯರು ಇದೇ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮುಂದೆ ಜಮಾಯಿಸಿ 'ಸಂವಾದಕ್ಕೆ ಅವಕಾಶ ನೀಡಬಾರದು' ಎಂದು ಕೋರಿ ಪ್ರತಿಭಟನೆ ನಡೆಸಿದರು.

ನಂತರ ಮಾದಿಗರ ಸಾಂಸ್ಕೃತಿಕ ಸಂಘದ ಸದಸ್ಯರ ವಿರುದ್ಧ ಧಿಕ್ಕಾರ ಕೂಗುತ್ತಾ ಸಂವಾದ ನಡೆಯುತ್ತಿದ್ದ ಜಾಗಕ್ಕೆ ಬಂದ ಪ್ರತಿಭಟನಕಾರರನ್ನು ತಡೆಯಲಾಯಿತು. ಸಂವಾದ ಸ್ಥಳಕ್ಕೆ ತೆರಳಲು ನಾಲ್ವರಿಗೆ ಅವಕಾಶ ನೀಡಲಾಯಿತಾದರೂ, ಇನ್ನೂ ಕೆಲವರು ಬೇರೆಡೆಯಿಂದ ಬಂದಾಗ ಮಾತಿನ ಚಕಮಕಿ ನಡೆಯಿತು. ಪೊಲೀಸರು ಮಧ್ಯ ಪ್ರವೇಶಿಸಿ ಸಭೆಯನ್ನು ರದ್ದು ಮಾಡುವಂತೆ ಆಯೋಜಕರಿಗೆ ತಿಳಿಸಿದರು.

'ಇಲ್ಲಿ ಮಾದಿಗ ಸಮುದಾಯದ ಸಾಂಸ್ಕೃತಿಕ ನೆಲೆ ವಿಷಯದ ಬಗ್ಗೆ ಸಂವಾದ ಏರ್ಪಡಿಸಲಾಗಿತ್ತು. ಎಲ್ಲರೂ ಚರ್ಚಿಸಿ ನಿರ್ಧರಿಸಬೇಕಿದೆ. ಆದ್ದರಿಂದ ಈ ಸಭೆ ರದ್ದುಗೊಳಿಸಿದ್ದು, ಮುಕ್ತ ಸಂವಾದ ನಡೆಸಲು ಶೀಘ್ರ ದಿನಾಂಕ ನಿಗದಿಪಡಿಸಲಾಗುತ್ತದೆ' ಎಂದು ಮಾದಿಗರ ಸಾಂಸ್ಕೃತಿಕ ಸಂಘದ ಸಿ.ಕೆ.ಮಹೇಶ್ ತಿಳಿಸಿದರು.

ಸಭೆ ರದ್ದುಗೊಳ್ಳುತ್ತಿದ್ದಂತೆಯೇ ಶಿವಶರಣ ಮಾದಾರ ಚನ್ನಯ್ಯ ಸೇವಾ ಸಮಿತಿ ಸದಸ್ಯರು ಮಾದಾರ ಚನ್ನಯ್ಯ ಸ್ವಾಮೀಜಿ ಅವರಿಗೆ ಜೈಕಾರ ಹಾಕುತ್ತಾ ಸ್ಥಳದಿಂದ ತೆರಳಿದರು.

ಚಿತ್ರದುರ್ಗದ ವಾರ್ತಾ ಇಲಾಖೆ ಕಚೇರಿ ಎದುರು ಭಾನುವಾರ ಮಾದಿಗರ ಸಾಂಸ್ಕೃತಿಕ ಸಂಘದ ಸದಸ್ಯರು ಹಾಗೂ ಶಿವಶರಣ ಮಾದಾರ ಚನ್ನಯ್ಯ ಸೇವಾ ಸಮಿತಿ ಸದಸ್ಯರ ನಡುವಿನ ಮಾತಿನ ಚಕಮಕಿ

ಮತ್ತೆ 4 ದಿನ ಸಿಬಿಐ ವಶಕ್ಕೆ ಶಹಜಹಾನ್

ಬಸೀರ್‌ಹಾಟ್, ಪಶ್ಚಿಮ ಬಂಗಾಳ (ಪಿಟಿಐ): ಸಂದೇಶ್‌ಖಾಲಿಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ನಡೆದಿದ್ದ ದಾಳಿ ಪ್ರಕರಣದ ಸಂಬಂಧ ಶಹಜಹಾನ್ ಶೇಖ್ ಅವರನ್ನು ಇನ್ನೂ ನಾಲ್ಕು ದಿನಗಳ ಅವಧಿಗೆ ಸಿಬಿಐನ ವಶಕ್ಕೆ ಕೋರ್ಟ್ ಒಪ್ಪಿಸಿದೆ.

ಬಂಧನದ ಅವಧಿ ಮುಗಿದಿದ್ದ ಕಾರಣ ಶಹಜಹಾನ್ ಅವರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದ ಸಿಬಿಐ, ಇನ್ನಷ್ಟು ದಿನಗಳು ವಶಕ್ಕೆ ಒಪ್ಪಿಸುವಂತೆ ಕೋರಿತ್ತು. ಈ ಮುನ್ನ ವಿಚಾರಣೆಗಾಗಿ ಮಾರ್ಚ್ 6ರಂದು ಸಿಬಿಐ ತನ್ನ ವಶಕ್ಕೆ ಆರೋಪಿಯನ್ನು ಪಡೆದುಕೊಂಡಿತ್ತು.

ಶಹಜಹಾನ್

ಉತ್ತರ 24 ಪರಗಣ ಜಿಲ್ಲೆಯ ಬಸೀರ್‌ಹಾಟ್ ಕೋರ್ಟ್‌ನ ನ್ಯಾಯಾಧೀಶರು ಆರೋಪಿಯನ್ನು ಮತ್ತೆ 4 ದಿನದ ಅವಧಿಗೆ ಸಿಬಿಐ ವಶಕ್ಕೆ ಒಪ್ಪಿಸಿದರು. ಮಾರ್ಚ್ 14ರಂದು ಮತ್ತೆ ಕೋರ್ಟ್‌ಗೆ ಹಾಜರುಪಡಿಸುವಂತೆಯೂ ಸೂಚಿಸಿದರು. ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕರೂ ಆದ ಶಹಜಹಾನ್ ಶೇಖ್ ಅವರಿಗೆ ಸೇರಿದ್ದ ಸ್ಥಳದ ಪರಿಶೀಲನೆಗೆ ಹೋಗಿದ್ದ ಅಧಿಕಾರಿಗಳ ಮೇಲೆ ದಾಳಿ ನಡೆಸಲಾಗಿತ್ತು.

13 ನ್ಯಾಯಮೂರ್ತಿಗಳು ಕಾಯಂ

ನವದೆಹಲಿ (ಪಿಟಿಐ): ಮೂರು ಹೈಕೋರ್ಟ್‌ಗಳ 13 ಹೆಚ್ಚುವರಿ ನ್ಯಾಯಮೂರ್ತಿಗಳಿಗೆ ಭಾನುವಾರ ಕಾಯಂ ನ್ಯಾಯಮೂರ್ತಿಗಳಾಗಿ ಪದೋನ್ನತಿ ನೀಡಲಾಗಿದೆ.

ಪಂಜಾಬ್, ಹರಿಯಾಣ ಹೈಕೋರ್ಟ್‌ನ 10 ಹೆಚ್ಚುವರಿ ನ್ಯಾಯಮೂರ್ತಿಗಳು ಸೇರಿದಂತೆ ಆಂಧ್ರಪ್ರದೇಶ ಹೈಕೋರ್ಟ್‌ನ ಇಬ್ಬರು ಹೆಚ್ಚುವರಿ ನ್ಯಾಯಮೂರ್ತಿಗಳಿಗೆ ಹಾಗೂ ಇದೇ ಹೈಕೋರ್ಟ್‌ನ ಮೂಲ ಹೊಂದಿರುವ ಒಬ್ಬರು ನ್ಯಾಯಮೂರ್ತಿಗೆ ಮಧ್ಯಪ್ರದೇಶ ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲಾಗಿದೆ.

ಅರ್ಜುನ್ ರಾಮ್ ಮೇಘವಾಲ್

ಸಾಮಾಜಿಕ ಜಾಲತಾಣ 'ಎಕ್ಸ್'ನ ತಮ್ಮ ಖಾತೆಯಲ್ಲಿ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಈ ಪದೋನ್ನತಿಯ ವಿಷಯವನ್ನು ಪ್ರಕಟಿಸಿದ್ದಾರೆ.

ಹೆಚ್ಚುವರಿ ನ್ಯಾಯಮೂರ್ತಿಗಳನ್ನು ಸಾಮಾನ್ಯವಾಗಿ ಎರಡು ವರ್ಷಗಳ ಅವಧಿಗೆ ನೇಮಕ ಮಾಡಲಾಗುತ್ತದೆ. ನಂತರ, ಅವರ ಸೇವೆಯನ್ನು ಕಾಯಂ ಮಾಡಲಾಗುತ್ತದೆ. ಹಿರಿಯ ನ್ಯಾಯಮೂರ್ತಿಗಳು ಇರುವ ಕೊಲಿಜಿಯಂ ಶಿಫಾರಸು ಆಧರಿಸಿ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆ ನಡೆಯುತ್ತದೆ.

'ಬೊಕ್ಕಸಕ್ಕೆ ₹ 2,900 ಕೋಟಿ ನಷ್ಟ'

ಒಂದನೇ ಪುಟದಿಂದ

ಈ ವಿಷಯವನ್ನು ಪತ್ರದಲ್ಲಿ ಪ್ರಸ್ತಾಪಿಸಿರುವ ಪ್ರಧಾನ ಅಕೌಂಟೆಂಟ್ ಜನರಲ್, 'ಎನ್‌ಜಿಟಿ ನೀಡಿದ್ದ ಆದೇಶ ಪಾಲಿಸಲು ಅನುಷ್ಠಾನಗೊಳಿಸುವ ಯೋಜನೆಗಳಿಗೆ ಹಂಚಿಕೆ ಮಾಡಿದ ಅನುದಾನ, ಮಾಡಿರುವ ವೆಚ್ಚದ ವಿವರಗಳನ್ನು ನೀಡಬೇಕು' ಎಂದೂ ಪತ್ರದಲ್ಲಿ ಕೋರಿದ್ದಾರೆ.

'ಎನ್‌ಜಿಟಿ ದಂಡ ವಿಧಿಸಿರುವ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರು (ಯೋಜನೆ), ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಹೆಸರಿನಲ್ಲಿ ಹೊಸತಾಗಿ ವೈಯಕ್ತಿಕ ಠೇವಣಿ (ಪಿಡಿ) ಖಾತೆ ತೆರೆದು 2023ರ ಮಾರ್ಚ್ 24ರಂದು ₹ 2,467.93 ಕೋಟಿ ಠೇವಣಿ ಇಟ್ಟಿರುವುದನ್ನೂ ಹಣಕಾಸು ಲೆಕ್ಕ ಪರಿಶೋಧನಾ ವಿಭಾಗ ಗಮನಿಸಿದೆ. ವಿವಿಧ ಬಂಡವಾಳ ವೆಚ್ಚದ ಶೀರ್ಷಿಕೆಯಡಿ ಲಭ್ಯವಿದ್ದ ಮೊತ್ತವನ್ನು 'ವಿಶೇಷ ಮೂಲಸೌಲಭ್ಯ ಯೋಜನೆಗಳು ಅಥವಾ ಬೆಂಗಳೂರು–ಬಂಡವಾಳ ವೆಚ್ಚ' ಅಡಿ ಮರು ವಿನಿಯೋಗಕ್ಕೆ ಆರ್ಥಿಕ ಇಲಾಖೆ ಸಹಮತಿ ನೀಡಿದೆ' ಎಂದೂ ಪತ್ರದಲ್ಲಿದೆ.

'ಇತರ ಮೂಲಸೌಲಭ್ಯ ಕಾಮಗಾರಿಗಳಿಗೆ ಮೀಸಲಿಟ್ಟ, ವೆಚ್ಚವಾಗದೆ ಉಳಿದಿರುವ ₹2,900 ಕೋಟಿಯನ್ನು ಎನ್‌ಜಿಟಿ ನೀಡಿರುವ ಆದೇಶದ ಪಾಲನೆಗೆ ನಗರಾಭಿವೃದ್ಧಿ ಇಲಾಖೆ ಬಳಸಿದರೆ, ಬಿಬಿಎಂಪಿ ಸೇರಿದಂತೆ ರಾಜ್ಯದ ಇತರ ಭಾಗಗಳಲ್ಲಿ ಮೂಲಸೌಲಭ್ಯ ಯೋಜನೆಗಳ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ' ಎಂದೂ ಉಲ್ಲೇಖಿಸಿರುವ ಅವರು, 'ಪರಿಹಾರಕ್ಕೆ ಹಣ ಹೊಂದಿಸುವುದು ಮತ್ತು ಬೆಂಗಳೂರು ಹೊರತುಪಡಿಸಿ ಇತರೆಡೆ ಯೋಜನೆ ಅಂತಿಮಗೊಳಿಸುವ ಪ್ರಕ್ರಿಯೆ ವಿಳಂಬವಾಗುತ್ತಿರುವುದು ಕೂಡಾ ಗಮನಕ್ಕೆ ಬಂದಿದೆ' ಎಂದಿದ್ದಾರೆ.

ಪ್ರಧಾನ ಅಕೌಂಟೆಂಟ್ ಜನರಲ್ ಸಿ.ಎಸ್‌ಗೆ ನೀಡಿರುವ ಸೂಚನೆ ಏನು?

- ರಾಷ್ಟ್ರೀಯ ಹಸಿರು ಪೀಠವು (ಎನ್‌ಜಿಟಿ) ಆದೇಶ ಪಾಲಿಸುವ ನಿಟ್ಟಿನಲ್ಲಿ ಪರಿಸರ ನಷ್ಟ ಮರುಸ್ಥಾಪನೆ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿದ ಹಣ ಮತ್ತು ವೆಚ್ಚದ ವಿವರ ನೀಡಬೇಕು
- ಪರಿಸರಕ್ಕೆ ಹಾನಿ ಉಂಟು ಮಾಡುವ ಘನ ಮತ್ತು ದ್ರವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವಂತೆ ನೀಡಿದ್ದ ನಿರ್ದೇಶನವನ್ನು ಗಡುವಿನೊಳಗೆ (2021 ಏಪ್ರಿಲ್ 7) ಪಾಲಿಸದಿರಲು ಕಾರಣ ವಿವರಿಸಬೇಕು
- ಆದೇಶದಲ್ಲಿ ಉಲ್ಲೇಖಿಸಿದ್ದ ತ್ಯಾಜ್ಯ ವಿಲೇವಾರಿಗೆ ಮೀಸಲಿಟ್ಟ ಜಾಗಗಳು ಮತ್ತು ಅವುಗಳ ಸದ್ಯದ ಸ್ಥಿತಿಯ ಮಾಹಿತಿ ನೀಡಬೇಕು
- ಎನ್‌ಜಿಟಿ ಆದೇಶದಂತೆ ಆರು ತಿಂಗಳಲ್ಲಿ ಮುಖ್ಯ ಕಾರ್ಯದರ್ಶಿ ಸಲ್ಲಿಸಿರುವ ಪ್ರಗತಿ ವರದಿಯ ಎರಡು ಪ್ರತಿ ನೀಡಬೇಕು
- ಚಂದಾಪುರ ಕೆರೆ (ಬೆಂಗಳೂರು) ಸುತ್ತಮುತ್ತ ಪರಿಸರ ಹಾನಿ ಸರಿಪಡಿಸಲು ₹ 500 ಕೋಟಿ ವರ್ಗಾವಣೆ ವಿವರ ಕೊಡಬೇಕು
- ₹ 2,900 ಕೋಟಿಯಲ್ಲಿ ಬಾಕಿ ಮೊತ್ತ ₹ 432.07 ಕೋಟಿ ವರ್ಗಾವಣೆ ಮಾಡಿದ ವಿವರ ಒದಗಿಸಬೇಕು

ಕಾಟನ್ ಕ್ಯಾಂಡಿ: ಕೃತಕ ಬಣ್ಣ ಬಳಕೆ ನಿರ್ಬಂಧ

ಒಂದನೇ ಪುಟದಿಂದ

ರಾಜ್ಯದಾದ್ಯಂತ ಮಾರಾಟ ಆಗುತ್ತಿರುವ ಗೋಬಿ ಮಂಚೂರಿ ಮತ್ತು ಕಾಟನ್ ಕ್ಯಾಂಡಿಗಳ ಮಾದರಿಗಳನ್ನು ಸಂಗ್ರಹಿಸಿ ರಾಜ್ಯ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇವುಗಳಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕೃತಕ ಬಣ್ಣಗಳು ಕಂಡುಬಂದಿವೆ. ಕೃತಕ ಬಣ್ಣಗಳು ಕಂಡುಬಂದ ಮಾದರಿಗಳು ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳು ಕಾಯ್ದೆ–2006ರ ನಿಯಮ 3(1)ರ ಅನ್ವಯ ಅಸುರಕ್ಷಿತ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಇಲಾಖೆ ಈ ಕ್ರಮಕ್ಕೆ ಮುಂದಾಗಿದೆ.

ಕೃತಕ ಬಣ್ಣಗಳ ಬಳಕೆ ಸೇರಿದಂತೆ ಯಾವುದೇ ರೀತಿಯ ಉಲ್ಲಂಘನೆ ಕಂಡುಬಂದರೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006ರ ನಿಯಮ 59ರಡಿ ಕನಿಷ್ಠ ಏಳು ವರ್ಷಗಳಿಂದ ಜೀವಾವಧಿವರೆಗಿನ ಜೈಲು ಶಿಕ್ಷೆ, ₹10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ. ಕಾಯ್ದೆ ಉಲ್ಲಂಘಿಸಿದರೆ ಮೊಕದ್ದಮೆಗಳನ್ನು ದಾಖಲಿಸಲು ಇಲಾಖೆ ತೀರ್ಮಾನಿಸಿದೆ.

ಕೃತಕ ಬಣ್ಣ ಬಳಸಿರುವ ತಿಂಡಿ-ತಿನಿಸುಗಳನ್ನು ದೀರ್ಘಕಾಲ ಬಳಸುವುದರಿಂದ ಕ್ಯಾನ್ಸರ್‌ನಂಥ ಮಾರಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಇಂತಹ ತಿಂಡಿ ತಿನಿಸುಗಳನ್ನು ಸೇವಿಸಬಾರದು ಅಥವಾ ಮಿತವಾಗಿ ಸೇವಿಸಬೇಕು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ತಿಳಿಸಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳು (ಆಹಾರ ಉತ್ಪನ್ನಗಳ ಗುಣಮಟ್ಟ ಮತ್ತು ಆಹಾರ ಸೇರ್ಪಡೆಗಳು) ನಿಯಂತ್ರಣ, 2011ರ ನಿಯಮ 16ರ ಅನ್ವಯ ಗೋಬಿ ಮಂಚೂರಿ ತಯಾರಿಕೆಯಲ್ಲಿ ಕೃತಕ ಬಣ್ಣ ಉಪಯೋಗಿಸುವಂತಿಲ್ಲ, ಕಾಟನ್ ಕ್ಯಾಂಡಿಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕೃತಕ ಬಣ್ಣ ಉಪಯೋಗಿಸಲು ಹಾಗೂ ಬಳಸಲು ಅವಕಾಶವೇ ಇಲ್ಲದ ಕೃತಕ ಬಣ್ಣ ಉಪಯೋಗಿಸುವಂತಿಲ್ಲ ಎಂದು ಮೂಲಗಳು ತಿಳಿಸಿವೆ.

ಕಾಟನ್ ಕ್ಯಾಂಡಿ	
ಸಂಗ್ರಹಿಸಿದ ಮಾದರಿಗಳು	25
ಕೃತಕ ಬಣ್ಣಗಳು ಕಂಡುಬಂದ ಅಸುರಕ್ಷಿತ ಮಾದರಿಗಳು	15
ಕೃತಕ ಬಣ್ಣಗಳಿಲ್ಲದೇ ಇರುವ ಸುರಕ್ಷಿತ ಮಾದರಿಗಳು	10
ಕಂಡುಬಂದಿರುವ ಕೃತಕ ಬಣ್ಣಗಳು– ಟಾರ್‌ಟ್ರಾಸೈನ್, ಸನ್‌ಸೆಟ್ ಯೆಲ್ಲೋ ಮತ್ತು ರೋಡಮೈನ್–ಬಿ	

ವಿಶ್ಲೇಷಣೆಗೆ ಒಳಪಡಿಸಿದ ಮಾದರಿಗಳ ವಿವರ

ಗೋಬಿ ಮಂಚೂರಿ	
ಸಂಗ್ರಹಿಸಿದ ಮಾದರಿಗಳು	171
ಕೃತಕ ಬಣ್ಣಗಳು ಕಂಡುಬಂದ ಅಸುರಕ್ಷಿತ ಮಾದರಿಗಳು	107
ಕೃತಕ ಬಣ್ಣಗಳಿಲ್ಲದೇ ಇರುವ ಸುರಕ್ಷಿತ ಮಾದರಿಗಳು	64
ಕಂಡುಬಂದಿರುವ ಕೃತಕ ಬಣ್ಣಗಳು– ಟಾರ್‌ಟ್ರಾಸೈನ್, ಸನ್‌ಸೆಟ್ ಯೆಲ್ಲೋ ಮತ್ತು ಕಾರ್ಮೋಸಿನ್	

ಆಹಾರ ಮಾದರಿಗಳು 'ಅಸುರಕ್ಷಿತ'

ರಾಜ್ಯದಾದ್ಯಂತ ಮೂರು ತಿಂಗಳಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು ಮತ್ತು ವೈದ್ಯಕೀಯ ಕಾಲೇಜುಗಳ ಒಟ್ಟು 652 ಹಾಸ್ಟೆಲ್‌ಗಳಲ್ಲಿ ಪರಿಶೀಲಿಸಿರುವ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು 504 ಆಹಾರ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅದರಲ್ಲಿ 9 ಮಾದರಿ ಅಸುರಕ್ಷಿತ, ಮೂರು ಕಳಪೆ ಎಂದು ದೃಢಪಟ್ಟಿವೆ. 613 ಅಂಗನವಾಡಿಗಳಲ್ಲಿ 232 ಆಹಾರ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದು, 3 ಅಸುರಕ್ಷಿತ, 2 ಕಳಪೆ ಗುಣಮಟ್ಟದ್ದು ಎಂದು ಗೊತ್ತಾಗಿದೆ. 235 ಕುಡಿಯುವ ನೀರಿನ ಬಾಟಲಿಗಳ ತಯಾರಿಕಾ ಘಟಕಗಳ ಮಾದರಿ ಪರಿಶೀಲಿಸಿದ್ದು, 25 ಮಾದರಿಗಳ ಗುಣವಿಶ್ಲೇಷಣೆ ನಡೆಸಿದಾಗ, ಎರಡು ಅಸುರಕ್ಷಿತ (ಕಳಪೆ) ಎಂದು ವರದಿಯಾಗಿದೆ.

ಉಲ್ಲಂಘನೆ: 20 ಕ್ರಿಮಿನಲ್ ಮೊಕದ್ದಮೆ

ಕಳೆದ ಮೂರು ತಿಂಗಳಿನಿಂದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ನು ಉಲ್ಲಂಘಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ 20 ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಕಾಯ್ದೆ ಉಲ್ಲಂಘನೆಗೆ ಸಂಬಂಧಿಸಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗಿರುವ 34 ಮೊಕದ್ದಮೆಗಳಲ್ಲಿ 24 ಪ್ರಕರಣಗಳು ಇತ್ಯರ್ಥವಾಗಿದ್ದು, ಈ ಪ್ರಕರಣಗಳಲ್ಲಿ ₹ 4.77 ಲಕ್ಷ ದಂಡ ವಿಧಿಸಲಾಗಿದೆ. ಅಧಿಕಾರಿಗಳು 5,384 ಆಹಾರ ಉದ್ದಿಮೆಗಳಿಗೆ ಭೇಟಿ ನೀಡಿ ಪರಿಶೀಲಿದ್ದಾರೆ. ದಂಡ ವಿಧಿಸಬಹುದಾದ 184 ಪ್ರಕರಣಗಳಿಗೆ ಸಂಬಂಧಿಸಿದಂತೆ ₹ 6,71,300 ದಂಡ ವಿಧಿಸಲಾಗಿದೆ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಮೂಲಗಳು ತಿಳಿಸಿವೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ – 4ನೇ ಕರೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–09

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ (ಕೇಂ.ಉ)/ಸಕಾನಿಅ/ ಕಿಅ/ಉ/702/ 2023–24 ದಿನಾಂಕ:06.03.2024	ರೂ.56,69,262/– / ರೂ.1,13,385/–	25.03.2024ರ ಸಂಜೆ 04:00 ಗಂಟೆಯೊಳಗೆ	27.03.2024ರ ಮಧ್ಯಾಹ್ನ 12:00 ಗಂಟೆಗೆ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯ ನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)

DIPR/CP/KAVITA/4171/2023-24

ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ 72,956 ಮಂದಿಯಲ್ಲಿ ಕ್ಯಾನ್ಸರ್ ರೋಗ ಪತ್ತೆ

ಕ್ಯಾನ್ಸರ್ ಹೊಸ ಪ್ರಕರಣ ಏರಿಕೆ

• ವರುಣ ಹೆಗಡೆ

ಬೆಂಗಳೂರು: ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಕ್ಯಾನ್ಸರ್‌ನ ಹೊಸ ಪ್ರಕರಣಗಳು ಏರಿಕೆ ಕಂಡಿದ್ದು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನೋಂದಣಿ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ 72,956 ಮಂದಿಯಲ್ಲಿ ಕ್ಯಾನ್ಸರ್ ಪತ್ತೆಯಾಗಿದೆ.

ಕಿದ್ವಾಯಿ ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಕ್ಯಾನ್ಸರ್ ಚಿಕಿತ್ಸೆಗೆ ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಪ್ರತಿನಿತ್ಯ ಸಾವಿರಾರು ರೋಗಿಗಳು ಬರುತ್ತಾರೆ. ಮೊಬೈಲ್ ವ್ಯಾನ್‌ಗಳ ಮೂಲಕವೂ ಸಂಸ್ಥೆಯು ರಾಜ್ಯದ ವಿವಿಧೆಡೆ ತಪಾಸಣೆ ಶಿಬಿರಗಳನ್ನು ನಡೆಸುತ್ತಿದೆ. ಇದರಿಂದ ಹೊಸ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿದ್ದು, ವಾರ್ಷಿಕ 20 ಸಾವಿರಕ್ಕೂ ಅಧಿಕ ಹೊಸ ಪ್ರಕರಣಗಳು ದೃಢಪಡುತ್ತಿವೆ.

ಈ ಸಂಸ್ಥೆಯಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸಂಸ್ಥೆಯು 863 ಹಾಸಿಗೆಗಳನ್ನು ಹೊಂದಿದ್ದು, ಇವುಗಳಲ್ಲಿ ತುರ್ತು ನಿಗಾ ಘಟಕದ (ಐಸಿಯು) 106 ಹಾಸಿಗೆಗಳೂ ಸೇರಿವೆ. ಕ್ಯಾನ್ಸರ್ ತಪಾಸಣೆ ಹಾಗೂ ಚಿಕಿತ್ಸೆ ಸಂಬಂಧ ನಿತ್ಯ ಸರಾಸರಿ 1,400 ಹೊರರೋಗಿಗಳು ಚಿಕಿತ್ಸೆಗೆ ಬರುತ್ತಿದ್ದಾರೆ. ಶಿಫಾರಸು ಆಧಾರದಲ್ಲಿ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ವಿವಿಧ ಜಿಲ್ಲೆಗಳಿಂದ ಬಂದು, ದಾಖಲಾಗುತ್ತಿದ್ದಾರೆ.

ತಡವಾಗಿ ದಾಖಲು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನೋಂದಣಿ ಪ್ರಕಾರ ಶೇ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಸಂಸ್ಥೆಗೆ ಚಿಕಿತ್ಸೆ ಸಂಬಂಧ ದಾಖಲಾಗಿದ್ದವರಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 3,294 ಮಂದಿ ಮೃತಪಟ್ಟಿದ್ದಾರೆ. ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್, ಬಾಯಿ, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಂಡರೆ, ಸ್ತನ, ಗರ್ಭಕಂಠ, ಗರ್ಭಾಶಯದ ಕ್ಯಾನ್ಸರ್ ಮಹಿಳೆಯರಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆ.

‘ಕ್ಯಾನ್ಸರ್ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಬೇಗ ಆಸ್ಪತ್ರೆಗಳಿಗೆ ತೆರಳಿ, ತಪಾಸಣೆ ಮಾಡಿಸಿಕೊಂಡಲ್ಲಿ ಜೀವಕ್ಕೆ ಅಪಾಯವಾಗುವುದನ್ನು ತಪ್ಪಿಸಲು ಸಾಧ್ಯ. ಬದಲಾದ ಜೀವನಶೈಲಿ ಹಾಗೂ ಪಾಶ್ಚಾತ್ಯ ಆಹಾರ ಪದ್ಧತಿ ಜತೆಗೆ ಧೂಮಪಾನದಂತಹ ವ್ಯಸನ, ಒತ್ತಡದ ಜೀವನ, ಕಲುಷಿತ ಪರಿಸರ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಸೈಯದ್ ಅಲ್ತಾಫ್ ತಿಳಿಸಿದರು.

ವರ್ಷವಾರು ಹೊಸ ಪ್ರಕರಣಗಳು

ವರ್ಷ	ಪ್ರಕರಣಗಳು
2020	13,973
2021	16,316
2022	21,059
2023	21,608

ಗುತ್ತಿಗೆ ಆಧಾರ ಹುದ್ದೆಗಳು ಭರ್ತಿ

ಸರ್ಕಾರಿ ವ್ಯವಸ್ಥೆಯಡಿ ಪೆಟ್ ಸ್ಕ್ಯಾನ್ ಹಾಗೂ ಬೋನ್ ಮ್ಯಾರೊ ಕಸಿ ಸೌಲಭ್ಯ ಹೊಂದಿರುವ ಏಕೈಕ ಸಂಸ್ಥೆ ಎಂಬ ಹಿರಿಮೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಭಾಜನವಾಗಿದೆ. ಈ ಸಂಸ್ಥೆಗೆ ಮಂಜೂರಾಗಿದ್ದ 1,767 ಹುದ್ದೆಗಳಲ್ಲಿ 1,106 ಹುದ್ದೆಗಳು ಖಾಲಿ ಉಳಿದಿದ್ದವು. 651 ಹುದ್ದೆಗಳಿಗೆ ಮಾತ್ರ ನೇಮಕಾತಿ ನಡೆದಿತ್ತು. ಹೀಗಾಗಿ, ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ 5 ಹಾಗೂ ಹೊರಗುತ್ತಿಗೆ ಆಧಾರದಲ್ಲಿ 1,250 ಮಂದಿಯನ್ನು ಭರ್ತಿ ಮಾಡಿಕೊಳ್ಳಲಾಗಿದೆ.

ಕ್ಯಾನ್ಸರ್ ಕಾಯಿಲೆಯನ್ನು ಆರಂಭದಲ್ಲೇ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ. ವಿವಿಧೆಡೆ ತಪಾಸಣೆ ನಡೆಸಿ, ಕ್ಯಾನ್ಸರ್ ಪೀಡಿತರನ್ನು ಪತ್ತೆ ಮಾಡಲಾಗುತ್ತಿದೆ

ಡಾ. ಸೈಯದ್ ಅಲ್ತಾಫ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಪಟೇಲ್ ಪ್ರತಿಮೆಗೆ ರಾಹುಲ್ ಗಾಂಧಿ ನಮನ

ತಾಪಿ (ಪಿಟಿಐ): ‘ಭಾರತ್ ಜೋಡೊ ಯಾತ್ರೆ’ಯ ಭಾಗವಾಗಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಭಾನುವಾರ ಗುಜರಾತ್‌ನ ಸೂರತ್ ಜಿಲ್ಲೆಯಲ್ಲಿರುವ ಸ್ವರಾಜ್ ಆಶ್ರಮಕ್ಕೆ ಭೇಟಿ ನೀಡಿ, ಸರ್ದಾರ್ ವಲ್ಲಭಬಾಯ್ ಪಟೇಲ್ ಅವರಿಗೆ ಗೌರವ ನಮನ ಸಲ್ಲಿಸಿದರು.

ನಾಲ್ಕು ದಿನಗಳ ಯಾತ್ರೆಯಲ್ಲಿ ರಾಜ್ಯದ ಏಳು ಜಿಲ್ಲೆಗಳಲ್ಲಿ 400 ಕಿ.ಮೀ. ಸಂಚರಿಸಿರುವ ರಾಹುಲ್ ಗಾಂಧಿ ಅವರು ಭಾನುವಾರ ದೆಹಲಿಗೆ ತೆರಳಿದ್ದಾರೆ ಎನ್ನಲಾಗಿದೆ.

ಈ ವೇಳೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘1922ರಲ್ಲಿ ಸರ್ದಾರ್ ಪಟೇಲ್ ಅವರಿಂದ ಸ್ಥಾಪನೆಯಾಗಿರುವ ಸ್ವರಾಜ್ ನಿವಾಸದಲ್ಲಿ ರಾಹುಲ್ ಗಾಂಧಿ ಅವರು ಕೆಲಹೊತ್ತು ಕಳೆದರು. ಇದು ಭಾರತ್ ಜೋಡೊ ನ್ಯಾಯ ಯಾತ್ರೆಗೆ ಸಿಕ್ಕ ಸ್ಫೂರ್ತಿಯಾಗಿದೆ’ ಎಂದು ಹೇಳಿದರು.

ರಾಜ್ಯದ ನಾನಾ ಭಾಗಗಳಲ್ಲಿ ಸಾಗಿದ ಈ ಯಾತ್ರೆಯು ಭಾನುವಾರ ಅಂತ್ಯಗೊಂಡಿತು.

ಸುದ್ದಿ 2 ನಿಮಿಷ

ಕೃಷಿ ಹೊಂಡದಲ್ಲಿ ಮುಳುಗಿ ತಂದೆ, ಇಬ್ಬರು ಮಕ್ಕಳ ಸಾವು

ರಾಯಬಾಗ (ಬೆಳಗಾವಿ ಜಿಲ್ಲೆ): ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದ ತಂದೆ ಮತ್ತು ಇಬ್ಬರು ಮಕ್ಕಳು ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ರಾಯಬಾಗ ರೈಲ್ವೆ ಸ್ಟೇಷನ್ ಬಳಿ ಭಾನುವಾರ ನಡೆದಿದೆ.

ರಾಯಬಾಗ ತಾಲ್ಲೂಕಿನ ನಿಡಗುಂದಿಯ ಕಲ್ಲಪ್ಪ ಬಸಪ್ಪ ಗಾಣಿಗೇರ (36), ಮನೋಜ ಕಲ್ಲಪ್ಪ ಗಾಣಿಗೇರ (11), ಮದನ ಕಲ್ಲಪ್ಪ ಗಾಣಿಗೇರ (9) ಮೃತಪಟ್ಟವರು.

ಮೂಲತಃ ಸವದತ್ತಿ ತಾಲ್ಲೂಕಿನ ಸತ್ತಿಗೇರಿಯ ಕಲ್ಲಪ್ಪ ಅವರು, ರಾಯಬಾಗ ತಾಲ್ಲೂಕಿನ ನಿಡಗುಂದಿಯ ಹುಕ್ಕೇರಿ ತೋಟದ ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದರು. ಈ ಬಗ್ಗೆ ರಾಯಬಾಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಪ್ಪನ ರಥೋತ್ಸವ ಇಂದು

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಇಲ್ಲಿನ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವದ 4ನೇ ದಿನವಾದ ಭಾನುವಾರ ಅಮಾವಾಸ್ಯೆಯ ಅಂಗವಾಗಿ ಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಪುನಸ್ಕಾರಗಳು ನಡೆದವು.

ಭಾನುವಾರವೂ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಕ್ಷೇತ್ರದಲ್ಲಿ ನೆರೆದಿದ್ದರು. ಸೋಮವಾರ (ಮಾರ್ಚ್ 11) ಜಾತ್ರೆಯ ಕೊನೆಯ ದಿನವಾಗಿದ್ದು, ಬೆಳಿಗ್ಗೆ ರಥೋತ್ಸವ ನಡೆಯಲಿದೆ. ರಾತ್ರಿ ಕೊಂಡೋತ್ಸವ ನಡೆಯುವುದರೊಂದಿಗೆ ಐದು ದಿನಗಳ ಜಾತ್ರೆಗೆ ತೆರೆ ಬೀಳಲಿದೆ.

ಭಾನುವಾರ ರಾತ್ರಿ ನಡೆದ ಚಿನ್ನದ ರಥೋತ್ಸವವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು. ಸೋಮವಾರ ಬೆಳಿಗ್ಗೆ 9.40ರಿಂದ 10.10ರವರೆಗೆ ಮಹಾರಥೋತ್ಸವ ನಡೆಯಲಿದೆ.

ಕೆರೆ ಒತ್ತುವರಿ ತೆರವಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ಬಾಗಲುಗುಂಟೆ ಗ್ರಾಮದ ಕೆರೆ ಅಂಗಳವನ್ನು ಖಾಸಗಿಯವರು ಒತ್ತುವರಿ ಮಾಡಿದ್ದು, ಈ ಜಾಗಕ್ಕೆ ಖಾತೆ ಮಾಡಿಕೊಡಲು ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿಗಳು ಹೊರಡಿಸಿರುವ ಆದೇಶ ತಡೆಹಿಡಿದು, ಕೆರೆ ಜಾಗವನ್ನು ಸರ್ಕಾರದ ಸುಪರ್ದಿಗೆ ಪಡೆಯಬೇಕು ಎಂದು ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರು ಸೇನೆ(ಪ್ರೊ. ನಂಜುಂಡಸ್ವಾಮಿ ಬಣ) ರಾಜ್ಯಘಟಕದ ಅಧ್ಯಕ್ಷ ವಿ.ಆರ್. ನಾರಾಯಣರೆಡ್ಡಿ ಒತ್ತಾಯಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಾಗಲುಗುಂಟೆ ಗ್ರಾಮದ ಸರ್ವೆ ನಂ.83ರಲ್ಲಿ 3 ಎಕರೆ ಕೆರೆ ಅಂಗಳದ ಜಾಗವನ್ನು ಖಾಸಗಿಯವರು ಒತ್ತುವರಿ ಮಾಡಿದ್ದಾರೆ. ಈ ಜಾಗಕ್ಕೆ ಖಾತೆ ಮಾಡಬೇಕೆಂದು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಉಪ ವಿಭಾಗಾಧಿಕಾರಿಯಾಗಿದ್ದ ಡಾ.ಶಿವಣ್ಣ ಅವರು, 2022ರಲ್ಲಿ ಆದೇಶ ಮಾಡಿದ್ದಾರೆ. ಆದೇಶದ ಪ್ರತಿ ಲಭ್ಯವಾದ ತಕ್ಷಣ ಬೆಂಗಳೂರು ಉತ್ತರ ತಾಲ್ಲೂಕು ವಿಶೇಷ ತಹಶೀಲ್ದಾರ್‌ರವರಿಗೆ ಮಾಹಿತಿ ನೀಡಿ, ಸರ್ಕಾರಿ ಕೆರೆ ಜಾಗವಾಗಿ ರುವುದರಿಂದ ಖಾತೆ ಮಾಡಬಾರದೆಂದು ಮನವಿ ಮಾಡಲಾಗಿದೆ ಎಂದರು.

ಬಡವರ ಹಸಿವು ನೀಗಿಸುವ ‘ರೋಟಿ ಟ್ರಸ್ಟ್’

ರೋಗಿಗಳು–ಸಂಬಂಧಿಕರಿಗೆ ಅನುಕೂಲ • ಉಚಿತ ಆಹಾರ ವಿತರಿಸುವ ಸೈಯದ್ ಗುಲಾಬ್

• ಖಲೀಲಅಹ್ಮದ ಶೇಖ

ಬೆಂಗಳೂರು: ಆಸ್ಪತ್ರೆಗಳಿಗೆ ದಾಖಲಾಗುವ ರೋಗಿಗಳು ಹಾಗೂ ಅವರನ್ನು ನೋಡಿಕೊಳ್ಳುವ ಸಂಬಂಧಿಕರ ಹಸಿವು ನೀಗಿಸುವ ಕೆಲಸವನ್ನು ರೋಟಿ ಚಾರಿಟಿ ಟ್ರಸ್ಟ್ ಮಾಡುತ್ತಿದೆ.

ಟ್ರಸ್ಟ್‌ನ ಸಂಸ್ಥಾಪಕ ಸೈಯದ್ ಗುಲಾಬ್ ಎಲೆಮರೆ ಕಾಯಿಯಂತೆ ಈ ಕೆಲಸ ಮಾಡುತ್ತಿದ್ದು, ಇಂದಿರಾ ಗಾಂಧಿ ಆಸ್ಪತ್ರೆ, ರಾಜೀವ್ ಗಾಂಧಿ ಆಸ್ಪತ್ರೆ, ಸಂಜಯ್ ಗಾಂಧಿ ಆಸ್ಪತ್ರೆ ಮತ್ತು ನಿಮ್ಹಾನ್ಸ್ ಆಸ್ಪತ್ರೆಗೆ ಬರುವ ಬಡವರ ಹಸಿವು ತಣಿಸುತ್ತಿದ್ದಾರೆ.

ಪ್ರತಿದಿನ ಮಧ್ಯಾಹ್ನ 12 ಗಂಟೆಗೆ ಸಿದ್ದಾಪುರ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಹಸಿದ ನೂರಾರು ಜನ ಗುಲಾಬ್ ಅವರ ವಾಹನ ಬರುವ ದಾರಿ ನೋಡಿಕೊಂಡು ಕಾಯುತ್ತಾ ಕುಳಿತುಕೊಂಡಿರುತ್ತಾರೆ. ಅವರ ವಾಹನ ಬಂದು ರಾಜೀವ್ ಗಾಂಧಿ ಆಸ್ಪತ್ರೆಯ ಗೇಟ್ ಮುಂಭಾಗದಲ್ಲಿ ನಿಲ್ಲಿಸಿದ ಕೂಡಲೇ ಎಲ್ಲರೂ ಸರದಿ ಸಾಲಿನಲ್ಲಿ ನಿಂತು ಬಿಡುತ್ತಾರೆ. ಗುಲಾಬ್ ಅವರು ಆಹಾರದ ಪೊಟ್ಟಣಗಳನ್ನು ಅವರ ಕೈಗೆ ಇಟ್ಟು ಧನ್ಯತಾ ಭಾವ ಅನುಭವಿಸುತ್ತಾರೆ.

ಜಯನಗರದ ತಿಲಕ್‌ನಗರದ ನಿವಾಸಿ ಸೈಯದ್ ಗುಲಾಬ್ ಅವರು ವೃತ್ತಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ. 2016ರ ಮಾರ್ಚ್‌ನಿಂದ ಇಲ್ಲಿಯವರೆಗೂ ಮಳೆ, ಚಳಿ, ಬಿಸಿಲು ಎನ್ನದೇ ಹಬ್ಬ-ಹರಿದಿನಗಳನ್ನು ಲೆಕ್ಕಿಸದೇ ಒಂದು ದಿನವೂ ತಪ್ಪದೇ ಉಚಿತ ಆಹಾರ ವಿತರಿಸುವ ಕಾರ್ಯ ಮುಂದುವರೆಸಿದ್ದಾರೆ.

ತಮ್ಮ ಸ್ನೇಹಿತನೊಬ್ಬನ ಮಗಳು ಇಂದಿರಾಗಾಂಧಿ ಆಸ್ಪತ್ರೆಗೆ ದಾಖಲಾಗಿದ್ದಾಗ ಆಕೆಯನ್ನು ನೋಡಲು ಹೋಗಿದ್ದ ಸೈಯದ್ ಗುಲಾಬ್, ರಾಜ್ಯದ ವಿವಿಧ ಭಾಗಗಳಿಂದ ಬರುವ ರೋಗಿಗಳ ಸಂಬಂಧಿಕರು ಊಟಕ್ಕಾಗಿ ಪರದಾಡುವ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದರು. ಭಾನುವಾರವಂತೂ ಆಸ್ಪತ್ರೆಯ ಕ್ಯಾಂಟೀನ್ ಕೂಡ ಮುಚ್ಚಿರುತ್ತದೆ. ಇದರಿಂದ, ಅವರೆಲ್ಲ ಹೋಟೆಲ್‌ಗಳನ್ನು ಹುಡುಕಿಕೊಂಡು ಬಹುದೂರ ನಡೆದುಕೊಂಡು ಹೋಗಬೇಕಾಗಿತ್ತು. ಇದಕ್ಕೆ ಪರಿಹಾರ ನೀಡುವ ಉದ್ದೇಶದಿಂದಲೇ ಪ್ರತಿನಿತ್ಯ ಉಚಿತ ಆಹಾರ ವಿತರಿಸುವ ಕಾಯಕಕ್ಕೆ ಗುಲಾಬ್ ಮುಂದಾದರು.

‘ಆರಂಭದಲ್ಲಿ ಪ್ರತಿ ಭಾನುವಾರ ಮಾತ್ರ 250ಕ್ಕೂ ಹೆಚ್ಚು ಜನರಿಗೆ ಉಚಿತ ಆಹಾರ ನೀಡಲು ಪ್ರಾರಂಭಿಸಿದೆ. ಇದನ್ನು ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದೆ. ಇದರಿಂದ, ಹಲವರು ತಮ್ಮ ಜನ್ಮದಿನ, ವಿವಾಹ ವಾರ್ಷಿಕೋತ್ಸವ ಸೇರಿದಂತೆ ಶುಭ ಸಮಾರಂಭಗಳಲ್ಲಿ ರೋಟಿ ಟ್ರಸ್ಟ್‌ಗೆ ಸಹಾಯಹಸ್ತ ನೀಡಲು ಪ್ರಾರಂಭಿಸಿದರು. ಹೈದರಾಬಾದ್‌ನಲ್ಲಿ ಬಡವರಿಗೆ ಉಚಿತ ಆಹಾರ ವಿತರಿಸುವ ಅಜರ್ ಮಕ್ಸೂಸಿ ಅವರು ನನ್ನನ್ನು ಸಂಪರ್ಕಿಸಿ ವಾರಕ್ಕೊಮ್ಮೆ ಊಟ ನೀಡುವ ಬದಲು ಪ್ರತಿನಿತ್ಯ ಊಟ ನೀಡಬೇಕು. ನಿಮಗೆ ಎಲ್ಲ ರೀತಿಯ ಸಹಾಯ ಮಾಡುತ್ತೇನೆ ಎಂಬ ಭರವಸೆ ನೀಡಿ ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಅಂದಿನಿಂದ ಇದುವರೆಗೂ ಈ ಕೆಲಸ ನಡೆಯುತ್ತಿದೆ’ ಎಂದು ಸೈಯದ್ ಗುಲಾಬ್ ತಿಳಿಸಿದರು.

ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಆಹಾರದ ಪೊಟ್ಟಣ್ಣಗಳನ್ನು ವಿತರಿಸಿದ ರೋಟಿ ಚಾರಿಟಿ ಟ್ರಸ್ಟ್‌ನ ಸೈಯದ್ ಗುಲಾಬ್ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

‘ಹಸಿವಿಗೆ ಜಾತಿ–ಧರ್ಮವಿಲ್ಲ’

‘ಹಸಿವಿಗೆ ಯಾವುದೇ ರೀತಿಯ ಜಾತಿ–ಧರ್ಮ ಇಲ್ಲ. ಹೊಟ್ಟೆ ಹಸಿದು ಬಂದವರಿಗೆ ಯಾವುದೇ ರೀತಿಯ ತಾರತಮ್ಯ ಮಾಡದೇ ಆಹಾರ ವಿತರಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ನಗರದ ಎಲ್ಲ ಆಸ್ಪತ್ರೆಗಳ ಮುಂಭಾಗದಲ್ಲಿ ಉಚಿತ ಆಹಾರ ವಿತರಿಸುವ ಯೋಚನೆ ಇದೆ’ ಎಂದು ಸೈಯ್ಯದ್ ಗುಲಾಬ್ ತಿಳಿಸಿದರು.

‘ವೈದ್ಯರ ಸಲಹೆಯಂತೆ ರೋಗಿಗಳಿಗೆ ಬೇಕಾದ ಗೀ ರೈಸ್, ಪುಲಾವ್, ಅನ್ನ ಸಾಂಬರ್ ಸೇರಿದಂತೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ತಯಾರಿಸಿ ವಿತರಿಸುತ್ತಿದ್ದೇನೆ’ ಎಂದರು.

ಪ್ರತಿನಿತ್ಯ ಬಿಸಿ–ಬಿಸಿ ಊಟ ವಿತರಿಸುವ ಗುಲಾಬ್ ಅವರ ಕೆಲಸ ಶ್ಲಾಘನೀಯ.ನಮ್ಮಂತಹ ನೂರಾರು ಬಡವರಿಗೆ, ನಿರ್ಗತಿಕರಿಗೆ ಒಂದು ಹೊತ್ತಿನ ಊಟ ಸಿಗುತ್ತಿದೆ.

ಶಾರದಮ್ಮ, ರೋಗಿಯ ಸಂಬಂಧಿ

‘ತುಷ್ಟೀಕರಣದ ವಿಷ ದುರ್ಬಲ’

ಆಜಂಗಢ, ಉತ್ತರ ಪ್ರದೇಶ (ಪಿಟಿಐ): ‘ಉತ್ತರ ಪ್ರದೇಶದಲ್ಲಿ ಇಂದು ಅಭಿವೃದ್ಧಿಯು ಹೊಸ ಎತ್ತರವನ್ನು ತಲುಪಿದ್ದು, ಇದರ ಪರಿಣಾಮ ‘ತುಷ್ಟೀಕರಣದ ವಿಷ’ವು ದುರ್ಬಲಗೊಳ್ಳುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ಇಲ್ಲಿ ನಡೆದ ಸಾರ್ವಜನಿಕ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮುಲಾಯಂ ಸಿಂಗ್ ಮತ್ತು ಅಖಿಲೇಶ್ ಯಾದವ್ ಕುಟುಂಬವನ್ನು ಪರೋಕ್ಷವಾಗಿ ಉಲ್ಲೇಖಿಸಿ, ರಾಜಕೀಯದಲ್ಲಿ ಸ್ವಜನಪಕ್ಷಪಾತ ಧೋರಣೆಯನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡರು.

ಆಜಂಗಢ ಕ್ಷೇತ್ರವನ್ನು ಭದ್ರ ನೆಲೆ ಎಂದೇ ಪರಿಣಿಸಿದ್ದ ಯಾದವ್ ಕುಟುಂಬವನ್ನು ಟೀಕಿಸಿದರು.

ಸ್ವಜನಪಕ್ಷಪಾತದ ಧೋರಣೆಯಿಂದಾಗಿ, ಕುಟುಂಬವೇ ಇಲ್ಲದ ವ್ಯಕ್ತಿಯೇ ಅವರ ವಿರುದ್ಧ ಜಯ ಗಳಿಸಿದ್ದ ಎಂದು ಈ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶವನ್ನು ಉಲ್ಲೇಖಿಸಿದರು.

ದಾಹ ತಣಿಸುವ ಹಣ್ಣು

ನಗರದಲ್ಲಿ ದಿನದಿಂದ ದಿನಕ್ಕೆ ತಾಪಮಾನ ಹೆಚ್ಚುತ್ತಿದ್ದು, ದಾಹ ತಣಿಸಿಕೊಳ್ಳಲು ಜನರು ವಿವಿಧ ಹಣ್ಣುಗಳ ಮೊರೆ ಹೋಗುತ್ತಿದ್ದು, ಅರೆಕೆರೆ, ಬಿಡಿಎ ಲೇಔಟ್ ರಸ್ತೆಯಲ್ಲಿ ಕಲ್ಲಂಗಡಿ ಹಣ್ಣು ಖರೀದಿಸುತ್ತಿರುವುದು ಕಂಡು ಬಂತು. –

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಹಿಮಾಚಲ: ಪಕ್ಷೇತರ ಶಾಸಕನ ವಿರುದ್ಧ ಪ್ರಕರಣ ದಾಖಲು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಪಕ್ಷೇತರ ಶಾಸಕ ಮತ್ತು ಕಾಂಗ್ರೆಸ್‌ನ ಅನರ್ಹ ಶಾಸಕರೊಬ್ಬರ ತಂದೆಯ ವಿರುದ್ಧ ರಾಜ್ಯ ಪೊಲೀಸರು ‘ಚುನಾವಣಾ ಅಪರಾಧ’ಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿದ್ದಾರೆ.

ಈಚೆಗೆ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಹಿಮಾಚಲ ಪ್ರದೇಶ ಕಾಂಗ್ರೆಸ್‌ನ ಆರು ಶಾಸಕರು ಅಡ್ಡ ಮತದಾನ ಮಾಡಿದ್ದರು. ಇದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಕಾಂಗ್ರೆಸ್ ಶಾಸಕರಾದ ಸಂಜಯ್ ಅವಸ್ಥಿ ಮತ್ತು ಭುವನೇಶ್ವರ ಗೌರ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಪಕ್ಷೇತರ ಶಾಸಕ ಆಶಿಶ್ ಶರ್ಮಾ ಮತ್ತು ಅನರ್ಹ ಶಾಸಕ ಚೈತನ್ಯ ಶರ್ಮ ಅವರ ತಂದೆಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಲಂಕೇಶ್–90’ ವಿಚಾರ ಸಂಕಿರಣದಲ್ಲಿ ಮರುಳಸಿದ್ದಪ್ಪ

‘ಪ್ರದರ್ಶನದ ಸರಕಾದ ದೈವಭಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚೆಗೆ ದೈವಭಕ್ತಿ ಎನ್ನುವುದು ಪ್ರದರ್ಶನದ ಸರಕಾಗಿದೆ. ವಿವಿಧ ವೇಷ ವಿನೋದಾವಳಿಗಳ ಮೂಲಕ ದೇವರನ್ನು ಆರಾಧಿಸ ಲಾಗುತ್ತಿದೆ’ ಎಂದು ಸಾಹಿತಿ ಕೆ. ಮರುಳಸಿದ್ದಪ್ಪ ಕುಹಕವಾಡಿದರು.

ಭಾಗವತರು ಸಾಂಸ್ಕೃತಿಕ ಸಂಘಟನೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಲಂಕೇಶ್–90’ ರಾಜ್ಯಮಟ್ಟದ ವಿಚಾರಸಂಕಿರಣ ಉದ್ಘಾಟಿಸಿ, ಮಾತನಾಡಿದರು.

‘ಗಾಂಧೀಜಿ ಅವರಂತಹ ದೈವ ಭಕ್ತ ಯಾರೂ ಇಲ್ಲ. ರಾಮನಾಮವನ್ನು ಶ್ರದ್ಧಾ ಭಕ್ತಿಯಿಂದ ಜಪಿಸಿದರೆ ಎಂತಹ ಕಾಯಿಲೆಯನ್ನೂ ವಾಸಿ ಮಾಡಿಕೊಳ್ಳ ಬಹುದು ಅಂದಿದ್ದರು. ಆದರೆ, ಅವರು ದೈವ ಭಕ್ತಿಯನ್ನು ಪ್ರದರ್ಶನದ ಸರಕನ್ನಾಗಿ ಮಾಡಿಕೊಂಡಿರಲಿಲ್ಲ. ಈಗ ಕೆಲವರು ರಾಮ, ಕೃಷ್ಣ ಸೇರಿ ವಿವಿಧ ದೇವರ ದೇವಸ್ಥಾನಗಳಿಗೆ ಹೋದಾಗ ಬಗೆಬಗೆಯ ವೇಷಗಳನ್ನು ಹಾಕಿಕೊಳ್ಳುತ್ತಿದ್ದಾರೆ. ನಾವು ಸಂದಿಗ್ಧ ಕಾಲದಲ್ಲಿ ಬದುಕುತ್ತಿದ್ದೇವೆ. ಕುಬ್ಜರು ಮಹಾವ್ಯಕ್ತಿಗಳಂತೆ ಮೆರೆಯುತ್ತಿದ್ದಾರೆ. ಈ ರೀತಿಯ ವ್ಯಕ್ತಿ ಪೂಜೆಯನ್ನು ಹಿಂದೆಂದೂ ನೋಡಿಲ್ಲ, ಮುಂದೆಯೂ ನೋಡಲು ಸಾಧ್ಯವಿಲ್ಲ ಅನಿಸುತ್ತದೆ’ ಎಂದು ಹೇಳಿದರು.

‘ಕೆಲವರು ನಮ್ಮನ್ನು ಕಾಂಗ್ರೆಸ್ ಬಾಲಬಡುಕರು ಎಂದು ಸಾರಾಸಗಟಾಗಿ ಹೇಳುತ್ತಾರೆ. ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ಕರ್ನಾಟಕದಲ್ಲಿ ಲಂಕೇಶ್ ಅವರ ನೇತೃತ್ವದಲ್ಲಿ ಅದನ್ನು ವಿರೋಧಿಸಿ, ಮೊದಲು ಮೆರವಣಿಗೆ ಮಾಡಿದ್ದೇವು. ಇಷ್ಟಾಗಿಯೂ ನಮ್ಮನ್ನು ಕಾಂಗ್ರೆಸ್ ಭಕ್ತರು ಅಂತ ತಿಳಿದುಕೊಂಡಿದ್ದಾರೆ’ ಎಂದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, ‘ಲಂಕೇಶ್ ಅವರು ತಮ್ಮ ಸಾಹಿತ್ಯದ ಮೂಲಕ ಎರಡು ಮೂರು ತಲೆಮಾರನ್ನು ತಾಕಿದ್ದಾರೆ. ಅವರು ಮೋಹಕವಾದ ಭಾಷೆಯ ಮೂಲಕ ಕಠಿಣ ವಿಷಯವನ್ನೂ ಬುದ್ಧಿಯ ಜತೆಗೆ ಭಾವಕ್ಕೆ ತಲುಪುವ ರೀತಿ ಬರೆಯುತ್ತಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ‘ಲಂಕೇಶ್ ಅವರದ್ದು ಗಂಭೀರವಾದ ಬರವಣಿಗೆ. ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡು, ಗಹನವಾದ ವಿಷಯಗಳನ್ನೂ ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಿದರು’ ಎಂದು ಹೇಳಿದರು.

ಪಿ. ಲಂಕೇಶ್ ಅವರ ಪತ್ನಿ ಇಂದಿರಾ ಲಂಕೇಶ್ ಅವರು ಹಳೆಯ ಘಟನೆಗಳನ್ನು ಸ್ಮರಿಸಿಕೊಂಡು ಭಾವುಕರಾದರು. ಬಳಿಕ ಲಂಕೇಶ್ ಅವರ ಸಾಹಿತ್ಯ ಚಿಂತನೆಯ ಬಗ್ಗೆ ಗೋಷ್ಠಿಗಳು ನಡೆದವು.

ಕಾರ್ಯಕ್ರಮದಲ್ಲಿ ಕೆ. ಮರುಳಸಿದ್ದಪ್ಪ (ಎಡದಿಂದ ಮೂರನೆಯವರು) ಅವರು ಬ್ಯಾನರ್ ಅನಾವರಣ ಮಾಡಿದರು. ಸಂಘಟನೆ ಅಧ್ಯಕ್ಷ ಕೆ. ರೇವಣ್ಣ, ಇಂದಿರಾ ಲಂಕೇಶ್, ಎಲ್. ಹನುಮಂತಯ್ಯ, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮತ್ತು ಎಂ.ಎಸ್. ಆಶಾದೇವಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಸಮ ಸಮಾಜ ನಿರ್ಮಾಣಕ್ಕೆ ಶಿಕ್ಷಣವೊಂದೇ ಮಾರ್ಗ’

ಪ್ರಜಾವಾಣಿ ವಾರ್ತೆ

ಯಲಹಂಕ: ಸಮಾಜದಲ್ಲಿ ಎಲ್ಲ ವರ್ಗದ ಜನರು ಸಮಾನವಾಗಿ ಬದುಕಲು ಹಾಗೂ ಸಮಸಮಾಜ ನಿರ್ಮಿಸಲು ಶಿಕ್ಷಣವೊಂದೇ ಏಕೈಕ ಮಾರ್ಗ. ಹೀಗಾಗಿ ನೂತನ ಶಾಲಾ ಕೊಠಡಿಗಳ ನಿರ್ಮಾಣ ಯೋಜನೆಗೆ ಸರ್ಕಾರ ₹70 ಕೋಟಿ ಅನುದಾನ ಮೀಸಲಿರಿಸಿದೆ ಎಂದು ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಕೊಡಿಗೇಹಳ್ಳಿಯ ಬೆಂಗಳೂರು ಪಬ್ಲಿಕ್ ಶಾಲೆಯಲ್ಲಿ 26 ನೂತನ ಕೊಠಡಿಗಳು ಮತ್ತು ನಗರದ 16 ಶಾಲೆಗಳಲ್ಲಿ 16 ನೂತನ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಂತೆಯೇ ಗುಣಮಟ್ಟದ ಶಿಕ್ಷಣ ಲಭ್ಯವಾಗಬೇಕೆಂಬ ನಿಲುವಿಗೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಬೆಂಗಳೂರು ಉತ್ತರ ಮತ್ತು ದಕ್ಷಿಣ ಶೈಕ್ಷಣಿಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯ್ದ 16 ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು, ಭವಿಷ್ಯದಲ್ಲಿ ದಾಖಲಾತಿ ಹೆಚ್ಚಾಗುವ ಸಂಭವವಿರುವ ಹಾಗೂ ಸ್ಥಳೀಯವಾಗಿ ಅನೇಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಅವಕಾಶವಿರುವ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗುಣಮಟ್ಟದ ಶೈಕ್ಷಣಿಕ ಉಪಕ್ರಮಗಳನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಹಯೋಗದೊಂದಿಗೆ ಜಾರಿಗೊಳಿಸಲಾಗುತ್ತಿದೆ. ಈಗಾಗಲೇ ಈ ಶಾಲೆಗಳ ಶಿಕ್ಷಕರಿಗೆ ಬೋಧನಾ ಗುಣಮಟ್ಟ ಹೆಚ್ಚಿಸಲು ತಂತ್ರಜ್ಞಾನ ಆಧಾರಿತ ತರಬೇತಿ ನೀಡಲಾಗಿದೆ ಎಂದು ಹೇಳಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ‘15 ವರ್ಷಗಳಲ್ಲಿ ಈ ಶಾಲೆಯಲ್ಲಿ 43 ನೂತನ ಕೊಠಡಿಗಳನ್ನು ನಿರ್ಮಿಸಲಾಗಿದೆ. 2008ರಲ್ಲಿ 650ರಷ್ಟಿದ್ದ ವಿದ್ಯಾರ್ಥಿಗಳ ಸಂಖ್ಯೆ ಇಂದು 1150ಕ್ಕೆ ಏರಿಕೆಯಾಗಿದೆ. ಶಾಲೆಯ ಅಭಿವೃದ್ಧಿಗಾಗಿ ಬಿಬಿಎಂಪಿ, ಶಿಕ್ಷಣ ಇಲಾಖೆ ಸೇರಿ ಹಲವು ಮೂಲಗಳಿಂದ ಹಣ ಹೊಂದಿಸಲಾಗಿದೆ. ಶಿಕ್ಷಣದ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ಶಾಲಾ ಆವರಣ ಅನುಕೂಲಕರ ವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ’ ಎಂದು ಅವರು ತಿಳಿಸಿದರು.

ಕೊಡಿಗೇಹಳ್ಳಿಯ ಬೆಂಗಳೂರು ಪಬ್ಲಿಕ್ ಶಾಲೆಯಲ್ಲಿ 26 ನೂತನ ಕೊಠಡಿಗಳಿಗೆ ಸಚಿವರಾದ ಎಸ್.ಮಧು ಬಂಗಾರಪ್ಪ ಹಾಗೂ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಸಂಸದ ಡಿ.ವಿ.ಸದಾನಂದಗೌಡ, ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಹನುಮಂತೇಗೌಡ ಭಾಗವಹಿಸಿದ್ದರು

ಸಹಚರನ ಬಂಧನ

ಕುಣಿಗಲ್: ಬಾಲಕಿ ಮೇಲೆ ಅತ್ಯಾಚಾರ ಪ್ರಕರಣದಲ್ಲಿ ಪೋಕ್ಸೊ ಕಾಯ್ದೆ ಅಡಿ ಬಂಧಿಸಲಾಗಿರುವ ತಾಲ್ಲೂಕಿನ ಹಂಗರಹಳ್ಳಿ ವಿದ್ಯಾ ಚೌಡೇಶ್ವರಿ ದೇಗುಲ ಮಠದ ಬಾಲಮಂಜುನಾಥ ಸ್ವಾಮಿ ಸಹಚರ ಮನೋಜ್‌ನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಲಗ್ಗೆರೆಯಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ, ಚಾಲನಾ ಪರವಾನಗಿ ಪತ್ರಗಳನ್ನು ವಿತರಿಸಲಾಯಿತು. ನ್ಯಾಯಮೂರ್ತಿ ಕೆ. ಸೋಮಶೇಖರ್, ಎಸ್‌ಜೆಎಸ್ ಎಂಟರ್‌ಪ್ರೈಸಸ್ ಸಿಇಒ ಸದಾಶಿವ ಬಳಿಗಾರ್, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಜೈಶಂಕರ್, ಸಿ.ಎಸ್‌.ಸಿ. ರಾಜ್ಯ ಮುಖ್ಯಸ್ಥ ಶಕೀಬ್ ಅಹಮದ್, ವರ್ಚಸ್ ರಾಷ್ಟ್ರೀಯ ಸೇವಾ ಟ್ರಸ್ಟ್ ಸಂಸ್ಥಾಪಕಿ ವೈಶಾಲಿ, ಎಸ್‌ಜೆಎಸ್ ಎಂಟರ್‌ಪ್ರೈಸಸ್ ವ್ಯವಸ್ಥಾಪಕ ನಿರ್ದೇಶಕ ಕೆ.ಎ. ಜೋಸೆಫ್, ಪೊಲೀಸ್ ಇನ್‌ಸ್ಪೆಕ್ಟರ್ ಜಗದೀಶ್, ಸಹಾಯಹಸ್ತ ಸೇವಾ ಟ್ರಸ್ಟ್ ಸಂಸ್ಥಾಪಕ ಎಂ.ಆರ್. ರುದ್ರೇಗೌಡ ಭಾಗವಹಿಸಿದ್ದರು

ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಿ.ವಿ. ಗುರುಪ್ರಸಾದ್ ಬೇಸರ

‘ಸಹನೆ ಕಳೆದುಕೊಳ್ಳುತ್ತಿರುವ ಯುವಜನರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚೆಗೆ ಯುವಜನರು ಬದುಕಿನಲ್ಲಿ ಸೋಲು ಎದುರಾದ ತಕ್ಷಣ ಸಾವಿಗೆ ಶರಣಾಗುತ್ತಿದ್ದಾರೆ. ಸೋಲನ್ನು ಜಯಿಸುವ ಮನೋಭಾವವೇ ಇಲ್ಲವಾಗಿದೆ’ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಿ.ವಿ. ಗುರುಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಸಮನ್ವಿತ ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರಾಜೀವ್ ಎನ್. ಮಾಗಲ್ ಅವರು ಅನುವಾದಿಸಿರುವ ‘ಸೋಲಿಗೆ ಸೋಲದವನಿಗೆ ಸೋಲೇ ಇಲ್ಲ!’ (ನಿರಂಜನ್ ವಿ. ನೇರ್ಲಿಗೆ ಮೂಲ ಲೇಖಕ), ಬಿ.ಎಸ್. ಜಯಪ್ರಕಾಶ ನಾರಾಯಣ ಅವರು ಅನುವಾದಿಸಿರುವ ‘ಸಾಫ್ಟ್‌ವೇರ್‌ನಿಂದ ಸಾಕ್ಷಾತ್ಕಾರದೆಡೆಗೆ’ (ಓಂ ಸ್ವಾಮಿ ಮೂಲ ಲೇಖಕ) ಹಾಗೂ ಅಕ್ಷತಾ ರಾಧಾಕೃಷ್ಣ ಅವರು ಅನುವಾದಿಸಿರುವ ‘ಜಗದಗಲ’ (ಅಪ್ತಿ ಪಟವರ್ಧನ್) ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ಗೆಲ್ಲುವ ಧಾವಂತದಲ್ಲಿ ಯುವಜನರು ಸಹನೆ ಕಳೆದುಕೊಳ್ಳುತ್ತಿದ್ದಾರೆ. ಪರಿಸ್ಥಿತಿಗಳನ್ನು ಎದುರಿಸುವ ಮನೋಭಾವ ರೂಢಿಸಿಕೊಳ್ಳದೆ ಹೋದರೆ, ಬದುಕಿನ ವಾಸ್ತವಗಳನ್ನು ಎದುರಿಸುವುದು ಕಷ್ಟ. ಬದುಕಿನಲ್ಲಿ ಒಮ್ಮೆ ಫೇಲ್ ಆಗಬೇಕು. ಅಷ್ಟಕ್ಕೂ ಫೇಲ್ ಆದರೆ ಬದುಕು ಮುಗಿದು ಹೋಗುವುದಿಲ್ಲ. ಇದನ್ನು ಅರಿತು ಮುಂದೆ ಸಾಗಿದಾಗ ಗುರಿ ತಲುಪಲು ಸಾಧ್ಯವಾಗುತ್ತದೆ’ ಎಂದು ಹೇಳಿದರು.

ಲೇಖಕ ನಿರಂಜನ್ ವಿ. ನೇರ್ಲಿಗೆ, ‘ಮನುಷ್ಯ ಸೋತು ಕುಸಿದಾಗಲೂ ಬದುಕಿನಲ್ಲಿ ಆಯ್ಕೆಗಳು ಇದ್ದೇ ಇರುತ್ತವೆ. ಸೋಲಿಗೆ ಸೋತು ಹಿಂದೆ ಹೆಜ್ಜೆ ಹಾಕದವರು ಮಾತ್ರ ಬದುಕಿನಲ್ಲಿ ಸಾಧನೆ ಮಾಡಲು ಸಾಧ್ಯ. ಬದುಕಿನ ಪ್ರತಿ ತಿರುವಿನಲ್ಲೂ ಹೊಸ ಸಾಧ್ಯತೆಗಳು ಇರುತ್ತವೆ. ಸವಾಲುಗಳನ್ನು ಎದುರಿಸಿ ಮುನ್ನಡೆದವರಿಗೆ ಮಾತ್ರ ಹೊಸ ಅವಕಾಶಗಳ ಬಾಗಿಲು ತೆರೆಯುತ್ತವೆ’ ಎಂದು ತಿಳಿಸಿದರು.

ಅನುವಾದಕ ಜಯಪ್ರಕಾಶ್ ನಾರಾಯಣ, ‘ಸತ್ಯ ಎಂಬುದು ಪ್ರತಿಯೊಬ್ಬರ ಅನುಭೂತಿಗೆ ದಕ್ಕುವ ದರ್ಶನ. ಇದನ್ನೇ ಓಂ ಸ್ವಾಮಿ ಅವರ ಜೀವನ ದರ್ಶನ ನಮಗೆ ತಿಳಿಸಿ ಕೊಡುತ್ತದೆ. ನಾವು ಬದುಕಿನಲ್ಲಿ ನಮ್ಮದೇ ಅನುಭವಗಳ ನೆಲೆಯಲ್ಲಿ ಸತ್ಯವನ್ನು ಕಂಡುಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ‘ಸೋಲಿಗೆ ಸೋಲದವನಿಗೆ ಸೋಲೇ ಇಲ್ಲ!’, ‘ಸಾಫ್ಟ್‌ವೇರ್‌ನಿಂದ ಸಾಕ್ಷಾತ್ಕಾರದೆಡೆಗೆ’ ಹಾಗೂ ‘ಜಗದಗಲ’ ಕೃತಿಯನ್ನು ಡಿ.ವಿ. ಗುರುಪ್ರಸಾದ್ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. (ಎಡದಿಂದ ಬಲಕ್ಕೆ) ಅನುವಾದಕರಾದ ಅಕ್ಷತಾ ರಾಧಾಕೃಷ್ಣ, ಜಯಪ್ರಕಾಶ್ ನಾರಾಯಣ, ಲೇಖಕ ಕಿಶೋರ ಪಟವರ್ಧನ್, ಸಮನ್ವಿತ ಸಂಸ್ಥೆಯ ರಾಧಾಕೃಷ್ಣ ಕೌಂಡಿನ್ಯ, ನಿರಂಜನ ನೇರ್ಲಿಗೆ ಮತ್ತು ಅನುವಾದಕ ರಾಜೀವ ಮಾಗಲ್ ಪಾಲ್ಗೊಂಡಿದ್ದರು

ಪವಾರ್ ಕುಟುಂಬದಲ್ಲೇ ಪೈಪೋಟಿ

ಮುಂಬೈ: ಮುಂಬರುವ ಲೋಕಸಭಾ ಚುನಾವಣೆ ವೇಳೆ ಮಹಾರಾಷ್ಟ್ರದ ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಒಂದಾಗಿರುವ ಬಾರಾಮತಿ ಲೋಕಸಭಾ ಕ್ಷೇತ್ರದಲ್ಲಿ ಪವಾರ್ ಕುಟುಂಬಸ್ಥರೇ ಪರಸ್ಪರ ಎದುರಾಳಿಯಾಗುವ ಸಾಧ್ಯತೆ ನಿಚ್ಚಳವಾಗಿದೆ.

ಶರದ್ ಪವಾರ್ ನೇತೃತ್ವದಲ್ಲಿ ಪವಾರ್ ಕುಟುಂಬಸ್ಥರೇ ಬಾರಾಮತಿ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿದ್ದರು. ಆದರೆ, ಇದೇ ಮೊದಲ ಬಾರಿಗೆ ಪವಾರ್ ಕುಟುಂಬಸ್ಥರೇ ಆಗಿರುವ ಶರದ್ ಪವಾರ್ ಅವರ ಮಗಳು ಸುಪ್ರಿಯಾ ಸುಳೆ ಹಾಗೂ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಪರಸ್ಪರ ಎದುರಾಳಿಗ ಳಾಗುವ ಸಾಧ್ಯತೆಯಿದೆ.

ಸುಪ್ರಿಯಾ ಅವರು ಮಹಾ ವಿಕಾಸ್ ಅಘಾಡಿ ಮೈತ್ರಿಕೂಟದ ಅಭ್ಯರ್ಥಿಯಾಗಲಿದ್ದು, ಆಡಳಿತಾರೂಢ ಮಹಾ ಯುತಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಸುನೇತ್ರಾ ಪವಾರ್ ಚುನಾವಣಾ ಅಖಾಡಕ್ಕಿಳಿಯಲಿದ್ದಾರೆ ಎನ್ನಲಾಗಿದೆ.

सत्यमेव जयते
Government of India

Sashakt Nari - Viksit Bharat

Prime Minister **Narendra Modi's** interaction with **Lakhpati Didis** and **Namo Drone Didis**

and distribution of bank loans of **₹8000 crore** at low interest rates and capitalization support of **₹2000 crore** to SHGs along with distribution of **1094 drones** to **Namo Drone Didis**

Namo Drone Didi

- Connecting SHG women with technology and modern farming techniques
- Effective spraying of fertilizers and pesticides in lesser time and labour saving with Namo drones
- Financial empowerment of Namo Drone Didis by enabling them to become Namo Drone Pilot

Lakhpati Didi

- Commitment to enable 3 Cr SHG women as Lakhpati Didis
- Training and assistance for economic self-reliance
- Promotion of several livelihood opportunities

Guest of Honour

Giriraj Singh
Union Minister for Rural Development & Panchayati Raj

Arjun Munda
Union Minister for Tribal Affairs & Agriculture and Farmers Welfare

Dr. Mansukh Mandaviya
Union Minister for Health & Family Welfare and Chemicals & Fertilizers

Time:- 10:00 am, 11th March 2024

Venue:- C. Subramaniam Auditorium, PUSA, New Delhi

Watch the programme live on DD News and webcast on https://pmindiawebcast.nic.in/

cbc 35101/13/0009/2324

900 ಗ್ರಾಂ ಚಿನ್ನಾಭರಣ ಸಮರ್ಪಣೆ

ಬಂಟ್ವಾಳ (ದಕ್ಷಿಣ ಕನ್ನಡ): ಇಲ್ಲಿನ ತಿರುಮಲ ವೆಂಕಟರಮಣ ಸ್ವಾಮಿ ದೇವಸ್ಥಾನದ ಬ್ರಹ್ಮರಥೋತ್ಸವದ 200ನೇ ವರ್ಷಾಚರಣೆ ಅಂಗವಾಗಿ ಪಟ್ಟದ ದೇವರಿಗೆ ಮತ್ತು ಉತ್ಸವ ಮೂರ್ತಿಗೆ ತಲಾ 50 ಪವನ್ (ಒಟ್ಟು 900 ಗ್ರಾಂ) ಚಿನ್ನದ ಆಭರಣಗಳನ್ನು ಕಾಶಿ ಮಠಕ್ಕೆ ಸಮರ್ಪಿಸಲಾಯಿತು.

ಬಡ್ಡಕಟ್ಟೆ ಹನುಮಂತ ದೇವಸ್ಥಾನ ಬಳಿಯಿಂದ ಭಾನುವಾರ ಭಜನೆಯೊಂದಿಗೆ ನಡೆದ ಹೊರೆಕಾಣಿಕೆ ಮೆರವಣಿಗೆಯ ವಿಶೇಷ ರಥದಲ್ಲಿ ಚಿನ್ನ ಸಾಗಿಸಲಾಯಿತು. ದೇವರಿಗೆ ಹಣ್ಣು ಹಂಪಲು ಸಹಿತ ವಿವಿಧ ಬಗೆಯ ತರಕಾರಿ, ಅಕ್ಕಿ, ತೆಂಗಿನಕಾಯಿ, ಸೀಯಾಳ, ಬಾಳೆ ಎಲೆಯನ್ನು ಸಮರ್ಪಿಸಲಾಯಿತು.

ಗುಂಪು ವಿಮಾ ಯೋಜನೆಯಡಿ 68 ನೇಕಾರರ ಕುಟುಂಬಗಳಿಗೆ ಸಿಕ್ಕಿಲ್ಲ ಪರಿಹಾರ

4 ವರ್ಷಗಳಲ್ಲಿ 42 ನೇಕಾರರ ಆತ್ಮಹತ್ಯೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಕಚ್ಚಾ ವಸ್ತುಗಳ ಬೆಲೆ ಏರಿಕೆ, ಅನಿಶ್ಚಿತ ಮಾರುಕಟ್ಟೆ, ಆರ್ಥಿಕ ಸಂಕಷ್ಟ ಸೇರಿ ವಿವಿಧ ಕಾರಣಗಳಿಂದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ 42 ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

42 ಪೈಕಿ 40 ಪ್ರಕರಣಗಳನ್ನು ಮಾತ್ರ ಪರಿಹಾರಕ್ಕೆ ಪರಿಗಣಿಸಲಾಗಿದೆ.

ರಾಮನಗರ ಜಿಲ್ಲೆಯ ಇನ್ನೆರಡು ಪ್ರಕರಣಗಳ ಕುರಿತು ಇನ್ನೂ ಎಫ್‌ಐಆರ್ ದಾಖಲಾಗಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ 24, ಬಾಗಲಕೋಟೆ 5, ಬೆಂಗಳೂರು ಗ್ರಾಮಾಂತರ 4, ರಾಮನಗರ 3, ತುಮಕೂರು 2, ಬೆಂಗಳೂರು ನಗರ, ಧಾರವಾಡ, ಚಿಕ್ಕಬಳ್ಳಾಪುರ, ವಿಜಯಪುರ ಜಿಲ್ಲೆಯಲ್ಲಿ ತಲಾ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಆತ್ಮಹತ್ಯೆ ಮಾಡಿಕೊಂಡ 25 ನೇಕಾರರ ಕುಟುಂಬದ ಸದಸ್ಯರಿಗೆ ತಲಾ ₹5 ಲಕ್ಷ ಪರಿಹಾರ ನೀಡಲಾಗಿದೆ. ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆಯಡಿ ನೋಂದಾಯಿಸಿಕೊಂಡಿದ್ದ ನಾಲ್ವರಿಗೆ ಯೋಜನೆಯಡಿ ಪರಿಹಾರ ಪಡೆಯಲು ಸೂಚಿಸಲಾಗಿದೆ. ಆರು ಪ್ರಸ್ತಾವಗಳಿಗೆ ಶೀಘ್ರದಲ್ಲಿಯೇ ಪರಿಹಾರ ಬಿಡುಗಡೆ ಮಾಡಲಾಗುವುದು. ಉಳಿದ ಏಳು ಪ್ರಕರಣಗಳಲ್ಲಿ ಸೂಕ್ತ ದಾಖಲೆ ಸಲ್ಲಿಸದ ಕಾರಣ ಪ್ರಸ್ತಾವ ಕೈ ಬಿಡಲಾಗಿದೆ' ಎಂದು ಜವಳಿ ಇಲಾಖೆ ತಿಳಿಸಿದೆ.

ಐದು ವರ್ಷಗಳಿಂದ ಬಾರದ ಪರಿಹಾರ: ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮದಡಿ ಗುಂಪು ವಿಮಾ ಯೋಜನೆಯಡಿ ನೋಂದಾಯಿಸಿಕೊಂಡಿದ್ದ 68 ನೇಕಾರರ ಕುಟುಂಬದ ಸದಸ್ಯರಿಗೆ ತಲಾ ₹2 ಲಕ್ಷದಂತೆ ಪರಿಹಾರ ಐದು ವರ್ಷಗಳಿಂದ ಬಂದಿಲ್ಲ.

'ಕಚ್ಚಾ ನೂಲಿನ ಬೆಲೆ, ರೇಷ್ಮೆ ಬೆಲೆ ದುಪ್ಪಟ್ಟಾಗಿದೆ. ಆದರೆ, ಅದಕ್ಕೆ ತಕ್ಕಂತೆ ಸೀರೆಗಳ ಬೆಲೆಯಲ್ಲಿ ಏರಿಕೆಯಾಗಿಲ್ಲ. ಮಧ್ಯವರ್ತಿಗಳಿಂದ ಏಕಾಏಕಿ ಬೆಲೆ ಏರಿಳಿತದ ಪರಿಣಾಮ ನೇಕಾರರು ಸಂಕಷ್ಟಕ್ಕೆ ಸಿಲುಕಿದ್ದೇವೆ' ಎಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ತಿಳಿಸಿದರು.

'ಸಾಲ ಸೌಲಭ್ಯದ ಯೋಜನೆಗಳಿದ್ದರೂ ಬಹುತೇಕ ನೇಕಾರರಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ನೀಡಿಲ್ಲ. ಹೆಚ್ಚಿನ ಬಡ್ಡಿಗೆ ಖಾಸಗಿ ಸಾಲ ಮಾಡಬೇಕು. ಕಡಿಮೆ ಬೆಲೆಯ ಸೂರತ್ ಬಟ್ಟೆಯ ಹಾವಳಿಯಿಂದಲೂ ತೊಂದರೆಯಾಗಿದೆ' ಎಂದರು.

ನಿಗಮಗಳಿಂದ ಪರಿಹಾರ ಬಾಕಿ ಇರುವ ಪಟ್ಟಿಯನ್ನು ಭಾರತೀಯ ಜೀವ ವಿಮಾ ನಿಗಮಕ್ಕೆ ಕಳುಹಿಸಲಾಗಿದೆ. ಪರಿಹಾರವು ಬರುತ್ತಿದೆ

ಎಂ.ಜಿ. ಕೊಣ್ಣೂರ
ಉಪನಿರ್ದೇಶಕ, ಜವಳಿ ಇಲಾಖೆ

ಗುಂಪು ವಿಮಾ ಯೋಜನೆಯಡಿ ಪರಿಹಾರ ಬಾಕಿ ವಿವರ

ವರ್ಷ	ನೇಕಾರರ ಸಂಖ್ಯೆ
2018-19	07
2019-20	23
2020-21	35
2021-22	03

ಸುದ್ದಿ 2 ನಿಮಿಷ

ವಾರ್ಡನ್ ವಿರುದ್ಧ ಎಫ್‌ಐಆರ್

ಚಿತ್ತಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಕರದಾಳ ಗ್ರಾಮದ ವಸತಿ ನಿಲಯದಲ್ಲಿ ಭಾಗ್ಯಶ್ರೀ ಸಾಯಬಣ್ಣಾ ಎಂಬ ವಿದ್ಯಾರ್ಥಿನಿ ಈಚೆಗೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ವಸತಿ ನಿಲಯದ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ವಾರ್ಡನ್ ರೇಣುಕಾ ಮೂಲಿಮತ, ಅಧೀಕ್ಷಕ ಮತ್ತು ಸಿಬ್ಬಂದಿ ವಿರುದ್ಧ ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್ ದಾಖಲಾದ ಬೆನ್ನಲ್ಲೇ ವಸತಿ ನಿಲಯದ ವಾರ್ಡನ್ ರೇಣುಕಾ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ವಿದ್ಯಾರ್ಥಿನಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ವಸತಿ ನಿಲಯದ ವಾರ್ಡನ್ ನಿರ್ಲಕ್ಷ್ಯವೇ ಕಾರಣ ಎಂದು ವಿದ್ಯಾರ್ಥಿನಿಯ ಪೋಷಕರು ಆರೋಪ ಮಾಡಿದ್ದರು.

ಹೀಗಾಗಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಎಥೆನಾಲ್ ಉತ್ಪಾದನೆಗೆ ನೀತಿ ರೂಪಿಸಿ: ಗಡ್ಕರಿ

₹4 ಸಾವಿರ ಕೋಟಿ ವೆಚ್ಚದ 22 ಹೆದ್ದಾರಿ ಯೋಜನೆಗಳ ಲೋಕಾರ್ಪಣೆ ಹಾಗೂ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಕರ್ನಾಟಕದಲ್ಲಿ ಕಬ್ಬನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ಅದರಿಂದ ಜೈವಿಕ ಎಥೆನಾಲ್ ಉತ್ಪಾದನೆ ಹೆಚ್ಚಿಸಲು ರಾಜ್ಯ ಸರ್ಕಾರ ನೀತಿ ರೂಪಿಸಬೇಕು. ಅದಕ್ಕೆ ಕೇಂದ್ರ ನೆರವಾಗಲಿದೆ' ಎಂದು ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ನಿತಿನ್ ಗಡ್ಕರಿ ಭರವಸೆ ನೀಡಿದರು.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ರಾಜ್ಯದ ವಿವಿಧ ಜಿಲ್ಲೆಗಳ ವ್ಯಾಪ್ತಿಯ ₹4ಸಾವಿರ ಕೋಟಿ ವೆಚ್ಚದ 22 ಹೆದ್ದಾರಿ ಯೋಜನೆಗಳ ಲೋಕಾರ್ಪಣೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಇಂಧನ ಸ್ವಾವಲಂಬನೆ ಪ್ರಮುಖವಾಗಿದೆ. ಶೇ 100ರಷ್ಟು ಎಥೆನಾಲ್‌ನಿಂದ ಚಲಿಸಬಲ್ಲ ವಾಹನಗಳು ನಮ್ಮಲ್ಲಿ ಲಭ್ಯವಿವೆ. ಪ್ರಮುಖ ಕಂಪನಿಗಳು ಸಂಪೂರ್ಣ ಜೈವಿಕ ಎಥೆನಾಲ್‌ನಿಂದ ಓಡಬಲ್ಲ ವಾಹನಗಳ ಉತ್ಪಾದನೆ ಆರಂಭಿಸುತ್ತಿವೆ. ಸದ್ಯದಲ್ಲೇ ದೇಶದಲ್ಲಿ 400 ಎಥೆನಾಲ್ ಬಂಕ್‌ಗಳನ್ನು ತೆರೆಯಲಾಗುತ್ತಿದೆ. ಇದಕ್ಕೆ ಪೂರಕವಾಗಿ ಉತ್ಪಾದನೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕಿದೆ' ಎಂದರು.

'ಪಂಜಾಬ್–ಹರಿಯಾಣದಲ್ಲಿ ಕೃಷಿ ಉತ್ಪನ್ನದಿಂದ ಬಿಟುಮಿನ್ ಉತ್ಪಾದನೆ ಕಾರ್ಯ ನಡೆದಿದೆ. ಪಾಣಿಪತ್‌ನಲ್ಲಿ 78ಸಾವಿರ ಟನ್‌ನಷ್ಟು ವಿಮಾನಗಳಿಗೆ ಬಳಸಬಲ್ಲ ಜೈವಿಕ ಇಂಧನ (ಬಯೋ ಏವಿಯೇಷನ್ ಫ್ಯುಯೆಲ್) ಉತ್ಪಾದನೆ ನಡೆದಿದೆ. ರೈತರು ಕೇವಲ ಅನ್ನದಾತರಾಗದೇ ಇಂಧನದಾತರೂ ಆಗುವ ಕಾಲ ಬಂದಿದೆ' ಎಂದು ತಿಳಿಸಿದರು.

'ಈ ವರ್ಷಾಂತ್ಯಕ್ಕೆ ಕರ್ನಾಟಕದ ರಾಷ್ಟ್ರೀಯ ಹೆದ್ದಾರಿ ಮೂಲ ಸೌಕರ್ಯವು ಅಮೆರಿಕಾದ ಹೆದ್ದಾರಿಗಳ ಸೌಕರ್ಯಕ್ಕೆ ಸಮನಾಗಲಿದೆ. ಪ್ರಸ್ತುತ ಕರ್ನಾಟಕದಲ್ಲಿ 8200 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿದ್ದು, 151 ಯೋಜನೆಗಳು ಪೂರ್ಣಗೊಂಡಿವೆ. ಈ ವರ್ಷಾಂತ್ಯಕ್ಕೆ ರಾಜ್ಯದಲ್ಲಿ ₹3 ಲಕ್ಷ ಕೋಟಿ ಮೊತ್ತದ ಹೆದ್ದಾರಿ ಕಾಮಗಾರಿಗಳು ನಡೆಯಲಿದ್ದು, ಇದರಿಂದ ಕರ್ನಾಟಕದ ಚಿತ್ರಣವೇ ಬದಲಾಗಲಿದೆ' ಎಂದು ವಿವರಿಸಿದರು.

'ಮೈಸೂರು ಪೆರಿಫೆರಲ್ ರಿಂಗ್ ರಸ್ತೆ ಹಾಗೂ ಹಾಸನಕ್ಕೆ ರಿಂಗ್ ರಸ್ತೆ ನಿರ್ಮಾಣಕ್ಕೆ ಮನವಿ ಬಂದಿದ್ದು, ಈ ಯೋಜನೆಗಳಿಗೆ ಅವಶ್ಯವಾದ ಭೂಸ್ವಾಧೀನದ ಶೇ 50ರಷ್ಟನ್ನು ಭರಿಸಲು ಒಪ್ಪಿ ರಾಜ್ಯ ಸರ್ಕಾರ ಪತ್ರ ಬರೆದಲ್ಲಿ ಎರಡೂ ಯೋಜನೆಗಳಿಗೆ ಮಂಜೂರಾತಿ ನೀಡಲಾಗುವುದು' ಎಂದು ತಿಳಿಸಿದರು.

'ಮೈಸೂರು–ಕುಶಾಲನಗರ ಚತುಷ್ಪಥ ರಸ್ತೆ ಕಾಮಗಾರಿಗೆ ಮಂಜೂರಾತಿ ನೀಡಲಾಗಿದೆ. ಕುಶಾಲ ನಗರರಿಂದ ಮಾಣಿ ನಡುವಣ 130 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಗೆ ಡಿಪಿಆರ್ ಸಲ್ಲಿಸುವಂತೆ ಆದೇಶ ನೀಡಲಾಗುವುದು. ಮೈಸೂರು–ನಂಜನಗೂಡು ನಡುವೆ ಆರು ಪಥದ ರಸ್ತೆ ನಿರ್ಮಾಣಕ್ಕೂ ಡಿಪಿಆರ್ ಸಲ್ಲಿಸಲು ಸೂಚಿಸಲಾಗುವುದು' ಎಂದರು.

'ಬೆಂಗಳೂರು – ಮೈಸೂರು ಹೆದ್ದಾರಿಯ ಪ್ರಮುಖ ಗ್ರಾಮಗಳಿಗೆ ಅಂಡರ್‌ಪಾಸ್ ನಿರ್ಮಿಸಲಾಗುವುದು. ಪ್ರವೇಶ–ನಿರ್ಗಮನ ದ್ವಾರ ನಿರ್ಮಾಣಕ್ಕೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು. ತುಮಕೂರು–ಶಿವಮೊಗ್ಗ ಹೆದ್ದಾರಿ ಕಾಮಗಾರಿಯು ಶೇ 80ರಷ್ಟು ಪೂರ್ಣಗೊಂಡಿದ್ದು, ಈ ಭಾಗದ ಕೈಗಾರಿಕೆಗಳ ಬೆಳವಣಿಗೆಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹೊಸ ರಸ್ತೆ: 'ಹಾಸನ–ಹುಲಿಯೂರು–ಹಿರಿಯೂರು ನಡುವೆ ₹4,500 ಕೋಟಿ ವೆಚ್ಚದಲ್ಲಿ ಹೆದ್ದಾರಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಇದರಿಂದ ಈ ನಗರಗಳ ನಡುವಣ ಪ್ರಯಾಣದ ಅವಧಿ ಮೂರೂವರೆ ಗಂಟೆಯಷ್ಟು ಕಡಿಮೆ ಆಗಲಿದೆ. ಇದರ ಮೊದಲ ಹಂತದ ಕಾಮಗಾರಿಗೆ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯು ಪರಿಸರ ಅನುಮತಿ ನೀಡುವುದು ಬಾಕಿ ಇದ್ದು, ಶೀಘ್ರ ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು.

'ಮೈಸೂರಿನಿಂದ ಕೇರಳದ ಮಲಪ್ಪುರಂಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಯು ಬಂಡೀಪುರ ರಾಷ್ಟ್ರೀಯ ಉದ್ಯಾನದ ಮೂಲಕ ಹಾದುಹೋಗಿದೆ. ಇಲ್ಲಿ ರಾತ್ರಿ ಸಂಚಾರಕ್ಕೆ ನಿರ್ಬಂಧ ಇರುವ ಕಾರಣ ಸಂಚಾರ ಅಡಚಣೆ ತಪ್ಪಿಸಲು ಬೆಂಗಳೂರು–ಮಲಪ್ಪುರಂ ನಡುವೆ ₹2,500 ಕೋಟಿ ವೆಚ್ಚದಲ್ಲಿ ಹೊಸ ಹೆದ್ದಾರಿ ನಿರ್ಮಾಣ ಮಾಡಲಾಗುತ್ತಿದೆ' ಎಂದರು.

ಮೈಸೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ವಿವಿಧ ಯೋಜನೆಗಳ ಲೋಕಾರ್ಪಣೆ ಹಾಗೂ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ, ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ, ಹೊಳೆನರಸೀಪುರ ಶಾಸಕ ಎಚ್‌.ಡಿ. ರೇವಣ್ಣ, ಕೋಲಾರ ಸಂಸದ ಎಸ್. ಮುನಿಸ್ವಾಮಿ, ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್, ಮಂಡ್ಯ ಸಂಸದೆ ಸುಮಲತಾ ಅಂಬರೀಷ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಹಾಗೂ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ

ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ

ಕರ್ನಾಟಕದಲ್ಲಿ ಒಟ್ಟು ₹5ಸಾವಿರ ಕೋಟಿ ವೆಚ್ಚದಲ್ಲಿ 16 ರೋಪ್‌ವೇ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಅಂಜನಾದ್ರಿ, ದೇವನದುರ್ಗ, ಮಧುಗಿರಿ ಜೊತೆಗೆ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ₹114 ಕೋಟಿ ವೆಚ್ಚದಲ್ಲಿ 1.4 ಕಿ.ಮೀ. ಉದ್ದದ ರೋಪ್ ನಿರ್ಮಾಣಕ್ಕೆ ಚಿಂತಿಸಲಾಗಿದೆ ಎಂದರು.

ಗ್ರೀನ್‌ಫೀಲ್ಡ್ ಹೆದ್ದಾರಿ

'ದೇಶದಲ್ಲಿ ₹5.5 ಲಕ್ಷ ಕೋಟಿ ವೆಚ್ಚದಲ್ಲಿ 10 ಸಾವಿರ ಕಿ.ಮೀ. ಉದ್ದದ 27 ಗ್ರೀನ್‌ಫೀಲ್ಡ್ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದ್ದು, ಇದರಲ್ಲಿ ಕರ್ನಾಟಕದಲ್ಲಿ ₹45 ಸಾವಿರ ಕೋಟಿ ವೆಚ್ಚದಲ್ಲಿ 607 ಕಿ.ಮೀ. ಉದ್ದದ 4 ಹೊಸ ಹೆದ್ದಾರಿ ಕಾಮಗಾರಿ ನಡೆಯಲಿವೆ. ಬೆಂಗಳೂರು–ಚೆನ್ನೈ ನಡುವಿನ ಎಕ್ಸ್‌ಪ್ರೆಸ್‌ವೇ ನಿರ್ಮಾಣಕ್ಕೆ ಮುಂದಿನ ಜನವರಿಗೂ ಮುನ್ನ ಚಾಲನೆ ನೀಡಲಾಗುವುದು' ಎಂದು ಗಡ್ಕರಿ ತಿಳಿಸಿದರು.

'282 ಕಿ.ಮೀ. ಉದ್ದದ ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ ಕಾಮಗಾರಿ ಈ ವರ್ಷಾಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ' ಎಂದರು.

ವಂದೇ ಭಾರತ್ ನಾಳೆ ಚಾಲನೆ

ಬೆಂಗಳೂರು: ಮೈಸೂರು–ಚೆನ್ನೈ ವಂದೇ ಭಾರತ್, ಕಲಬುರಗಿ–ಬೆಂಗಳೂರು ವಂದೇ ಭಾರತ್ ರೈಲು, ಪ್ರಧಾನ ಮಂತ್ರಿ ಜನೌಷಧ ಕೇಂದ್ರ ಸಹಿತ ವಿವಿಧ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಮಾರ್ಚ್ 12ರಂದು ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ.

ದೇಶದಾದ್ಯಂತ ವಿವಿಧ ಕಾರ್ಯಕ್ರಮಗಳಿಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಅದರಲ್ಲಿ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಯೋಜನೆಗಳು ಒಳಗೊಂಡಿವೆ ಎಂದು ವಿಭಾಗ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸ್ಥಳೀಯ ಕುಶಲಕರ್ಮಿಗಳು, ಕುಂಬಾರರು, ನೇಕಾರರು, ಕೈಮಗ್ಗ ನೇಕಾರರು, ಕುಶಲ ಕರ್ಮಿಗಳು, ಬುಡಕಟ್ಟು ಜನಾಂಗದವರಿಗೆ ವರ್ಧಿತ ಜೀವನೋಪಾಯ ಮತ್ತು ಕೌಶಲ ಅಭಿವೃದ್ಧಿ ಅವಕಾಶಗಳನ್ನು ಒದಗಿಸಲು ಬಜೆಟ್‌ನಲ್ಲಿ ಒಂದು ದೇಶ, ಒಂದು ಉತ್ಪನ್ನ ಯೋಜನೆ ಘೋಷಿಸಲಾಗಿತ್ತು. ಅದರಂತೆ ಬೆಂಗಳೂರು ವಿಭಾಗದ 40 ರೈಲು ನಿಲ್ದಾಣಗಳಲ್ಲಿ ಮಳಿಗೆಗಳನ್ನು ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಸಿ.ಎಂ ಚಿತ್ರ ಇಲ್ಲದ್ದಕ್ಕೆ ಆಕ್ಷೇಪ ಕಾರ್ಯಕ್ರಮ ತೊರೆದ ಸಚಿವ

ಹುಬ್ಬಳ್ಳಿ: ಬ್ಯಾನರ್‌ನಲ್ಲಿ ಮುಖ್ಯಮಂತ್ರಿ ಭಾವಚಿತ್ರ ಹಾಕಿಲ್ಲ ಎಂಬ ಕಾರಣಕ್ಕೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ನೂತನ ಸಭಾಭವನ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಚಿವ ಸಂತೋಷ್ ಲಾಡ್ ಭಾಗಿಯಾಗಲು ನಿರಾಕರಿಸಿದರು.

ಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ ಇಲ್ಲಿನ ಪಾಲಿಕೆ ಕಚೇರಿ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ನೂತನ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮ ಭಾನುವಾರ ಆಯೋಜಿಸಲಾಗಿತ್ತು.

ಸ್ಥಳದಲ್ಲಿ ಅಳವಡಿಸಿದ ಬ್ಯಾನರ್‌ಗಳಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಸಂತೋಷ್ ಲಾಡ್ ಚಿತ್ರಗಳು ದೊಡ್ಡದಾಗಿದ್ದವು. ಉಳಿದಂತೆ ಶಾಸಕರು, ಮೇಯರ್, ಸದಸ್ಯರ ಚಿತ್ರಗಳು ಇದ್ದವು.

ಶಂಕುಸ್ಥಾಪನೆಗಾಗಿ ಬಂದಿದ್ದ ಸಚಿವ ಲಾಡ್ ಅವರು, ಸ್ಥಳದಲ್ಲಿದ್ದ ಬ್ಯಾನರ್ ನೋಡಿ, 'ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಚಿತ್ರ ಇಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿ, ಕಾರ್ಯಕ್ರಮದಲ್ಲಿ ಭಾಗವಹಿಸದೆ ಹೊರಟರು. ಅವರೊಂದಿಗೆ ಕೊಳಚೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ ಅಬ್ಬಯ್ಯ ಕೂಡ ಹೊರಟರು. ಇದೇ ವೇಳೆ ಸಿಬ್ಬಂದಿಯು ಬ್ಯಾನರ್ ತೆರವು ಮಾಡಿದ ಘಟನೆ ನಡೆಯಿತು.

'ಜೈ ಮಹಾರಾಷ್ಟ್ರ' ಘೋಷಣೆ ವಿರೋಧಿಸಿದ್ದ ಉದ್ಯಮಿ

ಭಾವಚಿತ್ರದ ಫಲಕಕ್ಕೆ ಮಸಿ!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಆನಂದವಾಡಿಯಲ್ಲಿ ಮಾ.6ರಂದು ನಡೆದ ಅಂತರ ರಾಷ್ಟ್ರೀಯ ಜಂಗಿ ನಿಕಾಲಿ ಕುಸ್ತಿ ಪಂದ್ಯದಲ್ಲಿ 'ಜೈ ಮಹಾರಾಷ್ಟ್ರ' ಎಂಬ ಘೋಷಣೆ ವಿರೋಧಿಸಿದ್ದ ಉದ್ಯಮಿ ಶ್ರೀಕಾಂತ ದೇಸಾಯಿ ಭಾವಚಿತ್ರವಿರುವ ಜಾಹೀರಾತು ಫಲಕಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ಕಾರ್ಯಕರ್ತರು ಭಾನುವಾರ ಮಸಿ ಬಳಿದಿದ್ದಾರೆ.

ಆನಂದವಾಡಿಯಲ್ಲಿ ನಡೆದ ಪಂದ್ಯದಲ್ಲಿ ನೇಪಾಳದ ಕುಸ್ತಿಪಟುವೊಬ್ಬರು 'ಜೈ ಮಹಾರಾಷ್ಟ್ರ' ಎಂದು ಘೋಷಣೆ ಕೂಗಿದ್ದರು. ಆಗ, ಶ್ರೀಕಾಂತ ದೇಸಾಯಿ ಮೈಕ್ ಕಸಿದುಕೊಂಡು, 'ವಿವಾದಾತ್ಮಕವಾಗಿ ಘೋಷಣೆ ಕೂಗಬೇಡಿ' ಎಂದಿದ್ದರು. ಇದು ಎಂಇಎಸ್‌ನವರನ್ನು ಕೆರಳಿಸಿತ್ತು. ಹೀಗಾಗಿ ಎಂಇಎಸ್ ಮುಖಂಡ ಶುಭಂ ಶೆಳಕೆ ನೇತೃತ್ವದಲ್ಲಿ ಮಹಾರಾಷ್ಟ್ರದ ಶಿನೋಳಿಗೆ ತೆರಳಿ, ಜಾಹೀರಾತು ಫಲಕಕ್ಕೆ ಮಸಿ ಬಳಿದರು. ಅಲ್ಲದೆ, ಶ್ರೀಕಾಂತ ದೇಸಾಯಿ ಮನೆ ಗೋಡೆ ಮೇಲೆ 'ಜೈ ಮಹಾರಾಷ್ಟ್ರ' ಎಂದು ಬರೆದರು.

'ನೀವು ಮಹಾರಾಷ್ಟ್ರದಲ್ಲಿ ಉದ್ಯಮ ನಡೆಸುತ್ತಿದ್ದೀರಿ. ಹೀಗಿರುವಾಗ, ಕರ್ನಾಟಕದ ಪರವಾಗಿ ಮಾತನಾಡಿದರೆ ಮಹಾರಾಷ್ಟ್ರದಲ್ಲಿ ಇರಲು ಬಿಡುವುದಿಲ್ಲ. ಉದ್ಯಮದ ಕಚೇರಿ ಮೇಲೆ 'ಜೈ ಮಹಾರಾಷ್ಟ್ರ' ಫಲಕ ಹಾಕದಿದ್ದರೆ ಸಹಿಸುವುದಿಲ್ಲ. ನಿಮ್ಮ ಉದ್ಯಮ ಬಂದ್ ಮಾಡಿಸುತ್ತೇವೆ. ಅಷ್ಟಕ್ಕೂ ನಿಮಗೆ ಕರ್ನಾಟಕದ ಮೇಲೆ ಪ್ರೀತಿಯಿದ್ದರೆ, ಅಲ್ಲಿಗೆ ಹೋಗಿ' ಎಂದು ಶೆಳಕೆ ಹೇಳಿದರು.

'ಈ ಹಿಂದೆ ಕರ್ನಾಟಕದಲ್ಲಿರುವ ಉದ್ಯಮಿಗಳನ್ನು ಎಂಇಎಸ್‌ನವರು ಹೆದರಿಸುತ್ತಿದ್ದರು. ಈಗ ಮಹಾರಾಷ್ಟ್ರದಲ್ಲಿ ಉದ್ಯಮ ನಡೆಸುತ್ತಿರುವ ಬೆಳಗಾವಿ ಜಿಲ್ಲೆಯ ಖಾನಾಪುರದ ಉದ್ಯಮಿ ಭಾವಚಿತ್ರಕ್ಕೆ ಮಸಿ ಬಳಿದಿದ್ದಾರೆ' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಸಂಧ್ಯಾ ಪುರೇಚಗೆ ಗೌರವ ಡಾಕ್ಟರೇಟ್

ವಿಜಯಪುರ: ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಇಬ್ಬರು ಮಹಿಳಾ ಸಾಧಕಿಯರಿಗೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮಾರ್ಚ್ 11ರಂದು ನಡೆಯುವ 15ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ತಿಳಿಸಿದರು.

'ಕಲಬುರಗಿಯ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಡಾ.ದಾಕ್ಷಾಯಿಣಿ ಎಸ್. ಅಪ್ಪಾ ಹಾಗೂ ಮುಂಬೈನ 'ಸಪ್ಪೋಜಿರಾಜೆ ಭೋಸಲೆ ಸೆಂಟರ್' ನಡೆಸುತ್ತಿರುವ ಕಾಲೇಜಿನ ಸ್ಥಾಪಕ ಪ್ರಾಂಶುಪಾಲೆ ಡಾ.ಸಂಧ್ಯಾ ಪುರೇಚ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಿದ್ದಾರೆ' ಎಂದು ಭಾನುವಾರ ಮಾಹಿತಿ ನೀಡಿದರು.

'ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಗರಿಷ್ಠ ಅಂಕಗಳನ್ನು ಗಳಿಸಿ ತೇರ್ಗಡೆಯಾದ 77 ವಿದ್ಯಾರ್ಥಿನಿಯರಿಗೆ 80 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. 12,347 ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ ಪದವಿ, 48 ವಿದ್ಯಾರ್ಥಿನಿಯರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗುವುದು' ಎಂದರು.

ಕಲಬುರಗಿ, ಹುಮನಾಬಾದ್‌ನಲ್ಲಿ ಶೋಧ

ಕೆಕೆಆರ್‌ಟಿಸಿ ಸಿಬ್ಬಂದಿ ವಿಚಾರಣೆ; ಪಿಎಫ್‌ಐ ಮುಖಂಡರ ಮೇಲೂ ನಿಗಾ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೆಂಗಳೂರಿನ ದಿ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಶಂಕಿತ ಆರೋಪಿಗಳಿಗಾಗಿ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ತಂಡ ಕಲಬುರಗಿಯಲ್ಲಿ ಬೀಡುಬಿಟ್ಟಿದ್ದು, ಭಾನುವಾರವೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಕೆಕೆಆರ್‌ಟಿಸಿ) ಐವರು ಸಿಬ್ಬಂದಿಯ ವಿಚಾರಣೆ ನಡೆಸಿತು.

ಬಳ್ಳಾರಿ–ಕಲಬುರಗಿ ಮಾರ್ಗದ ಬಸ್ ಚಾಲಕ ಮತ್ತು ನಿರ್ವಾಹಕರ ವಿಚಾರಣೆಯ (ಮಾ.9) ಬಳಿಕ, ಭಾನುವಾರ ಕೆಕೆಆರ್‌ಟಿಸಿಯ ಇಬ್ಬರು ಚಾಲಕರು ಹಾಗೂ ಮೂವರು ನಿರ್ವಾಹಕರನ್ನು ಅಜ್ಞಾತ ಸ್ಥಳಕ್ಕೆ ಎನ್‌ಐಎ ಅಧಿಕಾರಿಗಳು ಕರೆದೊಯ್ದರು. ಹಲವು ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿದರು. ಕಲಬುರಗಿಯಿಂದ ಹೈದರಾಬಾದ್ ತೆರಳಿದ ಬಸ್ ಸಿಬ್ಬಂದಿಯಿಂದ ಮಾಹಿತಿ ಕಲೆಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸ್ಫೋಟದ ಶಂಕಿತ ಆರೋಪಿ ಮಾರ್ಚ್ 1ರ ರಾತ್ರಿ ಬಳ್ಳಾರಿ ಬಸ್ ನಿಲ್ದಾಣದಿಂದ ಕಲಬುರಗಿಗೆ ಬಂದ ಶಂಕೆ ಇದೆ. ಈ ಹಿನ್ನೆಲೆಯಲ್ಲಿ ಮಾರ್ಚ್ 2ರ ಬೆಳಿಗ್ಗೆ 5.30 ಮತ್ತು 6ಕ್ಕೆ ಕಲಬುರಗಿಯಿಂದ ಹೈದರಾಬಾದ್‌ಗೆ ತೆರಳಿದ ಬಸ್ ಚಾಲಕರು ಹಾಗೂ ನಿರ್ವಾಹಕರು ಸೇರಿ ಐವರು ಸಿಬ್ಬಂದಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆಹಾಕಿದ್ದಾರೆ ಎಂದು ತಿಳಿದುಬಂದಿದೆ.

2022ರ ಸೆಪ್ಟೆಂಬರ್ 22ರಂದು ಎನ್‌ಐಎ ತಂಡ ನಗರದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ಪ್ರಮುಖರ ಮನೆಗಳ ಮೇಲೆ ದಾಳಿ ಮಾಡಿ, ಅವರನ್ನು ವಶಕ್ಕೆ ಪಡೆದಿತ್ತು. ಹೀಗಾಗಿ, ಪಿಎಫ್‌ಐ ಮತ್ತು ಎಸ್‌ಡಿಪಿಐ ಜತೆಗೆ ಆರೋಪಿಯು ಸಂಪರ್ಕ ಹೊಂದಿರುವ ಶಂಕೆಯಡಿ ಸಂಘಟನೆಯ ಸದಸ್ಯರ ಮೇಲೆಯೂ ಎನ್‌ಐಎ ನಿಗಾ ಇರಿಸಿದೆ ಎಂದು ತಿಳಿದುಬಂದಿದೆ.

ಹುಮನಾಬಾದ್ ನಿಲ್ದಾಣಕ್ಕೆ ಭೇಟಿ

ಬೀದರ್ ವರದಿ: ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಅಧಿಕಾರಿಗಳು ಜಿಲ್ಲೆಯ ಹುಮನಾಬಾದ್ ಪಟ್ಟಣದ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಸ್ಫೋಟದ ಶಂಕಿತ ವ್ಯಕ್ತಿ ಬಸ್ ನಿಲ್ದಾಣದ ಮೂಲಕ ಹಾದು ಹೋಗಿರುವ ಶಂಕೆಯ ಹಿನ್ನೆಲೆಯಲ್ಲಿ ಅಧಿಕಾರಿಗಳು ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯ ಪರಿಶೀಲಿಸಿ ಹಾರ್ಡ್ ಡಿಸ್ಕ್ ಜೊತೆಗೆ ತೆಗೆದುಕೊಂಡು ಹೋಗಿದ್ದಾರೆ. ಮೂರು ದಿನಗಳಿಂದ ಹೈದರಾಬಾದ್-ಪುಣೆ ರಾಷ್ಟ್ರೀಯ ಹೆದ್ದಾರಿಯ ಕೆಲ ವಿಡಿಯೊಗಳನ್ನು ಪರಿಶೀಲಿಸಿದ್ದಾರೆ ಎಂದು ಖಚಿತ ಮೂಲಗಳು 'ಪ್ರಜಾವಾಣಿ'ಗೆ ಭಾನುವಾರ ತಿಳಿಸಿವೆ.

ಮಸೀದಿ, ಮದರಸಾಗಳಲ್ಲಿ ಪರಿಶೀಲಿಸಿ ವಿಎಚ್‌ಪಿ ಮುಖಂಡರ ಆಗ್ರಹ

ಮಂಗಳೂರು: 'ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹಾಗೂ ಪೊಲೀಸ್ ಅಧಿಕಾರಿಗಳು ರಾಜ್ಯದ ಮದರಸಾ ಹಾಗೂ ಮಸೀದಿಗಳ ಒಳಗೆ ಹೋಗಿ ಪರಿಶೀಲನೆ ನಡೆಸಿದರೆ ಬೆಂಗಳೂರಿನ ರಾಮೇಶ್ವರಂ ಕೆಫೆ ಹೋಟೆಲ್‌ನಲ್ಲಿ ಈಚೆಗೆ ನಡೆದ ಬಾಂಬ್ ಸ್ಫೋಟದ ಆರೋಪಿಯನ್ನು ಪತ್ತೆ ಹಚ್ಚಬಹುದು' ಎಂದು ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ದಕ್ಷಿಣ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಭಾನುವಾರ ಇಲ್ಲಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮದರಸಾಗಳು ಭಯೋತ್ಪಾದಕರ ತಾಣವಾಗುತ್ತಿವೆ. ಭಯೋತ್ಪಾದರಿಗೆ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಅಲ್ಲಿನ ಮೌಲ್ವಿಗಳು ಮಾಡುತ್ತಿದ್ದಾರೆ' ಎಂದು ಆರೋಪಿದರು.

'ಆರೋಪಿ ನಮಾಜ್ ಮಾಡಿ ಬಟ್ಟೆ ಬದಲಾಯಿಸಿದ್ದಾನೆ. ಬಳ್ಳಾರಿಯಲ್ಲಿ ಓಡಾಡಿದ್ದಾನೆ. ಭಟ್ಕಳಕ್ಕೆ ತೆರಳಿದ್ದಾನೆ ಎಂಬ ಮಾಹಿತಿಯನ್ನು ಎನ್‌ಐಎ ಅಧಿಕಾರಿಗಳು ಕೊಟ್ಟಿದ್ದಾರೆ. ಆದರೂ ಆರೋಪಿಯನ್ನು ಪತ್ತೆ ಹಚ್ಚಲು ಆಗುತ್ತಿಲ್ಲ. ಪೊಲೀಸ್ ಅಧಿಕಾರಿಗಳು ಹಾಗೂ ಎನ್‌ಐಎ ಅಧಿಕಾರಿಗಳಿಗೆ ನೆರವಾಗಲು ನಾವು ಸಿದ್ಧ. ಎನ್‌ಐಎ ಬಿಡುಗಡೆ ಮಾಡಿರುವ ಆರೋಪಿಯ ಫೋಟೊವನ್ನು ವಿಎಚ್‌ಪಿಯ ಟ್ವಿಟರ್ ಫೇಸ್‌ಬುಕ್ ಖಾತೆಗಳಲ್ಲಿ ಹಂಚಿಕೊಳ್ಳುತ್ತಿದ್ದೇವೆ. ಈ ಚಹರೆಯ ವ್ಯಕ್ತಿ ಕಂಡು ಬಂದರೆ, ಪೊಲೀಸರಿಗೆ ಅಥವಾ ಎನ್‌ಐಎಗೆ ಮಾಹಿತಿ ತಿಳಿಸುವಂತೆ ಸೂಚಿಸಿದ್ದೇವೆ' ಎಂದು ಅವರು ತಿಳಿಸಿದರು.

'ವಿರೂಪಾಕ್ಷ' ಹೆಸರಿನ ಶಾಸನ ಪತ್ತೆ

ಹೊಸಪೇಟೆ (ವಿಜಯನಗರ): ವಿಜಯನಗರ ಅರಸರು ವಿರೂಪಾಕ್ಷನ ಹೆಸರಲ್ಲಿ ರಾಜ್ಯಭಾರ ಮಾಡುತ್ತಿದ್ದರು ಎಂದು ಹೇಳಲಾಗುತ್ತಿದ್ದರೂ, 'ವಿರೂಪಾಕ್ಷ' ಎಂದು ಶಾಸನಗಳಲ್ಲಿ ಬರೆಸಿದ್ದು ಕಡಿಮೆ. ಹಂಪಿಗೆ ಸಮೀಪದ ನಾಗೇನಹಳ್ಳಿಯಲ್ಲಿ 'ವಿರೂಪಾಕ್ಷದೇವಪುರ' ಎಂಬ ಉಲ್ಲೇಖದ ಶಾಸನ ದೊರೆತಿದ್ದು ಈ ಕೊರತೆ ಸ್ವಲ್ಪಮಟ್ಟಿಗೆ ನೀಗಿಸಿದೆ.

'ನಾಗೇನಹಳ್ಳಿಯ ಧರ್ಮರಗುಡ್ಡದ ಬಳಿಯ ಕರಿಯಮ್ಮ ದೇವಾಲಯದ ಕಂಬದಲ್ಲಿನ ಶಾಸನ ಇದುವರೆಗೆ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರನ್ನು ಕೆತ್ತಲಾಗಿದೆ. 'ಶ್ರೀ ವಿ ರೂ ಪಾ ಕ್ಷ ದೇವರ ಪುರ' ಎಂಬ ಮೂರು ಸಾಲುಗಳು ಬಿಟ್ಟರೆ ಬೇರೆ ಏನೂ ಉಲ್ಲೇಖ ವಾಗಿಲ್ಲ. ಆದರೆ ಈ ಶಾಸನದಿಂದ ಆ ಭಾಗವು 'ಶ್ರೀ ವಿರೂಪಾಕ್ಷ ದೇವರಪುರ' ಎಂದು ಕರೆಸಿಕೊಂಡಿತ್ತು ಎಂಬುದು ತಿಳಿದುಬರುತ್ತದೆ' ಎಂದು ವಿಜಯನಗರ ತಿರುಗಾಟ ತಂಡದ ಸಂಶೋಧಕ ಪ್ರೊ. ಗೋವಿಂದ ಭಾನುವಾರ 'ಪ್ರಜಾವಾಣಿ'ಗೆ ತಿಳಿಸಿದರು.

ನಿಧನ ವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ತೋರಪ್ಪ

ಧಾರವಾಡ: ತಾಲ್ಲೂಕಿನ ಗರಗ ಗ್ರಾಮದ ನಿವಾಸಿ ಸ್ವಾತಂತ್ರ್ಯ ಹೋರಾಟಗಾರ ತೋರಪ್ಪ ರಾಜಪ್ಪ ತೋರೋಜಿ (100) ಭಾನುವಾರ ನಿಧನರಾದರು.

ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ.

'ತೋರಪ್ಪ ಅವರು 19ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ್ದರು. ಗರಗವನ್ನು ಕೇಂದ್ರವಾಗಿಟ್ಟುಕೊಂಡು ಈ ಭಾಗದಲ್ಲಿ ಹೋರಾಟದ ಕಿಚ್ಚು ಹಚ್ಚಿದವರು. ಗ್ರಾಮದ ಚವಡಿ, ಮುಶಾಪುರ ಬಂಗ್ಲೆ (ಪೊಲೀಸ್ ಚೌಕಿ) ಸುಟ್ಟು ಹಾಕಿ ಹೋರಾಟ ಮಾಡಿದ್ದರು' ಎಂದು ಗರಗ ಗ್ರಾಮಸ್ಥರು 'ಪ್ರಜಾವಾಣಿ'ಗೆ ತಿಳಿಸಿದರು.

ಗರಗ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಮಾಜಿ ಶಾಸಕ ಶಿವಶಂಕರಪ್ಪ ನಿಧನ

ತರೀಕೆರೆ (ಚಿಕ್ಕಮಗಳೂರು ಜಿಲ್ಲೆ): ಮಾಜಿ ಶಾಸಕ ಟಿ.ಎಚ್. ಶಿವಶಂಕರಪ್ಪ (62) ಭಾನುವಾರ ಬೆಳಿಗ್ಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಸೋಮವಾರ ಬೆಳಿಗ್ಗೆ 7.30ರಿಂದ ಮಧ್ಯಾಹ್ನ 1.30ರ ವರೆಗೆ ತರೀಕೆರೆ ಪಟ್ಟಣದ ಬಯಲು ರಂಗ ಮಂದಿರದಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ನಗರದ ರೇವಣ ಸಿದ್ದೇಶ್ವರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖರೀದಿ ವಿಳಂಬ: ರೈತರು ಕಂಗಾಲು

ಒಂದನೇ ಪುಟದಿಂದ...

2024ರ ಜ.1ರಿಂದ ರಾಜ್ಯದಾದ್ಯಂತ ಭತ್ತ, ರಾಗಿ ಮತ್ತು ಬಿಳಿ ಜೋಳದ ಖರೀದಿ ಪ್ರಕ್ರಿಯೆ ಆರಂಭವಾಗಬೇಕಿತ್ತು. ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಮಾರ್ಗಸೂಚಿಗಳ ಪ್ರಕಾರ, ಎಂಎಸ್‌ಪಿ ಯೋಜನೆಯಡಿ ಆಹಾರ ಧಾನ್ಯಗಳ ಖರೀದಿ ಪ್ರಕ್ರಿಯೆ ಮಾರ್ಚ್ 31ಕ್ಕೆ ಮುಕ್ತಾಯವಾಗಲಿದೆ. ಗಡುವು ಮುಗಿಯಲು 20 ದಿನಗಳಷ್ಟೇ ಬಾಕಿ ಇದೆ.

ರಾಜ್ಯದಲ್ಲಿ ಎಂಎಸ್‌ಪಿ ಯೋಜನೆಯಡಿ ಆಹಾರ ಧಾನ್ಯ ಖರೀದಿಸುವ ಜವಾಬ್ದಾರಿಯನ್ನು 3 ಸಂಸ್ಥೆಗಳಿಗೆ ನೀಡಲಾಗಿದೆ. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮಕ್ಕೆ 16 ಜಿಲ್ಲೆ, ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ 9 ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ 6 ಜಿಲ್ಲೆ ಹಂಚಿಕೆ ಮಾಡಲಾಗಿದೆ.

ನೋಂದಣಿಗೆ ಸೀಮಿತ: ಮೂರೂ ಸಂಸ್ಥೆಗಳು ತಮಗೆ ಹಂಚಿಕೆಯಾದ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಡಿ.1 ರಿಂದಲೇ ಖರೀದಿ ಕೇಂದ್ರಗಳನ್ನು ತೆರೆದಿವೆ. 'ಫ್ರೂಟ್ಸ್' ತಂತ್ರಾಂಶದಲ್ಲಿನ ರೈತರ ದತ್ತಾಂಶದ ಆಧಾರದಲ್ಲಿ ಭತ್ತ, ರಾಗಿ ಮತ್ತು ಬಿಳಿ ಜೋಳ ಖರೀದಿಗೆ ನೋಂದಣಿಯನ್ನೂ ಮಾಡಿಕೊಳ್ಳಲಾಗಿದೆ. ಆದರೆ, ಜ. 1ರಿಂದ ಈವರೆಗೆ ಖರೀದಿಗೆ ಚಾಲನೆ ನೀಡಿಲ್ಲ.

'ಎಂಎಸ್‌ಪಿ ಯೋಜನೆಯಡಿಯಲ್ಲೇ ಆಹಾರ ಧಾನ್ಯ ಮಾರಾಟ ಮಾಡಬೇಕೆಂದು ನೋಂದಣಿ ಮಾಡಿಸಿಕೊಂಡಿರುವ ರೈತರು ಖರೀದಿ ಆರಂಭವಾಗದೇ ಇರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪದೇ ಪದೇ ಖರೀದಿ ಕೇಂದ್ರಗಳಿಗೆ ಹೋದರೂ ಮಾಹಿತಿ ಸಿಗುತ್ತಿಲ್ಲ. ಮಾರುಕಟ್ಟೆಯಲ್ಲಿ ಒಳ್ಳೆಯ ದರ ಇದ್ದರೂ ನಾವು ಮಾರಾಟ ಮಾಡಿಲ್ಲ. ಮಾರ್ಚ್ 31ಕ್ಕೆ ಗಡುವು ಮುಗಿಯುವುದರೊಳಗೆ ಖರೀದಿಯೇ ಆಗದಿದ್ದರೆ ನಮ್ಮ ಗತಿ ಏನು' ಎಂದು ಮಾರಾಟಕ್ಕೆ ನೋಂದಣಿ ಮಾಡಿಸಿಕೊಂಡಿರುವ ಹಲವು ರೈತರು ಆತಂಕದಿಂದ ಪ್ರಶ್ನಿಸುತ್ತಾರೆ.

'ಹೊಸ ತಂತ್ರಾಂಶದಿಂದ ವಿಳಂಬ': ಈ ಕುರಿತು 'ಪ್ರಜಾವಾಣಿ' ಗೆ ಪ್ರತಿಕ್ರಿಯಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಆಯುಕ್ತೆ ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ, 'ಈ ಬಾರಿ ಎಂಎಸ್‌ಪಿ ಯೋಜನೆಯಡಿ ಖರೀದಿಸುವ ಆಹಾರ ಧಾನ್ಯಗಳನ್ನು ಸಾಗಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಕೆ ಕಡ್ಡಾಯ ಮಾಡಲಾಗಿದೆ. ವಾಹನಗಳ ಸಂಚಾರದ ಮೇಲೆ ನಿಗಾ ಇರಿಸುವ ಹೊಸ ತಂತ್ರಾಂಶವನ್ನು ರೂಪಿಸುತ್ತಿದ್ದು, ಅದರ ಪ್ರಾಯೋಗಿಕ ಅನುಷ್ಠಾನದಿಂದ ಖರೀದಿ ಪ್ರಕ್ರಿಯೆ ವಿಳಂಬವಾಗಿದೆ' ಎಂದರು.

'ಜಿಪಿಎಸ್ ಆಧಾರಿತ ನಿಗಾ ವ್ಯವಸ್ಥೆಯ ಪ್ರಾಯೋಗಿಕ ಪರೀಕ್ಷೆ ಮುಗಿದಿದೆ. ಈ ವಾರದಿಂದಲೇ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ರೈತರಿಗೆ ತೊಂದರೆ ಆಗದಂತೆ ಪ್ರಕ್ರಿಯೆ ಪೂರ್ಣಗೊಳಿಸಲು ಗಡುವು ವಿಸ್ತರಿಸುವಂತೆ ಕೇಂದ್ರಕ್ಕೆ ಮನವಿ ಮಾಡಲಾಗುವುದು' ಎಂದು ತಿಳಿಸಿದರು.

ಮೂಲ್ಕಿ: ರಾಷ್ಟ್ರೀಯ ಬಿಲ್ಲವರ ಮಹಾಮಂಡಲದ ಬೆಳ್ಳಿಹಬ್ಬ ಸಂಭ್ರಮದಲ್ಲಿ ಹರಿಪ್ರಸಾದ್ ಸಲಹೆ

'ಸ್ವಹಿತ ಬಿಡಿ; ಸಂಘಟನೆಯಲ್ಲಿ ತೊಡಗಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಮೂಲ್ಕಿ (ದಕ್ಷಿಣ ಕನ್ನಡ): 'ಜಾತಿ ಸಂಘಟನೆ ನಾಯಕರು ಕೂಡ ಸ್ವಹಿತ ಬಿಟ್ಟು ಸಮಾಜದ ಸಂಘಟನೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಬೇಕು. ರಾಜಕೀಯ ಶಕ್ತಿ ಪಡೆಯಲು ಸಂಘಟನೆ ಮುಖ್ಯ. ಬಿಲ್ಲವರಿಗೆ ನಾರಾಯಣ ಗುರುಗಳ ತತ್ವವೇ ಮೂಲ ಆಗಬೇಕು' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀ ನಾರಾಯಣಗುರು ವಿದ್ಯಾಸಂಸ್ಥೆ ಮೈದಾನದಲ್ಲಿ ಮೂಲ್ಕಿ ರಾಷ್ಟ್ರೀಯ ಬಿಲ್ಲವರ ಮಹಾಮಂಡಲದ ಬೆಳ್ಳಿ ಹಬ್ಬ ಸಂಭ್ರಮ ಉದ್ಘಾಟಿಸಿ ಮಾತನಾಡಿದ ಅವರು 'ಪಕ್ಷಾತೀತವಾಗಿ ಸಂಘಟನೆ ಬೆಳೆಸಿದರೆ ಉತ್ತಮ ಭವಿಷ್ಯವಿದೆ. ಮಂಗಳೂರು ವಿಶ್ವವಿದ್ಯಾಲಯದ ನಾರಾಯಣಗುರು ಪೀಠದಲ್ಲಿ ಚಟುವಟಿಕೆಗಳನ್ನು ಹೆಚ್ಚಿಸುವಂತೆ ನೋಡಿಕೊಳ್ಳಲಾಗುವುದು' ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾಮಂಡಲದ ಅಧ್ಯಕ್ಷ ರಾಜಶೇಖರ್ ಕೋಟ್ಯಾನ್, 'ಸಮಾಜದ ನಾಯಕರು, ಸ್ವಾಮೀಜಿಗಳು, ಹಿರಿಯರು ಮನಸ್ತಾಪ ಬಿಟ್ಟು ಒಂದಾಗಿ ಆರ್ಥಿಕ ಶಕ್ತಿ ನೀಡಿ ಬದ್ಧತೆಯಿಂದ ಕೆಲಸ ಮಾಡಬೇಕು' ಎಂದರು.

ತೆಂಗಿನಕಾಯಿ ಪ್ರಸಾದಕ್ಕೆ ಕಾದಿದ್ದೆ-ಪೂಜಾರಿ: ಒಂದು ಕಾಲದಲ್ಲಿ ದೇವಸ್ಥಾನದ ಹೊರಗೆ ತೆಂಗಿನಕಾಯಿ ಪ್ರಸಾದಕ್ಕಾಗಿ ಕಾದು ಕುಳಿತವ ನಾನು. ಕಾಲ ಬದಲಾದಂತೆ ಮುಜರಾಯಿ ಖಾತೆ ಸಚಿವನಾದೆ. ದೇವಸ್ಥಾನಗಳಲ್ಲಿ ಸನ್ಮಾನ ಸಿಕ್ಕಿತು ಎಂದು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ವಿಖ್ಯಾತನಂದ ಸ್ವಾಮೀಜಿ, ಸತ್ಯಾನಂದ-ತೀರ್ಥ ಸ್ವಾಮೀಜಿ, ಅರುಣಾನಂದ ಸ್ವಾಮೀಜಿ ಹಾಗೂ ಮಹಾಬಲೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕರಾದ ಉಮಾನಾಥ ಕೋಟ್ಯಾನ್, ವಿ.ಸುನಿಲ್‌ಕುಮಾರ್, ಮುಖಂಡ ವಿನಯಕುಮಾರ್ ಸೊರಕೆ ಮಾತನಾಡಿದರು.

ಕಲಾವಿದರಾದ ಸುಮನ್‌ತಲ್ವಾರ್, ಜಯಮಾಲ, ನವೀನ್ ಡಿ.ಪಡೀಲ್, ಯುವವಾಹಿನಿ ಸಂಘಟನೆ, ಸಾಧಕರಾದ ರಾಜ್‌ಕುಮಾರ್ ಬಹರೇನ್ ಹಾಗೂ ರಾಮಣ್ಣ ಪೂಜಾರಿ ಅವರನ್ನು ಸನ್ಮಾನಿಸಲಾಯಿತು. ಸತ್ಯಜಿತ್ ಸುರತ್ಕಲ್, ಸೂರ್ಯಕಾಂತ್ ಸುವರ್ಣ, ಬಾಳ ಗಂಗಾಧರ ಪೂಜಾರಿ, ಪ್ರಭಾಕರ ಬಂಗೇರ, ಕಟಪಾಡಿ ಬಿ.ಎಲ್.ಶಂಕರ್, ಗೆಜ್ಜೆಗಿರಿ ಪಿತಾಂಬರ ಹೆರಾಜೆ, ಚಿತ್ತರಂಜನ್ ಕಂಕನಾಡಿ, ನವೀನ್‌ಚಂದ್ರ ಸುವರ್ಣ, ಎನ್.ಟಿ.ಪೂಜಾರಿ, ಸತೀಶ್ ಪೂಜಾರಿ, ಎಸ್.ಕೆ.ಪೂಜಾರಿ, ಗಣೇಶ್ ಪೂಜಾರಿ, ನವೀನ್ ಅಮೀನ್, ಪ್ರಶಾಂತ್ ಪೂಜಾರಿ ಇದ್ದರು.



ಮೂಲ್ಕಿಯಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಬಿಲ್ಲವರ ಮಹಾಮಂಡಲದ ಬೆಳ್ಳಿಹಬ್ಬ ಸಂಭ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಸ್ವಾಮೀಜಿಗಳು, ಗಣ್ಯರು ಪಾಲ್ಗೊಂಡಿದ್ದರು

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

31) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ ....

ಎ) ಸಾರ್ವಜನಿಕ ಹಣಕಾಸು   ಬಿ) ಸಾರ್ವಜನಿಕ ವೆಚ್ಚಗಳು
ಸಿ) ಯೋಜನಾ ವೆಚ್ಚಗಳು   ಡಿ) ಆಯವ್ಯಯ

ಉತ್ತರ :– (ಡಿ) ಆಯವ್ಯಯ

2) ನೀತಿ ಆಯೋಗದ ಎಲ್ಲಾ ಚಟುವಟಿಕೆಗಳನ್ನು ನಾಲ್ಕು ಮುಖ್ಯ ವಿಭಾಗಗಳಲ್ಲಿ ನೋಡಬಹುದು. ಅವುಗಳನ್ನು ಗಮನಿಸಿ.

1) ನೀತಿ ಮತ್ತು ಕಾರ್ಯಕ್ರಮ ಚೌಕಟ್ಟು
2) ಸಹಕಾರಿ ಒಕ್ಕೂಟ ವ್ಯವಸ್ಥೆ
3) ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
4) ಚಿಂತಕರ ಕೂಟ ಮತ್ತು ಜ್ಞಾನ ಮತ್ತು ನಾವಿನ್ಯ ಸಮೂಹ

ಇವುಗಳಲ್ಲಿ ಯಾವುದಾದರೂ ತಪ್ಪಾಗಿದೆಯೇ ಗುರುತಿಸಿ.?

ಉತ್ತರ ಸಂಕೇತಗಳು

ಎ) 1 ಮಾತ್ರ ತಪ್ಪಾಗಿದೆ   ಬಿ) 2 ಮತ್ತು 3 ಮಾತ್ರ ತಪ್ಪಾಗಿದೆ
ಸಿ) 3 ಮತ್ತು 4 ಮಾತ್ರ ತಪ್ಪಾಗಿದೆ
ಡಿ) ಯಾವೂದೂ ತಪ್ಪಾಗಿಲ್ಲ.

ಉತ್ತರ:– (ಡಿ) ಯಾವೂದೂ ತಪ್ಪಾಗಿಲ್ಲ.

3) ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರವು ಮರಗಳನ್ನು ಕಡಿಯಲು ಅನುಮತಿ ನೀಡಿತ್ತು. ಇದರಿಂದ ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಜನರು ಮರಗಳನ್ನು ಅಪ್ಪಿ ಹಿಡಿದು ಕಡಿಯದಂತೆ ತಡೆದರು. ಈ ಚಳವಳಿಯು 1973ರಲ್ಲಿ ಸುಂದರ್ ಲಾಲ್ ಬಹುಗುಣ ಹಾಗೂ.................. ಅವರ ನೇತೃತ್ವದಲ್ಲಿ ನಡೆಯಿತು

ಎ) ಚಂಡಿಪ್ರಸಾದ್ ಭಟ್   ಬಿ) ಇಳಾ ಭಟ್
ಸಿ) ರಾಮಚಂದ್ರ ಗುಹಾ   ಡಿ) ಈಶಾ ಫೌಂಡೇಶನ್

ಉತ್ತರ:– (ಎ) ಚಂಡಿಪ್ರಸಾದ್ ಭಟ್

4) ಬ್ಯಾಂಕ್‌ಗಳ ಬ್ಯಾಂಕು. ....

ಎ) ಮೈಸೂರು ಬ್ಯಾಂಕ್   ಬಿ) ಭೂ ಬ್ಯಾಂಕು
ಸಿ) ಸಹಕಾರಿ ಬ್ಯಾಂಕು   ಡಿ) ರಿಸರ್ವ ಬ್ಯಾಂಕ್

ಉತ್ತರ:– (ಡಿ) ರಿಸರ್ವ್ ಬ್ಯಾಂಕ್

5) ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ ; ಉತ್ತರ ಪ್ರದೇಶದಲ್ಲಿ ಆಂಡೀಸ್ ; : ಕರ್ನಾಟಕದಲ್ಲಿ ಕಾಫಿ ತುಂತುರು : ಕೇರಳದಲ್ಲಿ ....

ಎ) ಚಹಾ ತೋಟ   ಬಿ) ಮಾವಿನ ಹೊಯ್ಲು
ಸಿ) ಉಪ್ಪಿನ ಹೊಯ್ಲು   ಡಿ) ಅಕ್ಕಿಯ ಕೊದಲು

ಉತ್ತರ:–(ಬಿ) ಕೇರಳದಲ್ಲಿ 'ಮಾವಿನ ಹೊಯ್ಲು'

6) 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ'(Planned Economy for India) **ಎಂಬ ಪುಸ್ತಕ ಯಾರಿಗೆ ಸಂಬಂಧಿಸಿದೆ.?**

ಎ) ಮಹಾತ್ಮ ಗಾಂಧಿ   ಬಿ) ಜವಾಹರ ಲಾಲ್ ನೆಹರು
ಸಿ) ಸರ್ ಎಂ ವಿಶ್ವೇಶ್ವರಯ್ಯ   ಡಿ) ಸರೋಜಿನಿ ನಾಯ್ಡು

ಉತ್ತರ:– (ಸಿ) ಸರ್ ಎಂ ವಿಶ್ವೇಶ್ವರಯ್ಯ

5) 'ಬಿಳಿ ಕ್ರಾಂತಿಯ ಪಿತಾಮಹ' ಎಂದು ಖ್ಯಾತರಾಗಿರುವವರು....

ಎ) ಧೀರೂಬಾಯಿ ಅಂಬಾನಿ   ಬಿ) ವರ್ಗೀಸ್ ಕುರಿಯನ್
ಸಿ) ಅಜೀಂ ಪ್ರೇಮ್‌ಜಿ   ಡಿ) ಕಿರಣ್ ಮಂಜುಂದಾರ್ ಷಾ.

ಉತ್ತರ :– (ಬಿ) ವರ್ಗೀಸ್ ಕುರಿಯನ್

6) ವಿಶ್ವವ್ಯಾಪಾರ ಸಂಘಟನೆ W.T.Oಯ ಕೇಂದ್ರ ಕಚೇರಿ ಇರುವುದು.............

ಎ) ಜಿನೇವಾ   ಬಿ) ಪ್ಯಾರಿಸ್
ಸಿ) ರೋಮ್   ಡಿ) ನವದೆಹಲಿ

ಉತ್ತರ: (ಎ) ಜಿನೇವಾ

32) ಇವರು ಯಾರು? ಯಾಕೆ ಪ್ರಸಿದ್ದರು?

ಉತ್ತರ:– ಸ್ವಾಮಿ ವಿವೇಕಾನಂದ,

ಇವರು ಚಿಕಾಗೋ ಸರ್ವಧರ್ಮ ಸಮ್ಮೇಲನದಲ್ಲಿ ಭಾರತದ ಧರ್ಮ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದರು. ರಾಮಕೃಷ್ಣಾಶ್ರಮವನ್ನು ಸ್ಥಾಪಿಸಿದರು

33) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು?

ಉತ್ತರ;– 1857ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡು ಬಂತು. ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.

34) ಯಾವುದನ್ನು ವ್ಯವಸಾಯ ಅಥವಾ ಕೃಷಿ ಎನ್ನುವರು? ಅದು ಏನನ್ನೆಲ್ಲಾ ಒಳಗೊಂಡಿದೆ?

ಉತ್ತರ:– ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು 'ವ್ಯವಸಾಯ ಅಥವಾ ಕೃಷಿ' ಎನ್ನುವರು. ಇಂದು ಕೃಷಿಯು ಪಶುಪಾಲನೆ, ಕೋಳಿ ಸಾಕಣೆ ಮತ್ತು ಜೇನು ಸಾಕಣೆಗಳನ್ನೂ ಒಳಗೊಂಡಿದೆ.

35) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಮುಖ್ಯ ಅಕ್ಷಾಂಶ ಯಾವುದು?

ಉತ್ತರ : $23\ \frac{1}{2}^0$ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುತ್ತದೆ.

36) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.

ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

37) ಯಾವ ಅವಧಿಯನ್ನು ಮಂದಗಾಮಿ ಯುಗ ಎನ್ನುತ್ತಾರೆ?

ಉತ್ತರ:– ಸಾಂಪ್ರಾದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಯುಗ' ಎನ್ನುತ್ತಾರೆ.

38) ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?

ಉತ್ತರ.:– ಉತ್ತರದ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವುದರಿಂದ ಈ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ.

39) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ

ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CET BIOLOGY

10. Which of the given statement is correct in the context of observing DNA separated by agarose gel electrophoresis?

a) DNA can be seen in visible light
b) DNA can be seen without staining in visible light
c) Ethidium bromide stained DNA can be seen in visible light
d) Ethidium bromide stained DNA can be seen under exposure to UV light

Ans:- d

11. The hybridisation between naturally incompatible plants like potato and tomato can be achieved through

a) mutation breeding
b) artificial pollination
c) somatic hybridisation
d) conventional breeding

Ans: (c)

Expln:- Mutation breeding refers to the process by which the seed is exposed to radiation or chemicals in order to develop an improved mutant variant. It can help to improve individual plants' yield and resistance properties.

Conventional breeding is the development of new varieties (cultivars) of plants by using natural processes and traditional methods such as selection and breeding of high yielding varieties. Since potato and tomato belong to two different species and thus cannot be hybridized by conventional breeding methods.

A pollination technique in which the desired pollen grains are used for pollination by artificial means is known as artificial pollination. Since potato and tomato are incompatible, even artificial pollination cannot be used as the pollen grains will not germinate to form the pollen tube on incompatible species.

The fusion of the protoplasm of two different plant cells in order to produce a hybrid variety is called somatic hybridization. The protoplasts of two plants can be made to fuse with a chemical called Polyethylene glycol (PEG). Thus, somatic hybridization would be the best suitable method in developing the hybridized variety between potato and tomato.

12. Making two varieties of a cattle breed like Red Dane which have no common ancestors on either sides of their pedigree up to 4-6 generations is an example for

(a) Inbreeding   (b) Cross breeding
(c) Out crossing   (d) Inter-specific hybridization

Ans:(c):

Expl:- out crossing is the phenomenon of mating of two animals within the same breed having no common ancestors on either side of their pedigree upto 4-6 generations, while inbreeding is the crossing of closely related animals within the same breed for 4-6 generations, cross breeding is the breeding of unrelated animals either of the same breeds, but not having common ancestor for 4-6 generations. And interspecific hybridization is the mating of animals of two different species. -

13. Identify the hormones, *A*, *B* and *C* that are labeled in the given flow chart



(a) A-GnRH, B-ICSH, C-FSH
(b) A-GH, B-FSH, C-LH
(C) A-GnRH, B-PRL, C-ICSH
(d) A-GnRH, B-FSH, C-LH

Ans:(d)

Expl:- Hypothalamus is located in the basal part of diencephalon. It controls the anterior and posterior lobes of pituitary gland to secrete different hormones. For gonadotropin releasing hormone hypothalamus stimulates the anterior lobe of pituitary to secrete gonadotropins like Follicle Stimulating Hormone (FSH) and luteinizing Hormone (LH) or InterstitialCell stimulating Hormone (ICSH) by the ovary and testes respectively.

14. **Statement (A)** Photorespiration decreases photosynthetic output.

Statement (B) In photorespiratory pathway, neither ATP nor NADPH is produced.

(a) Both the statements 'A' and 'B' are correct
(b) Both the statements 'A' and 'B' are wrong
(c) Statement 'A' is correct and statement 'B' is wrong
(d) Statement 'B' is correct and statement 'A' is wrong

Ans:a

Expl:- Photorespiration is a light dependent cyclic phenomenon of Oxygenation of RuBP and release of CO_2 by the photosynthetic organs of plant.Photorespiration is considered as a Wasteful process because there is no synthesis of sugar and ATP or NADPH also the CO_2 is released with the utilisation of ATP.

It decreases the overall photosynthetic output in C_3 palnts. C_4 plants lacks the process of photorespiration thus, the productivity and yields in these plants are better than those in C_3 and other plants (Contd........)

ಅಭ್ಯಾಸದಿಂದಲೇ ಭಾಷಣಕಲೆ ಸಿದ್ಧಿ

ಪ.ನಾ.ಹಳ್ಳಿ.ಹರೀಶ್ ಕುಮಾರ್

ಮೊನ್ನೆ ನಮ್ಮ ಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮ ಯೋಜನಾಬದ್ಧವಾಗಿ ಸಾಗಿತ್ತು. ಮಧ್ಯದಲ್ಲಿ ಕಿರಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿ ಹೊರ ಹೋಗುತ್ತಿರುವ ಹಿರಿಯ ಸಹಪಾಠಿಗಳ ಕುರಿತು ಮಾತನಾಡಬೇಕಾದ ಸಂದರ್ಭದಲ್ಲಿ ಹೆದರಿಕೆಯಿಂದ ವೇದಿಕೆಯಿಂದ ಹಿಂತಿರುಗಿದ್ದನ್ನು ಕಂಡು ಬೇಸರವಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಹೀಗೇಕೆ ಮಾಡಿದಿರೆಂದು ಅವರನ್ನು ಪ್ರಶ್ನಿಸಿದಾಗ ಅವರಿಂದ ಬಂದ ಉತ್ತರ 'ಸಾರ್, ನಾನು ಸಾಕಷ್ಟು ಮಾತನಾಡಬೇಕೆಂದಿದ್ದೆ. ಆದರೆ ವೇದಿಕೆಯ ಮುಂದೆ ಕುಳಿತಿದ್ದವರನ್ನು ಕಂಡು ಇದ್ದಕ್ಕಿದ್ದಂತೆಯೇ ಮಾತುಗಳು ಮರೆತು ಹೋದವು. ಭಯ ಶುರುವಾಯ್ತು. ಏನು ಹೇಳಬೇಕೆಂಬುದೇ ತಿಳಿಯದಾಯ್ತು.'.

ನಿಜ. ಪ್ರಾರಂಭದಲ್ಲಿ ವೇದಿಕೆಯನ್ನೇರಿ ಮಾತನಾಡಬೇಕೆನ್ನುವವರಿಗೆ ಇಂಥ ಅನುಭವಗಳು ಆಗುವುದು ಸಹಜ. ಅದಕ್ಕೆ ಕಾರಣ ಹಲವು. ಮಕ್ಕಳಲ್ಲಿ ಭಾಷಣ ಕಲೆಯನ್ನು ರೂಢಿಸಬೇಕಾದದ್ದು ಶಾಲಾ ಶಿಕ್ಷಕರು ಮತ್ತು ಪಾಲಕರ ಆದ್ಯ ಕರ್ತವ್ಯ. ಮಕ್ಕಳು ಉತ್ತಮ ಭಾಷಣಕಾರರಾಗಬೇಕೆಂಬ ಅಭಿಲಾಷೆ ನಿಮ್ಮಲ್ಲಿದ್ದರೆ ಮೊದಲಿಗೆ ಅವರಿಗೆ ಭಾಷಣ ಕಲೆಯ ಮಹತ್ವದ ಬಗ್ಗೆ ತಿಳಿಸಿಕೊಡಿ.

ಹೇಗಿರಬೇಕು ಭಾಷಣ?: ಭಾಷಣವೆಂಬುದು ಒಂದು ಕಲೆ. ಬರೀ ಮಾತಿನ ಸುರಿಮಳೆಯಲ್ಲ. ಉತ್ತಮ ಭಾಷಣಕಾರರಾಗಲು ನಿರಂತರ ಪ್ರಯತ್ನ ಮತ್ತು ಸಾಧನೆ ಅವಶ್ಯಕ. ಮಾತುಗಳು ಭಾವನೆಗಳೊಂದಿಗೆ ಕೊಂಡಿಯಾಗಿ ಬೆಸೆಯುವಂತಿರಬೇಕು. ಒಂದೊಳ್ಳೆಯ ಭಾಷಣ ಕವಿತೆಯಿದ್ದಂತೆ. ಉಪಯೋಗಿಸುವ ಪದಗಳು ಅರ್ಥವಾಗುವಂತೆಯೂ, ಮನಮುಟ್ಟುವಂತೆಯೂ ಇದ್ದರೆ ಕೇಳುಗರ ಮನಸ್ಸನ್ನು ನೇರವಾಗಿ ತಲುಪುತ್ತವೆ.

ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎನ್ನುವಂತೆ ಭಾಷಣ ಕಲೆಯನ್ನು ವಿದ್ಯಾರ್ಥಿಗಳಿಗೆ ಆರಂಭದಿಂದಲೇ ರೂಢಿಸಿದರೆ ಮುಂದೆ ಅವರೊಬ್ಬ ಉತ್ತಮ ವಾಗ್ಮಿಗಳಾಗುವುದರಲ್ಲಿ ಅನುಮಾನವಿಲ್ಲ. ಹಿಂದೆ ನಮಗೆಲ್ಲಾ ಶಾಲಾ ಹಂತಗಳಲ್ಲಿ ಮಾತನಾಡಲು ವೇದಿಕೆಗಳು ದೊರೆಯುತ್ತಿದ್ದುದೇ ವಿರಳವಾಗಿತ್ತು. ಈಗಿನ ಶಾಲಾ ಕಾಲೇಜುಗಳಲ್ಲಿ ವರ್ಷಪೂರ್ತಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಇಂಥ ವಿಶೇಷ ದಿನಗಳಿಗಾಗಿ ಮಕ್ಕಳನ್ನು ಸಿದ್ಧಪಡಿಸುವ ಮೂಲಕ ಅವರಲ್ಲಿನ ಮಾತುಗಾರನನ್ನು ನಾವು ಪ್ರೇರೇಪಿಸಿ ಭವಿಷ್ಯಕ್ಕಾಗಿ ತಯಾರುಗೊಳಿಸಬಹುದು.

ವೇದಿಕೆ ಮೇಲೆ ಮಾತನಾಡುವ ಅವಕಾಶವನ್ನು ಕಳೆದುಕೊಳ್ಳದಂತೆ ನಮ್ಮ ಮಕ್ಕಳನ್ನು ಮಾನಸಿಕವಾಗಿ ಸಿದ್ಧಗೊಳಿಸಬೇಕು. ಇದಕ್ಕಾಗಿ ಮನೆ ಹಾಗೂ ಶಾಲೆಯಲ್ಲಿ ನಲ್ಮೆಯ ನುಡಿಗಳನ್ನು ಮಕ್ಕಳಿಗೆ ಕಲಿಸಿಕೊಡುವುದು ಮುಖ್ಯ. ಈ ನಿಟ್ಟಿನಲ್ಲಿ ಕುಟುಂಬಸ್ಥರು ಮತ್ತು ಶಿಕ್ಷಕರ ಮಾರ್ಗದರ್ಶನ ಮತ್ತು ಸಹಕಾರ ಅತ್ಯಗತ್ಯ. ನಿತ್ಯದ ಎಲ್ಲಾ ಸಂದರ್ಭಗಳಲ್ಲಿಯೂ ಮಕ್ಕಳ ಮಾತುಗಳನ್ನು ಆಲಿಸಿ ಪದೇ ಪದೇ ಸೂಚನೆಗಳನ್ನು ನೀಡುತ್ತಾ ತಪ್ಪುಗಳನ್ನು ಸರಿಪಡಿಸುತ್ತಿರಬೇಕು. ಮಕ್ಕಳು ಉತ್ತಮ ಭಾಷಣಕಾರರಾಗಲು ಈ ಕೆಳಕಂಡ ಕೆಲವು ಸಲಹೆಗಳು ನೆರವಾಗಬಹುದು..

ತಯಾರಿ ಹೀಗಿರಲಿ

ಉತ್ತಮ ಭಾಷಣಕಾರರಾಗಬೇಕಾದವರು ತಾನು ಮಾತನಾಡಬೇಕಾದ ವಿಷಯದ ಬಗ್ಗೆ ಸಾಕಷ್ಟು ತಿಳಿದಿರಬೇಕು. ಅದಕ್ಕಾಗಿ ನಿರಂತರ ಓದು ಮತ್ತು ಅಭ್ಯಾಸ ಮುಖ್ಯ. ಚರ್ಚೆ ಮತ್ತು ಸಂವಾದಗಳಲ್ಲಿ ಭಾಗವಹಿಸುವುದು ಅವಶ್ಯಕ. ಅಲ್ಲಿ ಕಲಿತ ಜ್ಞಾನ ಭಾಷಣದ ಸಂದರ್ಭದಲ್ಲಿ ನೆರವಿಗೆ ಬರುತ್ತದೆ.

- ಉತ್ತಮ ವಾಗ್ಮಿಯಾಗಬೇಕಾದವರು ಇತರರ ಭಾಷಣಗಳನ್ನು ಆಲಿಸುವುದೂ ಮುಖ್ಯ. ಭಾಷಣಕಾರರ ಹಾವಭಾವ, ಭಂಗಿಗಳು ಮತ್ತು ಭಾಷಾ ಚತುರತೆ ತಿಳಿಯಲು ಇದು ಸಹಕಾರಿ.
- ಬರೆದಿದ್ದನ್ನು ಹಿಡಿದು ಓದುವ ಅಭ್ಯಾಸ ಒಳ್ಳೆಯದಲ್ಲ. ಸ್ವಂತವಾಗಿ ಮಾತನಾಡುವ ಕಲೆ ರೂಢಿಸಿಕೊಳ್ಳುವುದು.
- ವೇದಿಕೆಯ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸುವುದರಿಂದ ಸಭಾಕಂಪನ ದೂರವಾಗಿಸಿಕೊಳ್ಳಬಹುದು.
- ಮಾತನಾಡಲೆಂದು ತೆರಳುವಾಗ ನಮ್ಮ ಉಡುಪು ಮತ್ತು ನಡವಳಿಕೆ ಬಹು ಮುಖ್ಯ ಅಂಶವಾಗಿ ಪರಿಗಣಿಸಲ್ಪಡುತ್ತದೆ. ಮಾತನಾಡುವಾಗ ಪದೇ ಪದೇ ಬಟ್ಟೆ ಸರಿಪಡಿಸಿಕೊಳ್ಳುವುದು, ಗಡಿಯಾರ ನೋಡಿಕೊಳ್ಳುವುದು, ಮೂಗು ಕಣ್ಣು ಕಿವಿ ಒರೆಸಿಕೊಳ್ಳುವುದು, ಕೂದಲು ಸರಿಪಡಿಸಿಕೊಳ್ಳುವುದು, ಪದೇ ಪದೇ ನೀರು ಕುಡಿಯುವುದು, ಗಂಟಲು ಸರಿಪಡಿಸಿಕೊಳ್ಳುವುದು ಮಾಡಬಾರದು. ಇಂತಹ ನಡವಳಿಕೆಗಳು ಅಭಾಸಕ್ಕೆ ಕಾರಣವಾಗುತ್ತದೆ.
- ಅತಿಯಾದ ಪದಬಳಕೆ ಮತ್ತು ಭಾಷಾಜ್ಞಾನದ ಬಳಕೆ ನಿರುಪಯುಕ್ತ. ಸರಳ ಪದಗಳನ್ನೇ ಬಳಸಿ ಕೇಳುಗರಿಗೆ ಅರ್ಥವಾಗುವಂತೆ ತಿಳಿಯಪಡಿಸಿ.
- ಹೇಳಬೇಕಾದ ವಿಷಯವನ್ನು ನೇರವಾಗಿ ಪ್ರಸ್ತಾಪಿಸಿ. ನಿಮ್ಮ ಮತ್ತು ಕೇಳುಗರ ಸಮಯ ಉಳಿಸಬಹುದು. ಸಂಕ್ಷಿಪ್ತವಾಗಿ ನಿಮ್ಮನ್ನು ಪರಿಚಯಿಸಿಕೊಂಡು ಮಾತುಗಳನ್ನು ಮುಂದುವರೆಸಿ.
- ಮಾತನಾಡುವಾಗ ನಿಮ್ಮ ಧ್ವನಿಯಲ್ಲಿ ಸ್ಪಷ್ಟತೆ, ಏರಿಳಿತವಿರಲಿ. ಖ್ಯಾತನಾಮರ ಹೇಳಿಕೆಗಳನ್ನು ನಿಮ್ಮ ಮಾತುಗಳಲ್ಲಿ ಬೆಸೆಯಿರಿ. ಮಾತುಗಳ ನಡುವೆ ಸಂದರ್ಭಾನುಸಾರ ಹಾಸ್ಯವನ್ನು ಬೆರೆಸಿ. ಕೇಳುಗರ ಬೇಸರ ಕಳೆಯಲು ಸಹಾಯಕವಾಗಬಹುದು.
- ಭಾಷಣಕಾರರಾದ ನೀವು ಹಸನ್ಮುಖಿಗಳಾಗಿರುವುದು ಒಳಿತು.ಮಾತಿನ ಮಧ್ಯೆ ಯಾರನ್ನೂ ನಿಂದಿಸುವುದಾಗಲೀ ಅಥವಾ ಹೀಗಳೆಯುವುದಾಗಲೀ ಮಾಡಬಾರದು.
- ಮಾತುಗಳ ಮಧ್ಯೆ ಅವಾಚ್ಯ ಪದಗಳನ್ನು ಬಳಸಬಾರದು. ಮಾತಿನ ನಡುವೆ ಹೇಳಿದ್ದನ್ನೇ ಹೇಳಿ ಪುನರಾವರ್ತಿಸುವುದು ಬೇಡ.
- ಮಾತುಗಾರನಿಗೆ ಪ್ರಚಲಿತ ವಿದ್ಯಮಾನಗಳ ಅರಿವಿರಬೇಕು. ಮಾತು ಮತ್ತು ಶೈಲಿ ಕೇಳುಗರ ವಯೋಮಾನಕ್ಕನುಗುಣವಾಗಿರಬೇಕು.

IIBS
BENGALURU
Redefining Leading Talents
16 YEARS OF ACADEMIC EXCELLENCE
International Institute of Business Studies
Approved by AICTE | Affiliated to Bangalore City University | Ministry of Education, Government of India
NAAC A GRADE
Highest CGPA 3.20 in 4-Point Scale
ADMISSIONS OPEN FOR PGDM / MBA
BATCH (2024-26)
CAMPUS PLACEMENT 2021-23
HIGHEST SALARY PACKAGE OFFERED
PGDM ₹51 Lakhs Per Annum
MBA ₹48 Lakhs Per Annum
MERIT SCHOLARSHIP*
FEMALE CANDIDATES UPTO ₹2.30 LAKHS
MALE CANDIDATES UPTO ₹2.10 LAKHS
*TO AVAIL MERIT SCHOLARSHIP APPLY ON OR BEFORE 11TH MARCH 2024
www.iibs.edu.in | www.iibsonline.com
99864 15333 / 96202 48214
Near International Airport, Bengaluru-562 157.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಅತಿಯಾದ ಹೆದರಿಕೆ ಮತ್ತು ನಮ್ಮ ಮೇಲೆ ನಮಗಿರುವ ಅತಿಯಾದ ಅನವಲಂಬಿತೆಯು ನಮ್ಮ ವೈಯಕ್ತಿಕ ಸಾಮರ್ಥ್ಯ ವೃದ್ಧಿಗೆ ಇರುವ ಪ್ರಮುಖ ತೊಡಕುಗಳು.

-ರಾಬರ್ಟ್ ಕಿಯೊಸಾಕಿ

ಸೆಮಿಕಂಡಕ್ಟರ್ ಚಿಪ್: ಮಹತ್ವಾಕಾಂಕ್ಷೆಗೆ ಇಂಬು ಕೊಟ್ಟ ಕೇಂದ್ರದ ನಡೆ

ಕೇಂದ್ರ ಸಚಿವ ಸಂಪುಟವು ಸೆಮಿಕಂಡಕ್ಟರ್ ಚಿಪ್ ತಯಾರಿಕೆಗೆ ಸಂಬಂಧಿಸಿದಂತೆ ₹ 1.26 ಲಕ್ಷ ಕೋಟಿ ಮೊತ್ತದ ಮೂರು ಯೋಜನೆಗಳಿಗೆ ಅನುಮೋದನೆ ನೀಡುವ ಮೂಲಕ ದೇಶದ ಮಹತ್ವಾಕಾಂಕ್ಷೆಗೆ ಒಂದು ಸ್ಪಷ್ಟ ರೂಪ ಸಿಕ್ಕಂತೆ ಆಗಿದೆ. ಸೆಮಿಕಂಡಕ್ಟರ್ ತಯಾರಿಕೆಗೆ ಗುಜರಾತ್‌ನ ಧೊಲೇರಾದಲ್ಲಿ ಟಾಟಾ ಸಮೂಹ ಆರಂಭಿಸಲಿರುವ ಘಟಕ ಕೂಡ ಈ ಮೂರು ಯೋಜನೆಗಳ ಪೈಕಿ ಒಂದು. ಇದನ್ನು ತೈವಾನ್‌ನ ಪವರ್‌ಚಿಪ್ ಸೆಮಿಕಂಡಕ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಾರ್ಪೊರೇಷನ್ (ಪಿಎಸ್‌ಎಂಸಿ) ಸಹಯೋಗದಲ್ಲಿ ಅಂದಾಜು ₹ 91 ಸಾವಿರ ಕೋಟಿ ವೆಚ್ಚದಲ್ಲಿ ಆರಂಭಿಸಲಾಗುತ್ತದೆ. ಟಾಟಾ ಸಮೂಹವು ಅಸ್ಸಾಂನಲ್ಲಿ ಸೆಮಿಕಂಡಕ್ಟರ್ ಜೋಡಣೆ ಹಾಗೂ ಪರೀಕ್ಷಾ ಘಟಕವನ್ನು ಕೂಡ ಆರಂಭಿಸಲಿದೆ. ಇದಕ್ಕೆ ₹ 27 ಸಾವಿರ ಕೋಟಿ ವೆಚ್ಚವಾಗಲಿದೆ. ಸಿ.ಜಿ. ಪವರ್ ಕಂಪನಿಯು ಗುಜರಾತ್‌ನ ಸಾನಂದ್‌ನಲ್ಲಿ ಸೆಮಿಕಂಡಕ್ಟರ್ ಘಟಕವನ್ನು ಆರಂಭಿಸಲಿದೆ. ಇದನ್ನು ಜಪಾನ್‌ನ ರೆನೆಸಾಸ್ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಮತ್ತು ಥಾಯ್ಲೆಂಡ್‌ನ ಸ್ಟಾರ್ಸ್ ಮೈಕ್ರೊಎಲೆಕ್ಟ್ರಾನಿಕ್ಸ್ ಸಹಯೋಗದಲ್ಲಿ ₹ 7,600 ಕೋಟಿ ಹೂಡಿಕೆಯೊಂದಿಗೆ ಆರಂಭಿಸಲಾಗುತ್ತದೆ. ಕಳೆದ ವರ್ಷ ಕೇಂದ್ರ ಸರ್ಕಾರವು ಅಮೆರಿಕದ ಮೈಕ್ರಾನ್ ಟೆಕ್ನಾಲಜಿ ಕಂಪನಿಯು ಗುಜರಾತ್‌ನಲ್ಲಿ ಸೆಮಿಕಂಡಕ್ಟರ್ ಘಟಕ ಆರಂಭಿಸಲು ಒಪ್ಪಿಗೆ ನೀಡಿತ್ತು. ಇವೆಲ್ಲ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಿಗುವ ಸಬ್ಸಿಡಿಯ ಪ್ರಯೋಜನ ದೊರೆಯಲಿದೆ. ಪಂಜಾಬ್‌ನ ಮೊಹಾಲಿಯಲ್ಲಿ ಸೆಮಿಕಂಡಕ್ಟರ್ ಪ್ರಯೋಗಾಲಯವನ್ನು ₹ 10 ಸಾವಿರ ಕೋಟಿ ವೆಚ್ಚದಲ್ಲಿ ಆಧುನೀಕರಣಗೊಳಿಸುವ ಆಲೋಚನೆ ಕೂಡ ಇದೆ.



ಸೆಮಿಕಂಡಕ್ಟರ್ ಚಿಪ್ ತಯಾರಿಕೆಯ ವಿಚಾರದಲ್ಲಿ ದೇಶವು ದೊಡ್ಡ ಪ್ರಮಾಣದಲ್ಲಿ ಹಾಗೂ ತ್ವರಿತಗತಿಯಲ್ಲಿ ಮುಂದಡಿ ಇರಿಸಬೇಕಿದೆ

ಆಧುನಿಕ ಉದ್ಯಮ ಜಗತ್ತಿಗೆ ಸೆಮಿಕಂಡಕ್ಟರ್ ಚಿಪ್ ತಯಾರಿಕಾ ವಲಯವು ಬಹಳ ಮುಖ್ಯವಾದುದು. ಇದು ಹೆಚ್ಚಿನ ತಂತ್ರಜ್ಞಾನವನ್ನು ಹಾಗೂ ಭಾರಿ ಬಂಡವಾಳವನ್ನು ಬಯಸುವಂಥದ್ದು. ಸೆಮಿಕಂಡಕ್ಟರ್ ತಯಾರಿಕೆ, ವಿತರಣೆ ಮತ್ತು ಪೂರೈಕೆ ವ್ಯವಸ್ಥೆಯಲ್ಲಿ ಈಗ ಕೆಲವು ದೇಶಗಳು ಹಾಗೂ ಕೆಲವು ಕಂಪನಿಗಳು ಮಾತ್ರ ಪಾರಮ್ಯ ಹೊಂದಿವೆ. ಈ ವಲಯದ ಮಹತ್ವವನ್ನು ಗ್ರಹಿಸಿ, ಇದರ ತಯಾರಿಕೆ, ಪೂರೈಕೆಯಲ್ಲಿ ಮುಂಚೂಣಿಯಲ್ಲಿ ಇರಲು ಮುಂದುವರಿದ ದೇಶಗಳ ನಡುವೆ ಪೈಪೋಟಿ ಏರ್ಪಟ್ಟಿದೆ. ಜಾಗತಿಕ ಮಟ್ಟದಲ್ಲಿ ಸೆಮಿಕಂಡಕ್ಟರ್ ಚಿಪ್ ತಯಾರಿಕೆಯಲ್ಲಿ ದಕ್ಷಿಣ ಕೊರಿಯಾ, ತೈವಾನ್ ಮತ್ತು ಚೀನಾ ಶೇಕಡ 70ರಷ್ಟು ಪಾಲು ಹೊಂದಿವೆ. ಇನ್ನುಳಿದ ಪಾಲು ಅಮೆರಿಕ ಮತ್ತು ಜಪಾನ್ ಕೈಯಲ್ಲಿದೆ. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ಈಗಿನ ಪರಿಸ್ಥಿತಿಯಲ್ಲಿ ಭಾರತವು ಹೇಳಿಕೊಳ್ಳುವಂತಹ ಪಾಲನ್ನು ಹೊಂದಿಲ್ಲ. ಆದರೆ ದೇಶವು ತನ್ನ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮುಂದಡಿ ಇರಿಸಿದೆ. 2021ರ ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರವು ₹ 76 ಸಾವಿರ ಕೋಟಿ ಮೌಲ್ಯದ ಉತ್ತೇಜನ ಯೋಜನೆಯನ್ನು ಪ್ರಕಟಿಸಿತ್ತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಚಿಪ್ ತಯಾರಿಕೆಗೆ ನೆರವು ಒದಗಿಸುವುದು ಈ ಯೋಜನೆಯ ಭಾಗ. ಮೈಕ್ರಾನ್ ಕಂಪನಿಯ ಅಂದಾಜು ₹ 22 ಸಾವಿರ ಕೋಟಿ ಮೌಲ್ಯದ ಯೋಜನೆಗೆ ಕೇಂದ್ರ ಸರ್ಕಾರವು ಶೇ 50ರಷ್ಟು ನೆರವು ಹಾಗೂ ಗುಜರಾತ್ ಸರ್ಕಾರವು ಶೇ 20ರಷ್ಟು ನೆರವು ಒದಗಿಸಲಿವೆ. ಸೆಮಿಕಂಡಕ್ಟರ್ ಉದ್ಯಮದ ಎಲ್ಲ ವಲಯಗಳಿಗೂ ನೆರವು ಒದಗಿಸುವುದು ಯೋಜನೆಯ ಉದ್ದೇಶ.

ಈಗ ಅನುಮೋದನೆ ನೀಡಿರುವ ಯೋಜನೆಗಳ ಭಾಗವಾಗಿರುವ ಘಟಕಗಳಲ್ಲಿ ತಯಾರಾಗುವ ಚಿಪ್‌ಗಳನ್ನು ಆಟೊಮೊಬೈಲ್ ಉದ್ಯಮ, ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ ಉಪಕರಣಗಳ ಉದ್ಯಮ, ರಕ್ಷಣಾ ವಲಯ, ದೂರಸಂಪರ್ಕ ವಲಯ ಮುಂತಾದೆಡೆ ಬಳಕೆ ಮಾಡಲಾಗುತ್ತದೆ. ಈ ಘಟಕಗಳಲ್ಲಿ ತಯಾರಾಗಲಿರುವ ಚಿಪ್‌ಗಳು ಕೃತಕ ಬುದ್ಧಿಮತ್ತೆ ವಲಯಗಳಲ್ಲಿ ಬಳಕೆ ಆಗುವುದಿಲ್ಲ. ಹೀಗಿದ್ದರೂ ಇವು ದೇಶದ ಪಾಲಿಗೆ ಸೆಮಿಕಂಡಕ್ಟರ್ ತಯಾರಿಕೆಯ ಹಾದಿಯಲ್ಲಿ ಶುಭಾರಂಭದಂತೆಯೇ ಇವೆ. ದೊಡ್ಡ ಮಾರುಕಟ್ಟೆಯನ್ನು ಗಮನದಲ್ಲಿ ಇರಿಸಿಕೊಂಡು ಇವುಗಳನ್ನು ಆರಂಭಿಸಲಾಗುತ್ತಿದೆ. ಈ ಘಟಕಗಳು ಭಾರತದ ಉದ್ಯಮ ವಲಯಕ್ಕೆ ಜಾಗತಿಕ ಮಟ್ಟದ ಸೆಮಿಕಂಡಕ್ಟರ್ ಪೂರೈಕೆ ವ್ಯವಸ್ಥೆಯಲ್ಲಿ ಪ್ರವೇಶ ಗಿಟ್ಟಿಸಲು ನೆರವಾಗುತ್ತವೆ. ಸೆಮಿಕಂಡಕ್ಟರ್ ತಯಾರಿಕೆಯ ವಿಚಾರದಲ್ಲಿ ದೇಶವು ದೊಡ್ಡ ಪ್ರಮಾಣದಲ್ಲಿ ಹಾಗೂ ತ್ವರಿತಗತಿಯಲ್ಲಿ ಮುಂದಡಿ ಇರಿಸಬೇಕಿದೆ. ಚಿಪ್ ವಿನ್ಯಾಸ ವಲಯದಲ್ಲಿ ಭಾರತವು ಈಗಾಗಲೇ ಗಮನಾರ್ಹ ಶಕ್ತಿಯನ್ನು ಹೊಂದಿದೆ. ಅದನ್ನು ಇನ್ನಷ್ಟು ಹೆಚ್ಚಿಸುವ ಕೆಲಸ ಆಗಬೇಕಿದೆ. ಸಂಶೋಧನೆ ಹಾಗೂ ಅಭಿವೃದ್ಧಿಯ ಕಡೆಗೂ ಹೆಚ್ಚಿನ ಗಮನ ನೀಡಬೇಕಿದೆ.

ದಿನದ ಟ್ವೀಟ್

ಕೃತಕ ಆಹಾರ: ಜೀವ ಬಲಿಯಾದೀತು

ಈ ಉತ್ಪನ್ನಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದಕ್ಕೆ ಮುನ್ನ, ಕಿರಾಣಿ ಅಂಗಡಿ ಮಾಲೀಕರಿಗೆ ಅವುಗಳ ಗುಣಮಟ್ಟದ ಬಗ್ಗೆ ಅರಿವಿರಲಿಲ್ಲ ಎಂಬುದನ್ನು ನಂಬುವುದಕ್ಕೆ ಕಷ್ಟವಾಗುತ್ತದೆ.

(ಬೃಹತ್ ಪ್ರಮಾಣದ ಕೃತಕ ಶುಂಠಿ– ಬೆಳ್ಳುಳ್ಳಿ ಪೇಸ್ಟನ್ನು ಹೈದರಾಬಾದ್‌ನಲ್ಲಿ ವಶಪಡಿಸಿಕೊಂಡಿರುವುದಕ್ಕೆ ಪ್ರತಿಕ್ರಿಯೆ)

ಸರ್‌ಸಿಜ್ ನಯನಮ್

ಕಿಡಿನುಡಿ



ಚುನಾವಣಾ ಆಯುಕ್ತ ಅರುಣ್ ಗೋಯಲ್ ಹುದ್ದೆ ತ್ಯಜಿಸಿದ್ದಾರೆ. ಇದರಿಂದ, ಆಯೋಗವನ್ನು ಹೌದಪ್ಪಗಳಿಂದ ತುಂಬಿಸುವುದಕ್ಕೆ ಹಾದಿ ಸುಗಮ ಆದಂತಾಗಿದೆ. ಇದು, ನಮ್ಮ ಗಣರಾಜ್ಯದ ಅಡಿಪಾಯಗಳಾದ ಎಲ್ಲ ಸಂಸ್ಥೆಗಳಿಗೂ ಅನ್ವಯಿಸುತ್ತದೆ!

ಕಪಿಲ್ ಸಿಬಲ್, ವಕೀಲ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಗುರುವಾರ, 11-3-1999

• ವಿರೋಧ ಪಕ್ಷಗಳ ವಿರೋಧ–ದೂರವಾಣಿ ಕರೆ ದರ ಏರಿಕೆ ನಿರ್ಧಾರಕ್ಕೆ ತಡೆ

ನವದೆಹಲಿ, ಮಾರ್ಚ್ 10 (ಪಿಟಿಐ, ಯುಎನ್‌ಐ)– ದೂರವಾಣಿ ಕರೆ ಮತ್ತು ಬಾಡಿಗೆ ದರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಏರಿಸಿ ದೂರವಾಣಿ ನಿಯಂತ್ರಣ ಪ್ರಾಧಿಕಾರ ಹೊರಡಿಸಿದ್ದ ಪ್ರಕಟಣೆ ಜಾರಿಯನ್ನು ವಿರೋಧ ಪಕ್ಷಗಳ ತೀವ್ರ ಪ್ರತಿಭಟನೆಯ ನಡುವೆ ಸರ್ಕಾರ ಇಂದು ಸ್ಥಗಿತಗೊಳಿಸಿತು.

'ಸರ್ಕಾರ ವಿಷಯವನ್ನು ಸಮಗ್ರವಾಗಿ ಪರಿಶೀಲಿಸುವವರೆಗೆ ಪ್ರಾಧಿಕಾರವು 1999ರ ಮಾರ್ಚ್ 9ರಂದು ಪ್ರಕಟಿಸಿದ ಪಟ್ಟಿಯನ್ನು ತಡೆಹಿಡಿಯುವಂತೆ ಆದೇಶ ನೀಡಲು ನಿರ್ಧರಿಸಲಾಗಿದೆ' ಎಂದು ಸಂಪರ್ಕ ಖಾತೆಯ ಸಚಿವ ಜಗಮೋಹನ್ ಅವರು ಲೋಕಸಭೆಯಲ್ಲಿ ಪ್ರಕಟಿಸಿದರು.

ದರ ಏರಿಕೆಯ ಬಗ್ಗೆ ಸರ್ಕಾರ ಹೇಳಿಕೆ ನೀಡುವಂತೆ ವಿರೋಧ ಪಕ್ಷಗಳ ಸದಸ್ಯರು ಲೋಕಸಭೆಯಲ್ಲಿ ಭಾರಿ ಕೋಲಾಹಲ ಎಬ್ಬಿಸಿದಾಗ ಜಗಮೋಹನ್ ಹೇಳಿಕೆ ನೀಡಿದ ಬೆನ್ನಲ್ಲೇ, ಸರ್ಕಾರ ತನ್ನ ಈ ನಿರ್ಧಾರವನ್ನು ಪ್ರಕಟಿಸಿತು.

50 ವರ್ಷಗಳ ಹಿಂದೆ

ಸೋಮವಾರ, 11-3-1974

• 'ಪ್ರತಿಭಾ ಪಲಾಯನ' ಅಮೆರಿಕಕ್ಕೆ 'ವರ'

ವಿಶ್ವಸಂಸ್ಥೆ, ಮಾರ್ಚ್ 10– ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ವೈದ್ಯರು, ದಾದಿಯರು ವಲಸೆ ಬರುವುದು ನಿಂತು ಹೋದರೆ, ಅಮೆರಿಕ, ಬ್ರಿಟನ್ನಿನ ಬಹುತೇಕ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಣೆ ಸ್ಥಗಿತಗೊಳ್ಳುವುದು ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವಾಲ್ಡ್‌ಹೀಂ ತಿಳಿಸಿದ್ದಾರೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಈ ವೈದ್ಯಕೀಯ ಸಿಬ್ಬಂದಿಯನ್ನು ಹೆಚ್ಚಾಗಿ ಪಡೆಯುತ್ತಿರುವ ಅಮೆರಿಕ, ಕೆನಡಾ ಮತ್ತು ಬ್ರಿಟನ್‌ಗಳು ವಾಸ್ತವವಾಗಿ ಆ ದೇಶಗಳಿಂದ ಕೋಟ್ಯಂತರ ಡಾಲರ್ ಬೆಲೆಯ ಉಡುಗೊರೆಗಳನ್ನೇ ಈ ರೂಪದಲ್ಲಿ ಪಡೆಯುತ್ತಿವೆ ಎಂದೂ ಅವರು 'ಪ್ರತಿಭಾ ಪಲಾಯನ' ಕುರಿತ ತಮ್ಮ ಹೊಸ ವರದಿಯಲ್ಲಿ ತಿಳಿಸಿದ್ದಾರೆ.

'ಈ ದೇಶಗಳು ವಲಸೆ ಬಂದ ವೈದ್ಯರಿಗೆ ಯಾವ ತರಬೇತಿ ವೇತನವೂ ಇಲ್ಲದೆ, ಅವರಿಂದ ಅತಿಕ್ಲಿಷ್ಟಕರವಾದ ವೈದ್ಯಕೀಯ ಸೇವೆಗಳನ್ನು ಪಡೆಯುತ್ತಿವೆ. ಏಕೆಂದರೆ ಅವರಿಗೆ ತಮ್ಮ ತಮ್ಮ ದೇಶಗಳಲ್ಲಿ ತರಬೇತಿ ದೊರೆತಿರುತ್ತದೆ. ಅಮೆರಿಕದಲ್ಲಿ ಅಂತಹ ಒಬ್ಬ ವೈದ್ಯನಿಗೆ ತರಬೇತಿ ನೀಡಲು 50 ಸಾವಿರ ಡಾಲರ್ ವೆಚ್ಚ ತಗಲುತ್ತದೆ' ಎಂದರು.

1972ರಲ್ಲಿ ಏಳು ಸಾವಿರ ಮಂದಿ ವಿದೇಶಿ ವೈದ್ಯರನ್ನು ಅಮೆರಿಕ ಬರಮಾಡಿಕೊಂಡಿದೆ. ಇವರೆಲ್ಲ ವಲಸೆ ಬಾರದೇ ಇದ್ದಿದ್ದರೆ, ಇಷ್ಟೇ ಮಂದಿ ಅಮೆರಿಕದ ವೈದ್ಯರಿಗೆ ತರಬೇತಿ ನೀಡಬೇಕಾದರೆ 35 ಸಾವಿರ ಡಾಲರ್ ಖರ್ಚಾಗುತ್ತಿತ್ತು ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಆಯಾ ದೇಶಗಳು ಪ್ರತಿಭಾ ಪಲಾಯನ ನಿಲ್ಲಿಸಲು ವಲಸೆ ಹೋಗುವುದನ್ನು ತಡೆಯುವುದು, ವಿದೇಶದಲ್ಲಿ ನೆಲಸಬಯಸುವವರ ಮೇಲೆ ತೆರಿಗೆ ಹೇರಿಕೆ ಮುಂತಾದ ಕ್ರಮಗಳನ್ನೂ ಅವರು ಸೂಚಿಸಿದ್ದಾರೆ.

• ಅಗಡಿ ನಿವೃತ್ತಿ: ಸರ್ಕಾರದ ಅಸಹಕಾರ–ಹಸ್ತಕ್ಷೇಪ ಧೋರಣೆಗೆ ಖಂಡನೆ

ಬೆಂಗಳೂರು, ಮಾರ್ಚ್ 10– ರಾಜ್ಯ ಸರ್ಕಾರದ ಅಸಹಕಾರ ಹಾಗೂ ಪ್ರತಿದಿನದ ಕೆಲಸದಲ್ಲಿ ಹಸ್ತಕ್ಷೇಪದಿಂದ ಗೃಹ ನಿರ್ಮಾಣ ಮಂಡಳಿಯ ಕೆಲಸವು ಕಳೆದ ಒಂದು ವರ್ಷದಿಂದ ನಿಂತಿದೆ ಎಂದು ಮಂಡಳಿಯ ಅಧ್ಯಕ್ಷ ಅಗಡಿ ಸಂಗಣ್ಣ ಅವರು ಇಂದು ಇಲ್ಲಿ ಆಕ್ಷೇಪಿಸಿದರು.

ಮಂಡಳಿಯ ಅಧ್ಯಕ್ಷ ಸ್ಥಾನದಿಂದ ಇಂದು ನಿವೃತ್ತರಾದ ಅಗಡಿ ಅವರು, ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದ ಜನರಿಗೆ ವಾಸಕ್ಕೆ ಮನೆಗಳನ್ನು ಒದಗಿಸುವ ಮಹತ್ಕಾರ್ಯದಲ್ಲಿ ತೊಡಗಿದ್ದರೂ, ಪ್ರತಿದಿನದ ಕೆಲಸ ಕಾರ್ಯಗಳಲ್ಲಿ ತಲೆಹಾಕುವಂತಹ ಸನ್ನಿವೇಶಗಳನ್ನು ಎದುರಿಸಬೇಕಾಯಿತು ಎಂದು ಅವರು ಅಸಮಾಧಾನವನ್ನು ವ್ಯಕ್ತಪಡಿಸಿದರು.

ರೈತರನ್ನು ಒಂಟಿಯಾಗಿಸಿದೆವು, ಇದು ರೈತಪರ ಸಿನಿಮಾ ನಿರ್ಲಕ್ಷ್ಯದ ಸಮಯ

ರೈತಪರ 'ಕ್ಷೇತ್ರಪತಿ': ನಿರ್ಲಕ್ಷ್ಯ ನ್ಯಾಯವೇ?

ಪಡಸಾಲೆ

ರಘುನಾಥ ಚ.ಹ.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಹದಿನೈದನೇ ಆವೃತ್ತಿಯಲ್ಲಿ ಕೇಸರಿ ಹರವೂ ನಿರ್ದೇಶನದ 'ಕಿಸಾನ್ ಸತ್ಯಾಗ್ರಹ' ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವಾಲಯ ಅನುಮತಿ ನಿರಾಕರಿಸಿದ್ದು ಸುದ್ದಿಯಾಯಿತು. 'ಕಿಸಾನ್ ಸತ್ಯಾಗ್ರಹ'ದ ಜನಪ್ರಿಯ ಆವೃತ್ತಿ ಎನ್ನಬಹುದಾದ ಕನ್ನಡದ 'ಕ್ಷೇತ್ರಪತಿ' ಸಿನಿಮಾ ಚಿತ್ರೋತ್ಸವದಲ್ಲಿ ಸದ್ದಿಲ್ಲದೆ ಪ್ರದರ್ಶನ ಕಂಡಿದ್ದು ಹೆಚ್ಚಿನ ಜನರ ಗಮನಸೆಳೆಯಲಿಲ್ಲ. 'ಕಿಸಾನ್ ಸತ್ಯಾಗ್ರಹ'ದ ಪರವಾಗಿ ವಕಾಲತ್ತು ವಹಿಸಿದ ಎಷ್ಟು ಮಂದಿ 'ಕ್ಷೇತ್ರಪತಿ' ನೋಡಿದ್ದಾರೆ ಹಾಗೂ ಅದರ ಬಗ್ಗೆ ಚರ್ಚಿಸಿದ್ದಾರೆ ಎನ್ನುವುದು ತಿಳಿಯದು. ಆದರೆ, ಕಳೆದ ಆಗಸ್ಟ್ ತಿಂಗಳಲ್ಲಿ ಸಿನಿಮಾ ತೆರೆಕಂಡಾಗ ಅದರ ಬಗ್ಗೆ ಯಾವ ಗಮನಾರ್ಹ ಚರ್ಚೆಯೂ ನಡೆದಿರುವ ಉದಾಹರಣೆಯಂತೂ ಇಲ್ಲ. ಮಾಧ್ಯಮಗಳ ಕಣ್ಣು–ಹೃದಯಗಳಿಗೂ 'ಕ್ಷೇತ್ರಪತಿ'ಯ ಸಮಕಾಲೀನತೆ ಅರಿವಿಗೆ ಬಂದಂತಿಲ್ಲ. ರೈತರ ಬಗೆಗಿನ ಸಿನಿಮಾ ಕುರಿತ ಈ ಸಾಮೂಹಿಕ ನಿರ್ಲಕ್ಷ್ಯ ಆಕಸ್ಮಿಕ ಎಂದು ಹೇಳಲಾಗದು. ಸಮುದಾಯಗಳನ್ನು ಒಡೆದು ಆಳುವ ಸ್ವಾರ್ಥ ರಾಜಕೀಯದ ಎದುರು, ರೈತರ ಬಗೆಗಿನ ಸಮಾಜದ ಹೇಳಿಕೆಗಳು ಹಾಗೂ ಭಾವುಕತೆ ಎಷ್ಟು ಟೊಳ್ಳು ಎನ್ನುವುದಕ್ಕೆ ಕಳೆದ ಮೂರ್ನಾಲ್ಕು ವರ್ಷಗಳ ವಿದ್ಯಮಾನಗಳು ನಿದರ್ಶನದಂತಿವೆ. ಆ ವಿದ್ಯಮಾನಗಳ ಭಾಗವಾಗಿಯೇ 'ಕ್ಷೇತ್ರಪತಿ' ಸಿನಿಮಾ ಕುರಿತ ನಿರ್ಲಕ್ಷ್ಯವನ್ನೂ ಗಮನಿಸಬೇಕು.

ಶ್ರೀಕಾಂತ ಕಟಗಿ ನಿರ್ದೇಶನದ 'ಕ್ಷೇತ್ರಪತಿ' ರೈತರ ಸಮಸ್ಯೆಗಳ ಬಗ್ಗೆ ಸಮಾಜದ ಗಮನಸೆಳೆಯಲು ಪ್ರಯತ್ನಿಸುವ ಸಿನಿಮಾ. ರೈತಪರ, ದಲಿತರಪರ, ಮಹಿಳಾಪರ – ಇಂಥ ಲೇಬಲ್‌ಗಳನ್ನು ಹಚ್ಚಿಕೊಂಡ ಸಿನಿಮಾಗಳು ಎಷ್ಟರಮಟ್ಟಿಗೆ ವಸ್ತುನಿಷ್ಠವಾಗಿರುತ್ತವೆ ಹಾಗೂ ದೃಶ್ಯಮಾಧ್ಯಮದ ವ್ಯಾಕರಣವನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತವೆ ಎನ್ನುವುದು ಜಾಣಪ್ರೇಕ್ಷಕರಿಗೆ ತಿಳಿಯದ ಗುಟ್ಟೇನಲ್ಲ. ಯಾವುದೇ ಅಭಿವ್ಯಕ್ತಿ ಸಮಕಾಲೀನವಾಗಿರಬೇಕು ಎನ್ನುವ ಹಂಬಲ ಹಟವಾಗಿ ಬದಲಾದಾಗ, ಅದು ಕಲೆಯಾಗದೆ ಘೋಷಣೆಯಾಗಿ, ಗದ್ದಲವಾಗಿ ಕೊನೆಗೊಂಡಿರುವ ಸಾಲು ಸಾಲು ಉದಾಹರಣೆಗಳು ನಮ್ಮ ಮುಂದಿವೆ. ಕನ್ನಡ ಸಿನಿಮಾದ ಮಟ್ಟಿಗಂತೂ 'ಕಲಾತ್ಮಕ' ಎನ್ನುವ ವಿಶೇಷಣಕ್ಕೆ ಸಹೃದಯರನ್ನು ಸಿನಿಮಾಗಳಿಗೆ ಬೆನ್ನುಮಾಡಿಸುವಷ್ಟು ಶಕ್ತಿಯಿದೆ. 'ಕ್ಷೇತ್ರಪತಿ' ಸಿನಿಮಾದ ವಿಶೇಷ ಇರುವುದೇ ಇಲ್ಲಿ; ಈ ಸಿನಿಮಾದ ಪಾಲಿಗೆ ರೈತಪರ ಎನ್ನುವುದು ಸ್ಲೋಗನ್ ಆಗಿಲ್ಲ; ಸಿನಿಮಾದ ಆತ್ಮವೇ ಆಗಿದೆ. ವಸ್ತುನಿಷ್ಠತೆ ಎನ್ನುವುದು ಸ್ಟೇಟ್‌ಮೆಂಟ್ ಆಗುವ ಬದಲು ಸಿನಿಮಾ ಆಗಿದೆ, ಕಲೆಯಾಗುವ ಪ್ರಯತ್ನ ನಡೆಸಿದೆ.

'ರೈತ ನಮ್ಮ ದೇಶದ ಬೆನ್ನೆಲುಬು, ಲಿವರ್, ಕಿಡ್ನಿ, ಜಠರ ಎಂದೆಲ್ಲ ಹೇಳಿ ನಮ್ಮನ್ನು ಉಬ್ಬಿಸಿಬಿಟ್ಟಿದ್ದಾರೆ. ಆದರೆ, ನಮಗೇನು ಬೇಕು ಎಂದು ಈವರೆಗೆ ಯಾರಾದರೂ ನಮ್ಮನ್ನು ಕೇಳಿದ್ದಾರೇನು?' ಎನ್ನುವುದು ಚಿತ್ರದ ಕಥಾನಾಯಕ ಬಸವ ಕೇಳುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಹೇಳಬಲ್ಲ ನೈತಿಕತೆ ಯಾರಿಗಿದೆ? ರಾಜಧಾನಿಯ ಗಡಿಗಳಲ್ಲಿ ಸಾವಿರಾರು ರೈತರು ತಿಂಗಳುಗಟ್ಟಲೆ ಬಯಲಲ್ಲಿ ಬೀಡುಬಿಟ್ಟು ಚಳವಳಿ ನಡೆಸಿದರೂ, ಅವರ ಬಳಿಗೆ ಬಂದು ಕೂತು ಅಳಲನ್ನು ಕೇಳಿಸಿಕೊಳ್ಳಲಿಕ್ಕೆ ಪ್ರಧಾನಮಂತ್ರಿಗೇ ಸಾಧ್ಯವಾಗಿಲ್ಲ ಎನ್ನುವುದು ಈ ದೇಶದ ಆತ್ಮಸಾಕ್ಷಿಯ ಜೀವಂತಿಕೆಯ ಬಗ್ಗೆ ಅನುಮಾನ ಮೂಡಿಸುವಂತಿದೆ. ರೈತರ ಒಡಲಾಳವನ್ನು ಕೇಳಿಸಿಕೊಳ್ಳುವ ಮಾತಿರಲಿ, ಕಾನೂನು ಸುವ್ಯವಸ್ಥೆಯ ನೆಪದಲ್ಲಿ ರಾಜಧಾನಿಯ ಗಡಿಯಲ್ಲೇ ಅವರನ್ನು ಸರ್ಕಾರ ತಡೆದು ನಿಲ್ಲಿಸಿದ್ದನ್ನೂ ಮೌನವಾಗಿ ನೋಡಿದ್ದೇವೆ.

ಕಳೆದ ಎರಡು– ಮೂರು ವರ್ಷಗಳಲ್ಲಿ ಉತ್ತರ ಭಾರತವನ್ನು ಕೇಂದ್ರವಾಗಿರಿಸಿಕೊಂಡು ನಡೆದ ರೈತರ ಪ್ರತಿಭಟನೆಯು ಸ್ವಾತಂತ್ರ್ಯಾನಂತರ ದೇಶ ಕಂಡ ಬಹು ದೊಡ್ಡ ಚಳವಳಿ. ಚಳವಳಿನಿರತ ರೈತರು ಗಾಂಧಿಯ ವಿವೇಕ ಹಾಗೂ ಅಹಿಂಸೆಯ ಅನುಸಂಧಾನದಂತೆ ಕಾಣಿಸಿದರೆ, ಸತ್ಯಾಗ್ರಹವನ್ನು ಹತ್ತಿಕ್ಕಲು ಪ್ರಯತ್ನಿಸಿದ ಅಧಿಕಾರಿಶಾಹಿಯು ಬ್ರಿಟಿಷ್ ಪ್ರಭುತ್ವದ ಪಳೆಯುಳಿಕೆಯಂತೆ ಕಾಣಿಸುತ್ತದೆ. ಈ ವಿರೋಧಾಭಾಸ 'ಕ್ಷೇತ್ರಪತಿ' ಸಿನಿಮಾದಲ್ಲೂ ಇದೆ.

ಕಥಾನಾಯಕ ಬಸವ ಎಂಜಿನಿಯರಿಂಗ್ ವಿದ್ಯಾರ್ಥಿ. ಅಮೆರಿಕದಲ್ಲಿ ಬದುಕು ಕಟ್ಟಿಕೊಳ್ಳುವ ಮಹದಾಸೆ ಹೊಂದಿರುವ ಜಾಣ ತರುಣ. ತಂದೆಯ ಸಾವಿನಿಂದಾಗಿ ಬಸವ ಹಳ್ಳಿಗೆ ಬರುವಂತಾಗುತ್ತದೆ. ಈರುಳ್ಳಿ ಬೆಲೆ ಕುಸಿತದಿಂದ ಕಂಗೆಟ್ಟು, ಬ್ಯಾಂಕ್ ಸಾಲದ ಶೂಲಕ್ಕೆ ಅಂಜಿ, ಬಸವನ ತಂದೆ ಉರುಳು ಹಾಕಿಕೊಂಡಿದ್ದಾನೆ. ಅಪ್ಪನ ಸಂಸ್ಕಾರಕ್ಕೆ ಬರುವ ಬಸವ ಊರಿನಲ್ಲಿಯೇ ಉಳಿಯಲು ನಿಶ್ಚಯಿಸುತ್ತಾನೆ. ಎಂಜಿನಿಯರಿಂಗ್ ಬಿಟ್ಟು ಕೃಷಿಯಲ್ಲಿ ತೊಡಗುತ್ತೇನೆನ್ನುವ ಕಥಾನಾಯಕನ ನಿರ್ಧಾರವನ್ನು ಊರಿನೊಂದಿಗೆ ಮಲತಾಯಿಯೂ ವಿರೋಧಿಸುತ್ತಾಳೆ. ಅಪ್ಪನ ಸಾವಿಗೆ ಬಂದಿರುವ ಪರಿಹಾರ ಧನ ಬಳಸಿಕೊಂಡು ಎಂಜಿನಿಯರಿಂಗ್ ಮುಗಿಸಿ ಒಳ್ಳೆಯ ಕೆಲಸ ಹಿಡಿದು, ತಂಗಿಯ ಮದುವೆ ಮಾಡಿದ ನಂತರ ಏನಾದರೂ ಮಾಡಿಕೊ ಎನ್ನುವುದು ತಾಯಿಯ ಒತ್ತಾಯ. ಬಸವ ಯಾರ ಮಾತಿಗೂ ಕಿವಿಗೊಡದೆ ಕಾಲೇಜು ತೊರೆದು ಮಣ್ಣಿನ ಅಂಗಳಕ್ಕೆ ಬರುತ್ತಾನೆ.



ರೈತರ ಜೊತೆ ಸೇರಿದ ಬಸವನ ಎದುರು ಎರಡು ಸವಾಲುಗಳಿವೆ. ಮೊದಲನೆಯದು, ಕೃಷಿ ಉತ್ಪನ್ನಗಳಿಗೆ ಇಲ್ಲದಿರುವ ನಿಶ್ಚಿತ ಬೆಲೆ. ಎರಡನೆಯದು, ಭೂಮಿ ಆಕ್ರಮಿಸಲು ಹೊಂಚುಹಾಕುತ್ತಿರುವ ದುಷ್ಟ ರಾಜಕಾರಣಿ. ಸೂಪರ್ ಮಾರ್ಕೆಟ್‌ಗಳಿಗೆ ರೈತರನ್ನು ಒತ್ತೆಯಿಡುವ ರಾಜಕಾರಣಿಯ ಪ್ರಯತ್ನವನ್ನು ವಿರೋಧಿಸುವ ಬಸವ, ದಲ್ಲಾಳಿಗಳ ಎಪಿಎಂಸಿಗಳಿಗೆ ಪರ್ಯಾಯವಾಗಿ, ರೈತನೇ ತನ್ನ ಉತ್ಪನ್ನಗಳನ್ನು ಮಾರುವ 'ರೈತ ಮಾರುಕಟ್ಟೆ'ಯ ಕನಸು ಕಾಣುತ್ತಾನೆ. ಬಸವನ ಪ್ರಯತ್ನಕ್ಕೆ ಮತ್ತಷ್ಟು ರೈತರು ಒತ್ತಾಸೆಯಾಗಿ, 'ರೈತ ಮಾರುಕಟ್ಟೆ'ಯ ಪರಿಕಲ್ಪನೆ ಯಶಸ್ಸು ಕಾಣತೊಡಗಿದಾಗ, ಸೂಪರ್ ಮಾರ್ಕೆಟ್ ಮಾಫಿಯಾ ಸಕ್ರಿಯವಾಗುತ್ತದೆ. ಮುಂದಿನದು ಕಾರ್ಪೊರೇಟ್ ವ್ಯವಸ್ಥೆಯನ್ನು ಹಿಂದಿಕ್ಕಿಕೊಂಡ ಸರ್ಕಾರ ಹಾಗೂ ರೈತರ ನಡುವಿನ ಸಂಘರ್ಷದ ಕಥನ.

ಎತ್ತಿನಗಾಡಿಗಳ ಮೂಲಕ ನಗರಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸುವ ರೈತರಿಗೆ ಪೊಲೀಸರ ತಡೆಗೋಡೆ, ಬಲಪ್ರಯೋಗ, ಆದಾಯ ತೆರಿಗೆ ಇಲಾಖೆಯ ಮೂಲಕ ನಾಯಕನ ಚಾರಿತ್ರ್ಯಹನನ–ಬಂಧನ, ಚಳವಳಿಯನ್ನು ಒಳಗಿನಿಂದಲೇ ದುರ್ಬಲಗೊಳಿಸುವ ಷಡ್ಯಂತ್ರ, ರೈತನ ಕೊಲೆ, ಮಾಧ್ಯಮಗಳ ಭಜನೆ – 'ಕ್ಷೇತ್ರಪತಿ'ಯಲ್ಲಿನ ಇವೆಲ್ಲ ಘಟನೆಗಳು ಸಿನಿಮಾದ ದೃಶ್ಯಗಳಷ್ಟೇ ಆಗದೆ ವರ್ತಮಾನದ ಘಟನಾವಳಿಗಳಾಗಿಯೂ ಸಹೃದಯರನ್ನು ತಾಕುತ್ತವೆ. ಪ್ರವಾಹಕ್ಕೆ ವಿರುದ್ಧವಾಗಿ ಈಜುವ ಪತ್ರಕರ್ತರೂ ಸಿನಿಮಾದಲ್ಲಿದ್ದಾರೆ. ಕೊನೆಗೆ, ಸಾಮಾಜಿಕ ಮಾಧ್ಯಮದ ಮೂಲಕ ರೈತ ಚಳವಳಿ ರಾಜ್ಯವ್ಯಾಪಿಯಾಗುತ್ತದೆ. ರೈತರ ಸತ್ಯಾಗ್ರಹ ಅಸಹಕಾರದ ರೂಪ ಪಡೆಯುತ್ತದೆ. ಬಸ್ ಪ್ರಯಾಣಕ್ಕೆ ಶುಲ್ಕ ನೀಡಲು, ವಿದ್ಯುತ್ ಶುಲ್ಕ ಪಾವತಿಸಲು ನಿರಾಕರಿಸುವ ರೈತರು, ತಮ್ಮ ಜಮೀನುಗಳನ್ನು ಮುಖ್ಯಮಂತ್ರಿ ಹೆಸರಿಗೆ ಬರೆದುಕೊಡುವ ಮೂಲಕ ಚಳವಳಿಯನ್ನು ನಿರ್ಣಾಯಕ ಹಂತಕ್ಕೆ ಒಯ್ದು ಸರ್ಕಾರವನ್ನು ಮಣಿಸುತ್ತಾರೆ.

ಉತ್ತರ ಕರ್ನಾಟಕದ ಜವಾರಿ ಭಾಷೆಯ ಸಿನಿಮಾ ಯಾವ ಹಂತದಲ್ಲೂ ಕುಸಿಯದಂತೆ, ತೀವ್ರತೆ ಕಳೆದುಕೊಳ್ಳದಿರುವಂತೆ, ಸಿನಿಮಾ ವ್ಯಾಕರಣಕ್ಕೆ ಆದಷ್ಟೂ ನ್ಯಾಯ ದೊರೆಯುವಂತೆ ನೋಡಿಕೊಂಡಿರುವ ನಿರ್ದೇಶಕ ಶ್ರೀಕಾಂತ ಕಟಗಿ ಮೆಚ್ಚುಗೆಗೆ ಅರ್ಹರು. ಈ ಮೆಚ್ಚುಗೆಯಲ್ಲಿ ನಾಯಕನಟ ನವೀನ್ ಶಂಕರ್ ಅವರಿಗೂ ಪಾಲಿದೆ. 'ಕ್ಷೇತ್ರಪತಿ'ಯ ಮೂಲಕ ಶ್ರೀಕಾಂತ್ ಹಾಗೂ ನವೀನ್ ಮೂಡಿಸಿರುವ ಭರವಸೆ ದೊಡ್ಡದು ಹಾಗೂ ಮಹತ್ವದ್ದು. ಬೆಂಗಳೂರು ಚಿತ್ರೋತ್ಸವದ ಸ್ಪರ್ಧಾತ್ಮಕ ಕನ್ನಡ ಚಿತ್ರಗಳ ವಿಭಾಗದಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಈ ಸಿನಿಮಾಕ್ಕೆ ಜನಮೆಚ್ಚುಗೆಯೂ ಸಿಗಬೇಕಿತ್ತು; ರೈತರು ಹಾಗೂ ರೈತ ಸಂಘಟನೆಗಳ ಬೆಂಬಲವಾದರೂ ದೊರೆಯಬೇಕಿತ್ತು.

ಗುಟುಕು ಜೀವ ಯಾವ ಕ್ಷಣದಲ್ಲಾದರೂ ತಣ್ಣಗಾಗಬಹುದು ಎನ್ನುವಂಥ ನಿರಾಶಾದಾಯಕ ಸಂದರ್ಭಗಳಲ್ಲಿ, ಈ ಘಟಕ್ಕೆ ಇನ್ನೂ ಶಕ್ತಿ ಉಳಿದಿದೆ ಎಂದು ಅಚ್ಚರಿಯೊಂದನ್ನು ನೀಡುವುದು ಕನ್ನಡ ಚಿತ್ರರಂಗದ ಪರಂಪರೆಯೇ ಆಗಿದೆ. ಈಚಿನ ದಿನಗಳ ಅಂಥದೊಂದು ಅಚ್ಚರಿ 'ಕ್ಷೇತ್ರಪತಿ.' ಜನಪ್ರಿಯ ನೆಲೆಗಟ್ಟಿನಲ್ಲಿಯೇ ಜನಪರ ಗಂಭೀರ ಸಿನಿಮಾವೊಂದನ್ನು ರೂಪಿಸುವ ಮಾದರಿಯಾಗಿಯೂ ನೋಡಬಹುದಾದ 'ಕ್ಷೇತ್ರಪತಿ', ಕನ್ನಡ ಚಿತ್ರರಸಿಕರು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿದ್ದ ಚಲನಚಿತ್ರ.

ಚುರುಮುರಿ



ಭೂಸ್ವರ್ಗದ ಮದುವೆಗಳು

• ಸುಮಂಗಲಾ

'ಸುದ್ದಿ ಓದಿದ್ಯೇನು? ಉದ್ಯಮಿ ರೂಪರ್ಟ್ ಮುರ್ಡೋಕ್ ತನಗಿಂತ 25 ವರ್ಷ ಸಣ್ಣಾಕಿನ್ನ ಮದುವೆಯಾಗತಿದ್ದಾನೆ' ಎಂದೆ.

'ನಿಮ್ಮ ಮನುಷ್ಯ ಜಾತಿವಳಗ ಗಂಡಸು ತನಗಿಂತ 50 ವರ್ಷ ಸಣ್ಣಾಕಿನ್ನ ಮದುವೆಯಾದರೂ ಆಶ್ಚರ್ಯ ಏನಿಲ್ಲ. ಇದೇನು ಮಹಾ ಬಿಡು' ಎಂದು ಬೆಕ್ಕಣ್ಣ ಮೂತಿ ತಿರುವಿತು.

'ಅವನಿಗೆ 92 ವರ್ಷ ಕಣಲೇ, ಮತ್ತ ಇದು 5ನೇ ಮದುವೆಯಂತೆ'.

'ಅಂವಾ ಅಷ್ಟು ಮುದುಕ ಆಗಿ, 5ನೇ ಲಗ್ನಕ್ಕೆ ರೆಡಿಯಾಗ್ಯಾನೆ. ಪಾಪ... ನಮ್ ರಾಹುಲಂಕಲ್ಲಿಗೆ 54 ಆದ್ರೂ ಇನ್ನಾ ಮೊದಲ ಕಂಕಣಭಾಗ್ಯನೇ ಕೂಡಿ ಬಂದಿಲ್ಲ' ಎಂದು ನಿಟ್ಟುಸಿರಿಟ್ಟಿತು.

'ಪ್ರಧಾನಿ ಆಗೂವರೆಗೆ ಲಗ್ನಾ ಮಾಡಂಗಿಲ್ಲ ಅಂತ ಅವರವ್ವ ಹೇಳಿರಬಕು' ಎಂದೆ.

'ಪ್ರಧಾನಿ ಆದರೆ ಲಗ್ನ ಆಗೋ ಹಂಗೇ ಇಲ್ಲ! ಪ್ರಧಾನಿಗಳು ಸಿಂಗಲ್ ಆಗಿರಬೇಕು ಅನ್ನೂದು ಪ್ರಧಾನಿ ಪಟ್ಟಕ್ಕೆ ಹೊಸ ಮಾನದಂಡ' ಎಂದು ಬೆಕ್ಕಣ್ಣ ವಿವರಿಸಿತು.

'ಅಂದರ ಪ್ರಧಾನಿ ಆಗೂದಕ್ಕೆ ಬೇಕಿರೋ ಒಂದು ಮಾನದಂಡ ಅಂವಗೈತಿ ಅಂದಂಗಾತು'.

'ಸಿಂಗಲ್ ಅನ್ನೂ ಒಂದು ಮಾನದಂಡ ಸಾಲದು. ಎಲ್ಲಿ ಮಾತುಗಾರಿಕೆ ಬೇಕು, ಎಲ್ಲಿ ಏಕದಂ ಮೌನವಾಗಿರಬೇಕು, ಯಾವ ಹಕ್ಕಿಯನ್ನ ಯಾವ ಕಲ್ಲಿನಿಂದ ಹೆಂಗೆ ಹೊಡಿಬಕು ಅಂತ ನಿದ್ದೆಗಣ್ಣಲ್ಲೂ ಹೇಳೂ ಚಾಣಾಕ್ಷತನ, ಹಿಂಗೆ ಬ್ಯಾರೆ ವಿಚಾರದಾಗೆ ಪಳಗಬೇಕು...' ಬೆಕ್ಕಣ್ಣ ಪಟ್ಟಿ ಮಾಡತೊಡಗಿತು.

'ಹೋಗ್ಲಿಬಿಡು, ದೊಡ್ಡೋರ ವಿಚಾರ ನಮಗ್ಯಾಕೆ? ವಿಷಯಕ್ಕೆ ವಾಪಸು ಬರೂಣು. ಜೂನ್‌ವಳಗೆ ರೂಪರ್ಟ್‌ನ ಭರ್ಜರಿ ಮದುವಿಯಂತೆ. ಇತ್ತಾಗೆ ಅಂಬಾನಿ ಪುತ್ರನ ಐಷಾರಾಮಿ ಮದುವಿನೂ ಜುಲೈವಳಗಂತೆ. ಯಾರಿದ್ದು ಹೆಚ್ಚು ಭರ್ಜರಿ ಅಂತ ಸ್ಪರ್ಧೆ ಇರಬೌದು'.

'ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ ಅಂತಾರಲ್ಲ, ಆದರೆ ಕೋಟ್ಯಧಿಪತಿಗಳು ಸ್ವರ್ಗವನ್ನೇ ಧರೆಗಿಳಿಸಿ ಮದುವೆ ಮಾಡತಾರೆ. ಮೊನ್ನೆ ಮೂರು ದಿನ ಅಂಬಾನಿಗಳು ಪ್ರಿವೆಡ್ಡಿಂಗ್ ಕಾರ್ಯಕ್ರಮ ಮಾಡಿದ್ರಲ್ಲ, ಅದು ಮುಂದಿನ ಜುಲೈ ಮದುವೆಯ ಟೀಸರ್... ಪಿಚ್ಚರ್ ಅಭಿ ಬಾಕಿ ಹೈ!' ಬೆಕ್ಕಣ್ಣ ಹ್ಹಿಹ್ಹಿಗುಟ್ಟಿತು.

ಸಂಗತ

ಸಾಮಾಜಿಕ ಕ್ಷೋಭೆ ಮತ್ತು ಸಾಂಸ್ಕೃತಿಕ ನೆಲೆ

ಸಮಾಜವನ್ನು ಸರಿದಿಕ್ಕಿಗೆ ಕೊಂಡೊಯ್ಯುವ ಹೊಣೆಯನ್ನು ಮರೆತೆವೇಕೆ?

• ನಾ. ದಿವಾಕರ

ನೆಮ್ಮದಿಯಿಂದ ಬದುಕು ಕಟ್ಟಿಕೊಳ್ಳಲು ಹಾದಿಗಳನ್ನು ಹುಡುಕುತ್ತಾ, ನಾಳೆಗಳನ್ನು ಎಣಿಸುತ್ತಾ, ಆ ಹೊತ್ತಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾ ಸದಾ ದುಡಿಮೆಯಲ್ಲಿ ತೊಡಗಿರುವ ಅಸಂಖ್ಯಾತ ಜನತೆ ಆಡಳಿತ ವ್ಯವಸ್ಥೆಯಿಂದ ಬಯಸುವುದು ಬರೀ ಶಾಂತಿ, ಸೌಹಾರ್ದದ ವಾತಾವರಣವನ್ನಷ್ಟೆ. ಆಡಳಿತ ಪರಿಭಾಷೆಯಲ್ಲಿ ಕಾನೂನು-ಸುವ್ಯವಸ್ಥೆ ಎಂದು ಬಣ್ಣಿಸಲಾಗುವ ಈ ವಾತಾವರಣವನ್ನು ನಿತ್ಯ ಕಾಯಕ ಜೀವಿಗಳು ತಮ್ಮ ಬದುಕಿನ ಹಾದಿಯಲ್ಲಿ ಅತ್ಯವಶ್ಯವಾದ ಸೋದರಭಾವ ಹಾಗೂ ಸಮನ್ವಯದ ನೆಲೆಗಳಲ್ಲಿ ಕಾಣಲು ಬಯಸುತ್ತಾರೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಎಕ್ಸ್, ವಾಟ್ಸ್‌ಆ್ಯಪ್ ನಂತಹ ವಿದ್ಯುನ್ಮಾನ ಜಗತ್ತಿನ ಪರಿವೆಯೇ ಇಲ್ಲದೆ, ಇದ್ದರೂ ಅವುಗಳ ಪ್ರಭಾವಕ್ಕೊಳಪಡದೆ, ಸಮಾಜಕ್ಕೆ ಅಗತ್ಯವಾದ ಜೀವನಾವಶ್ಯ ಪರಿಕರಗಳನ್ನು ಉತ್ಪಾದಿಸುವ ಈ ಶ್ರಮಜೀವಿಗಳನ್ನು ರಸ್ತೆ, ರೈಲು ಕಾಮಗಾರಿಗಳಿಂದ ಮುಗಿಲೆತ್ತರದ ಕಟ್ಟಡ ನಿರ್ಮಾಣದವರೆಗೂ ಕಾಣಬಹುದು. ಮತ್ತೊಂದು ಬದಿಯಲ್ಲಿ, ಕುಗ್ರಾಮದ ಹೊಲ ಗದ್ದೆಗಳಿಂದ ಹಿಡಿದು ಬೃಹತ್ ಪ್ಲಾಂಟೇಷನ್‌ಗಳವರೆಗೂ ಗುರುತಿಸಬಹುದು. ಭಾರತವು ಡಿಜಿಟಲ್ ಆರ್ಥಿಕತೆಯಲ್ಲಿ ಎಷ್ಟೇ ಮುನ್ನಡೆ ಸಾಧಿಸಿದ್ದರೂ, ನಿಜವಾದ ಭಾರತವನ್ನು ಪ್ರತಿನಿಧಿಸುವ ಬಹುಸಂಖ್ಯಾತರು ಈ ಶ್ರಮಜೀವಿಗಳೇ ಆಗಿರುತ್ತಾರೆ. ಜಾತಿ ಶ್ರೇಷ್ಠತೆ, ಅಹಮಿಕೆ, ಧಾರ್ಮಿಕ ಪಾರಮ್ಯ, ಸಾಂಸ್ಕೃತಿಕ ಆಧಿಪತ್ಯ ಇದಾವುದರ ಗೊಡವೆಯೂ ಇಲ್ಲದೆ, ಈ ಬಹುಸಂಖ್ಯಾತ ವರ್ಗ ದೇಶ ಕಟ್ಟುವ ಪ್ರಕ್ರಿಯೆಯಲ್ಲಿ ನಿಷ್ಠೆಯಿಂದ ತೊಡಗಿರುತ್ತದೆ.

ನವ ಉದಾರವಾದದ ಮಾರುಕಟ್ಟೆ ಆರ್ಥಿಕತೆ ಮತ್ತು ಬಲಪಂಥೀಯತೆ ಪೋಷಿಸುತ್ತಿರುವ ಸಾಂಸ್ಕೃತಿಕ ರಾಜಕಾರಣವು ವ್ಯವಸ್ಥೆಯು ಸೃಷ್ಟಿಸುತ್ತಿರುವ ಅಸಮಾನತೆಯ ಕಂದಕಗಳನ್ನು ಮರೆಮಾಚುವ ಸಲುವಾಗಿಯೇ ಯುವಪೀಳಿಗೆಯನ್ನು ಈ ದುಡಿಮೆಯ ಜಗತ್ತಿನಿಂದಲೇ ಭ್ರಮಾಧೀನಗೊಳಿಸುತ್ತಿದೆ. ಸಮಾಜದಲ್ಲಿ ಕ್ಷೋಭೆಯನ್ನು ಹೆಚ್ಚಿಸುವ ವಿನೂತನ ಮಾರ್ಗಗಳನ್ನು ಕಂಡುಕೊಳ್ಳುತ್ತಿದೆ. ಶಾಂತಿ, ಸಹಬಾಳ್ವೆ ಮತ್ತು ಮಾನವತೆಯನ್ನು ಬೋಧಿಸಬೇಕಾದ ಧರ್ಮಕೇಂದ್ರಗಳು ತಾತ್ವಿಕವಾಗಿ, ಗ್ರಾಂಥಿಕವಾಗಿ ಇದನ್ನೇ ಸಾರುತ್ತಿದ್ದರೂ ಮತ್ತೊಂದು ಬದಿಯಲ್ಲಿ ಇದೇ ಧರ್ಮಶ್ರದ್ಧೆ ಮತ್ತು ನಂಬಿಕೆಗಳು ಸಮಾಜದಲ್ಲಿ ಭಿನ್ನಭೇದಗಳನ್ನು ವಿಭಿನ್ನ ನೆಲೆಗಳಲ್ಲಿ ಸೃಷ್ಟಿಸುತ್ತಿವೆ. ದ್ವೇಷ ರಾಜಕಾರಣ ಎಂಬ ರಾಜಕೀಯ ಪರಿಭಾಷೆಯಿಂದಾಚೆ ನೋಡಿದಾಗ ಈ ದ್ವೇಷಾಸೂಯೆಗಳ ಮೂಲವನ್ನು ಇದೇ ಧಾರ್ಮಿಕ ಬೋಧನೆಗಳ ತಾತ್ವಿಕ ನೆಲೆಗಳ ನಡುವೆ ಗುರುತಿಸಬಹುದು.

ಎಲ್ಲರನ್ನೂ ಪ್ರೀತಿಸಿ ಎಂಬ ಗ್ರಾಂಥಿಕ ಉದ್ಘೋಷವನ್ನು ಸಾಕಾರಗೊಳಿಸಬೇಕಾದರೆ ವಿವಿಧ ಧಾರ್ಮಿಕ ನೆಲೆಗಳು ಸಮ್ಮಿಳಿತವಾಗುವುದು ಅತ್ಯವಶ್ಯ. ಇಂತಹ ಸೌಹಾರ್ದದ, ಸಮನ್ವಯದ ಪ್ರಸಂಗಗಳು ಸಮಾಜದ ವಿವಿಧ ಸ್ತರಗಳಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೇ ಮತ್ತೊಂದೆಡೆ, ಧಾರ್ಮಿಕ ಅಸ್ಮಿತೆಗಳೇ ಮನುಷ್ಯ ಮನುಷ್ಯನ ನಡುವೆ ಗೋಡೆಗಳನ್ನು ಕಟ್ಟುವ ಅಥವಾ ಅಸ್ಮಿತೆಗಳ ಕೋಟೆಗಳನ್ನು ನಿರ್ಮಿಸುವ ಪ್ರಕ್ರಿಯೆಯನ್ನೂ ನಾವು ಗಮನಿಸುತ್ತಿದ್ದೇವೆ. ಈ ವಿಕೃತ ಬೌದ್ಧಿಕತೆಯ ಪರಿಣಾಮವಾಗಿಯೇ ಸಮಾಜದಲ್ಲಿ ನಡೆಯುವ ಪ್ರತಿಯೊಂದು ಅಪರಾಧವೂ ಪಾತಕ ಕೃತ್ಯವೂ ಸಾಪೇಕ್ಷತೆಯನ್ನು ಪಡೆದುಕೊಂಡು, ಸಾಮುದಾಯಿಕ ನೆಲೆಯಲ್ಲಿ ನಿರ್ವಚನೆಗೊಳಗಾಗುತ್ತದೆ. ಒಂದು ಬಾಂಬ್ ಸ್ಫೋಟ, ಒಂದು ಜಿಂದಾಬಾದ್ ಘೋಷಣೆ ಅಥವಾ ಒಂದು ಅತ್ಯಾಚಾರ ಹೀಗೆ ಯಾವುದೇ ಪಾತಕ ಕೃತ್ಯವಾದರೂ ಅಲ್ಲಿ ಧಾರ್ಮಿಕ ಅಸ್ಮಿತೆಗಳು ನುಸುಳುತ್ತವೆ.

ವ್ಯಕ್ತಿಗತ ನೆಲೆಯಲ್ಲಿ ಅಪರಾಧವನ್ನು ನಿರ್ವಚಿಸುವ ವ್ಯವಧಾನವನ್ನು ಎಂದೋ ಕಳೆದುಕೊಂಡಿರುವ ಭಾರತೀಯ ಸಮಾಜ, ವ್ಯಷ್ಟಿಯ ಪಾತಕಗಳನ್ನೂ ಸಮಷ್ಟಿಗೆ ಆರೋಪಿಸಿ ಇಡೀ ಸಮುದಾಯಗಳನ್ನು ಕಟಕಟೆಯಲ್ಲಿ ನಿಲ್ಲಿಸುವ ಒಂದು ಪರಿಪಾಟವನ್ನು ಸೃಷ್ಟಿಸಿಕೊಂಡಿದೆ. ಹಾಗಾಗಿಯೇ ಪ್ರತಿಯೊಂದು ಪಾತಕದ ಸಂದರ್ಭದಲ್ಲೂ ಅಪರಾಧಿಯನ್ನು ಮತ್ತು ಸಂತ್ರಸ್ತರನ್ನು ಯಾವುದೋ ಒಂದು ಅಸ್ಮಿತೆಯ ಚೌಕಟ್ಟಿಗೆ ಸಿಲುಕಿಸುವ ಸಾಪೇಕ್ಷತಾ ಸಿದ್ಧಾಂತ ಇಂದು ಪ್ರಚಲಿತವಾಗಿದೆ. ಜಾತಿ, ಮತ, ಧರ್ಮಗಳ ಚೌಕಟ್ಟುಗಳಿಂದಾಚೆ ನೋಡಿದಾಗ, ಈ ಪಾತಕ ಲೋಕ ತನ್ನೆಡೆಗೆ ಆಕರ್ಷಿಸುತ್ತಿರುವುದು ಯಾರನ್ನು, ಯಾವ ವರ್ಗದವರನ್ನು, ಯಾವ ಸ್ತರದವರನ್ನು ಎಂಬ ವಾಸ್ತವದ ಅರಿವಾಗುತ್ತದೆ.

ಮನುಷ್ಯರ ನಡುವೆ ಪರಸ್ಪರ ದ್ವೇಷ ಹರಡಲು ಅತ್ಯಾಧುನಿಕ ವಿದ್ಯುನ್ಮಾನ ಸಾಧನಗಳನ್ನು ಬಳಸುವ ಒಂದು ಬೌದ್ಧಿಕ ವರ್ಗ ತಾನೇ ಸೃಷ್ಟಿಸುವ ಪಾತಕಲೋಕದ ಸದಸ್ಯರನ್ನು ಅಲಕ್ಷಿತ, ವಂಚಿತ ಸಮುದಾಯಗಳ ಯುವ ಸಂಕುಲದ ನಡುವಿನಿಂದ ಆಯ್ಕೆ ಮಾಡಿಕೊಳ್ಳುತ್ತದೆ.

ಅಪರಾಧ ಲೋಕದ ಕಡೆಗೆ ನೋಡುತ್ತಾ ಒಂದು ಸಮುದಾಯದ ಅಥವಾ ವರ್ಗದ ಸದಸ್ಯರನ್ನು ಕಟಕಟೆಯಲ್ಲಿ ನಿಲ್ಲಿಸುವ ಮೇಲ್‌ಸ್ತರದ ಬೌದ್ಧಿಕ ಮನಸುಗಳು, ಈ ಪಾತಕ ಜಗತ್ತಿನ ಉತ್ಪತ್ತಿಯಲ್ಲಿ ತಮ್ಮ ಕೊಡುಗೆಯೂ ಇದೆ ಎನ್ನುವುದನ್ನು ಗಮನಿಸುವುದೇ ಇಲ್ಲ. ಚಿಕಿತ್ಸಕ ಗುಣವನ್ನು ಕಳೆದುಕೊಂಡಿರುವ ಸಮಾಜದಲ್ಲಿ ಮಾತ್ರ ಇಂತಹ ಸಂದಿಗ್ಧವನ್ನು ಕಾಣಲು ಸಾಧ್ಯ. ಬಹುಶಃ ಭಾರತೀಯ ಸಮಾಜ ತನ್ನೆಲ್ಲಾ ಆಧುನಿಕತೆ, ನಾಗರಿಕತೆಯ ನಡುವೆಯೂ ಈ ಚಿಕಿತ್ಸಕ ಗುಣವನ್ನು ಕಳೆದುಕೊಂಡು ಬೆತ್ತಲಾಗಿದೆ ಎನಿಸುತ್ತದೆ. ಹಾಗಾಗಿಯೇ ವಿಶಾಲ ಸಮಾಜಕ್ಕೆ ಅಪರಾಧ ಕಾಣುತ್ತಿದೆ, ಅಪರಾಧಿ ಕಾಣುತ್ತಿದ್ದಾನೆ, ಆದರೆ ಪಾತಕ ಜಗತ್ತಿನ ಆದಿಮೂಲ ಗೋಚರಿಸುತ್ತಿಲ್ಲ ಅಥವಾ ಕಂಡೂ ಕಾಣದಂತೆ ಮಗುಮ್ಮಾಗಿದೆ. ನವ ಉದಾರವಾದ ಮತ್ತು ಬಲಪಂಥೀಯ ಸಾಂಸ್ಕೃತಿಕ ರಾಜಕಾರಣಕ್ಕೆ ಇದೇ ಬೇಕಾಗಿದೆ.

ವಾಚಕರ ವಾಣಿ

ಅನಾಗರಿಕ ವರ್ತನೆ, ಸುಧಾರಣೆಯ ಅಗತ್ಯ

ದೆಹಲಿಯಲ್ಲಿ ರಸ್ತೆ ಮೇಲೆ ನಮಾಜು ಮಾಡುತ್ತಿದ್ದ ವ್ಯಕ್ತಿಯನ್ನು ಕಾಲಿನಿಂದ ಒದ್ದು, ಎಬ್ಬಿಸಲು ಪ್ರಯತ್ನಿಸಿದ ಇನ್‌ಸ್ಪೆಕ್ಟರನ್ನು ಅಮಾನತುಗೊಳಿಸಿದ ಬಗ್ಗೆ ವರದಿಯಾಗಿದೆ. ಯಾವುದೇ ವ್ಯಕ್ತಿಯನ್ನು ಕಾಲಿನಿಂದ ಒದೆಯುವುದು ಅಥವಾ ವ್ಯಕ್ತಿಯೊಂದಿಗೆ ಅನಾಗರಿಕವಾಗಿ ವರ್ತಿಸುವುದು ಕರ್ತವ್ಯನಿರತ ಪೊಲೀಸ್ ಅಧಿಕಾರಿಗೆ ಭೂಷಣವಲ್ಲ. ಅದೇ ರೀತಿ ರಸ್ತೆಗಳ ಮೇಲೆ ಎಲ್ಲೆಂದರಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ನಮಾಜ್ ಮಾಡಲು ಮುಂದಾಗುವುದು ಕೂಡ ಉಚಿತವಲ್ಲ.

ಕೆಲವು ವರ್ಷಗಳ ಹಿಂದೆ ಮುಂಬೈನಲ್ಲಿ ಈ ರೀತಿ ರಸ್ತೆಗಳ ಮೇಲೆ ನಮಾಜ್ ಮಾಡಿ ಸಂಚಾರಕ್ಕೆ ಅಡಚಣೆ ಉಂಟುಮಾಡುತ್ತಿದ್ದುದಕ್ಕೆ ಪ್ರತಿಯಾಗಿ ಶಿವಸೇನಾವು ಮಹಾ ಆರತಿಯಂತಹ ಕ್ರಮಗಳ ಮೂಲಕ ಅದನ್ನು ವಿರೋಧಿಸಲು ತೊಡಗಿದ್ದನ್ನು ಗಮನಿಸಬೇಕು. ಪ್ರಾರ್ಥನೆ ಅಥವಾ ಯಾವುದೇ ಧಾರ್ಮಿಕ ವಿಧಿವಿಧಾನಗಳು ವೈಯಕ್ತಿಕ ಸ್ವರೂಪದಲ್ಲಿ ಖಾಸಗಿಯಾಗಿ ಇರಬೇಕು. ಸಾಮೂಹಿಕವಾಗಿ ಇದ್ದರೆ ಅವು ಒಂದು ಇತಿಮಿತಿಯೊಳಗೆ ಇರಬೇಕು. ಇಲ್ಲದಿದ್ದರೆ ಇಂತಹ ಮತೀಯ ಆಚರಣೆಗಳು, ಕರ್ಮಠವಾದಗಳನ್ನೇ ಬಂಡವಾಳವನ್ನಾಗಿ ಮಾಡಿಕೊಳ್ಳುವ ರಾಜಕೀಯ ಬೆಳವಣಿಗೆಗಳನ್ನು ನಾವು ನೋಡುತ್ತಲೇ ಇರಬೇಕಾಗುತ್ತದೆ. ಎಲ್ಲ ಮತ ಪಂಥಗಳಲ್ಲಿ ಇಂದು ಕಾಲಕ್ಕೆ ತಕ್ಕ ಬದಲಾವಣೆ, ಸುಧಾರಣೆ ಆಗಬೇಕಾದುದು ಅತಿ ಅವಶ್ಯ.

ವೆಂಕಟೇಶ ಮಾಚಕನೂರ, ಧಾರವಾಡ

ಎಲ್‌ಪಿಜಿ: ಚುನಾವಣೆಯ ಆಮಿಷವಾಗದಿರಲಿ

ಚುನಾವಣೆ ಸಮೀಪಿಸಿದಾಗ ರಾಜಕೀಯ ಪಕ್ಷಗಳು ಮತ ಸೆಳೆಯಲು ವಿವಿಧ ಬಗೆಯ ಸರ್ಕಸ್ ಮಾಡುವುದು ರೂಢಿಗತ. ಹೀಗಿರುವಾಗ, ಈ ಬಾರಿಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಎಲ್‌ಪಿಜಿ ದರ ತಗ್ಗಿಸುವ ಮೂಲಕ ಮಹಿಳಾ ಸಮುದಾಯಕ್ಕೆ ಆಮಿಷ ಒಡ್ಡಿದೆ ಎಂಬ ಅನುಮಾನ ಮೂಡುತ್ತದೆ. ಮಹಿಳೆಯರ ಪರವಾಗಿ ತಾನು ನಿಲ್ಲುತ್ತೇನೆ ಎಂಬಂತಹ ನಿಲುವುಗಳನ್ನು ಸರ್ಕಾರಗಳು ಈ ರೀತಿ ಬಿಂಬಿಸಿಕೊಳ್ಳುತ್ತವೆ.

ರಾಜಕೀಯ ತುಷ್ಟೀಕರಣಕ್ಕಾಗಿ ಹೀಗೆ ಸಮೀಕರಿಸುವುದು ಮತ್ತು ಪ್ರಚಾರ ಮಾಡುವುದು ತರವಲ್ಲ. ಮಹಿಳೆಯರ ಸಮಾಜಮುಖಿ ಕಾರ್ಯಗಳ ಜೊತೆಗೆ ಅವರ ಆದರ್ಶ, ಮೌಲ್ಯಗಳನ್ನು ಸಮಾಜಕ್ಕೆ ತೋರಿಸಿ, ತುಳಿತಕ್ಕೆ ಒಳಪಟ್ಟ ಹೆಣ್ಣುಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶವು ಮಹಿಳಾ ದಿನಾಚರಣೆಗೆ ಅರ್ಥ ತರುತ್ತದೆ.

ಮಲ್ಲಿಕಾರ್ಜುನ್ ತೇಲಿ, ಗೋಠೆ, ಜಮಖಂಡಿ

ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪ ಬೇಕಿದೆ

ರಾಜ್ಯ ಪಠ್ಯಕ್ರಮದ ಶಾಲೆಗಳ 5, 8 ಹಾಗೂ 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆಯು ಈ ಮೊದಲೇ ನಿಗದಿಯಾದಂತೆ ಜರುಗಲು ಅವಕಾಶವಾಗಿರುವುದು ಸ್ವಾಗತಾರ್ಹ. ಹೈಕೋರ್ಟ್ ಏಕಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ನ್ಯಾಯಪೀಠವು ಮಧ್ಯಂತರ ತಡೆ ನೀಡಿದ್ದರಿಂದ ಇದು ಸಾಧ್ಯವಾಗಿದೆ. ಇಂದು, ಕಲಿಯುವ ಮಕ್ಕಳಿಗೆ ಪರೀಕ್ಷೆಯ ಭಯವೇ ಇಲ್ಲದೆ ಕನಿಷ್ಠ ಸಾಮಾನ್ಯ ಜ್ಞಾನದಲ್ಲೂ ಅವರು ಹಿಂದುಳಿದಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಶಾಲೆಯಲ್ಲಿ ಪಾಠ, ಮನೆಯಲ್ಲಿ ಅಭ್ಯಾಸ ಕ್ರಮ ಇದ್ದರೂ ಇಂದಿನ ಬಹುತೇಕ ವಿದ್ಯಾರ್ಥಿಗಳಿಗೆ ಪ್ರಾಪಂಚಿಕ ಸಾಮಾನ್ಯ ಜ್ಞಾನದ ಕನಿಷ್ಠ ಅರಿವೂ ಇಲ್ಲದಿರುವುದನ್ನು ಗಮನಿಸಬಹುದು. ಇದಕ್ಕೆ ಖಾಸಗಿ, ಸರ್ಕಾರಿ ಎನ್ನುವ ತಾರತಮ್ಯ ಇಲ್ಲ. 90ರ ದಶಕದವರೆಗೂ 7ನೇ ತರಗತಿ ಮತ್ತು 10ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ಇತ್ತು. ಇದರಿಂದಾಗಿ, 5ನೇ ತರಗತಿಯಿಂದಲೇ 7ನೇ ತರಗತಿಯ ಪಬ್ಲಿಕ್ ಪರೀಕ್ಷೆಗೆ ಮಾಧ್ಯಮಿಕ ಶಾಲೆಗಳಲ್ಲಿ, 8ನೇ ತರಗತಿಯಿಂದಲೇ ಪ್ರೌಢಶಾಲೆಯ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಗೆ ಅಂದಿನ ಶಿಕ್ಷಕರು ತಯಾರಿ ನಡೆಸುತ್ತಿದ್ದರು. ಹೀಗಾಗಿ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡುತ್ತಿತ್ತು. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯೇ ಬದಲಾಗಿದೆ. ಸಾಮೂಹಿಕ ನಕಲು, ಕಾಪಿ, ಪ್ರಶ್ನೆಪತ್ರಿಕೆ ಬಯಲು, ಮನೆಪಾಠ, ಡೊನೇಷನ್ ಹಾವಳಿಯಂತಹ ಪಿಡುಗುಗಳು ಶಿಕ್ಷಣ ವ್ಯವಸ್ಥೆಯ ಮೌಲ್ಯವನ್ನು ಕುಗ್ಗಿಸಿವೆ.

ಮುಳ್ಳೂರು ಪ್ರಕಾಶ್, ಮೈಸೂರು

ನೀರು ಬಳಕೆಗೆ ಮಿತಿ ಇರಲಿ

ಬೆಂಗಳೂರು ನಗರದಲ್ಲಿ ಕುಡಿಯುವ ನೀರನ್ನು ಇತರ ಉದ್ದೇಶಗಳಿಗೆ ಬಳಸುವುದನ್ನು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿಷೇಧಿಸಿರುವುದು ಸ್ವಾಗತಾರ್ಹ. ಆದರೆ ನಾವು ಮನೆಯಲ್ಲಿ ಬೆಳೆದಿರುವ ಹೂಕುಂಡಗಳಿಗೆ ಮತ್ತು ವಾಹನ ತೊಳೆಯಲು ಬಳಸುವುದಕ್ಕೆ ಏನು ಮಾಡಬೇಕು? ನೀರಿನ ದುರುಪಯೋಗ ತಪ್ಪಿಸಲು ನೀರಿನ ಬಳಕೆಗೆ ಮಿತಿ ಹೇರಬೇಕು. ಆ ಮೂಲಕ ಅಧಿಕ ಉಪಯೋಗಕ್ಕೆ ದಂಡ ವಿಧಿಸುವುದು ಸೂಕ್ತ.

ಹಡಾಲ್ ಸಿದ್ಧಯ್ಯ ಚಂದ್ರಶೇಖರ, ಬೆಂಗಳೂರು

ಸಂತೆಯಲ್ಲವಿದು ಬಸ್ ನಿಲ್ದಾಣ...

ರಾಜ್ಯ ಸಾರಿಗೆ ನಿಗಮಗಳ ಬಸ್ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ಹೊರಡುವ ಅಂಕಣ, ವಾಹನ ಸಂಖ್ಯೆ, ಸಮಯ ಹಾಗೂ ಇತರ ಪ್ರಮುಖ ಮಾಹಿತಿಗಳನ್ನು ನೀಡಲು ರಾಜ್ಯದ ಬಹುತೇಕ ಎಲ್ಲ ಬಸ್ ನಿಲ್ದಾಣಗಳಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಲಾಗಿದೆ. ಇದರಿಂದ ಪ್ರಯಾಣಿಕರಿಗೆ ಬಹಳಷ್ಟು ಪ್ರಯೋಜನವಾಗುತ್ತಿದೆ. ನಿಗಮಗಳು ಲಾಭ ಗಳಿಸುವ ಉದ್ದೇಶದಿಂದ ಕೆಲವು ಪ್ರಮುಖ ಬಸ್ ನಿಲ್ದಾಣಗಳಲ್ಲಿ ವಾಣಿಜ್ಯ ಪ್ರಕಟಣೆಗಳನ್ನು ಧ್ವನಿವರ್ಧಕಗಳ ಮೂಲಕ ಪ್ರಸಾರ ಮಾಡುತ್ತಿವೆ. ವಾಣಿಜ್ಯ ಪ್ರಕಟಣೆಗಳ ಧ್ವನಿ ಪರಿಮಾಣ (ಸೌಂಡ್ ವಾಲ್ಯೂಮ್) ಹೆಚ್ಚಾಗಿರುವುದರಿಂದ ಹಾಗೂ ಪ್ರಕಟಣೆಗಳನ್ನು ನಿರಂತರವಾಗಿ ಪ್ರಸಾರ ಮಾಡುವುದರಿಂದ, ಬಸ್ ನಿಲ್ದಾಣ ಸಂಪೂರ್ಣವಾಗಿ ಗದ್ದಲಮಯವಾಗಿರುತ್ತದೆ. ಇದರಿಂದಾಗಿ, ಪ್ರಸಾರವಾಗುವ ಬಸ್‌ಗಳ ಮಾಹಿತಿಯ ಕಡೆ ಗಮನ ಕೇಂದ್ರೀಕರಿಸಲು ಪ್ರಯಾಣಿಕರಿಗೆ ತೊಡಕಾಗುತ್ತಿದೆ ಹಾಗೂ ಸಹ ಪ್ರಯಾಣಿಕರ ಜೊತೆ ಮಾತನಾಡಲು ಅಡ್ಡಿ ಉಂಟಾಗುತ್ತಿದೆ. ಇದರ ನಡುವೆ ತಿಂಡಿ ತಿನಿಸು ಮಾರುವವರ ಉಪಟಳವೂ ಸೇರಿಕೊಂಡು ನೆಮ್ಮದಿಯಿಂದ ಬಸ್‌ಗಾಗಿ ಕಾಯಲಾಗುತ್ತಿಲ್ಲ.

ಇತ್ತೀಚಿನ ದಿನಗಳಲ್ಲಿ ಬಸ್ ಪ್ರಯಾಣಿಕರ ಸಂಖ್ಯೆಯೂ ಅಧಿಕವಾಗುತ್ತಿರುವುದರಿಂದ ಬಸ್ ನಿಲ್ದಾಣಗಳು ಜಾತ್ರೆಯ ವಾತಾವರಣವನ್ನು ನೆನಪಿಸುತ್ತಿವೆ. ಆದ್ದರಿಂದ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ನೆಮ್ಮದಿಯಿಂದ ಕುಳಿತುಕೊಳ್ಳುವಂತೆ ಇರಬೇಕು ಹಾಗೂ ಧ್ವನಿವರ್ಧಕಗಳ ಮೂಲಕ ಪ್ರಯಾಣಿಕರಿಗೆ ನೀಡಲಾಗುವ ಮಾಹಿತಿಗಳು ಉಪಯೋಗಕ್ಕೆ ಬರುವಂತೆ ಇರಬೇಕು. ಆದ್ದರಿಂದ ಪ್ರಯಾಣಿಕರಿಗೆ ಒದಗಿಸುವ ಮಾಹಿತಿಗಳಿಗೆ ಆದ್ಯತೆ ನೀಡಿ, ವಾಣಿಜ್ಯ ಪ್ರಕಟಣೆಗಳ ಅವಧಿಯನ್ನು ಮೊಟಕುಗೊಳಿಸುವ ಕಡೆ ಸಂಬಂಧಿಸಿದವರು ಗಮನಹರಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚುನಾವಣಾ ಆಯುಕ್ತರ ನೇಮಕ

ಕೇಂದ್ರದ ಮುಂದೆ ಹಲವು ಹಾದಿಗಳು...

ರಾಜೀನಾಮೆಗೆ ಅನ್ಯ ಕಾರಣಗಳಿಲ್ಲ

ಅನಾರೋಗ್ಯದ ಕಾರಣದಿಂದ ಅರುಣ್ ಗೋಯಲ್ ಅವರು ಚುನಾವಣಾ ಆಯುಕ್ತರ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಅಧಿಕೃತ ದಾಖಲೆಗಳು ಹೇಳುತ್ತವೆ. ಆದರೆ, ವಾಸ್ತವದಲ್ಲಿ ಅವರಿಗೆ ಆರೋಗ್ಯದ ಯಾವುದೇ ಸಮಸ್ಯೆ ಇಲ್ಲ ಎಂದು ಮೂಲಗಳು ಸ್ಪಷ್ಟಪಡಿಸಿವೆ. ಜತೆಗೆ ಮುಖ್ಯ ಚುನಾವಣಾ ಆಯುಕ್ತರೊಂದಿಗಿನ ಭಿನ್ನಾಭಿಪ್ರಾಯದ ಕಾರಣದಿಂದ ಗೋಯಲ್ ರಾಜೀನಾಮೆ ನೀಡಿದ್ದಾರೆ ಎಂದೂ ಮೂಲಗಳು ಹೇಳಿವೆ. ಆದರೆ, ಗೋಯಲ್ ಅವರು ಅನಾರೋಗ್ಯದ ಕಾರಣದಿಂದ ರಾಜೀನಾಮೆ ನೀಡುತ್ತಿದ್ದೇನೆ ಎಂದು ನಮೂದಿಸಿರುವುದು ಕಾನೂನಿನ ನಿರ್ಬಂಧದ ಕಾರಣದಿಂದ ಮಾತ್ರ. ಏಕೆಂದರೆ ಕಾನೂನಿನ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರು ಬೇರೆ ಕಾರಣಗಳನ್ನು ನೀಡಿ ರಾಜೀನಾಮೆ ನೀಡುವಂತಿಲ್ಲ. ಅವರ ಹುದ್ದೆ ತೆರವಾಗುವುದು ಅವರು ಆರು ವರ್ಷ ಸೇವೆ ಪೂರೈಸಿದಾಗ ಅಥವಾ ಅವರಿಗೆ 65 ವರ್ಷವಾದಾಗ. ಅವಧಿಗೂ ಮುನ್ನ ರಾಜೀನಾಮೆ ನೀಡಬೇಕು ಅಂದರೆ 'ಅನಾರೋಗ್ಯವಿದೆ' ಎಂದು ಪ್ರಮಾಣಪತ್ರ ಸಲ್ಲಿಸಲೇಬೇಕು. ವೈಯಕ್ತಿಕ ಕಾರಣಗಳು, ರಾಜಕೀಯ ಒತ್ತಡಗಳು, ಆಯೋಗದಲ್ಲಿನ ಭಿನ್ನಾಭಿಪ್ರಾಯಗಳು ಸೇರಿ ಬೇರೆ ಯಾವುದೇ ಕಾರಣಗಳಿದ್ದರೂ ರಾಜೀನಾಮೆ ವೇಳೆ ಅವುಗಳನ್ನು ಉಲ್ಲೇಖಿಸಲು ಅವಕಾಶವಿಲ್ಲ.

ಪ್ರಜಾವಾಣಿ ವಾರ್ತೆ

ಚುನಾವಣಾ ಆಯುಕ್ತರಾಗಿದ್ದ ಅರುಣ್ ಗೋಯಲ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ, ಚುನಾವಣಾ ಆಯೋಗದಿಂದ ಹೊರ ನಡೆದಿದ್ದಾರೆ. ಇದಕ್ಕೂ ಮುನ್ನ ಫೆಬ್ರುವರಿಯಲ್ಲಿ ಮತ್ತೊಬ್ಬ ಚುನಾವಣಾ ಆಯುಕ್ತ ಅನೂಪ್ ಚಂದ್ರ ಪಾಂಡೆ ಅವರು ನಿವೃತ್ತರಾಗಿದ್ದರು. ಅಂದರೆ ಇದ್ದ ಮೂವರು ಆಯುಕ್ತರಲ್ಲಿ ಎರಡು ಹುದ್ದೆಗಳು ತೆರವಾಗಿವೆ. ಇನ್ನೇನು ಲೋಕಸಭಾ ಚುನಾವಣೆ ನಡೆಯಬೇಕಿದೆ. ಅದಕ್ಕೂ ಮುನ್ನ ಕೇಂದ್ರ ಸರ್ಕಾರವು ಇಬ್ಬರು ಚುನಾವಣಾ ಆಯುಕ್ತರನ್ನು ನೇಮಕ ಮಾಡುತ್ತದೆಯೇ ಎಂಬುದು ಈ ಹೊತ್ತಿನ ಪ್ರಶ್ನೆ. ಚುನಾವಣಾ ಆಯೋಗ ಮತ್ತು ಚುನಾವಣಾ ಆಯುಕ್ತರ ನೇಮಕಾತಿ ಮತ್ತು ಅಧಿಕಾರಗಳಿಗೆ ಸಂಬಂಧಿಸಿದ ಕಾನೂನುಗಳು ಸರ್ಕಾರದ ಮುಂದೆ ಹಲವು ಅವಕಾಶ ಮತ್ತು ಸಾಧ್ಯತೆಗಳನ್ನು ಇರಿಸಿವೆ.



ಚುನಾವಣಾ ಆಯೋಗವನ್ನು ರಚಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ಸಂವಿಧಾನದ 324ನೇ ವಿಧಿಯು ನೀಡುತ್ತದೆ. ಚುನಾವಣಾ ಆಯೋಗದ ರಚನೆ, ಆಯುಕ್ತರ ನೇಮಕ, ಸೇವಾ ನಿಯಮ, ಅಧಿಕಾರ ವ್ಯಾಪ್ತಿಯನ್ನು ನಿರ್ಧರಿಸಲು ಸರ್ಕಾರವು ಪ್ರತ್ಯೇಕ ಕಾನೂನನ್ನು ರಚಿಸಬೇಕು ಎಂದೂ ಈ ವಿಧಿ ಹೇಳುತ್ತದೆ. ಅದರಂತೆ ಕಾಯ್ದೆ ಜಾರಿಯಲ್ಲಿಯೂ ಇದೆ. ಆದರೆ, ಮೂಲ ಕಾಯ್ದೆಯ ಪ್ರಕಾರ ಒಬ್ಬ ಚುನಾವಣಾ ಆಯುಕ್ತರನ್ನು ಮಾತ್ರ ನೇಮಕ ಮಾಡಲು ಅವಕಾಶವಿತ್ತು ಮತ್ತು 1989ರವರೆಗೆ ಅದೇ ಪದ್ಧತಿ ಚಾಲ್ತಿಯಲ್ಲಿತ್ತು. 1989ರ ಚುನಾವಣೆಯ ಸಂದರ್ಭದಲ್ಲಿ ಎದುರಾದ ಬಿಕ್ಕಟ್ಟುಗಳ ಕಾರಣದಿಂದ ಇನ್ನೂ ಇಬ್ಬರು ಆಯುಕ್ತರನ್ನು ನೇಮಕ ಮಾಡಲಾಗಿತ್ತು. 90ರ ದಶಕದಲ್ಲಿ ಅದಕ್ಕೆ ಸಂಬಂಧಿಸಿದ ಕಾನೂನುಗಳಿಗೆ ತಿದ್ದುಪಡಿ ತರಲಾಯಿತು. ಆನಂತರ ಒಟ್ಟು ಮೂವರು ಆಯುಕ್ತರನ್ನು ನೇಮಕ ಮಾಡುತ್ತಾ ಬರಲಾಗಿದೆ.

ಆದರೆ, ಚುನಾವಣಾ ಆಯುಕ್ತರ ಹುದ್ದೆ ತೆರವಾದ ನಂತರ ಆ ಹುದ್ದೆಗೆ ಎಷ್ಟು ಅವಧಿಯಲ್ಲಿ ನೇಮಕಾತಿ ನಡೆಸಬೇಕು ಎಂಬುದನ್ನು ಸಂಬಂಧಿತ ಯಾವ ಕಾನೂನಿನಲ್ಲೂ ವಿವರಿಸಿಲ್ಲ. ಕಾಲಮಿತಿಯೊಳಗೆ ನೇಮಕಾತಿ ನಡೆಸಬೇಕು ಎಂಬ ಯಾವ ನಿಯಮವೂ ಇಲ್ಲ. ಹೀಗಾಗಿಯೇ ತೆರವಾದ ಹಲವು ತಿಂಗಳ ನಂತರವೂ ನೇಮಕಾತಿ ನಡೆಯದೇ ಇದ್ದ ಉದಾಹರಣೆಗಳು ಹಿಂದಿನ ಒಂದೆರಡು ವರ್ಷಗಳಲ್ಲೇ ಸಿಗುತ್ತವೆ. ಆದರೆ, ಮುಖ್ಯ ಚುನಾವಣಾ ಆಯುಕ್ತರ ಹೊರತಾಗಿ ಆಯೋಗದಲ್ಲಿ ಇನ್ನು ಎಷ್ಟು ಮಂದಿ ಆಯುಕ್ತರು ಇರಬಹುದು ಎಂಬುದನ್ನು ಆಗಾಗ್ಗೆ ಪರಿಷ್ಕರಿಸಬಹುದು ಎಂದು ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆ ಹೇಳುತ್ತದೆ. ಆ ಪ್ರಕಾರ, ಒಬ್ಬರೇ ಆಯುಕ್ತರನ್ನು ಉಳಿಸಿಕೊಳ್ಳಲು ಸರ್ಕಾರವು ಕಾನೂನಿಗೆ ಬದಲಾವಣೆ ತರಲು ಅವಕಾಶವಿದೆ. ಈಗ ಕಾಯ್ದೆಗೆ ತಿದ್ದುಪಡಿ ತರಲು ಸಮಯವಿಲ್ಲ ಮತ್ತು ತಾಂತ್ರಿಕವಾಗಿ ಆ ಸಾಧ್ಯತೆಯೂ ಇಲ್ಲ. ಆದರೆ, ಸುಗ್ರೀವಾಜ್ಞೆ ಮೂಲಕ ಅಂತಹ ಬದಲಾವಣೆ ತರಬಹುದಾಗಿದೆ. ಸರ್ಕಾರ ಹೀಗೆ ಮಾಡುತ್ತದೆಯೇ ಇಲ್ಲವೇ ಎಂಬುದರ ಬಗ್ಗೆ ತಜ್ಞರ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ.

ಇದಲ್ಲದೇ ಸರ್ಕಾರವು ಇತರ ಚುನಾವಣಾ ಆಯುಕ್ತರನ್ನು ನೇಮಕ ಮಾಡದೆಯೂ ಇರಬಹುದಾಗಿದೆ. ಸರ್ಕಾರದ ಮುಂದೆ ಅಂತಹ ಆಯ್ಕೆಯನ್ನೂ ಕಾನೂನು ಇರಿಸಿದೆ. ಜತೆಗೆ ತ್ವರಿತಗತಿಯಲ್ಲಿ ಇಬ್ಬರು ಆಯುಕ್ತರನ್ನು ನೇಮಕ ಮಾಡಲೂ ಅವಕಾಶವಿದೆ. ಮೂಲಗಳ ಪ್ರಕಾರ ಈ ವಾರವೇ ಸರ್ಕಾರವು ಈ ಸಂಬಂಧ ಸಭೆ ನಿಗದಿ ಮಾಡಿಕೊಂಡಿದೆ. ಆ ಸಭೆಯ ನಿರ್ಧಾರ ಏನಾಗಲಿದೆ ಎಂಬುದನ್ನು ಕಾದುನೋಡಬೇಕಿದೆ.

ಒಮ್ಮೆ ಮಿಂಚಿನ ವೇಗ, ಒಮ್ಮೆ ವಿಳಂಬ

ಚುನಾವಣಾ ಆಯುಕ್ತರ ನೇಮಕ ವಿಚಾರದಲ್ಲಿ ಕೇಂದ್ರ ಸರ್ಕಾರವು ಒಮ್ಮೊಮ್ಮೆ ಒಂದೊಂದು ಧೋರಣೆಯನ್ನು ಅನುಸರಿಸಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಪ್ರಶ್ನೆ ಮಾಡಿತ್ತು. ಚುನಾವಣಾ ಆಯುಕ್ತರ ಹುದ್ದೆಗೆ ರಾಜೀನಾಮೆ ನೀಡಿ, ರಾಜೀನಾಮೆಯು ಅಂಗೀಕಾರಗೊಂಡಿರುವ ಅರುಣ್ ಗೋಯಲ್ ಅವರ ನೇಮಕವು ಈ ಹಿಂದೆ ದೇಶದಾದ್ಯಂತ ದೊಡ್ಡ ಸುದ್ದಿ ಮಾಡಿತ್ತು. ಈ ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು ಕೂಡ.

ಅರುಣ್ ಗೋಯಲ್ ಅವರು ಆಯುಕ್ತರಾಗಿ ನೇಮಕಗೊಳ್ಳುವುದಕ್ಕೂ ಮೊದಲು ಈ ಸ್ಥಾನವು ಏಳು ತಿಂಗಳಿನಿಂದ ಖಾಲಿ ಇತ್ತು. ಆದರೆ, ಅರುಣ್ ಅವರು ತಮ್ಮ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದ ಒಂದು ದಿನದಲ್ಲಿ ಚುನಾವಣಾ ಆಯುಕ್ತರಾಗಿ ನೇಮಕಗೊಂಡಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಸುಪ್ರೀಂ ಕೋರ್ಟ್ ಮಿಂಚಿನ ವೇಗವೇಕೆ ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತ್ತು.

'ಅರುಣ್ ಗೋಯಲ್ ಅವರ ಸ್ವಯಂ ನಿವೃತ್ತಿಯನ್ನು ನವೆಂಬರ್ 18ರಂದು ಮಾನ್ಯ ಮಾಡಲಾಗಿದೆ. ಚುನಾವಣಾ ಆಯುಕ್ತರ ಹುದ್ದೆಗೆ ಅಂದೇ ಅರ್ಜಿ ಸಲ್ಲಿಕೆಯಾಗಿದೆ. ಒಂದೇ ದಿನದಲ್ಲಿ ಅವರ ನೇಮಕಾತಿ ನಡೆದಿದೆ. 24 ಗಂಟೆಗಳಲ್ಲಿ ಅವರ ಕಡತವು ಸಚಿವಾಲಯಗಳ ಮಧ್ಯೆ ಓಡಾಡಿದೆ. ಇಷ್ಟು ಮಿಂಚಿನ ವೇಗದಲ್ಲಿ ಅವರ ನೇಮಕಾತಿ ಏಕೆ ನಡೆದಿದೆ' ಎಂದು ಕೇಳಿತ್ತು. ಏಳು ತಿಂಗಳಿನಿಂದ ಖಾಲಿ ಇದ್ದ ಹುದ್ದೆಗೆ ಒಂದೇ ದಿನದಲ್ಲಿ ನೇಮಕ ನಡೆದದ್ದು ಕೇಂದ್ರ ಸರ್ಕಾರ ಧೋರಣೆ ಕುರಿತು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ.

ಈಗ, ಅರುಣ್ ಅವರ ರಾಜೀನಾಮೆ ಕೂಡ ಒಂದೇ ದಿನದಲ್ಲಿ ಅಂಗೀಕಾರಗೊಂಡಿದೆ.

ಮೂವರು ಚುನಾವಣಾ ಆಯುಕ್ತರನ್ನು ಒಳಗೊಂಡ ಆಯೋಗದಲ್ಲಿ ಈಗ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರನ್ನು ಬಿಟ್ಟು ಬೇರೆ ಯಾವ ಸದಸ್ಯರೂ ಇಲ್ಲ. ಅರುಣ್ ಅವರ ರಾಜೀನಾಮೆಯಿಂದ ಒಂದು ಹುದ್ದೆ ತೆರವಾಗಿದ್ದರೆ, ಫೆಬ್ರುವರಿಯಲ್ಲಿಯೇ ನಿವೃತ್ತಿಯ ಕಾರಣದಿಂದ ಮತ್ತೊಂದು ಸ್ಥಾನ ತೆರವಾಗಿತ್ತು. ಫೆ.14ರಂದು ಅನೂಪ್ ಚಂದ್ರ ಪಾಂಡೆ ಅವರು ತಮ್ಮ ವಯೋಮಾನದ (65) ಆಧಾರದಲ್ಲಿ ನಿವೃತ್ತರಾಗಿದ್ದರು. ಈ ಸ್ಥಾನ ತೆರವಾಗಿ ಒಂದು ತಿಂಗಳು ಕಳೆದರು ಇನ್ನೂವರೆಗೂ ನೇಮಕಾತಿ ನಡೆದಿಲ್ಲ.

ಅನೂಪ್ ಚಂದ್ರ ಪಾಂಡೆ ಅವರು ನಿವೃತ್ತರಾಗುವ ಮೊದಲೇ ಅವರ ಸ್ಥಾನಕ್ಕೆ ನೇಮಕ ಮಾಡುವ ಸಂಬಂಧ ಪ್ರಕ್ರಿಯೆಗಳನ್ನು ಕೇಂದ್ರ ಸರ್ಕಾರ ಆರಂಭಿಸಿತ್ತು. ಫೆ.7ರಂದು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ 'ಆಯ್ಕೆ ಸಮಿತಿ'ಯ ಸಭೆಯನ್ನು ನಿಶ್ಚಯಿಸಲಾಗಿತ್ತು. ಅದೇ ದಿನವೇ 'ಶೋಧ ಸಮಿತಿ'ಯ ಸಭೆಯು ನಿಯೋಜನೆಗೊಂಡಿತ್ತು. ಆದರೆ, ಈ ಯಾವ ಸಭೆಗಳು ನಡೆಯಲೇ ಇಲ್ಲ. ಆದ ಕಾರಣ ಇದುವರೆಗೂ ಈ ಸ್ಥಾನಕ್ಕೆ ನೇಮಕಾತಿ ನಡೆದಿಲ್ಲ. ಅರುಣ್ ಅವರ ನೇಮಕಾತಿಯಲ್ಲಿ ಮಿಂಚಿನ ವೇಗ ಅನುಸರಿಸಿದ್ದ ಕೇಂದ್ರ ಸರ್ಕಾರವು, ಅನೂಪ್ ಅವರ ನಿವೃತ್ತಿಯಿಂದ ತೆರವಾದ ಸ್ಥಾನಕ್ಕೆ ನೇಮಕಾತಿ ಮಾಡುವಲ್ಲಿ ವಿಳಂಬ ಮಾಡಿದೆ.

ಆಯೋಗದ ಎರಡೂ ಹುದ್ದೆಗಳಿಗೆ ನೇಮಕಾತಿ ನಡೆಸಲು ಪ್ರಧಾನಿ ಮೋದಿ ನೇತೃತ್ವದ 'ಆಯ್ಕೆ ಸಮಿತಿ'ಯು ಮಾರ್ಚ್ 15ರಂದು ಸಭೆ ಸೇರಬಹುದು ಎಂದು ಸರ್ಕಾರದ ಮೂಲಗಳು ಹೇಳುತ್ತಿವೆ. ಈ ದಿನಾಂಕಕ್ಕೆ ಸಭೆ ನಡೆಯಲೂಬಹುದು ಅಥವಾ ನಡೆಯದೆಯೇ ಇರಬಹುದು. ಈ ಹಿಂದೆಯೂ ಈ ರೀತಿಯ ಸಭೆ ನಡೆಸಲು ದಿನಾಂಕ ಗೊತ್ತು ಮಾಡಲಾಗಿತ್ತು. ಆದರೆ, ಸಭೆ ನಡೆದಿರಲಿಲ್ಲ.

ಆಯ್ಕೆ ಹೇಗೆ?

ನೇಮಕಾತಿಗೆ ಸಂಬಂಧಿಸಿದ ಕಾನೂನನ್ನು ಕೇಂದ್ರ ಸರ್ಕಾರವು ಕಳೆದ ಡಿಸೆಂಬರ್‌ನಲ್ಲಿ ಜಾರಿಗೆ ತಂದಿದೆ. ಇದರ ಅನ್ವಯ ಎರಡು ಹಂತಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆಯುತ್ತದೆ. ಮೊದಲು 'ಶೋಧ ಸಮಿತಿ'ಯನ್ನು ರಚಿಸಲಾಗುತ್ತದೆ. ಕೇಂದ್ರ ಕಾನೂನು ಸಚಿವ, ಕೇಂದ್ರ ಸರ್ಕಾರದ ಕಾರ್ಯದರ್ಶಿ ರ‍್ಯಾಂಕ್‌ನ ಇಬ್ಬರು ಅಧಿಕಾರಿಗಳು ಈ ಸಮಿತಿಯ ಸದ್ಯಸರಾಗಿರುತ್ತಾರೆ. ಇವರು ಐವರು ಹೆಸರುಗಳನ್ನು ಸೂಚಿಸಬೇಕು. ನಂತರ, ಈ ಪಟ್ಟಿಯು 'ಆಯ್ಕೆ ಸಮಿತಿ' ಮುಂದೆ ಹೋಗುತ್ತದೆ. ಈ ಸಮಿತಿಯಲ್ಲಿ ಪ್ರಧಾನಿ, ವಿರೋಧ ಪಕ್ಷದ ನಾಯಕ (ಅಧಿಕೃತ ವಿರೋಧ ಪಕ್ಷ ಇಲ್ಲದೇ ಇದ್ದರೆ, ವಿರೋಧಿ ಪಾಳೆಯದಲ್ಲಿನ ಅತ್ಯಂತ ದೊಡ್ಡ ಪಕ್ಷದ ನಾಯಕ) ಹಾಗೂ ಪ್ರಧಾನಿ ನೇಮಿಸಿದ ಸಂಪುಟ ದರ್ಜೆಯ ಸಚಿವ ಸದಸ್ಯರಾಗಿರುತ್ತಾರೆ. ಈ ಐವರಲ್ಲಿ ಆಯ್ಕೆ ಸಮಿತಿಯು ನೇಮಕಾತಿ ನಡೆಸಬೇಕು. ಜೊತೆಗೆ, ಶೋಧ ಸಮಿತಿ ಸೂಚಿಸಿದ ಹೆಸರುಗಳನ್ನೇ ಆಯ್ಕೆ ಸಮಿತಿಯು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ. ಆ ಪಟ್ಟಿಯಲ್ಲಿ ಇಲ್ಲದೇ ಇದ್ದವರನ್ನೂ ನೇಮಕ ಮಾಡಬಹುದಾಗಿದೆ.

ಬಹುಮತದ ನಿರ್ಧಾರವಾಗಿರಬೇಕು

ಚುನಾವಣಾ ಆಯೋಗದ ನಿರ್ಧಾರಗಳು, ಸಾಧ್ಯವಿರುವ ಮಟ್ಟಿಗೆ ಅವಿರೋಧವಾಗಿರಬೇಕು ಎಂದು ಚುನಾವಣಾ ಆಯುಕ್ತರ ನೇಮಕಾತಿ ಮತ್ತು ಸೇವಾ ಕಾಯ್ದೆ ಹೇಳುತ್ತದೆ. ಆಯೋಗದ ಕಾರ್ಯನಿರ್ವಹಣೆ ಮತ್ತು ಕರ್ತವ್ಯಗಳಿಗೆ (ಚುನಾವಣೆ ಘೋಷಣೆ, ಚುನಾವಣೆ ಆಯೋಜನೆ, ಫಲಿತಾಂಶ ಪ್ರಕಟ... ಇತ್ಯಾದಿ) ಸಂಬಂಧಿಸಿದಂತೆ ಆಯುಕ್ತರ ಮಧ್ಯೆ ಭಿನ್ನಾಭಿಪ್ರಾಯದ ಸಾಧ್ಯತೆಯೂ ಇರುತ್ತದೆ. ಆಗ ಬಹುಮತದ ಆಧಾರದಲ್ಲಿ ಆಯೋಗವು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಕಾಯ್ದೆಯ 18ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಒಬ್ಬರೇ ಆಯುಕ್ತರು ಉಳಿದಾಗ ತಕ್ಷಣಕ್ಕೆ ಏನು ಮಾಡಬೇಕು ಎಂಬುದನ್ನು ಸಂಬಂಧಿತ ಯಾವ ಕಾನೂನಿನಲ್ಲೂ ಸ್ಪಷ್ಟವಾಗಿ ಹೇಳಿಲ್ಲ.

ಆದರೆ ಈಗ ಮುಖ್ಯ ಚುನಾವಣಾ ಆಯುಕ್ತರು ಒಬ್ಬರೇ ಉಳಿದಿರುವ ಕಾರಣ, ಆಯೋಗದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ಮತ್ತೊಬ್ಬರು ಅಥವಾ ಇಬ್ಬರು ಆಯುಕ್ತರು ನೇಮಕ ಆಗುವವರೆಗೆ ಮುಖ್ಯ ಚುನಾವಣಾ ಆಯುಕ್ತರು ತೆಗೆದುಕೊಳ್ಳುವ ನಿರ್ಧಾರಗಳು ಅವಿರೋಧದ್ದೇ ಆಗಿರುತ್ತವೆ. ಜತೆಗೆ ಏಕಪಕ್ಷೀಯವಾಗಿಯೂ ಇರುತ್ತವೆ.

ಆಧಾರ: ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಆಯುಕ್ತರ (ನೇಮಕಾತಿ, ಸೇವಾ ಷರತ್ತುಗಳು ಮತ್ತು ಅಧಿಕಾರ ಅವಧಿ) ಕಾಯ್ದೆ–2023, ಚುನಾವಣಾ ಆಯೋಗದ ಪ್ರಕಟಣೆಗಳು, ಸಂವಿಧಾನದ 324ನೇ ವಿಧಿ, ಪಿಟಿಐ

ಸಿನಿ ಬಿಟ್ಸ್

'ಸ್ವಿಚ್..'ನಲ್ಲಿ ವಿಜಯ್‌ಸೂರ್ಯ

ವಿಜಯ್‌ಸೂರ್ಯ, ಶ್ವೇತಾ ವಿಜಯ್‌ಕುಮಾರ್

'**ಅಗ್ನಿಸಾಕ್ಷಿ**' ಧಾರಾವಾಹಿಯಿಂದ ಜನಪ್ರಿಯರಾಗಿದ್ದ ನಟ ವಿಜಯ್‌ಸೂರ್ಯ ಸ್ಯಾಂಡಲ್‌ವುಡ್‌ನಲ್ಲಿ ಮತ್ತೊಮ್ಮೆ ಅಗ್ನಿಪರೀಕ್ಷೆಗಿಳಿದಿದ್ದಾರೆ. ಅವರು ನಾಯಕನಾಗಿ ನಟಿಸಿರುವ 'ಸ್ವಿಚ್ ಕೇಸ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಚೇತನ್ ಶೆಟ್ಟಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಚಿತ್ರವನ್ನು ನಿರ್ದೇಶನ ಮಾಡಿದ್ದು, ಕೊಂಡಾಣ ಫಿಲ್ಮ್ಸ್ ಬಂಡವಾಳ ಹೂಡಿದೆ.

'ಸಾಮಾನ್ಯವಾಗಿ ಸಾಫ್ಟ್‌ವೇರ್ ಕಂಪನಿಗಳಲ್ಲಿ ಉದ್ಯೋಗಿಗಳು ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಸೇರುವ ಸಂದರ್ಭದಲ್ಲಿ ಈ ಪದ ಬಳಸುತ್ತಾರೆ. ಇದನ್ನೇ ಚಿತ್ರದ ಶೀರ್ಷಿಕೆಯಾಗಿಸಿದ್ದೇವೆ. ಐಟಿ ಲೋಕದ ಕಥೆಯನ್ನು ಹೊಂದಿರುವ ಚಿತ್ರ' ಎಂದರು ನಿರ್ದೇಶಕರು.

ಶ್ವೇತಾ ವಿಜಯ್‌ಕುಮಾರ್ ಚಿತ್ರದ ನಾಯಕಿ. ಉಳಿದಂತೆ ಬಲರಾಜವಾಡಿ, ಸಂತೋಷ್ ಕಾರ್ಕಿ, ಪೃಥ್ವಿರಾಜ್ ಮುಂತಾದವರು ನಟಿಸಿದ್ದಾರೆ. ಭೃತ್ವ ಶ್ಯಾಲೆಬ್ ಸಂಗೀತವಿದ್ದು, ಒಂದು ಹಾಡಿಗೆ ಚಂದನ್‌ಶೆಟ್ಟಿ-ದೀಪಕ್ ದೊಡ್ಡೇರ ಧ್ವನಿಯಾಗಿದ್ದಾರೆ. ಛಾಯಾಚಿತ್ರಗ್ರಹಣ ಮತ್ತು ಸಂಕಲನ ಪ್ರಶಾಂತ್ ಗಿರಿಯಪ್ಪ ಅವರದ್ದು.

ಧರೆಗಿಳಿದು ಬಂದ 'ಗಂಗೆ ಗೌರಿ'

ಭಕ್ತಿ ಪ್ರಧಾನ ಕಥೆಯನ್ನು ಹೊಂದಿರುವ 'ಗಂಗೆ ಗೌರಿ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ ಸಾಕಷ್ಟು ಪೌರಾಣಿಕ ಸಿನಿಮಾಗಳನ್ನು ನಿರ್ದೇಶಿಸಿದ್ದ ಬಿ.ಎ.ಪುರುಷೋತ್ತಮ್ ಈ ಚಿತ್ರದ ನಿರ್ದೇಶಕರು. ಮಧುಕಾರ್ತಿಕ್ ಮತ್ತು ಪ್ರಜ್ವಲ್ ತಮ್ಮ ಜಿ.ಆರ್ ಫಿಲ್ಮ್ಸ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ.

'ಚಿತ್ರೀಕರಣ ಮುಗಿದಿದ್ದು ಡಬ್ಬಿಂಗ್ ಹಂತದಲ್ಲಿದೆ. ಶಿವ ಪುರಾಣದಲ್ಲಿನ ಸಾಕಷ್ಟು ವಿಚಾರಗಳು ಚಿತ್ರದಲ್ಲಿದೆ. ಶಿವರಾತ್ರಿ ಪ್ರಯುಕ್ತ ಟೀಸರ್ ಬಿಟ್ಟಿದ್ದೇವೆ' ಎಂದರು ನಿರ್ದೇಶಕರು.

ಹಿರಿಯ ನಟ ಗಣೇಶ್‌ರಾವ್ ಕೇಸರ್‌ಕರ್ ಶಿವನಾಗಿ ಕಾಣಿಸಿಕೊಂಡಿದ್ದಾರೆ. ರಂಗಭೂಮಿ ನಟಿ ರೂಪಾಲಿ ಗೌರಿ, ಪಾರ್ವತಿ, ದಾಕ್ಷಾಯಿಣಿ ಅವತಾರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಗಂಗೆಯಾಗಿ ನಿಖಿತಾಸ್ವಾಮಿ ನಟಿಸಿದ್ದಾರೆ. ಶೋಭರಾಜ್, ಜಯಸಿಂಹ ಮುಸೂರಿ ಮೊದಲಾದವರು ತಾರಾಗಣದಲ್ಲಿದ್ದಾರೆ.

ರಾಜ್‌ಭಾಸ್ಕರ್ ಸಂಗೀತ, ಗೌರಿವೆಂಕಟೇಶ್ ಛಾಯಾಚಿತ್ರಗ್ರಹಣ, ಅನಿಲ್ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರಿನಲ್ಲಿ ಚಿತ್ರೀಕರಿಸಲಾಗಿದೆ.

ನಿಖಿತಾಸ್ವಾಮಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ನಾಯಕ ರಾಹುಲ್ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಗಳ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಕಾಂಗ್ರೆಸ್ ಪಕ್ಷವು ದೇಶವನ್ನು ಜಾತಿ ಆಧಾರದಲ್ಲಿ ಸದಾಕಾಲ ಒಡೆಯುತ್ತಾ ಬಂದಿದೆ' ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾಗಿ ಹೇಳಲಾಗುತ್ತಿದೆ. ಈ ಬಗ್ಗೆ ಪೋಸ್ಟ್ ಹಂಚಿಕೊಳ್ಳುತ್ತಿರುವ ಸಾರ್ವಜನಿಕರು, 'ಖರ್ಗೆ ಸಾಹೇಬರೆ ಹೇಳುತ್ತಿದ್ದಾರೆ. ಜಾತಿ ಆಧಾರದಲ್ಲಿ ದೇಶವನ್ನು ಕಾಂಗ್ರೆಸ್ ಒಡೆಯುತ್ತಿದೆ ಅಂತ. ಅದಕ್ಕಾಗಿಯೇ ಮೋದಿಯನ್ನು ಆರಿಸಬೇಕು' ಎಂದು ಬರೆದುಕೊಂಡಿದ್ದಾರೆ. 'ಒಂದು ಕಡೆ ಬಿಜೆಪಿಯು ಎಲ್ಲರನ್ನೂ ಒಗ್ಗೂಡಿಸಲು ಯತ್ನಿಸುತ್ತಿದ್ದರೆ, ಮತ್ತೊಂದೆಡೆ ಒಂದು ಧರ್ಮದಿಂದ ಮತ್ತೊಂದು ಧರ್ಮವನ್ನು, ಒಂದು ಜಾತಿಯಿಂದ ಮತ್ತೊಂದು ಜಾತಿಯನ್ನು ಕಾಂಗ್ರೆಸ್ ಒಡೆಯುತ್ತಿದೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ ಎನ್ನಲಾಗುತ್ತಿದೆ. 'ರಾಹುಲ್ ಗಾಂಧಿ ಅವರು ನಮ್ಮ ತಾರಾ ಪ್ರಚಾರಕರು. ಬಿಜೆಪಿಯನ್ನು ಗೆಲ್ಲಿಸುವುದಕ್ಕೆ ಈ ಹೇಳಿಕೆಯೊಂದೇ ಸಾಕು. ಈ ಬಾರಿ 400 ಸ್ಥಾನಗಳನ್ನು ದಾಟುತ್ತದೆ' ಎಂದು ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇವು ತಿರುಚಿದ ಮಾಹಿತಿಗಳು.

ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಭಾರತ ಜೋಡೊ ನ್ಯಾಯ ಯಾತ್ರೆಯಲ್ಲಿ ಮಾತನಾಡಿದ ಭಾಷಣಗಳನ್ನು ತಪ್ಪು ಅರ್ಥ ಬರುವಂತೆ ತಿರುಚಲಾಗಿದೆ. ಎರಡೂ ಭಾಷಣಗಳ ಪೂರ್ಣ ಪಾಠಗಳು ಕಾಂಗ್ರೆಸ್‌ನ ಯೂಟ್ಯೂಬ್ ಖಾತೆಗಳಲ್ಲಿವೆ. ಖರ್ಗೆ ಅವರು ಬಿಹಾರದ ಔರಂಗಾಬಾದ್‌ನಲ್ಲಿ ಮಾತನಾಡಿದ್ದನ್ನು ತಿರುಚಲಾಗಿದೆ. 'ಜಾತಿ ಗಣತಿ ನಡೆಸಿ ಎಂದು ಬೇಡಿಕೆ ಇಡುವುದರಲ್ಲಿ ತಪ್ಪೇನಿದೆ? ಮೋದಿ ಅವರು ಹೇಳುತ್ತಾರೆ, 'ಕಾಂಗ್ರೆಸ್ ಪಕ್ಷವು ದೇಶವನ್ನು ಜಾತಿ ಹೆಸರಿನಲ್ಲಿ ಒಡೆಯುತ್ತಿದೆ ಎಂದು. ಆದರೆ, ನಾವು ಏನು ಮಾಡಿದ್ದೇವೆ? ಜನರಿಗೆ ನ್ಯಾಯ ಒದಗಿಸಲು ಯತ್ನಿಸುತ್ತಿದ್ದೇವೆ' ಎಂದಿದ್ದಾರೆ. ಮೋದಿ ಅವರು ಹೀಗೆ ಹೇಳುತ್ತಾರೆ ಎಂದು ಖರ್ಗೆ ಅವರು ಹೇಳಿದ್ದನ್ನು, ಖರ್ಗೆ ಅವರೇ ಹೇಳಿದ್ದಾರೆ ಎಂದು ತಿರುಚಲಾಗಿದೆ. '...ಒಂದು ಕಡೆ, ಧರ್ಮ–ಜಾತಿ ಹೆಸರಿನಲ್ಲಿ ಬಿಜೆಪಿ ಜನರನ್ನು ಒಡೆಯುತ್ತಿದೆ. ಮತ್ತೊಂದು ಕಡೆ ಕಾಂಗ್ರೆಸ್ ಪಕ್ಷವು ಎಲ್ಲರನ್ನು ಒಗ್ಗೂಡಿಸಲು ಯತ್ನಿಸುತ್ತಿದೆ' ಎಂದು ರಾಹುಲ್ ಗಾಂಧಿ ಮಧ್ಯ ಪ್ರದೇಶದಲ್ಲಿ ಭಾಷಣ ಮಾಡಿದ್ದಾರೆ. ರಾಹುಲ್ ಅವರು ಹೇಳಿದ್ದರ ಸಂಪೂರ್ಣ ವಿರುದ್ಧವಾದ ಅರ್ಥ ಬರುವಂತೆ ವಿಡಿಯೊವನ್ನು ತಿರುಚಲಾಗಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ನುಡಿ ಬೆಳಗು

ಉದ್ದೇಶ ಒಳ್ಳೆಯದಾಗಿದ್ದಾಗ ಎಲ್ಲವೂ ಒಳಿತಾಗುತ್ತದೆ

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಒಂದು ಕಾಡಿನಲ್ಲಿ ಗರ್ಭಿಣಿ ಹರಿಣಿಯೊಂದು ತನ್ನ ಪ್ರಸವಕ್ಕಾಗಿ ಸೂಕ್ತ ಸ್ಥಳವನ್ನು ಅರಸುತ್ತಿತ್ತು. ತನ್ನ ಸಂತಾನವನ್ನು ಸರಿಯಾದ ಸ್ಥಳದಲ್ಲಿ ಈ ಜಗತ್ತಿಗೆ ತರುವ ಆಲೋಚನೆ ಅದರದ್ದು. ಆದರೆ ಇದ್ದಕ್ಕಿದ್ದಂತೆ ಕಾಡಿನಲ್ಲಿ ಎದ್ದ ಕಾಳ್ಗಿಚ್ಚು ಆ ಗರ್ಭಿಣಿ ಜಿಂಕೆಯನ್ನು ಆತಂಕದಿಂದ ಓಡುವಂತೆ ಮಾಡಿತು. ಓಡುತ್ತಾ ಓಡುತ್ತಾ ಅದು ಒಂದು ನದಿ ದಂಡೆಗೆ ಬಂದಿತು. ಮುಂದೆ ಹೋಗುವಂತಿಲ್ಲ, ಹಿಂದಿನಿಂದ ಕಾಳ್ಗಿಚ್ಚು. ಅದೇ ಸಮಯಕ್ಕೆ ಒಂದು ಹುಲಿ ಅದನ್ನು ಕಬಳಿಸಲು ಸಿದ್ಧವಾಗಿ ಕುಳಿತಿತ್ತು. ಇನ್ನೊಂದು ಬದಿಯಿಂದ ವ್ಯಾಧನೊಬ್ಬ ಜಿಂಕೆಯನ್ನು ಬೇಟೆಯಾಡಲು ತನ್ನ ಬಿಲ್ಲಿಗೆ ಬಾಣವೇರಿಸಿ ಸಿದ್ಧನಾಗಿದ್ದ. ಇಂತಹ ವಿಷಮ ಪರಿಸ್ಥಿತಿಯಲ್ಲಿ ತನ್ನ ಹಾಗೂ ತನ್ನ ಸಂತಾನದ ಕಥೆ ಮುಗಿಯಿತೆಂದು ಜಿಂಕೆ ಚಿಂತಿತವಾಯಿತು. ಆದರೆ ಅದೇ ಸಮಯಕ್ಕೆ ಇದ್ದಕ್ಕಿದ್ದಂತೆ ಕಾರ್ಮೋಡ ಕವಿದು, ಜೋರಾಗಿ ಸುರಿದ ಮಳೆ ಕಾಳ್ಗಿಚ್ಚನ್ನು ಹಠಾತ್ತನೆ ನಂದಿಸಿತು. ಆಗ ಆಗಸದಲ್ಲಿ ಹೊಮ್ಮಿದ ಕೋಲ್ಮಿಂಚೊಂದು ಆ ಬೇಟೆಗಾರನ ಕಣ್ಣಿಗೆ ಬಡಿದು ಅವನನ್ನು ಕುರುಡನನ್ನಾಗಿಸಿ, ಅವನು ಬಿಟ್ಟ ಬಾಣ ಗುರಿ ತಪ್ಪಿ ಬಾಯ್ಕಳೆದು ನಿಂತಿದ್ದ ವ್ಯಾಘ್ರನನ್ನು ಸಾಯಿಸಿಬಿಟ್ಟಿತು.

ಹೀಗೆ ಏಕಾಏಕಿ ಸಂಭವಿಸಿದ ಘಟನೆಗಳು ಜಿಂಕೆಯ ಬದುಕಲ್ಲಿ ಕವಿದಿದ್ದ ಕಾರ್ಮೋಡವನ್ನು ದೂರಾಗಿಸಿ ಅದು ನಿಶ್ಚಿಂತೆಯಿಂದ ತನ್ನ ಮರಿಗೆ ಜನ್ಮ ನೀಡುವಂತಾಯ್ತು.

ನಾವು ಮಾಡುವ ಕೆಲಸದ ಉದ್ದೇಶ ಒಳ್ಳೆಯದಾಗಿದ್ದರೆ, ಅದರಲ್ಲಿ ಪ್ರಾಮಾಣಿಕತೆ ಇದ್ದರೆ ಪರಿಸ್ಥಿತಿ ಎಷ್ಟೇ ಕಷ್ಟಕರವಾಗಿದ್ದರೂ, ಅದು ಅನುಕೂಲಕರ ವಾತಾವರಣವಾಗಿ ಪರಿವರ್ತಿತವಾಗಬಹುದು. ನಮ್ಮ ಕರ್ತವ್ಯವನ್ನು ತಾಳ್ಮೆಯಿಂದ ಪ್ರಾಮಾಣಿಕವಾಗಿ ನಿರ್ವಹಿಸುವುದಷ್ಟೇ ನಮ್ಮ ಕೆಲಸ. ಹೊರಗಿನ ಸನ್ನಿವೇಶಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಇದಕ್ಕಾಗಿ ಕೊರಗುತ್ತಾ ಕೂರುವುದರಲ್ಲಿ ಯಾವುದೇ ಅರ್ಥವಿಲ್ಲ. ನಮ್ಮ ಕಾರ್ಯವನ್ನು ನಮ್ಮ ಆತ್ಮತೃಪ್ತಿಗೆ ಅನುಗುಣವಾಗಿ, ಒಳ್ಳೆಯ ಮನಸ್ಸಿನಿಂದ ನಿರ್ವಹಿಸುತ್ತಿದ್ದರೆ ಪ್ರತಿಕೂಲ ವಾತಾವರಣವೂ, ಅನುಕೂಲಕರವಾಗಿ ಬದಲಾಗಬಹುದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮಾರ್ಚ್ 11, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪ್ರತಿಪದ್ ಗಂ. 10-46 ನಕ್ಷತ್ರ: ಉತ್ತರಾಭಾದ್ರಾ ಗಂ. 23-03 ಯೋಗ: ಶುಭ ಗಂ. 11-58 ಕರಣ: ಬವ ಗಂ. 10-46, ಕುಂಭ ಮಾಸದ 27 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-44 ಸೂರ್ಯಾಸ್ತ : 06-37

ಮುಸ್ಲಿಂ ದಿನಾಂಕ : 29 ಶಬನ್

ಅದೃಷ್ಟ ಸಂಖ್ಯೆ : 3, 12

ಮೇಷ: ಕೆಲವು ವಾರಗಳಿಂದ ಮಾಡಿದ ಕಠಿಣ ಪರಿಶ್ರಮಕ್ಕೆ ಈಗ ಪ್ರತಿಫಲ ದೊರೆಯಲಿದೆ. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ಪ್ರಾಪ್ತಿ. ಷೇರು ವ್ಯವಹಾರಗಳಿಂದ ಲಾಭ ಪಡೆಯಬಹುದು.

ವೃಷಭ: ಇಷ್ಟು ದಿನಗಳ ಕಠಿಣ ಕಾರ್ಯಾಗಾರದಿಂದ ಬಿಡುಗಡೆ ಬೇಕೆನಿಸಲಿದೆ. ಉದ್ಯೋಗಾಪೇಕ್ಷಿಗಳಿಗೆ ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ಸಿಗಲಿದೆ. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಆಸಕ್ತಿ ಮೂಡಲಿದೆ.

ಮಿಥುನ: ಬೇರೆಯವರ ಸಮಸ್ಯೆಗಳಿಗೆ ನೆರವಾಗುವ ಗುಣ ಹೊಂದಿರುವ ನಿಮಗೆ ದೇವರ ಆಶೀರ್ವಾದ ಇರುವುದು. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು. ಖರ್ಚುವೆಚ್ಚಗಳನ್ನು ಸರಿದೂಗಿಸುವಿರಿ.

ಕರ್ಕಾಟಕ: ಮನಸ್ಸಿಗೆ ಶಾಂತಿ ಹಾಗೂ ಸಂತೋಷ ಇದ್ದು, ವಸ್ತ್ರಾಭರಣಗಳನ್ನು ಖರೀದಿ ಮಾಡುವಿರಿ. ಕೆಲವು ಪ್ರಭಾವಿತ ವ್ಯಕ್ತಿಗಳನ್ನು ಸಂಧಿಸಬೇಕಾಗಬಹುದು ಹಾಗೂ ಅವರಿಂದ ಹೆಚ್ಚಿನ ಮಾಹಿತಿಗಳನ್ನು ಪಡೆಯುವಿರಿ.

ಸಿಂಹ: ಎಲೆಕ್ಟ್ರಾನಿಕ್ಸ್ ಉಪಕರಣಗಳ ಮಾರಾಟಗಾರರು ಹೆಚ್ಚಿನ ಬಂಡವಾಳ ಹೂಡುವುದು ಸರಿಯಲ್ಲ. ವ್ಯವಸಾಯಗಾರರು ಇಲಾಖೆಯಿಂದ ಸಹಾಯ ಪಡೆದುಕೊಳ್ಳಬಹುದು. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸಬೇಕಾಗುವುದು.

ಕನ್ಯಾ: ಪಾಲುದಾರಿಕೆ ಮತ್ತು ಸಹಭಾಗಿತ್ವದ ವ್ಯವಹಾರಗಳಿಂದ ಉತ್ತಮ ವರಮಾನ ಪಡೆದುಕೊಳ್ಳುವಿರಿ. ಇಂದಿನ ಅವಕಾಶಗಳನ್ನು ಉಪಯೋಗಿಸಿ ಕೊಳ್ಳಿ. ಸ್ನೇಹಿತರ ಭೇಟಿಯಿಂದ ಹಳೆಯ ನೆನಪು ಮರುಕಳಿಸಲಿವೆ.

ತುಲಾ: ಅಧ್ಯಾಪಕ ವರ್ಗದವರಿಗೆ ಹೆಚ್ಚಿನ ಕೆಲಸ ಅನಿವಾರ್ಯವಾಗಬಹುದು. ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಆಯ-ವ್ಯಯದ ಕಡೆಗೆ ಗಮನವಿರಲಿ. ವ್ಯಾಪಾರಗಳಿಂದ ಸಮಾಧಾನಕರ ಆದಾಯವಿರುವುದು.

ವೃಶ್ಚಿಕ: ಕೆಲವೊಂದು ನಿರ್ಧಾರಗಳನ್ನು ಗೌಪ್ಯವಾಗಿದುವುದು ಉತ್ತಮ. ಈ ದಿನ ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಗಮನ ಹರಿಯಲಿದೆ. ಶುಭ ಕಾರ್ಯ ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ.

ಧನು: ನಿರಂತರವಾದ ಕೆಲಸ ಕಾರ್ಯಗಳಿಂದ ಹೊರ ಬರಲು, ವಿಶ್ರಾಂತಿ ಪಡೆಯಲು ಪ್ರಯತ್ನಿಸಿ. ಹೆಸರಿಗೆ ಕೇಡು ಬಯಸುವವರು ಎದುರಾಗುವವರು. ವ್ಯವಹಾರಿಕ ಒಪ್ಪಂದವೊಂದು ಮುರಿದು ಬೀಳದಂತೆ ಎಚ್ಚರವಹಿಸಿ.

ಮಕರ: ನಿಮ್ಮ ಮನೋಭಾವವು ವ್ಯಾಪಾರ ವ್ಯವಹಾರವನ್ನು ಜೊತೆಯಲ್ಲಿ ಸಂಬಂಧವನ್ನು ಹಾಳುಮಾಡಲಿದೆ. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲ ಅಥವಾ ಆಶ್ರಯ ಸಿಗುವುದು.

ಕುಂಭ: ಸ್ವಂತ ಪ್ರಯತ್ನದಿಂದ ನನೆಗುದಿಯಲ್ಲಿದ್ದ ಸಮಸ್ಯೆಗಳಿಗೆ ಪರಿಹಾರ ದೊರೆತು ಮನಸ್ಸಿಗೆ ಸಂತಸವಾಗುತ್ತದೆ. ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತವಾಗಿ ಪರಿಚಯದವರಿಂದ ಕಂಕಣಬಲ ಕೂಡಿಬರುವುದು.

ಮೀನ: ಕೆಲವೊಂದು ಕೋರ್ಟ್‌ನ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರಿಯಿರಿ. ಸ್ವಂತವಾಗಿ ಆಸ್ತಿಯನ್ನು ಸಂಪಾದಿಸಬಹುದು. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವಿದೆ.

ಪದಬಂಧ 5617

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹುರಿ ಹಿಡಿದವ ತೋರಿದ ಸ್ವೇಚ್ಛಾವೃತ್ತಿ (4)
3.ಕತೆಯೊಳಗೆ ಲತೆಯಿದ್ದರೆ ಪ್ರೀತಿ ಉಕ್ಕಿದೆಯಲ್ಲಾ! (4)
5.ಪುರಿಯಲ್ಲಿರುವ ಮುಂದಾಳು (3)
7.ಚರವಲ್ಲದುದು ಇದು (3)
9.ಪಾಪ ಮಾಡಿದವನು (3)
12.ಇದು ಕೊನೆಯದು (3)
14.ಕಾದಲನ ಜೊತೆ ನೋಡಿರುವ ಅರಣ್ಯ (3)
15.ಹುಟ್ಟಿದ ಕಾಲದ ಕಾಲ ತಿಥಿ, ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
17.ಕುದುರೆಯ ಬಾಯಿಗೆ ಹಾಕುವ ಉಕ್ಕಿನ ತುಂಡು (4)
18.ಕತ್ತು ಬಗ್ಗಿಸಿ ಹಾಕಿದ ಸಹಿ! (4)

ಮೇಲಿಂದ ಕೆಳಕ್ಕೆ

1.ಕೈಯನ್ನಿಟ್ಟು ಮಧ್ಯೆ ಪ್ರವೇಶಿಸುವಿಕೆ! (4)
2.ಪುಢಾರಿ ಹತ್ತಿರ ಶತ್ರು ಇದ್ದಾನಲ್ಲಾ! (2)
3.ಪಾಪ! ಕಮರಿಯಲ್ಲಿ ಬಿದ್ದಿದೆ ಈ ಆನೆ! (2)
4.ತೆರ ಬಾಕಿ ಉಳಿಸಿಕೊಂಡಿರುವ ದಡ್ಡ (3)
6.ಹೀಗೆ ಹೊಳಪು ಮಾಡು (3)
8.ಕೊಂಕಾದ ಚಲನೆ (4)
10.ನಿಧಾನವಾಗಿ ನೋಡಿದಾಗ ಕಾಣದಂತಾಗುವಿಕೆ! (4)
11.ಕಡಿದಾದ ಕೊರಕಲು (3)
13.ಮತ್ತು ಬಂದಾಗ ನಡೆಸಿದ ಪಿತೂರಿ (4)
14.ಕಾಯ ಬಗ್ಗಿಸಿ ಮಾಡಿದ ಕೆಲಸ (3)
15.ಈತ ದಡ್ಡನಲ್ಲ! (2)
16.ಕಲಾವಿದನ ಮನೆ ಬಾಗಿಲು (2)



5616ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ದೂರ 3.ರಾಗ 5.ನಿಷ್ಪಕ್ಷಪಾತ 6.ಸಲ್ಲಾಪ 7.ಗುಳಂಬ 8.ರಾಷ್ಟ್ರೀಕರಣ 9.ಸಮಾಧಿ 10.ಕಟಾಕ್ಷ 13.ದಂತಮಂಜನ 14.ಜಪ 15.ಮೌನ

ಮೇಲಿಂದ ಕೆಳಕ್ಕೆ

1.ದೂತಾವಾಸ 2.ಅಕ್ಷತೆ 4.ಗಲ್ಲುಗಂಬ 5.ನಿರಪರಾಧಿ 7.ಗುಣಕಥನ 9.ಸತ್ಕುಲಜ 11.ಕ್ಷಮಾಧಾನ 12.ಸಾಮಂತ

ಸುಡೊಕು 6002

	9			5			2	1
3		5	2		1	7		
	1			9			3	5
5		7				1		
	6						8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6001 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಲೋಕಸಭಾ ಚುನಾವಣೆ: ಖಾಸಗಿ ವಿಮಾನ, ಹೆಲಿಕಾಪ್ಟರ್‌ಗೆ ಶೇ 40ರಷ್ಟು ಬೇಡಿಕೆ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಖಾಸಗಿ ವಿಮಾನ ಮತ್ತು ಹೆಲಿಕಾಪ್ಟರ್‌ಗಳಿಗೆ ಶೇ 40ರಷ್ಟು ಬೇಡಿಕೆ ಹೆಚ್ಚಲಿದೆ ಎಂದು ವಿಮಾನಯಾನ ಕ್ಷೇತ್ರದ ಪರಿಣತರು ಅಂದಾಜಿಸಿದ್ದಾರೆ.

ಶೀಘ್ರವೇ, ಲೋಕಸಭೆಗೆ ಚುನಾವಣೆ ಘೋಷಣೆಯಾಗಲಿದೆ. ರಾಜಕೀಯ ಪಕ್ಷಗಳಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ಸಭೆ, ರ‍್ಯಾಲಿಗಳನ್ನು ಆಯೋಜಿಸಲಾಗುತ್ತದೆ. ಪಕ್ಷಗಳ ತಾರಾ ಪ್ರಚಾರಕರು, ವರಿಷ್ಠರು ಬಹುಬೇಗ ನಿಗದಿತ ಸ್ಥಳಗಳಿಗೆ ತೆರಳುವುದು ಅನಿವಾರ್ಯ. ಹಾಗಾಗಿ, ಗ್ರಾಮೀಣ ಮತ್ತು ದೂರದ ಸ್ಥಳಗಳಿಗೆ ತೆರಳಲು ಚಾರ್ಟರ್ಡ್ ವಿಮಾನಗಳ ಬದಲಿಗೆ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಹೆಚ್ಚಿರುತ್ತದೆ ಎಂದು ಹೇಳಿದ್ದಾರೆ.

‘ಆದರೆ, ಈ ಬೇಡಿಕೆಗೆ ಹೋಲಿಸಿದರೆ ದೇಶದಲ್ಲಿ ಚಾರ್ಟರ್ಡ್ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಲಭ್ಯತೆ ಕಡಿಮೆ ಇದೆ’ ಎಂದು ಕ್ಲಬ್ ಒನ್ ಏರ್ ಸಿಇಒ ರಾಜನ್ ಮೆಹ್ರಾ ತಿಳಿಸಿದ್ದಾರೆ.

ಗಂಟೆ ಲೆಕ್ಕದಲ್ಲಿ ಇವುಗಳಿಗೆ ಬಾಡಿಗೆ ದರ ನಿಗದಿಪಡಿಸಲಾಗುತ್ತದೆ. ಸದ್ಯ ಚಾರ್ಟರ್ಡ್ ವಿಮಾನಗಳಿಗೆ ಒಂದು ಗಂಟೆಗೆ ₹4.5 ಲಕ್ಷದಿಂದ ₹5.25 ಲಕ್ಷ ಇದ್ದರೆ, ಹೆಲಿಕಾಪ್ಟರ್‌ಗಳಿಗೆ ಒಂದು ಗಂಟೆಗೆ ₹1.5 ಲಕ್ಷ ಬಾಡಿಗೆ ದರವಿದೆ.

‘ಹಿಂದಿನ ಸಾರ್ವತ್ರಿಕ ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳಿಗೆ ಶೇ 30ರಿಂದ ಶೇ 40ರಷ್ಟು ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿದೆ’ ಎಂದು ಬ್ಯುಸಿನೆಸ್ ಏರ್‌ಕ್ರಾಫ್ಟ್ ಆಪರೇಟರ್ ಅಸೋಸಿಯೇಷನ್‌ನ (ಬಿಎಒಎ) ವ್ಯವಸ್ಥಾಪಕ ನಿರ್ದೇಶಕ ಕ್ಯಾಪ್ಟನ್ ಆರ್.ಕೆ. ಬಾಲಿ ಹೇಳುತ್ತಾರೆ.

2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಯು ಹೆಲಿಕಾಪ್ಟರ್ ಮತ್ತು ವಿಮಾನಗಳ ಬಳಕೆಗೆ ₹250 ಕೋಟಿ ಹಾಗೂ ಕಾಂಗ್ರೆಸ್ ಪಕ್ಷವು ₹126 ಕೋಟಿ ವೆಚ್ಚ ಮಾಡಿತ್ತು.

ಈ ಎರಡೂ ಪಕ್ಷಗಳು ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ 2019–20ನೇ ಸಾಲಿನ ಲೆಕ್ಕಪತ್ರದಲ್ಲಿ ಈ ವಿವರ ನೀಡಿವೆ.

ಟೆಸ್ಲಾಗೆ ಹೊಸ ನೀತಿ ರೂಪಿಸಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಭಾರತದಲ್ಲಿ ಎಲೆಕ್ಟ್ರಿಕ್ ಕಾರುಗಳ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಅಮೆರಿಕದ ಟೆಸ್ಲಾ ಕಂಪನಿಗೆ ಸರ್ಕಾರವು ಪ್ರತ್ಯೇಕ ನೀತಿ ರೂಪಿಸುವುದಿಲ್ಲ. ಈಗಾಗಲೇ, ಜಾರಿಗೊಳಿಸಿರುವ ನೀತಿಯೇ ಟೆಸ್ಲಾಗೂ ಅನ್ವಯವಾಗಲಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ.

ವಿಶ್ವದಲ್ಲಿ ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. ಇದಕ್ಕೆ ಅನುಗುಣವಾಗಿ ಎಲೆಕ್ಟ್ರಿಕ್ ಕಾರುಗಳ ನಿರ್ಮಾಣಕ್ಕೆ ಸಂಬಂಧಿಸಿದ ಕಾನೂನು ಮತ್ತು ಸುಂಕದ ನೀತಿಗಳನ್ನು ರೂಪಿಸಲಾಗಿದೆ. ಇವುಗಳು ಜಾಗತಿಕ ಮಟ್ಟದಲ್ಲಿ ಎಲೆಕ್ಟ್ರಿಕ್ ಕಾರು ತಯಾರಿಸುವ ಕಂಪನಿಗಳನ್ನು ಆಕರ್ಷಿಸುತ್ತವೆ ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಭಾರತದ ಆರ್ಥಿಕತೆ ಬೆಳವಣಿಗೆಗೆ ಅನುಗುಣವಾಗಿ ನೀತಿ ಅನುಷ್ಠಾನ
- ಎಲ್ಲಾ ಕಂಪನಿಗಳಿಗೂ ಒಂದೇ ಮಾನದಂಡ
- ಕಸ್ಟಮ್ಸ್ ಸುಂಕದಲ್ಲಿ ಶೇ 70ರಷ್ಟು ವಿನಾಯಿತಿ ಸೌಲಭ್ಯ ಕೋರಿದ ಟೆಸ್ಲಾ

‘ಪ್ರತಿ ಕಂಪನಿಯು ಬೇಡಿಕೆ ಸಲ್ಲಿಸುವುದು ಸಹಜ. ಆದರೆ, ಅವುಗಳ ಹಿತಾಸಕ್ತಿಗೆ ಅನುಗುಣವಾಗಿ ಸರ್ಕಾರವು ನೀತಿ ರೂಪಿಸಲು ಆಗುವುದಿಲ್ಲ. ಕಂಪನಿಗಳ ಅಗತ್ಯತೆಯನ್ನು ಪರಿಶೀಲಿಸಿದ ಬಳಿಕ ಸರ್ಕಾರವು ಮುಂದಿನ ನಿರ್ಣಯ ಕೈಗೊಳ್ಳಲಿದೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತದಲ್ಲಿ ತನ್ನ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಕಸ್ಟಮ್ಸ್ ಸುಂಕ ಕಡಿತಗೊಳಿಸುವಂತೆ ಷರತ್ತು ವಿಧಿಸಿದೆ. ₹33 ಲಕ್ಷಕ್ಕಿಂತ (40 ಸಾವಿರ ಡಾಲರ್) ಕಡಿಮೆ ಮೌಲ್ಯದ ಕಾರುಗಳ ಮೇಲಿನ ಕಸ್ಟಮ್ ಸುಂಕದಲ್ಲಿ ಶೇ 70ರಷ್ಟು ರಿಯಾಯಿತಿ ನೀಡುವಂತೆ ಕೇಂದ್ರಕ್ಕೆ ಕೋರಿದೆ.

ಎಂ.ಎಫ್: ಹೊಸ ಹೂಡಿಕೆಗೆ 3 ಆಯ್ಕೆ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಮ್ಯೂಚುಯಲ್ ಫಂಡ್ ಹೂಡಿಕೆ ಎಂದಾಕ್ಷಣ ಹತ್ತಾರು ಆಯ್ಕೆಗಳು ಸಿಗುತ್ತವೆ. ದೇಶದಲ್ಲಿ 40ಕ್ಕೂ ಹೆಚ್ಚು ಮ್ಯೂಚುಯಲ್ ಫಂಡ್ ಹೌಸ್‌ಗಳಿವೆ. 37 ವಿಭಾಗಗಳಲ್ಲಿ ಆಯ್ಕೆಗಳಿವೆ. 1,500ಕ್ಕೂ ಹೆಚ್ಚು ಯೋಜನೆಗಳಿವೆ. 2,500 ಉಪ ಯೋಜನೆಗಳಿವೆ. ಹೀಗಿರುವಾಗ ಹೊಸದಾಗಿ ಹೂಡಿಕೆ ಮಾಡುವವರಿಗೆ ಯಾವ ಫಂಡ್ ಉತ್ತಮ ಎಂದು ಕಂಡುಕೊಳ್ಳುವುದೇ ದೊಡ್ಡ ಸವಾಲು.

ಬನ್ನಿ ಈಗಷ್ಟೇ ಮ್ಯೂಚುಯಲ್ ಫಂಡ್ ಹೂಡಿಕೆಗೆ ಪ್ರವೇಶ ಮಾಡುವವರಿಗೆ ಸರಿಹೊಂದುವ ಇಎಲ್‌ಎಸ್‌ಎಸ್ (ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಂ), ಲಾರ್ಜ್ ಕ್ಯಾಪ್ ಇಂಡೆಕ್ಸ್ ಫಂಡ್ ಮತ್ತು ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್ ಬಗ್ಗೆ ವಿವರವಾಗಿ ತಿಳಿಯೋಣ.

ಇಎಲ್‌ಎಸ್‌ಎಸ್ ಫಂಡ್: ತೆರಿಗೆ ಉಳಿಸುವ ಜೊತೆಗೆ ಸಂಪತ್ತನ್ನು ಗಳಿಸಲು ಇಎಲ್‌ಎಸ್‌ಎಸ್ ಫಂಡ್‌ಗಳು ಉತ್ತಮ ಆಯ್ಕೆಯಾಗಿವೆ. ನೀವು ಹಳೆಯ ತೆರಿಗೆ ಪದ್ಧತಿ ಅಡಿಯಲ್ಲಿ ತೆರಿಗೆ ಉಳಿಸುವ ಲೆಕ್ಕಾಚಾರದಲ್ಲಿ ಇದ್ದರೆ ಇಎಲ್‌ಎಸ್‌ಎಸ್ ಅನ್ನು ಪರಿಗಣಿಸಬಹುದು. ಇದನ್ನು ತೆರಿಗೆ ಉಳಿಸುವ ಮ್ಯೂಚುಯಲ್ ಫಂಡ್ ಎಂದು ಕರೆಯಲಾಗುತ್ತದೆ. ಈ ಯೋಜನೆಯಡಿ ಹೂಡಿಕೆ ಮಾಡಿದರೆ ಸೆಕ್ಷನ್ 80ಸಿ ಅಡಿಯಲ್ಲಿ ಪ್ರತಿವರ್ಷ ಗರಿಷ್ಠ ₹46,800ರ ವರೆಗೆ ತೆರಿಗೆ ಉಳಿಸಬಹುದು.

ಇಎಲ್‌ಎಸ್‌ಎಸ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಮೂರು ವರ್ಷಗಳ ಲಾಕಿನ್ ಅವಧಿ ಇರುತ್ತದೆ. ಈ ಫಂಡ್‌ಗಳಲ್ಲಿ ಹೂಡಿಕೆದಾರರ ಶೇ 80ರಷ್ಟು ಹಣವನ್ನು ಈಕ್ವಿಟಿ ಅಂದರೆ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲೇ ತೊಡಗಿಸಬೇಕು. ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಅಂದರೆ ದೊಡ್ಡ, ಮಧ್ಯಮ ಮತ್ತು ಸಣ್ಣ ಗಾತ್ರದ ಕಂಪನಿಗಳಲ್ಲಿ ಎಷ್ಟು ಮೊತ್ತದ ಹಣ ಹಾಕಬೇಕು ಎನ್ನುವುದನ್ನು ಫಂಡ್ ಮ್ಯಾನೇಜರ್ ತೀರ್ಮಾನಿಸುತ್ತಾರೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಇಎಲ್‌ಎಸ್‌ಎಸ್ ಫಂಡ್‌ಗಳು ವಾರ್ಷಿಕ ಸರಾಸರಿ ಶೇ 15.45ರಷ್ಟು ಲಾಭಾಂಶ ನೀಡಿವೆ. ಅಂದರೆ ಐದು ವರ್ಷಗಳ ಹಿಂದೆ ನೀವು ₹1 ಲಕ್ಷವನ್ನು ಈ ಫಂಡ್‌ನಲ್ಲಿ ಹೂಡಿದ್ದರೆ ಅದು ದ್ವಿಗುಣಗೊಂಡು, ₹2.05 ಲಕ್ಷ ಆಗಿರುತ್ತಿತ್ತು.

ಲಾರ್ಜ್ ಕ್ಯಾಪ್ ಇಂಡೆಕ್ಸ್ ಫಂಡ್: ನೀವು ಹೊಸ ಹೂಡಿಕೆದಾರರಾಗಿದ್ದು ತೆರಿಗೆ ಉಳಿಸುವ ಆಲೋಚನೆ ಇಲ್ಲದಿದ್ದರೆ ಲಾರ್ಜ್ ಕ್ಯಾಪ್ ಇಂಡೆಕ್ಸ್ ಫಂಡ್‌ಗಳನ್ನು ಪರಿಗಣಿಸಬಹುದು. ಈ ಮ್ಯೂಚುಯಲ್ ಫಂಡ್‌ಗಳು ನಿಫ್ಟಿ 50 ಅಥವಾ ಸೆನ್ಸೆಕ್ಸ್ ಸೂಚ್ಯಂಕಗಳನ್ನು ಯಥಾಪ್ರಕಾರ ಅನುಕರಿಸಿ ಹೂಡಿಕೆ ಮಾಡುತ್ತವೆ. ನಿಫ್ಟಿ 50, ಸೆನ್ಸೆಕ್ಸ್ ಸೂಚ್ಯಂಕಗಳಲ್ಲಿ ಯಾವ ಷೇರುಗಳ ಮೇಲೆ ಹೂಡಿಕೆ ಮಾಡಲಾಗಿರುತ್ತದೆಯೋ ಅದೇ ಕಂಪನಿಗಳ ಮೇಲೆ ಈ ಲಾರ್ಜ್ ಕ್ಯಾಪ್ ಇಂಡೆಕ್ಸ್ ಫಂಡ್‌ಗಳು ತೊಡಗಿಸುತ್ತವೆ.

ಭಾರತದ ಅಗ್ರಮಾನ್ಯ ಕಂಪನಿಗಳ ಮೇಲೆ ಲಾರ್ಜ್ ಕ್ಯಾಪ್ ಇಂಡೆಕ್ಸ್ ಫಂಡ್‌ಗಳು ಹೂಡಿಕೆ ಮಾಡುವುದರಿಂದ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳಿಗೆ ಹೋಲಿಸಿದಾಗ ಇಲ್ಲಿ ರಿಸ್ಕ್ ಪ್ರಮಾಣ ಕಡಿಮೆ. ಇನ್ನು ಇಲ್ಲಿ ಸೂಚ್ಯಂಕವನ್ನೇ ಅನುಸರಿಸಿ ಹೂಡಿಕೆ ಮಾಡುವುದರಿಂದ ಫಂಡ್ ಮ್ಯಾನೇಜರ್ ಇರುವುದಿಲ್ಲ. ಫಂಡ್ ಮ್ಯಾನೇಜರ್ ಇಲ್ಲದ ಕಾರಣ ನಿರ್ವಹಣಾ ವೆಚ್ಚ ಕಡಿಮೆ. ಹಾಗಾಗಿ, ಈ ಫಂಡ್‌ಗಳಲ್ಲಿ ವೆಚ್ಚದ ಅನುಪಾತ ಕಡಿಮೆ ಇರುತ್ತದೆ.

ಕಳೆದ ಐದು ವರ್ಷಗಳ ವಾರ್ಷಿಕ ಸರಾಸರಿ ಲೆಕ್ಕಾಚಾರದಲ್ಲಿ ಲಾರ್ಜ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳು ಶೇ 14.11ರಷ್ಟು ಲಾಭಾಂಶ ಕೊಟ್ಟಿವೆ. ಅಂದರೆ ಐದು ವರ್ಷಗಳ ಹಿಂದೆ ಈ ಫಂಡ್‌ನಲ್ಲಿ ನೀವು ₹1 ಲಕ್ಷ ಹೂಡಿಕೆ ಮಾಡಿದ್ದರೆ ಈಗ ಅದು ₹1.92 ಲಕ್ಷ ಆಗಿರುತ್ತಿತ್ತು.

ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್: ನೀವು ಮ್ಯೂಚುಯಲ್ ಫಂಡ್‌ಗೆ ಹೊಸ ಹೂಡಿಕೆದಾರರಾಗಿದ್ದು, ತೆರಿಗೆ ಉಳಿತಾಯದ ಉದ್ದೇಶವಿಲ್ಲ ಮತ್ತು ಈಕ್ವಿಟಿ ಫಂಡ್‌ಗಳಲ್ಲಿ ಇರುವ ಹೆಚ್ಚಿನ ರಿಸ್ಕ್ ಬೇಡ ಎನ್ನುವವರಿಗೆ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಅಥವಾ ಡೈನಾಮಿಕ್ ಅಸೆಟ್ ಅಲೊಕೇಷನ್ ಫಂಡ್ ಸರಿ ಹೊಂದುತ್ತದೆ.

ಈ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆದಾರರ ಹಣವನ್ನು ಷೇರು ಮಾರುಕಟ್ಟೆ (ಈಕ್ವಿಟಿ) ಆಧಾರಿತ ಹೂಡಿಕೆಗಳು ಮತ್ತು ನಿಶ್ಚಿತ ಠೇವಣಿ (ಡೆಟ್) ಮಾದರಿಯ ಹೂಡಿಕೆಗಳಲ್ಲಿ ತೊಡಗಿಸಲಾಗುತ್ತದೆ. ಮಾರುಕಟ್ಟೆಯ ಸ್ಥಿತಿ ಆಧರಿಸಿ ಫಂಡ್ ಮ್ಯಾನೇಜರ್ ಹೂಡಿಕೆದಾರರ ಹಣವನ್ನು ಡೆಟ್ ಮತ್ತು ಈಕ್ವಿಟಿ ಹೂಡಿಕೆಗಳಲ್ಲಿ ಬದಲಾಯಿಸುತ್ತಿರುತ್ತಾರೆ.

ಮಾರುಕಟ್ಟೆ ಏರುಗತಿಯಲ್ಲಿ ಇರುವಾಗ ಫಂಡ್ ಮ್ಯಾನೇಜರ್, ಈಕ್ವಿಟಿಗಳಲ್ಲಿ ಹೆಚ್ಚು ಹಣ ತೊಡಗಿಸುತ್ತಾರೆ. ಮಾರುಕಟ್ಟೆ ಕುಸಿತದಲ್ಲಿರುವಾಗ ಹೆಚ್ಚು ಡೆಟ್ ಫಂಡ್‌ಗಳಲ್ಲಿ ಫಂಡ್ ಮ್ಯಾನೇಜರ್ ಹಣ ತೊಡಗಿಸುತ್ತಾರೆ. ಮಾರುಕಟ್ಟೆ ಕುಸಿತವಾದಾಗ ಆತಂಕಗೊಳ್ಳುವ ಹೂಡಿಕೆದಾರರಿಗೆ ಬ್ಯಾಲೆನ್ಸ್ಡ್ ಫಂಡ್‌ಗಳು ಉತ್ತಮ ಆಯ್ಕೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್‌ಗಳು ವಾರ್ಷಿಕ ಸರಾಸರಿ ಲೆಕ್ಕಾಚಾರದಲ್ಲಿ ಶೇ 10.37ರಷ್ಟು ಲಾಭಾಂಶ ನೀಡಿವೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಸತತ ನಾಲ್ಕನೇ ವಾರವೂ ಜಿಗಿದ ಷೇರುಪೇಟೆ

ಷೇರುಪೇಟೆ

ಷೇರು ಮಾರುಕಟ್ಟೆ ಸತತ ನಾಲ್ಕನೇ ವಾರವೂ ಜಿಗಿದಿದೆ. ಮಾರ್ಚ್ 7ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. 74,119 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.42ರಷ್ಟು ಗಳಿಕೆ ಕಂಡಿದೆ.

22,493 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ವಾರದ ಅವಧಿಯಲ್ಲಿ ಶೇ 0.51ರಷ್ಟು ಜಿಗಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಉತ್ತಮ ಗಳಿಕೆ, ದೇಶೀಯ ಹೂಡಿಕೆದಾರರಿಂದ ಹೆಚ್ಚಿನ ಖರೀದಿ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 3, ನಿಫ್ಟಿ ಫಾರ್ಮಾ ಶೇ 1.5, ನಿಫ್ಟಿ ಎನರ್ಜಿ ಶೇ 1.4, ಮತ್ತು ನಿಫ್ಟಿ ಬ್ಯಾಂಕ್ ಶೇ 1ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 3.2ರಷ್ಟು ಕುಸಿದಿದೆ. ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1.3ರಷ್ಟು ಇಳಿದಿದ್ದರೆ, ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1ರಷ್ಟು ಇಳಿದಿದೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹10,081.08 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹10,129.17 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಟಾಟಾ ಪವರ್, ಬಜಾಜ್ ಆಟೊ, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ, ಏರ್‌ಟೆಲ್, ಜೈಡಸ್ ಲೈಫ್ ಸೈನ್ಸಸ್, ಟಾಟಾ ಮೋಟರ್ಸ್, ಹಿಂದೂಸ್ಥಾನ್ ಏರೋನಾಟಿಕ್ಸ್ ಗಳಿಕೆ ಕಂಡಿವೆ. ಅದಾನಿ ವಿಲ್ಮಾರ್, ಜೊಮಾಟೊ, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್, ಅಲ್ಟ್ರಾ ಟೆಕ್ ಸಿಮೆಂಟ್, ಇಂಡಸ್ ಟವರ್ಸ್, ಶ್ರೀಸಿಮೆಂಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಬರ್ಜರ್ ಪೇಂಟ್ಸ್ ಕುಸಿದಿವೆ.

ಮುನ್ನೋಟ: ಮಾರ್ಚ್ 19 ಮತ್ತು 20ರಂದು ಅಮೆರಿಕ ಫೆಡರಲ್ ಬ್ಯಾಂಕ್‌ನ ಮುಕ್ತ ಮಾರುಕಟ್ಟೆ ಸಮಿತಿ ಸಭೆ ನಡೆಯಲಿದೆ. ಫೆಡರಲ್ ಬ್ಯಾಂಕ್ ಬಡ್ಡಿದರದ ಬಗ್ಗೆ ಯಾವ ನಿರ್ಣಯ ಕೊಳ್ಳಲಿದೆ ಎನ್ನುವುದನ್ನು ಕಾದುನೋಡಬೇಕಿದೆ. ಬಡ್ಡಿದರ ಯಥಾಸ್ಥಿತಿ ಅಥವಾ ಏರಿಕೆ, ಇಳಿಕೆಯು ಷೇರುಪೇಟೆ ಮೇಲೆ ಪರಿಣಾಮ ಬೀರಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಏರಿಳಿತಕ್ಕೆ ಕಾರಣವಾಗಲಿವೆ.

20ನೇ ವರ್ಷದ ಪುಣ್ಯಸ್ಮರಣೆ



ಡಾ|| ಬಿ.ಸಿ. ಸಗನೇ ಗೌಡರು, ಎಂ.ಎಸ್.
ನಿವೃತ್ತ ಜಿಲ್ಲಾ ಸರ್ಜನರು,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ದ.ಕ.ಜಿಲ್ಲೆ.
ಜನನ : 05-04-1935 ನಿಧನ : 11-03-2004
ನೀವು ನಮ್ಮನ್ನಗಲಿ ಇಪ್ಪತ್ತು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು,
ಬೇಲೂರು–573115
ಫೋನ್: 6362934108, 9845689500
9844436598, 9686405825

ಫಾರ್ಮುಲಾ ರೇಸ್ ಇಂಧನ ಉತ್ಪಾದನೆಗೆ ಐಒಸಿ ಸಿದ್ಧತೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ತೈಲ ನಿಗಮವು (ಐಒಸಿ) ಫಾರ್ಮುಲಾ ಒನ್ ರೇಸ್‌ನ ಕಾರುಗಳಿಗೆ ಬಳಸುವ ಪೆಟ್ರೋಲ್ ತಯಾರಿಸಲು ನಿರ್ಧರಿಸಿದೆ.

ಒಡಿಶಾದಲ್ಲಿ ಇರುವ ನಿಗಮಕ್ಕೆ ಸೇರಿದ ಪರದೀಪ್ ಸಂಸ್ಕರಣಾ ಘಟಕದಲ್ಲಿ ಇನ್ನು ಮೂರು ತಿಂಗಳೊಳಗೆ ಪೆಟ್ರೋಲ್ ತಯಾರಿಸಲಾಗುವುದು ಎಂದು ಐಒಸಿ ಅಧ್ಯಕ್ಷ ಶ್ರೀಕಾಂತ್ ಮಾಧವ್ ವೈದ್ಯ ತಿಳಿಸಿದ್ದಾರೆ.

‘ಸದ್ಯ ಷೆಲ್ ಕಂಪನಿಯು ಎಫ್1 ರೇಸ್‌ಗೆ ಇಂಧನ ಪೂರೈಸುತ್ತಿದೆ. ಅದೇ ಮಾದರಿಯಲ್ಲಿಯೇ ನಿಗಮದಿಂದಲೂ ಇಂಧನ ಪೂರೈಸಲಾಗುವುದು’ ಎಂದು ತಿಳಿಸಿದ್ದಾರೆ.

ಐಒಸಿಯು ದೇಶದ ತೈಲ ಮಾರುಕಟ್ಟೆಯಲ್ಲಿ ಶೇ 40ರಷ್ಟು ಪಾಲನ್ನು ಹೊಂದಿದೆ.

ಆ ಮೂಲಕ ಫಾರ್ಮುಲಾ ಒನ್ ರೇಸ್‌ಗೆ ಬಳಸುವ ಇಂಧನ ತಯಾರಿಸುವ ದೇಶದ ಮೊದಲ ಹಾಗೂ ವಿಶ್ವದ ಬೆರಳೆಣಿಕೆಯಷ್ಟು ಕಂಪನಿಗಳ ಪಟ್ಟಿಗೆ ಸೇರಲಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹42-430
ದ್ವಿತಳಿ (ಬಿ.ವಿ)
₹326-561

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹465
12 ಕ್ಕೆ	₹65
ಮೈಸೂರು	
100ಕ್ಕೆ	₹465

ಹುಬ್ಬಳ್ಳಿ ₹320 ಕೋಟಿ, ಬೆಳಗಾವಿ ವಿಮಾನ ನಿಲ್ದಾಣಕ್ಕೆ ₹357 ಕೋಟಿ ನಿಗದಿ

ಹೊಸ ಟರ್ಮಿನಲ್‌ಗೆ ಶಿಲಾನ್ಯಾಸ

ನವದೆಹಲಿ (ಪಿಟಿಐ): ಕರ್ನಾಟಕದ ಬೆಳಗಾವಿ, ಹುಬ್ಬಳ್ಳಿ ಹಾಗೂ ಆಂಧ್ರ ಪ್ರದೇಶದ ಕಡಪ ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಶಿಲಾನ್ಯಾಸ ನೆರವೇರಿಸಿದರು.

ಅಲ್ಲದೆ ನವದೆಹಲಿ, ಪುಣೆ, ಕೊಲ್ಹಾಪುರ, ಗ್ವಾಲಿಯರ್, ಜಬಲ್‌ಪುರ, ಲಖನೌ, ಅಲಿಘಡ, ಆಜಂಗಢ, ಚಿತ್ರಕೂಟ, ಮೊರಾದಾಬಾದ್, ಶ್ರಾವಸ್ತಿ ಹಾಗೂ ಆದಂಪುರ ವಿಮಾನ ನಿಲ್ದಾಣಗಳಲ್ಲಿ ಹೊಸದಾಗಿ ನಿರ್ಮಿಸಿರುವ ಟರ್ಮಿನಲ್‌ಗಳನ್ನು ಲೋಕಾರ್ಪಣೆಗೊಳಿಸಿದರು.

ಉತ್ತರ ಪ್ರದೇಶದ ಆಜಂಗಢದಲ್ಲಿ ನಡೆದ ಸಾರ್ವಜನಿಕ ಸಮಾವೇಶದಲ್ಲಿ ವರ್ಚುಯಲ್ ಆಗಿ ಈ 15 ಏರ್‌ಪೋರ್ಟ್ ಯೋಜನೆಗಳಿಗೆ ಚಾಲನೆ ನೀಡಿದರು. ಈ ಯೋಜನೆಗಳ ಮೊತ್ತ ₹9,800 ಕೋಟಿ ಆಗಿದೆ.

ಟರ್ಮಿನಲ್ ವಿಸ್ತರಣೆ: ನವದೆಹಲಿ ವಿಮಾನ ನಿಲ್ದಾಣದಲ್ಲಿ ಮೂರು ಟರ್ಮಿನಲ್‌ಗಳಿವೆ.

ಟರ್ಮಿನಲ್–1 ಅನ್ನು 2,06,950 ಚದರ ಮೀಟರ್‌ಗೆ ವಿಸ್ತರಿಸಲಾಗಿದೆ. ಟರ್ಮಿನಲ್–1 ವಾರ್ಷಿಕ 40 ಲಕ್ಷ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವಿತ್ತು. ಈ ವಿಸ್ತರಣೆಯಿಂದಾಗಿ ನವದೆಹಲಿ ವಿಮಾನ ನಿಲ್ದಾಣವು ವಾರ್ಷಿಕ ಒಂದು ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದ ನಿಲ್ದಾಣಗಳ ಕ್ಲಬ್‌ಗೆ ಸೇರ್ಪಡೆಗೊಂಡಿದೆ. ಪ್ರತಿನಿತ್ಯ 1,500ಕ್ಕೂ ಹೆಚ್ಚು ವಿಮಾನಗಳು ಇಲ್ಲಿಂದ ಸಂಚರಿಸುತ್ತವೆ.

ನಿಲ್ದಾಣದ ಎಲ್ಲಾ ಚೆಕ್ ಪಾಯಿಂಟ್‌ಗಳಲ್ಲಿ ಪ್ರಯಾಣಿಕರ ಮುಖ ಗುರುತಿಸುವಿಕೆಯ ತಂತ್ರಜ್ಞಾನ ವ್ಯವಸ್ಥೆಯನ್ನು (ಡಿಜಿ ಯಾತ್ರಾ) ಅಳವಡಿಸಲಾಗಿದೆ. ನಿಲ್ದಾಣದ ಪ್ರವೇಶ, ಭದ್ರತಾ ತಪಾಸಣೆ, ವಿಮಾನ ಬೋರ್ಡಿಂಗ್ ಸೇರಿದಂತೆ ಎಲ್ಲಾ ತಪಾಸಣೆ ಸ್ಥಳಗಳಲ್ಲಿ ಈ ವ್ಯವಸ್ಥೆ ಆಧರಿಸಿ ಪ್ರಯಾಣಿಕರ ಪ್ರವೇಶವನ್ನು ಸ್ವಯಂಚಾಲಿತವಾಗಿ ಪ್ರಕ್ರಿಯೆಗೊಳಿಸಲಾಗುತ್ತದೆ. ಇದರಿಂದ ಸರದಿ ಸಾಲಿನಲ್ಲಿ ತಾಸುಗಟ್ಟಲೆ ನಿಲ್ಲುವುದು ತಪ್ಪಲಿದೆ.

ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವ ವಿ.ಕೆ. ಸಿಂಗ್ ಮಾತನಾಡಿ, ‘ಹತ್ತು ವರ್ಷಗಳ ಹಿಂದೆ ದೇಶದಲ್ಲಿ 74 ವಿಮಾನ ನಿಲ್ದಾಣಗಳಿದ್ದವು. ಸದ್ಯ ಇವುಗಳ ಸಂಖ್ಯೆ 160ಕ್ಕೆ ಏರಿದೆ’ ಎಂದು ಹೇಳಿದರು.

ಉತ್ತರಪ್ರದೇಶದ ಆಜಂಗಢದಲ್ಲಿ ಭಾನುವಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು, ವರ್ಚುವಲ್ ಆಗಿ ಶಿಲಾನ್ಯಾಸ ನೆರವೇರಿಸಿದರು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇದ್ದರು —ಪಿಟಿಐ ಚಿತ್ರ

ಪ್ರಯಾಣಿಕರ ಅನುಕೂಲಕ್ಕೆ ಒತ್ತು

ಹುಬ್ಬಳ್ಳಿ/ಬೆಳಗಾವಿ: ಹುಬ್ಬಳ್ಳಿ ಹಾಗೂ ಬೆಳಗಾವಿ ವಿಮಾನ ನಿಲ್ದಾಣಗಳಲ್ಲಿ ತಲಾ ₹320 ಹಾಗೂ ₹357 ಕೋಟಿ ವೆಚ್ಚದಲ್ಲಿ ನೂತನ ಟರ್ಮಿನಲ್ ನಿರ್ಮಿಸಲಾಗುತ್ತದೆ. ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಎಂಜಿನಿಯರಿಂಗ್ ವಿಭಾಗದ ನಿರ್ದೇಶಕ ಸಂಜೀವ್ ಜಿಂದಾಲ್,‘19,600 ಚದರ ಮೀಟರ್ ಪ್ರದೇಶದಲ್ಲಿ ನಿರ್ಮಿಸುವ ಈ ಟರ್ಮಿನಲ್ 32 ಚೆಕ್–ಇನ್ ಕೌಂಟರ್‌ಗಳನ್ನು ಒಳಗೊಂಡಿರಲಿದೆ. ಏಕಕಾಲಕ್ಕೆ 2,400 ಪ್ರಯಾಣಿಕರ ನಿರ್ವಹಣೆಯ ಸಾಮರ್ಥ್ಯ ಹೊಂದಿರಲಿದೆ. ಬೆಳಗಾವಿಯ ವಿಮಾನ ನಿಲ್ದಾಣದ ಟರ್ಮಿನಲ್ 16,400 ಚದರ ಮೀಟರ್ ವಿಸ್ತೀರ್ಣದಲ್ಲಿ ನಿರ್ಮಾಣಗೊಳ್ಳಲಿದೆ. 4 ಏರೋಬ್ರಿಡ್ಜ್, ತಲಾ ಎಂಟು ಎಸ್ಕಲೇಟರ್, ಲಿಫ್ಟ್ ಸೌಕರ್ಯ ಇರಲಿದೆ ಎಂದು ತಿಳಿಸಿದರು.

ಬೈಜುಸ್‌ನ ಶೇ 25ರಷ್ಟು ಸಿಬ್ಬಂದಿಗೆ ಪೂರ್ಣ ಸಂಬಳ ಪಾವತಿ

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯು ಕಡಿಮೆ ವೇತನ ಶ್ರೇಣಿ ಹೊಂದಿರುವ ಶೇ 25ರಷ್ಟು ಉದ್ಯೋಗಿಗಳಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸಿದೆ. ಉಳಿದ ಉದ್ಯೋಗಿಗಳಿಗೆ ಭಾಗಶಃ ಪಾವತಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್‌ನಲ್ಲಿ ತಲೆದೋರಿರುವ ಬಿಕ್ಕಟ್ಟಿನಿಂದ ಸಂಬಳ ಪಾವತಿಗೆ ವಿಳಂಬವಾಗಿತ್ತು.

‘ಕೆಲವು ಹೂಡಿಕೆದಾರರ ತಕರಾರಿನಿಂದಾಗಿ ಕಂಪನಿಯು ಆರ್ಥಿಕ ನಿರ್ಬಂಧಗಳನ್ನು ಎದುರಿಸುತ್ತಿದೆ. ಸದ್ಯ ಸಂಬಳ ಪಾವತಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ’ ಎಂದು ಆಡಳಿತ ಮಂಡಳಿಯು ಭಾನುವಾರ ಉದ್ಯೋಗಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದೆ.

‘ಫೆಬ್ರುವರಿ ತಿಂಗಳ ಸಂಬಳ ಪಾವತಿ ಪ್ರಕ್ರಿಯೆಯು ಶುಕ್ರವಾರ ರಾತ್ರಿ ಪೂರ್ಣಗೊಂಡಿದೆ. ಎರಡನೇ ಶನಿವಾರ ಬ್ಯಾಂಕ್ ರಜೆಯಾಗಿರುವುದರಿಂದ ಸೋಮವಾರದಂದು ನಿಮ್ಮ ಖಾತೆಗಳಿಗೆ ಜಮೆಯಾಗಲಿದೆ. ವೇತನ ಪಾವತಿಯಲ್ಲಿ ಆಗಿರುವ ವಿಳಂಬಕ್ಕೆ ಕ್ಷಮೆ ಕೋರುತ್ತೇವೆ’ ಎಂದು ಹೇಳಿದೆ.

ಇತ್ತೀಚೆಗೆ ನಡೆದ ಷೇರುದಾರರ ವಿಶೇಷ ಸಾಮಾನ್ಯ ಸಭೆಯಲ್ಲಿ ಸಂಸ್ಥಾಪಕ ರವೀಂದ್ರನ್ ಸೇರಿದಂತೆ ಅವರ ಕುಟುಂಬಸ್ಥರನ್ನು ಆಡಳಿತ ಮಂಡಳಿಯಿಂದ ಪದಚ್ಯುತಿಗೊಳಿಸುವಂತೆ ನಿರ್ಣಯ ಕೈಗೊಳ್ಳಲಾಗಿತ್ತು. ಅಲ್ಲದೆ, ಆರು ಪ್ರಮುಖ ಹೂಡಿಕೆದಾರರ ಪೈಕಿ ನಾಲ್ವರು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಬೆಂಗಳೂರು ಘಟಕದ ಮೊರೆ ಹೋಗಿದ್ದು, ಆಡಳಿತ ಮಂಡಳಿಯನ್ನು ಪುನರ್ ರಚಿಸುವಂತೆ ಕೋರಿದ್ದಾರೆ.

7 ಕಂಪನಿ ಎಂ–ಕ್ಯಾಪ್ ಹೆಚ್ಚಳ

ನವದೆಹಲಿ (ಪಿಟಿಐ): ಕಳೆದ ವಾರ ದೇಶದ ಪ್ರಮುಖ 10 ಕಂಪನಿಗಳ ಪೈಕಿ ಏಳು ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹71,301 ಕೋಟಿಗೆ ಏರಿಕೆಯಾಗಿದೆ.

ಭಾರ್ತಿ ಏರ್‌ಟೆಲ್ ₹38,726 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ₹13,476 ಕೋಟಿ, ಎಚ್‌ಡಿಎಫ್‌ಸಿ ₹12,243 ಕೋಟಿ, ಐಸಿಐಸಿಐ ₹3,099 ಕೋಟಿ, ಐಟಿಸಿ ₹1,469 ಕೋಟಿ, ಟಿಸಿಎಸ್ ₹1,157 ಕೋಟಿ ಹಾಗೂ ಹಿಂದುಸ್ತಾನ್ ಯೂನಿಲಿವರ್ ₹1,127 ಕೋಟಿ ಗಳಿಕೆ ಕಂಡಿವೆ. ಇನ್ಫೊಸಿಸ್ ₹15,875 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್‌ನ ₹15,391 ಕೋಟಿ ಇಳಿಕೆಯಾಗಿದೆ.

ಜರ್ದಾರಿಗೆ ಶುಭ ಕೋರಿದ ಚೀನಾ ಅಧ್ಯಕ್ಷ ಜಿನ್‌ಪಿಂಗ್

ಬೀಜಿಂಗ್ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಪಾಕಿಸ್ತಾನದ ನೂತನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರಿಗೆ ಶುಭಾಶಯ ಹೇಳಿದ್ದಾರೆ.

‘ಉಭಯ ದೇಶಗಳದ್ದು ಅಭೇದ್ಯ ಸಂಬಂಧ. ಇಂತಹ ಸಂಬಂಧ ಇತಿಹಾಸದ ಆಯ್ಕೆ. ಇತ್ತೀಚಿನ ವರ್ಷಗಳಲ್ಲಿ ಎರಡೂ ದೇಶಗಳೂ ಪ್ರಮುಖ ಕ್ಷೇತ್ರಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ನೀಡಿವೆ. ಉನ್ನತ ಮಟ್ಟದ ಮಾತುಕತೆಯಲ್ಲಿ ಪದೇ ಪದೇ ತೊಡಗಿವೆ. ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ ನಿರ್ಮಾಣವನ್ನೂ ಮಾಡಿವೆ’ ಎಂದು ಷಿ ಜಿನ್‌ಪಿಂಗ್ ತಿಳಿಸಿದ್ದಾರೆ.

ಶೆಹಬಾಜ್ ನವಾಜ್ ಅವರು ಪಾಕಿಸ್ತಾನದ ಪ್ರಧಾನಿಯಾಗಿ ಆಯ್ಕೆಯಾದಾಗಲೂ ಅವರು ಶುಭ ಕೋರಿದ್ದರು.

ಇಮ್ರಾನ್ ಪರ ಕೂಗು

ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಗೆ (ಸಂಸತ್ತು) ನಡೆದ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಪಾಕಿಸ್ತಾನ ತೆಹ್ರೀಕ್–ಇ–ಇನ್ಸಾಫ್ ಪಕ್ಷದ ಬೆಂಬಲಿಗರು ಪೇಶಾವರದಲ್ಲಿ ಭಾನುವಾರ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಭಾವಚಿತ್ರ ಹಿಡಿದು ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಮೀನುಗಾರರ ಶವ ಪತ್ತೆ: ನೆರವಿಗೆ ಪಾಕ್ ಕೋರಿಕೆ?

ಇಸ್ಲಾಮಾಬಾದ್ (ಪಿಟಿಐ): ಸಿಂಧ್ ಪ್ರಾಂತ್ಯದ ಕೇಟಿ ಬಂದರ್‌ನಲ್ಲಿ ದೋಣಿ ಮಗುಚಿ 14 ಮೀನುಗಾರರು ನಾಪತ್ತೆಯಾಗಿದ್ದು. ಅವರ ಶವಗಳನ್ನು ವಶಕ್ಕೆ ಪಡೆಯಲು ಪಾಕಿಸ್ತಾನ ಸರ್ಕಾರವು ಭಾರತದ ನೆರವನ್ನು ಕೇಳುವ ಸಾಧ್ಯತೆ ಇದೆ.

ಸಿಂಧ್ ಪ್ರಾಂತ್ಯದ ಮಾಲಿರ್ ಜಿಲ್ಲೆಯ ಇಬ್ರಾಹಿಂ ಹೈದರ್ ಎಂಬ ಹಳ್ಳಿಯ 45 ಮೀನುಗಾರರು ಮೀನು ಹಿಡಿಯಲು ಸಾಗಿದ್ದರು. ಕೇಟಿ ಬಂದರ್ ಬಳಿಯ ಹಿಜಾಂಕ್ರೊ ಹತ್ತಿರದ ನೀರಿನ ಕವಲು ಪ್ರದೇಶದಲ್ಲಿ ದೋಣಿಯು ಮಾರ್ಚ್ 5ರಂದು ಬೋರಲಾಯಿತು.

ಮೂವತ್ತೊಂದು ಮೀನುಗಾರರನ್ನು ರಕ್ಷಿಸಲಾಯಿತು. ಇತರೆ 14 ಮೀನುಗಾರರು ನಾಪತ್ತೆ ಆಗಿದ್ದಾರೆ.

ಪಾಕಿಸ್ತಾನದ ನೌಕಾಪಡೆ, ಕಡಲು ಭದ್ರತಾ ಪಡೆಗಳು ಹಾಗೂ ಇಧಿ ಫೌಂಡೇಷನ್‌ನವರು ರಕ್ಷಣಾ ಕಾರ್ಯ ನಡೆಸಿದರು. ಶನಿವಾರದವರೆಗೆ ಹುಡುಕಾಡಿದರೂ ನಾಪತ್ತೆಯಾದ 14 ಮಂದಿಯ ದೇಹಗಳು ಸಿಗಲಿಲ್ಲ.

ಭಾರತದ ನೆರವು ಪಡೆದು ನಾಪತ್ತೆಯಾಗಿರುವ ಮೀನುಗಾರರ ಶವಗಳನ್ನು ಹುಡುಕಿ ತರುವ ಭರವಸೆಯನ್ನು ಪ್ರಧಾನಿ ಶೆಹಬಾಜ್ ಷರೀಫ್ ನೀಡಿದ್ದಾರೆ ಎಂದು ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಶಾಸಕ ಅಘಾ ರಫಿಉಲ್ಲಾ ಹೇಳಿರುವುದಾಗಿ ‘ದಿ ಡಾನ್’ ಪತ್ರಿಕೆ ವರದಿ ಮಾಡಿದೆ.

ನಿಂಬೆಹಣ್ಣು ₹35 ಸಾವಿರಕ್ಕೆ ಹರಾಜು

ಈರೋಡ್, ತಮಿಳುನಾಡು (ಪಿಟಿಐ): ಇಲ್ಲಿಯ ಗ್ರಾಮವೊಂದರ ದೇವಸ್ಥಾನದಲ್ಲಿ ಶಿವರಾತ್ರಿ ಆಚರಣೆ ವೇಳೆ ನಡೆದ ಹರಾಜಿನಲ್ಲಿ ಒಂದು ನಿಂಬೆಹಣ್ಣು ₹35 ಸಾವಿರಕ್ಕೆ ಹರಾಜಾಗಿದೆ.

ಶಿವಗಿರಿ ಗ್ರಾಮದ ಪಾಯಪೂಸಿಯನ್ ದೇವಸ್ಥಾನದಲ್ಲಿ ಎಂದಿನ ಪದ್ಧತಿಯಂತೆ ಶಿವನಿಗೆ ಅರ್ಪಿಸಿದ್ದ ನಿಂಬೆ ಹಣ್ಣು ಮತ್ತಿತರ ಹಣ್ಣುಗಳನ್ನು ಹರಾಜಿಗಿಡಲಾಗಿತ್ತು. ಸುಮಾರು 15 ಮಂದಿ ಭಕ್ತರು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಈರೋಡ್‌ನ ಭಕ್ತರೊಬ್ಬರು ₹35 ಸಾವಿರಕ್ಕೆ ಒಂದು ನಿಂಬೆಹಣ್ಣನ್ನು ಕೊಂಡರು ಎಂದು ದೇವಸ್ಥಾನದ ಅಧಿಕಾರಿಗಳು ತಿಳಿಸಿದ್ದಾರೆ.

ದೇವರಿಗೆ ಅರ್ಪಿಸಿರುವ ನಿಂಬೆಹಣ್ಣನ್ನು ಅತಿಹೆಚ್ಚು ಮೊತ್ತ ನೀಡಿ ಪಡೆದವರಿಗೆ ಐಶ್ವರ್ಯ ಮತ್ತು ಉತ್ತಮ ಆರೋಗ್ಯ ಪ್ರಾಪ್ತಿಯಾಗುತ್ತದೆ ಎಂಬ ಪ್ರತೀತಿ ಇಲ್ಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಬೇಕಾಗಿದ್ದಾರೆ. ಊಟ ವಸತಿವಿದೆ 13,000 - 17,000. 8951315839, 9141634619

Multiple Vacancy

REQUIRED, EXPERIENCED Telecaller, & Loan Recovery Supervisor For BankLoan collection. Salary 30,000+ Incentive. 9620206756.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 6366430366

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ವಾಸ್ತುವಿದ್ಯಾಪೀಠ ಮಹಾಮಾಂತ್ರಿಕ ಜ್ಯೋತಿಷ್ಯ ವಿದ್ವಾನ್. ಶ್ರೀಗುರುದೇವಾನಂದನ್ ರವರಿಂದ 100008 ಅತೀಂದ್ರಿಯ 888 ಛಾರಣ,ಮಾರಣ, ಸಂಮೋಹನ,ಸ್ತಂಭನ,ಮನಇಚ್ಛಾ ವಶೀಕರಣ,ಉಚ್ಚಾಟನಗಳಿಂದ ನಿಮ್ಮ ಯಾವುದೇ ಧೀರ್ಘಕಾಲದ ಪರಿಹಾರವಾಗದ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರಕ್ಕೆ ಇಂದೇ ಸಂಪರ್ಕಿಸಿ:9845005009

ಪ್ರವಾಸ

Travel

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೊದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080- 22429289 9448119290 9019301300 8088826815

★ವಿಮಾನದಲ್ಲಿ 29.04.2024★ 4ದಿನಗಳು ಒರಿಸ್ಸಾ, ಪೂರಿಜಗನ್ನಾಥ,ಭುವನೇಶ್ವರ 24.04.2024 5ದಿನಗಳು ಶಿಮ್ಲಾ,ಮನಾಲಿ'ಪ್ರವಾಸ 06.05.2024 11ದಿನಗಳು ಅಯೋಧ್ಯೆ,ನೇಪಾಳ,ಮುಕ್ತಿನಾಥ ಕಾಶಿ,10.05.2024 6ದಿನಗಳು ಕಾಶಿ.ಅಯೋಧ್ಯೆ,ಗಯಾ,ಪ್ರಯಾಗ 'ಆರ್.ಗಾಂಧಿ ಟೂರ್ಸ್' 8861545809/ 9945445809

16.3.2024 ರಿಂದ 5ದಿನಗಳು, ಕಾಶಿ, ಅಯೋಧ್ಯ, ಗಯಾ,ಅಲಹಾಬಾದ್. 23.3.2024 ರಿಂದ 8 ದಿನಗಳು ಉಜ್ಜಯಿನಿ, ಓಂಕಾರೇಶ್ವರ, ಭೀಮಾಶಂಕರ, ಶಿರಡಿ,ತುಳಜಾಪುರ, ಎಲ್ಲೋರ,ಪಂಡರಾಪುರ. 28.3.2024 ರಿಂದ 4ದಿನಗಳು ರಾಮೇಶ್ವರ, ಕನ್ಯಾಕುಮಾರಿ, ಮಧುರೈ. 21.4.2024 ರಿಂದ 10ದಿನಗಳು ವೈಷ್ಣೋದೇವಿ, ದೆಹಲಿ, ಕುಲುಮನಾಲಿ, ವಾಘಾವಾರ್ಡರ್ 7.5.2024 ರಿಂದ 7ದಿನಗಳು ಸಿಂಗಾಪುರ, ಮಲೇಷಿಯಾ. 12.6.2024 ರಿಂದ 13ದಿನಗಳು ಕೇದಾರನಾಥ, ಬದರೀನಾಥ,ಯಮನೋತ್ರಿ, ಗಂಗೋತ್ರಿ. ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ: 9900124333, 9611082432, 8123099913

6 ದಿನಗಳ ಬಾಲಿ. 7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9880079588 9900080793

8 ದಿನಗಳ ಸೌತ್ ಆಫ್ರಿಕಾ, 18 ದಿನಗಳ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, 7 ದಿನಗಳ ಜಪಾನ್, 8 ದಿನಗಳ ಭೂತಾನ್, 10 ದಿನಗಳ ವಿಯೆಟ್ನಾಂ, ಕಾಂಬೋಡಿಯಾ. ಭಟ್ ಟ್ರಾವೆಲ್ಸ್. 9844166555, 7975132507

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಾದಕವಸ್ತು ದಂಧೆ ಪ್ರಕರಣ ಇ.ಡಿಯಿಂದ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಡಿಎಂಕೆ ಮಾಜಿ ಪದಾಧಿಕಾರಿ ಭಾಗಿಯಾಗಿರುವ ಅಂತರ ರಾಷ್ಟ್ರೀಯ ಮಟ್ಟದ ಮಾದಕವಸ್ತು ದಂಧೆ ಭೇದಿಸುವ ನಿಟ್ಟಿನಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಮ್‌ಎಲ್‌ಎ) ಅಡಿ ಪ್ರಕರಣ ದಾಖಲಿಸಿದೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

3,500 ಕೆ.ಜಿ ಮಾದಕವಸ್ತು ಕಳ್ಳಸಾಗಣೆ ಮಾಡಿದ ಪ್ರಕರಣದಲ್ಲಿ ಡಿಎಂಕೆ ಮಾಜಿ ಪದಾಧಿಕಾರಿ, ತಮಿಳು ಚಿತ್ರ ನಿರ್ಮಾಪಕ ಜಾಫರ್ ಸಾದಿಕ್ ಅವರನ್ನು ಮಾದಕವಸ್ತು ನಿಯಂತ್ರಣ ಸಂಸ್ಥೆಯು (ಎನ್‌ಸಿಬಿ) ಮಾರ್ಚ್ 9ರಂದು ದೆಹಲಿಯಲ್ಲಿ ಬಂಧಿಸಿತು. ಮಾದಕವಸ್ತು ಕಳ್ಳ ಸಾಗಣೆಗೆ ಸಂಬಂಧಿಸಿ ಹಲವಾರು ಎಫ್‌ಐಆರ್‌ಗಳು ದಾಖಲಾಗಿವೆ. ಅವುಗಳ ಆಧಾರದಲ್ಲಿ ಇ.ಡಿ. ಈ ಪ್ರಕರಣ ದಾಖಲಿಸಿದೆ.

ಸಾದಿಕ್ ಅವರಿಂದ ಹಣ ವರ್ಗಾಯಿಸಿಕೊಂಡಿದ್ದ ಡಿಎಂಕೆಯ ಹಿರಿಯ ಪದಾಧಿಕಾರಿಯೊಬ್ಬರಿಗೂ ಇ.ಡಿ ಸದ್ಯದಲ್ಲೇ ಸಮನ್ಸ್ ಜಾರಿ ಮಾಡುವ ನಿರೀಕ್ಷೆ ಇದೆ.

ಸಮರ್ಪಕ ತನಿಖೆಗೆ ಒತ್ತಾಯ (ಚೆನ್ನೈ ವರದಿ): ಜಾಫರ್ ಸಾದಿಕ್ ಅವರ ವಿರುದ್ಧ ಕೂಲಂಕಷ ತನಿಖೆ ನಡೆಸುವಂತೆ ಕೋರಿ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರಿಗೆ ಭಾನುವಾರ ಮನವಿಪತ್ರ ಸಲ್ಲಿಸಿದರು.

ರಾಜ್ಯ ಪೊಲೀಸರು ಮತ್ತು ಡಿಎಂಕೆ ಜೊತೆ ಜಾಫರ್ ಸಾದಿಕ್ ಅವರು ನಂಟು ಹೊಂದಿದ್ದು, ಈ ಕುರಿತು ಸಮರ್ಪಕ ತನಿಖೆ ನಡೆಸಬೇಕು ಎಂದು ಅವರು ಈ ವೇಳೆ ರಾಜ್ಯಪಾಲರನ್ನು ಕೇಳಿಕೊಂಡಿದ್ದಾರೆ.

ನಂಟು ಕಲ್ಪಿಸಲು ಯತ್ನಿಸಿದವರ ವಿರುದ್ಧ ಕ್ರಮ

ತಮ್ಮ ಪಕ್ಷಕ್ಕೆ ಜಾಫರ್ ಸಾದಿಕ್ ಜೊತೆ ಯಾವುದೇ ನಂಟು ಇಲ್ಲ ಎಂದು ಡಿಎಂಕೆ ಪಕ್ಷದ ಸಚಿವ ಎಸ್. ರಘುಪತಿ ಅವರು ಭಾನುವಾರ ಸ್ಪಷ್ಟಪಡಿಸಿದರು. ಅಲ್ಲದೇ ಸಾದಿಕ್ ಅವರಿಗೆ ಪಕ್ಷದ ಜೊತೆ ನಂಟು ಕಲ್ಪಿಸಲು ಪ್ರಯತ್ನಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿಯೂ ಹೇಳಿದರು.

ಪಂಜಾಬ್‌ನಲ್ಲಿ ಎಸ್‌ಕೆಎಂ, ಕೆಎಂಎಂ ಕರೆ ನೀಡಿದ್ದ 'ರೈಲ್ ರೋಕೊ'

ರೈಲು ತಡೆದು ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ: ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಕಾನೂನು ಖಾತರಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನದ ವಿವಿಧೆಡೆ ರೈತರು ನಾಲ್ಕು ಗಂಟೆಗಳ ಕಾಲ ರೈಲು ಹಳಿಗಳ ಮೇಲೆ ಕುಳಿತು ಭಾನುವಾರ ಪ್ರತಿಭಟನೆ ನಡೆಸಿದರು.

'ರೈಲ್ ರೋಕೊ' ಆಂದೋಲನಕ್ಕೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಕರೆ ನೀಡಿತ್ತು.

ತಮ್ಮ ಬೇಡಿಕೆಗಳನ್ನು ಈಡೇರಿಸಲು ಮುಂದಾಗದ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು.

ಪಂಜಾಬ್‌ನಲ್ಲಿ 9 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿತ್ತು. ಒಟ್ಟು 49 ರೈಲುಗಳ ಸಂಚಾರದಲ್ಲಿ ವ್ಯತ್ಯಯವಾದ ಪರಿಣಾಮವಾಗಿ ಪ್ರಯಾಣಿಕರು ಸಂಕಷ್ಟ ಅನುಭವಿಸಿದರು.

ಶಂಭು ಗಡಿಯಲ್ಲಿ ರೈತರ ಧರಣಿ ಮುಂದುವರಿದಿದ್ದು, ಶಂಭು ರೈಲು ನಿಲ್ದಾಣದಲ್ಲಿ ಸಮೀಪದ ಗ್ರಾಮಗಳ ರೈತರು ರೈಲು ತಡೆ ನಡೆಸಿದರು.

ಅಮೃತಸರದ ದೇವಿದಾಸ್‌ಪುರದಲ್ಲಿ ರೈತರು ರೈಲು ಹಳಿಯಲ್ಲಿ ಕುಳಿತು ಭಾನುವಾರ ಪ್ರತಿಭಟಿಸಿದರು –ಪಿಟಿಐ ಚಿತ್ರ

'ದೇಶದಾದ್ಯಂತ ಪ್ರತಿಭಟನೆ ನಡೆದಿದೆ. ಇದು ಈ ಆಂದೋಲನಕ್ಕೆ ದೇಶದ ಎಲ್ಲೆಡೆಯ ರೈತರು ಬೆಂಬಲ ಸೂಚಿಸಿದ್ದಾರೆ ಎಂಬುದಕ್ಕೆ ಸಾಕ್ಷಿ. ಆದರೆ ಆಡಳಿತಾರೂಢ ಪಕ್ಷವು ದೂರ ಓಡಿ ಹೋಗುತ್ತಿದೆ' ಎಂದು ಎಸ್‌ಕೆಎಂನ ಸಂಯೋಜಕ ಜಗಜೀತ್ ಸಿಂಗ್ ಡಲ್ಲೇವಾಲ್ ತಿಳಿಸಿದರು.

ರೈತರ ಮೇಲೆ ಗುಂಡು ಹಾರಿಸಲು ಆದೇಶ ನೀಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಶುಭಕರಣ್ ಸಿಂಗ್ ಸಾವಿಗೆ ನ್ಯಾಯ ಒದಗಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಅಮೃತಸರ, ಲೂಧಿಯಾನ, ಬಠಿಂಡ, ಫಿರೋಜ್‌ಪುರ ಸೇರಿದಂತೆ 22 ಜಿಲ್ಲೆಗಳ ವಿವಿಧೆಡೆ ರೈತರು ರೈಲು ತಡೆದು ಪ್ರತಿಭಟನೆ ನಡೆಸಿದರು.

ಪಂಜಾಬ್‌ನ 75 ಕಡೆ, ಹರಿಯಾಣದ ಐದು ಸ್ಥಳಗಳಲ್ಲಿ, ಮಧ್ಯಪ್ರದೇಶ ಮತ್ತು ರಾಜಸ್ಥಾನದ ಮೂರು ಕಡೆ ಹಾಗೂ ತಮಿಳುನಾಡಿನ 20 ಸ್ಥಳಗಳಲ್ಲಿ ರೈಲ್ ರೋಕೊ ಆಂದೋಲನ ನಡೆದಿದೆ ಎಂದು ರೈತ ಮುಖಂಡರು ತಿಳಿಸಿದರು.

> **ಕೇಂದ್ರ ಸರ್ಕಾರವು ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಹೋರಾಟವನ್ನು ಮುಂದುವರಿಸುತ್ತೇವೆ**
> **ಸರವಣ ಸಿಂಗ್ ಪಂಢೇರ್**
> ರೈತ ಮುಖಂಡ

'ಚುನಾವಣಾ ಬಾಂಡ್ ಪ್ರಕರಣ ಎಸ್‌ಬಿಐನಿಂದ ಅವಿಧೇಯತೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಪಾಲಿಸದೆ ನ್ಯಾಯಾಂಗ ನಿಂದನೆ ಎಸಗಿದೆ' ಎಂದು ಸಿಪಿಎಂ ನ್ಯಾಯಾಲಯದ ಮೊರೆಹೊಕ್ಕಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಪಾಲಿಸದ ಎಸ್‌ಬಿಐ 'ಉದ್ದೇಶಪೂರ್ವಕ ಅವಿಧೇಯತೆ' ತೋರುತ್ತಿದೆ ಎಂದು ತಾನು ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯಲ್ಲಿ ಉಲ್ಲೇಖಿಸಿದೆ.

'ಬಾಂಡ್‌ಗಳನ್ನು ಖರೀದಿಸಿದವರು ಮತ್ತು ಅದನ್ನು ಮಾರಿಕೊಂಡವರ ಬಗ್ಗೆ ಮಾಹಿತಿ ಹೊಂದಿಸುವ ಪ್ರಕ್ರಿಯೆಯಲ್ಲಿ ಹಲವು ತೊಂದರೆಗಳಿವೆ ಎಂದು ಹೇಳುವ ಮೂಲಕ ಎಸ್‌ಬಿಐ, ಸುಪ್ರೀಂ ಕೋರ್ಟ್‌ನ ಸೂಚನೆಯನ್ನು ಉದ್ದೇಶಪೂರ್ವಕವಾಗಿ ತಿರುಚಿ ಹೇಳುತ್ತಿದೆ' ಎಂದು ಸಿಪಿಎಂನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಪಕ್ಷದ ಪರವಾಗಿ ಶುಕ್ರವಾರ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯಲ್ಲಿ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ನೀಡಿದ್ದ ಗಡುವು ಮುಗಿಯುವ ಎರಡು ದಿನ ಮುನ್ನ ತನಗಿರುವ ತೊಂದರೆಗಳನ್ನು ಉಲ್ಲೇಖಿಸಿದ ಎಸ್‌ಬಿಐ, ಜೂನ್ 30ರವರೆಗೂ ವಿವರ ಒದಗಿಸಲು ಸಮಯ ವಿಸ್ತರಿಸುವಂತೆ ಕೋರಿದೆ.

'ಮುಂಬರುವ ಲೋಕಸಭಾ ಚುನಾವಣೆಗೆ ಮುನ್ನ ದಾನಿಗಳ ವಿವರ ಮತ್ತು ದೇಣಿಗೆ ಮೊತ್ತವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸದಂತೆ ನೋಡಿಕೊಳ್ಳುವುದೇ ಎಸ್‌ಬಿಐನ ಪ್ರಯತ್ನವಾಗಿದೆ' ಎಂದು ಈ ಪ್ರಕರಣದ ಪ್ರಮುಖ ಅರ್ಜಿದಾರ ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಯು ಸುಪ್ರೀಂ ಕೋರ್ಟ್‌ನ ಮೊರೆಹೊಕ್ಕಿದೆ.

ಸಮಯ ವಿಸ್ತರಿಸುವಂತೆ ಎಸ್‌ಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆಯಲಿದೆ. ಇದೇ ಸಂದರ್ಭ ನ್ಯಾಯಾಂಗ ನಿಂದನೆಯ ಅರ್ಜಿಗಳ ವಿಚಾರಣೆಯೂ ನಡೆಯುವ ಸಾಧ್ಯತೆಯಿದೆ.

'ಸಂವಿಧಾನ ಬದಲಿಸುತ್ತೇವೆ' ಅನಂತಕುಮಾರ್ ಹೆಗಡೆ ಹೇಳಿಕೆಗೆ ಕಾಂಗ್ರೆಸ್ ತಿರುಗೇಟು

'ಸಂವಿಧಾನ ನಾಶ ಬಿಜೆಪಿ ಕಾರ್ಯಸೂಚಿ'

ನವದೆಹಲಿ (ಪಿಟಿಐ): ದೇಶದ ಸಂವಿಧಾನವನ್ನು ನಾಶಪಡಿಸುವುದು ಮತ್ತು ತಿದ್ದುಪಡಿ ಮಾಡುವುದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ 'ರಹಸ್ಯ ಮತ್ತು ಮೋಸದ' ಕಾರ್ಯಸೂಚಿಯಾಗಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಸಂವಿಧಾನದ ಬದಲಾವಣೆಗೆ 400 ಸೀಟುಗಳ ಅಗತ್ಯವಿದೆ ಎಂಬ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರ ಹೇಳಿಕೆಯು, ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಸಂಘ ಪರಿವಾರದ ರಹಸ್ಯ ಉದ್ದೇಶವನ್ನು ಬಹಿರಂಗಗೊಳಿಸಿದೆ. ಬಾಬಾ ಸಾಹೇಬರು ನೀಡಿದ ಸಂವಿಧಾನವನ್ನು ನಾಶ ಮಾಡುವುದು ಬಿಜೆಪಿ, ನರೇಂದ್ರ ಮೋದಿ ಸರ್ಕಾರದ ಪ್ರಮುಖ ಧ್ಯೇಯೋದ್ದೇಶವಾಗಿದೆ ಎಂದು ರಾಹುಲ್ ಗಾಂಧಿ ಅವರು ಬಿಜೆಪಿ ವಿರುದ್ಧ ಹರಿಹಾಯ್ದರು.

ದೇಶದಲ್ಲಿ ಸರ್ವಾಧಿಕಾರವನ್ನು ಹೇರಿಕೆ ಮಾಡುವ ಪ್ರಧಾನಿ ಮೋದಿ ಹಾಗೂ ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಬಿಜೆಪಿ ಸಂಸದರ ಹೇಳಿಕೆಯು ಬಟಾಬಯಲು ಮಾಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಾಗ್ದಾಳಿ ನಡೆಸಿದ್ದಾರೆ.

'ದೇಶದಲ್ಲಿ ರಹಸ್ಯವಾಗಿ ಸರ್ವಾಧಿಕಾರವನ್ನು ಹೇರಲು ಮೋದಿ ಸರ್ಕಾರ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಹಂಬಲಿಸುತ್ತಿವೆ. ಈ ಮೂಲಕ ಭಾರತದ ಜನರ ಮೇಲೆ 'ಮನುವಾದ ಮನಃಸ್ಥಿತಿ'ಯನ್ನು ಹೇರಲಿದ್ದು, ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಹಕ್ಕುಗಳನ್ನು ಕಸಿದುಕೊಳ್ಳಲಿದೆ' ಎಂದು 'ಎಕ್ಸ್' ವೇದಿಕೆಯಲ್ಲಿ ತಿಳಿಸಿದ್ದಾರೆ.

'ಮುಂದಿನ ದಿನಗಳಲ್ಲಿ ಚುನಾವಣೆಗಳೇ ಇರುವುದಿಲ್ಲ. ಸಾಂವಿಧಾನಿಕ ಸಂಸ್ಥೆಗಳ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುವುದು. ಆರ್‌ಎಸ್‌ಎಸ್ ಮತ್ತು ಬಿಜೆಪಿಯು ನಮ್ಮ ಜಾತ್ಯತೀತ ಮತ್ತು ವೈವಿಧ್ಯತೆಯಲ್ಲಿ ಏಕತೆಯನ್ನು ಹಾಳು ಮಾಡಲಿವೆ. ಆದರೆ, ಸಂಘ ಪರಿವಾರದ ಈ ಯತ್ನ ಯಶಸ್ವಿಯಾಗಲು ಕಾಂಗ್ರೆಸ್ ಅವಕಾಶ ನೀಡುವುದಿಲ್ಲ' ಎಂದು ತಿಳಿಸಿದರು.

ಹೆಗಡೆಯನ್ನು ಪಕ್ಷದಿಂದ ವಜಾ ಮಾಡಲಿ: ಸಿ.ಎಂ

ಬೆಂಗಳೂರು: 'ಸಂವಿಧಾನ ಬದಲಾವಣೆಯ ಮಾತು ಆಡಿರುವ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರನ್ನು ಚುನಾವಣಾ ಸ್ಪರ್ಧೆಯಿಂದ ಶಾಶ್ವತವಾಗಿ ಅನರ್ಹಗೊಳಿಸಬೇಕು. ಹೆಗಡೆ ಅವರ ಅಭಿಪ್ರಾಯವನ್ನು ಪ್ರಧಾನಿ ನರೇಂದ್ರ ಮೋದಿ ಒಪ್ಪದೆ ಇದ್ದರೆ, ಹೆಗಡೆಯವರನ್ನು ಪಕ್ಷದಿಂದಲೇ ಕಿತ್ತುಹಾಕಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಹಿಂದೂ ಧರ್ಮವನ್ನು ರಕ್ಷಿಸಬೇಕಾದರೆ ಸಂವಿಧಾನವನ್ನು ಬದಲಾಯಿಸಬೇಕು. ಅದಕ್ಕಾಗಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ 400 ಸ್ಥಾನಗಳನ್ನು ಗೆಲ್ಲಿಸಿಕೊಡಬೇಕು' ಎಂದು ಅನಂತಕುಮಾರ್ ಹೆಗಡೆ ಕರೆ ನೀಡಿರುವುದು ಅವರ ವೈಯಕ್ತಿಕ ಹೇಳಿಕೆ ಅಲ್ಲ. ಬಿಜೆಪಿಯ ರಹಸ್ಯ ಕಾರ್ಯಸೂಚಿಯ ಭಾಗ' ಎಂದು ಮಾಧ್ಯಮ ಪ್ರಕಟಣೆಯಲ್ಲಿ ಮುಖ್ಯಮಂತ್ರಿ ತಿಳಿಸಿದ್ದಾರೆ.

'ನಮ್ಮ ಸಂವಿಧಾನ ಸರ್ವಧರ್ಮಗಳನ್ನೂ ಸಮಭಾವದಿಂದ ನೋಡುತ್ತದೆ. ಸಂವಿಧಾನವನ್ನೇ ಬದಲಿಸಿ ಅನಂತಕುಮಾರ್ ಹೆಗಡೆ ಯಾವ ಹಿಂದೂ ಧರ್ಮವನ್ನು ರಕ್ಷಿಸಲು ಹೊರಟಿದ್ದಾರೆ? ಹೆಗಡೆಯವರ ಹೇಳಿಕೆ ಗಮನಿಸಿದರೆ ಅಂಬೇಡ್ಕರ್ ರಚಿಸಿ ಕೊಟ್ಟ ಸಂವಿಧಾನಕ್ಕಿಂತ ಮೊದಲು ಇದ್ದ ಮನು ಪ್ರಣೀತ ಸಂವಿಧಾನವನ್ನು ಜಾರಿಗೊಳಿಸುವ ದುಷ್ಟ ಆಲೋಚನೆ ಹೆಗಡೆ ಮತ್ತು ಅವರ ಪಕ್ಷಕ್ಕೆ ಇದೆ ಎನ್ನುವುದು ಸ್ಪಷ್ಟ' ಎಂದಿದ್ದಾರೆ.

'ಸಂವಿಧಾನ ಬದಲಾಯಿಸಬೇಕು, ಬದಲಾಯಿಸುವುದೇ ನಮ್ಮ ಉದ್ದೇಶ' ಎಂದೆಲ್ಲಾ ಹೆಗಡೆ ಆಗಾಗ ವಿಷಕಾರುತ್ತಲೇ ಇದ್ದಾರೆ. ಬಿಜೆಪಿ ವರಿಷ್ಠರು ಪರೋಕ್ಷವಾಗಿ ಬೆಂಬಲಿಸುತ್ತಾ ಬಂದಿರುವುದನ್ನು ನೋಡಿದರೆ ಪಕ್ಷ ಮತ್ತು ಪ್ರಧಾನಿ ಮೋದಿ ಅವರ ಬೆಂಬಲ ಅವರಿಗೆ ಇದೆ ಎನ್ನುವುದು ಸ್ಪಷ್ಟ' ಎಂದಿದ್ದಾರೆ.

ಹೇಳಿಕೆ ಪಕ್ಷದ ನಿಲುವಲ್ಲ: ಬಿಜೆಪಿ

ಬೆಂಗಳೂರು: 'ಸಂವಿಧಾನದ ಕುರಿತು ಸಂಸದ ಅನಂತ ಕುಮಾರ್ ಹೆಗಡೆ ನೀಡಿರುವ ಹೇಳಿಕೆಯ ಬಗ್ಗೆ ಅವರಿಂದ ವಿವರಣೆ ಪಡೆಯಲಾಗುವುದು' ಎಂದು ಬಿಜೆಪಿ ತಿಳಿಸಿದೆ.

'ಎಕ್ಸ್' ಮೂಲಕ ಈ ವಿಷಯ ತಿಳಿಸಿರುವ ಬಿಜೆಪಿ, 'ಅನಂತಕುಮಾರ್ ಅವರು ನೀಡಿರುವ ಹೇಳಿಕೆಗಳು ಅವರ ವೈಯಕ್ತಿಕ ಹೇಳಿಕೆ. ಅದು ಪಕ್ಷದ ನಿಲುವನ್ನು ಬಿಂಬಿಸುವುದಿಲ್ಲ. ಸಂವಿಧಾನವನ್ನು ಎತ್ತಿ ಹಿಡಿಯುವುದಕ್ಕೆ ಪಕ್ಷ ಬದ್ಧವಾಗಿದೆ' ಎಂದು ತಿಳಿಸಿದೆ.

ಸಂವಿಧಾನ ರಕ್ಷಿಸಿ, ಬಿಜೆಪಿ ಓಡಿಸಿ ಎಂಬ ಹ್ಯಾಷ್‌ಟ್ಯಾಗ್ ಬಳಸಿ, 'ನಮ್ಮ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸುವುದು ಪ್ರತಿಯೊಬ್ಬ ಭಾರತೀಯನ ಜವಾಬ್ದಾರಿಯಾಗಿದೆ' ಎಂದಿದ್ದಾರೆ.

ಲೋಕಪಾಲ ಮುಖ್ಯಸ್ಥರಾಗಿ ಖಾನ್ವಿಲ್ಕರ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಜಯ್ ಮಾಣಿಕ್‌ರಾವ್ ಖಾನ್ವಿಲ್ಕರ್ ಅವರು ಭಾನುವಾರ 'ಲೋಕಪಾಲ'ದ ಮುಖ್ಯಸ್ಥರಾಗಿ ಪ್ರಮಾಣವಚನ ಸ್ವೀಕರಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ಬೋಧಿಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಖಾನ್ವಿಲ್ಕರ್ ಅವರು ಮೇ, 2016ರಿಂದ ಜುಲೈ 29, 2022ರವರೆಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದರು. ಲೋಕಪಾಲದ ಮುಖ್ಯಸ್ಥರಾಗಿ ಕಳೆದ ತಿಂಗಳು ಇವರನ್ನು ನೇಮಿಸಲಾಗಿತ್ತು.

ನಿವೃತ್ತ ನ್ಯಾಯಮೂರ್ತಿ ಅಜಯ್ ಮಾಣಿಕ್‌ರಾವ್ ಖಾನ್ವಿಲ್ಕರ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಮಾಣ ವಚನ ಬೋಧಿಸಿದರು –ಪಿಟಿಐ ಚಿತ್ರ

ಸ್ಫೋಟ: ಅಧಿಕಾರಿಗಳು ಆರೋಪಮುಕ್ತ

ಪ್ರಜಾವಾಣಿ ವಾರ್ತೆ

ಮುಂಬೈ: ಸ್ಫೋಟ ಪರಿಕರಗಳನ್ನು ನಗರಕ್ಕೆ ತರಲು ಅನುವು ಮಾಡಿಕೊಟ್ಟಿದ್ದರು ಎಂಬ ಆರೋಪ ಎದುರಿಸುತ್ತಿದ್ದ ಕೇಂದ್ರ ಸುಂಕ ಇಲಾಖೆಯ ಇಬ್ಬರು ನಿವೃತ್ತ ಅಧಿಕಾರಿಗಳಿಗೆ, 20 ವರ್ಷಗಳ ತರುವಾಯ ಬಾಂಬೆ ಹೈಕೋರ್ಟ್ ಶಿಸ್ತುಕ್ರಮದಿಂದ ವಿನಾಯಿತಿ ನೀಡಿದೆ.

ಉಲ್ಲೇಖಿತ ಸ್ಫೋಟಕ ಪರಿಕರಗಳನ್ನೇ 1993ರಲ್ಲಿ ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟ ಕೃತ್ಯ ನಡೆಸಲು ಬಳಸಲಾಗಿತ್ತು ಎಂಬ ಹಿನ್ನೆಲೆಯಲ್ಲಿ ಈ ಇಬ್ಬರೂ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಇಲಾಖೆಯಿಂದ ಆದೇಶಿಸಲಾಗಿತ್ತು.

ಅಧಿಕಾರಿಗಳ ವಿರುದ್ಧದ ಆರೋಪ ದೃಢಪಡಿಸಲು ಇಲಾಖಾ ತನಿಖೆಯ ವೇಳೆ ಯಾವುದೇ ಸಾಕ್ಷ್ಯ ಒದಗಿಸಿಲ್ಲ ಎಂಬ ಅಂಶವನ್ನು ಉಲ್ಲೇಖಿಸಿದ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ, ನ್ಯಾಯಮೂರ್ತಿ ಆರೀಫ್ ಡಾಕ್ಟರ್ ಅವರಿದ್ದ ಪೀಠ, ಆದೇಶ ವಜಾಗೊಳಿಸಿತು.

ಕೇಂದ್ರ ಸುಂಕ ಇಲಾಖೆಯ ನಿವೃತ್ತ ಸೂಪರಿಂಟೆಂಡೆಂಟ್‌ಗಳಾದ ಎಸ್.ಎಂ.ಪಡ್ವಾಲ್, ಯಶವಂತ ಲೋಟಲೆ ಅವರು ಬಾಕಿ ವೇತನ, ಪಿಂಚಣಿ ಒಳಗೊಂಡಂತೆ ನಿವೃತ್ತಿ ನಂತರದ ಸೌಲಭ್ಯಗಳಿಗೆ ಅರ್ಹರಿದ್ದಾರೆ. ಎರಡು ತಿಂಗಳಲ್ಲಿ ಇದನ್ನು ಪಾವತಿಸಬೇಕು ಎಂದು ಆದೇಶಿಸಿದೆ.

ಮುಂಬೈನಲ್ಲಿ ಮಾರ್ಚ್ 12, 1993ರಂದು ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟ ಕೃತ್ಯದಲ್ಲಿ 257 ಜನರು ಸತ್ತಿದ್ದು, 700ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ವಿಚಾರಣೆ ನಡೆಸಿದ್ದ ವಿಶೇಷ ಕೋರ್ಟ್ ಈ ಪ್ರಕರಣದ ಸಂಬಂಧ 100 ಜನರನ್ನು ಶಿಕ್ಷೆಗೆ ಗುರಿಪಡಿಸಿತ್ತು.

ಈ ಪ್ರಕರಣದ ಸಂಬಂಧ ಇಬ್ಬರೂ ಅಧಿಕಾರಿಗಳು ಯಾವುದೇ ಕ್ರಿಮಿನಲ್ ವಿಚಾರಣೆಯನ್ನು ಎದುರಿಸಿಲ್ಲ ಎಂಬ ಅಂಶವನ್ನೂ ತನ್ನ ಆದೇಶದಲ್ಲಿ ಕೋರ್ಟ್ ಉಲ್ಲೇಖಿಸಿತು.

ಆಯುಕ್ತರ ನೇಮಕ: 15ಕ್ಕೆ ಸಭೆ?

ಒಂದನೇ ಪುಟದಿಂದ

ಆಯ್ಕೆ ಸಮಿತಿಯ ಸಭೆಯನ್ನು ಮಾರ್ಚ್ 15ಕ್ಕೆ ನಡೆಸಲು ಈಗ ಸರ್ಕಾರವು ಮುಂದಾಗಿದೆ ಎಂದು ಮೂಲಗಳು ಹೇಳಿವೆ. ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಹಾಗೂ ಲೋಕಸಭೆಯಲ್ಲಿ ಕಾಂಗ್ರೆಸ್ಸಿನ ನಾಯಕ ಆಗಿರುವ ಅಧೀರ್ ರಂಜನ್ ಚೌಧರಿ ಅವರು ಆಯ್ಕೆ ಸಮಿತಿಯ ಸದಸ್ಯರು.

ಪಾಂಡೆ ಅವರ ನಿವೃತ್ತಿಯ ಕಾರಣದಿಂದ ತೆರವಾದ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶದ ಸಭೆಗೆ ಆಹ್ವಾನ ನೀಡಲಾಗಿದೆ ಎಂದು ಮೂಲಗಳು ಹೇಳಿವೆ. ಆದರೆ, ಸಭೆಯ ಕಾರ್ಯಸೂಚಿಯನ್ನು ಪರಿಷ್ಕರಿಸಿ ಚುನಾವಣಾ ಆಯುಕ್ತರ ಎರಡೂ ಸ್ಥಾನಗಳ ಭರ್ತಿಗೆ ಮುಂದಾಗಬಹುದು ಎಂದು ಮೂಲಗಳು ಹೇಳಿವೆ. ಚೌಧರಿ ಅವರು ಬುಧವಾರ ದೆಹಲಿಗೆ ಬರಲಿದ್ದಾರೆ ಎಂದು ಗೊತ್ತಾಗಿದೆ. ಸಭೆಯು ಮಾರ್ಚ್ 14ರಂದೇ ನಡೆಯುವ ಸಾಧ್ಯತೆಯೂ ಇದೆ ಎನ್ನಲಾಗಿದೆ. 'ಕಾದು ನೋಡಬೇಕು': ಅಭಿಜಿತ್ ಗಂಗೋಪಾಧ್ಯಾಯ ಅವರು ಕೋಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಮಾರನೆಯ ದಿನ ಬಿಜೆಪಿ ಸೇರಿದ ನಿದರ್ಶನವನ್ನು ಉಲ್ಲೇಖಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗೋಯಲ್ ಅವರ ಮುಂದಿನ ನಡೆ ಏನಿರಲಿದೆ ಎಂಬುದನ್ನು ಕಾದುನೋಡಬೇಕುಎಂದುಹೇಳಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಲೋಕಸಭಾ ಚುನಾವಣೆ ಹಾಗೂ ಭದ್ರತಾ ಸಿಬ್ಬಂದಿಯ ನೇಮಕ ವಿಚಾರದಲ್ಲಿ ದೆಹಲಿಯ ನಾಯಕರು ಹಾಗೂ ತಮ್ಮ ಮೇಲಧಿಕಾರಿಯ ಒತ್ತಡಕ್ಕೆ ಮಣಿಯದ ಗೋಯಲ್ ಅವರಿಗೆ ನಾನು ಪ್ರಣಾಮ ಸಲ್ಲಿಸುವೆ. ಚುನಾವಣೆಯ ಹೆಸರಿನಲ್ಲಿ ಮೋದಿ ನೇತೃತ್ವದ ಸರ್ಕಾರವು ಏನು ಮಾಡಲು ಬಯಸಿತ್ತು ಎಂಬುದನ್ನು ಇದು ತೋರಿಸಿಕೊಟ್ಟಿದೆ.' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಭಿನ್ನಾಭಿಪ್ರಾಯದ ಕಾರಣ ರಾಜೀನಾಮೆ?'

ಗೋಯಲ್ ರಾಜೀನಾಮೆಯು ಮೂರು ಪ್ರಶ್ನೆಗಳನ್ನು ಎತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ. 'ಅವರು ಮುಖ್ಯ ಚುನಾವಣಾ ಆಯುಕ್ತರ ಜೊತೆಗಿನ ಭಿನ್ನಾಭಿಪ್ರಾಯದ ಕಾರಣಕ್ಕೆ ರಾಜೀನಾಮೆ ನೀಡಿದರೇ ಅಥವಾ ಸ್ವತಂತ್ರ ಅಂದುಕೊಂಡಿರುವ ಎಲ್ಲ ಸಂಸ್ಥೆಗಳ ಚಾಲಕ ಸ್ಥಾನದಲ್ಲಿ ಕುಳಿತಿರುವ ಮೋದಿ ನೇತೃತ್ವದ ಸರ್ಕಾರದ ಜೊತೆಗಿನ ಭಿನ್ನಮತದ ಕಾರಣಕ್ಕೆ ರಾಜೀನಾಮೆ ನೀಡಿದರೇ? ಅಥವಾ ಅವರು ವೈಯಕ್ತಿಕ ಕಾರಣಕ್ಕೆ ರಾಜೀನಾಮೆ ನೀಡಿದರೇ' ಎಂದು ರಮೇಶ್ ಎಕ್ಸ್‌ನಲ್ಲಿ ಪ್ರಶ್ನಿಸಿದ್ದಾರೆ.

'ಕಲ್ಕತ್ತ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ಕೆಲವು ದಿನಗಳ ಹಿಂದೆ ಮಾಡಿರುವಂತೆ, ಬಿಜೆಪಿ ಟಿಕೆಟ್ ಪಡೆದು ಚುನಾವಣೆ ಎದುರಿಸಲು ರಾಜೀನಾಮೆ ನೀಡಿದರೇ' ಎಂದು ಕೂಡ ರಮೇಶ್ ಪ್ರಶ್ನಿಸಿದ್ದಾರೆ. ಬಿಜೆಪಿ ಟಿಕೆಟ್ ಪಡೆದು ಚುನಾವಣಾ ಕಣಕ್ಕೆ ಇಳಿಯುವ ಉದ್ದೇಶದಿಂದ ಗೋಯಲ್ ರಾಜೀನಾಮೆ ನೀಡಿರುವ ಸಾಧ್ಯತೆ ಇದೆ ಎಂದು ರಮೇಶ್ ಸುದ್ದಿಗಾರರ ಬಳಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶಿಕ್ಷಕರಿಗೆ ಸೇವಾ ಸೌಲಭ್ಯ ಘೋಷಣೆ

ಭುವನೇಶ್ವರ (ಪಿಟಿಐ): ಒಡಿಶಾದ ಸರ್ಕಾರೇತರ ಮತ್ತು ಅನುದಾನಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗೆ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಭಾನುವಾರ ವಿವಿಧ ಸೇವಾ ಸೌಲಭ್ಯಗಳನ್ನು ಘೋಷಿಸಿದ್ದಾರೆ.

ಕ್ಷೇತ್ರ ಅನುದಾನ ವ್ಯವಸ್ಥೆಯಡಿ ಕೆಲಸ ನಿರ್ವಹಿಸುವ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗೆ 15 ದಿನಗಳ ವಾರ್ಷಿಕ ರಜೆ, ಮಹಿಳೆಯರಿಗೆ ವಾರ್ಷಿಕ ರಜೆಯ ಜೊತೆಗೆ ಎರಡು ಹೆರಿಗೆಗಳಿಗೆ 180 ದಿನಗಳ ಹೆರಿಗೆ ರಜೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಕಚೇರಿಯ ಹೇಳಿಕೆ ತಿಳಿಸಿದೆ.

ಈ ಸೌಲಭ್ಯಗಳನ್ನು ಹೊಸ ಅನುದಾನಿತ ಪ್ರೌಢ ಶಾಲೆಗಳ, ಸಂಸ್ಕೃತ ಶಾಲೆಗಳ, ಹಿರಿಯ ಪ್ರಾಥಮಿಕ ಶಾಲೆಗಳ ಹಾಗೂ ಮದರಸಗಳ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಗೂ ವಿಸ್ತರಿಸಲಾಗುವುದು ಎಂದು ಹೇಳಿದೆ.

ಯೋಜನೆಯಡಿ ನೇಮಕಗೊಂಡವರು ಸೇವಾವಧಿಯಲ್ಲಿ ಮೃತಪಟ್ಟರೆ ನೀಡುತ್ತಿದ್ದ ಪರಿಹಾರಧನವನ್ನು ₹2 ಲಕ್ಷದಿಂದ ₹5 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದರೆ ನೀಡುವ ಪರಿಹಾರಧನವನ್ನು ₹1.50 ಲಕ್ಷದಿಂದ ₹3.50 ಲಕ್ಷಕ್ಕೆ ಏರಿಕೆ ಮಾಡಲಾಗಿದೆ.

ಈ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ನಿವೃತ್ತಿ ವೇಳೆ ₹10 ಲಕ್ಷ ಮತ್ತು ಶಿಕ್ಷಕೇತರ ಸಿಬ್ಬಂದಿಗೆ ₹5 ಲಕ್ಷ ನೀಡಲು ರಾಜ್ಯ ಸಂಪುಟ ಸಭೆ ನಿರ್ಧರಿಸಿದ ಮರುದಿನ ಈ ಸೇವಾ-ಸೌಲಭ್ಯಗಳನ್ನು ಘೋಷಿಸಲಾಗಿದೆ. ಈ ನಿರ್ಧಾರಕ್ಕೆ ಶಿಕ್ಷಕರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು.

ಬಾಲಕಿ ಮೇಲೆ ಅತ್ಯಾಚಾರ

ಬಲಿಯಾ (ಪಿಟಿಐ): ಉತ್ತರಪ್ರದೇಶದ ಬಲಿಯಾ ಜಿಲ್ಲೆಯ ಗ್ರಾಮವೊಂದರಲ್ಲಿ ಇಬ್ಬರು ಬಾಲಕರು, ಆರು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

'ಮಾರ್ಚ್ 7ರಂದು ಈ ಕೃತ್ಯ ನಡೆದಿದ್ದು, ಬಾಲಕಿಯ ತಂದೆ ನೀಡಿರುವ ದೂರಿನ ಆಧಾರದಲ್ಲಿ ಬಾಲಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ತಿಳಿಸಿದ್ದಾರೆ.

ವಿದ್ಯುದಾಘಾತ: ಗಾಯಗೊಂಡಿದ್ದ ಬಾಲಕ ಸಾವು

ಕೋಟಾ (ರಾಜಸ್ಥಾನ): ಶಿವರಾತ್ರಿ ಸಂದರ್ಭದಲ್ಲಿ 'ಶಿವ ಭಾರತ' ಮೆರವಣಿಗೆಯಲ್ಲಿ ಸಾಗುತ್ತಿದ್ದಾಗ ವಿದ್ಯುದಾಘಾತದಿಂದ ಗಂಭೀರವಾಗಿ ಗಾಯಗೊಂಡಿದದ ಬಾಲಕನೊಬ್ಬ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಗನ್ (13) ಮೃತ ಬಾಲಕ. ಗಾಯಗೊಂಡಿದ್ದ ನಾಲ್ವರು ಮಕ್ಕಳ ಸ್ಥಿತಿ ಇನ್ನೂ ಗಂಭೀರವಾಗಿದ್ದು, ಜೈಪುರದ ಎಸ್‌ಎಂಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಈ ಸಾವಿನ ಬೆನ್ನಲ್ಲೇ ಮೆರವಣಿಗೆ ಆಯೋಜಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕುಸ್ತಿ: ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲ

ಬಜರಂಗ್ ಪೂನಿಯಾ, ರವಿ ದಹಿಯಾಗೆ ಸೋಲು

ಸೋನೆಪತ್, ಹರಿಯಾಣ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತರಾದ ಬಜರಂಗ್ ಪೂನಿಯಾ ಮತ್ತು ರವಿ ದಹಿಯಾ ಅವರು ರಾಷ್ಟ್ರೀಯ ತಂಡ ಆಯ್ಕೆ ಟ್ರಯಲ್ಸ್‌ನಲ್ಲಿ ಸೋತು, ಪ್ಯಾರಿಸ್ ಒಲಿಂಪಿಕ್ ಅರ್ಹತಾ ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ.

ಡಬ್ಲ್ಯುಎಫ್‌ಐ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಮುಂಚೂಣಿಯಲ್ಲಿದ್ದ ಪೂನಿಯಾ, ಪುರುಷರ ಫ್ರೀಸ್ಟೈಲ್ 65 ಕೆಜಿ ಸೆಮಿಫೈನಲ್‌ನಲ್ಲಿ ರೋಹಿತ್ ಕುಮಾರ್ ವಿರುದ್ಧ 1-9 ಅಂತರದಲ್ಲಿ ಸೋಲನುಭವಿಸಿದರು.

ಆರಂಭಿಕ ಸುತ್ತಿನಲ್ಲಿ ರವೀಂದರ್ (ಮಾನದಂಡಗಳ ಮೇಲೆ 3-3) ವಿರುದ್ಧ ಗೆಲ್ಲಲು ಸಾಧ್ಯವಾಗಲಿಲ್ಲ. ರವೀಂದರ್ ಅವರು ಪಂದ್ಯದಲ್ಲಿ ಪಾಯಿಂಟ್ ಅನ್ನು ಬಿಟ್ಟುಕೊಡದಿದ್ದರೆ, ಪೂನಿಯಾ ಆರಂಭಿಕಪಂದ್ಯದಲ್ಲೇಸೋಲುತ್ತಿದ್ದರು.

ಐಒಎ ಅಡ್‌ಹಾಕ್ ಸಮಿತಿ ಆಯೋಜಿಸಿರುವ ಟ್ರಯಲ್ಸ್‌ಗೆ ತಯಾರಿ ನಡೆಸಲು ಪೂನಿಯಾ ರಷ್ಯಾದಲ್ಲಿ ತರಬೇತಿ ಪಡೆದಿದ್ದರು.

ಸ್ಪರ್ಧೆಯಿಂದ ಹೊರಬೀಳುತ್ತಿದ್ದಂತೆ ಇಲ್ಲಿನ ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರ ತೊರೆದರು.

ಬಜರಂಗ್ ಪೂನಿಯಾ

ರಾಷ್ಟ್ರೀಯ ಉದ್ದೀಪನ ಮದ್ದು ನಿಗ್ರಹ ಸಂಸ್ಥೆ (ನಾಡಾ) ಅಧಿಕಾರಿಗಳು ಪೂನಿಯಾ ಅವರಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲು ಪ್ರಯತ್ನಿಸಿದರು. ಆದರೆ ಬಜರಂಗ್ ಅವರು ಮೂರನೇ-ನಾಲ್ಕನೇ ಸ್ಥಾನದ ಪಂದ್ಯಕ್ಕೂ ಬರಲಿಲ್ಲ.

ಸುಜೀತ್ ಕಲಾಕಲ್ ಈಗ ಭಾರತ ತಂಡದಲ್ಲಿ ಸ್ಥಾನ ಪಡೆದ ನಂತರ ಪ್ಯಾರಿಸ್ ಕ್ರೀಡಾಕೂಟಕ್ಕೆ 65 ಕೆಜಿ ವಿಭಾಗದಲ್ಲಿ ಅರ್ಹತೆ ಪಡೆಯಲು ಪ್ರಯತ್ನಿಸಲಿದ್ದಾರೆ. ತಾಂತ್ರಿಕ ಶ್ರೇಷ್ಠತೆಯ ಆಧಾರದ ಮೇಲೆ ಸುಜೀತ್ ಫೈನಲ್‌ನಲ್ಲಿ ರೋಹಿತ್ ಅವರನ್ನು ಸೋಲಿಸಿದರು. ರೋಹಿತ್ ಈಗ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ರವಿ ದಹಿಯಾ

ಟ್ರಯಲ್ಸ್‌ನಲ್ಲಿ ವಿಜೇತರಾದವರು ಏಪ್ರಿಲ್ 19-21 ರವರೆಗೆ ಬಿಷ್ಕೆಕ್‌ನಲ್ಲಿ ಮತ್ತು ಮೇ 9-12 ವರೆಗೆ ಇಸ್ತಾಂಬುಲ್‌ನಲ್ಲಿ ನಡೆಯಲಿರುವ ಏಷ್ಯನ್ ಮತ್ತು ವಿಶ್ವ ಒಲಿಂಪಿಕ್ ಅರ್ಹತಾ ಪಂದ್ಯಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ಪಡೆಯುತ್ತಾರೆ.

ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಬೆಳ್ಳಿ ಪದಕ ವಿಜೇತ ರವಿ ದಹಿಯಾ ಮತ್ತು ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಅಮನ್ ಸೆಹ್ರಾವತ್ ಇಬ್ಬರೂ ಸ್ಪರ್ಧೆಯಲ್ಲಿದ್ದ ಕಾರಣ ನಾರ್ಡಿಕ್ ಮಾದರಿಯಲ್ಲಿ ಆಯೋಜಿಸಲಾಗುತ್ತಿರುವ ಪುರುಷರ 57 ಕೆಜಿ ವಿಭಾಗ ಕಠಿಣವಾಗಿತ್ತು.

ಗಾಯದಿಂದ ಚೇತರಿಸಿಕೊಳ್ಳುತ್ತಿರುವ ದಹಿಯಾ, ಆರಂಭಿಕ ಪಂದ್ಯದಲ್ಲಿ ಅಮನ್ ವಿರುದ್ಧ 13-14 ಅಂತರದಲ್ಲಿ ಸೋತರು. ಇಬ್ಬರೂ ಛತ್ರಸಾಲ್ ಒಳಾಂಗಣ ಕ್ರೀಡಾಂಗಣದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ನಂತರದ ಪಂದ್ಯದಲ್ಲಿ ದಹಿಯಾ ಅವರು ಉದಿತ್ ವಿರುದ್ಧ ಸೋತರು. ಒಲಿಂಪಿಕ್ ಅರ್ಹತಾ ಸುತ್ತಿನಲ್ಲಿ ಅಮನ್ 57 ಕೆಜಿ ವಿಭಾಗದಲ್ಲಿ ಭಾರತ ವನ್ನು ಪ್ರತಿನಿಧಿಸಲಿದ್ದಾರೆ. ಇದುವರೆಗೆ ಭಾರತದಿಂದ ಅಂತಿಮ್ ಪಂಘಲ್ (ಮಹಿಳೆಯರ 53 ಕೆಜಿ) ಪ್ಯಾರಿಸ್ ಒಲಿಂಪಿಕ್‌ಗೆ ಅರ್ಹತೆ ಗಳಿಸಿರುವ ಏಕೈಕ ಕುಸ್ತಿಪಟುವಾಗಿದ್ದಾರೆ.

ಜೈದೀಪ್ (74 ಕೆಜಿ), ದೀಪಕ್ ಪೂನಿಯಾ (86 ಕೆಜಿ), ದೀಪಕ್ ನೆಹ್ರಾ (97 ಕೆಜಿ) ಮತ್ತು ಸುಮಿತ್ ಮಲಿಕ್ (125 ಕೆಜಿ) ಟ್ರಯಲ್ಸ್ ಗೆದ್ದ ಇತರ ಕುಸ್ತಿಪಟುಗಳು.

ಏಷ್ಯನ್ ಕ್ವಾಲಿಫೈಯರ್‌ಗೆ ಭಾರತ ತಂಡ: ಅಮನ್ ಶೆರಾವತ್ (57 ಕೆಜಿ), ಸುಜೀತ್ ಕಲ್ಕಲ್ (65 ಕೆಜಿ), ಜೈದೀಪ್ (74 ಕೆಜಿ), ದೀಪಕ್ ಪೂನಿಯಾ (86 ಕೆಜಿ), ದೀಪಕ್ ನೆಹ್ರಾ (97 ಕೆಜಿ), ಸುಮಿತ್ ಮಲಿಕ್ (125 ಕೆಜಿ) ವಿಭಾಗ.

ಭಾರತದ ಮೋನಾ–ಆದಿತ್ಯಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಮೋನಾ ಅಗರವಾಲ್ ಮತ್ತು ಆದಿತ್ಯ ಗಿರಿ ಜೋಡಿಯು ವಿಶ್ವ ಶೂಟಿಂಗ್ ಪ್ಯಾರಾ ಸ್ಪೋರ್ಟ್ಸ್ (ಡಬ್ಲ್ಯುಎಸ್‌ಪಿಎಸ್) ವಿಶ್ವಕಪ್ ಸ್ಪರ್ಧೆಯಲ್ಲಿ ಭಾನುವಾರ ಮಿಶ್ರ ತಂಡ ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್1 ವಿಭಾಗದಲ್ಲಿ ಬೆಳ್ಳಿ ಪದಕ ಪಡೆದರು.

ಆತಿಥೇಯರು ಎರಡು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಟೋಕಿಯೊ ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ ಮನೀಶ್ ನರ್ವಾಲ್ ಮತ್ತು ಅವರ ಜೊತೆಗಾರ ರುಬಿನಾ ಫ್ರಾನ್ಸಿಸ್ ಅವರು ಮಿಶ್ರ ತಂಡ 10 ಮೀಟರ್ ಏರ್ ಪಿಸ್ತೂಲ್ (ಎಸ್‌ಎಚ್1) ಚಿನ್ನದ ಪದಕ ಪಂದ್ಯದಲ್ಲಿ ಚೀನಾದ ಲಿ ಮಿನ್ ಮತ್ತು ಯಾಂಗ್ ಚಾವೊ ವಿರುದ್ಧ 12–1 ಅಂತರದಲ್ಲಿ ಸೋತರು.

ಇದೇ ಸ್ಪರ್ಧೆಯಲ್ಲಿ ಭಾರತ ಕಂಚಿನ ಪದಕ ಗೆದ್ದುಕೊಂಡಿತು. ಭಕ್ತಿ ಶರ್ಮಾ ಮತ್ತು ರುದ್ರಾಂಶ್ ಖಂಡೇಲ್ವಾಲ್ ಅವರು ಕ್ಯೂಬಾ ಜೋಡಿ ಯೆನಿಗ್ಲಾಡಿಸ್ ಸೌರೆಜ್ ಮತ್ತು ಲೋರಿಗಾ ರೋಡ್ರಿಗಸ್ ಅವರನ್ನು 16-8 ರಿಂದ ಸೋಲಿಸಿದರು.

ಶನಿವಾರ ನಡೆದ ಮಹಿಳೆಯರ 10 ಮೀಟರ್ ಏರ್ ರೈಫಲ್ (ಎಸ್‌ಎಚ್ 1ಕೆಟಗರಿ) ಸ್ಪರ್ಧೆಯಲ್ಲಿ ಚಿನ್ನ ಗೆದ್ದು, ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಅರ್ಹತೆ ಪಡೆದಿದ್ದ 37 ವರ್ಷದ ಮೋನಾ, ಗಿರಿ ಅವರೊಂದಿಗೆ ಜೋಡಿಯಾಗಿದ್ದರು. ಆದರೆ ಫೈನಲ್‌ನಲ್ಲಿ ಚೀನಾದ ಜೋಡಿ ಝೂಂಗ್ ಯಿಕ್ಸಿನ್ ಮತ್ತು ಡಾಂಗ್ ಚಾವೊ ವಿರುದ್ಧ 16-4 ಅಂತರದಲ್ಲಿ ಸೋತು ಬೆಳ್ಳಿಗೆ ತೃಪ್ತಿಪಟ್ಟರು.

ಇದೇ ಸ್ಪರ್ಧೆಯಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಭಾರತದ ಮತ್ತೊಂದು ಜೋಡಿ, ಅವನಿ ಲೇಖಾರಾ ಮತ್ತು ಮಹಾವೀರ್ ಸ್ವರೂಪ್ ಅವರು ಉಕ್ರೇನ್ ಜೋಡಿ ಇರಿನಾ ಶೆಟ್ನಿಕ್ ಮತ್ತು ಆಂಡ್ರಿ ಡೊರೊಶೆಂಕೊ ವಿರುದ್ಧ ಸೋತರು.

ಮೋನಾ ಮತ್ತು ಆದಿತ್ಯ ಗಿರಿ – ಸಾಯ್ ಮಿಡಿಯಾ ಎಕ್ಸ್ ಚಿತ್ರ

ಸ್ಪ್ರಿಂಟ್‌ನಲ್ಲಿ ಮಿಂಚಿದ ಪೆರೆಜ್

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕಿತ ಸ್ಪೇನ್ ಪೆಡ್ಲರ್‌ಗಳಾದ ಫರ್ನಾಂಡೊ ಪೆರೆಜ್ ಮತ್ತು ಎಸ್ಪೆನಾನ್ಜ ಬರೆರಾಸ್ ಇಲ್ಲಿ ಭಾನುವಾರ ಮುಕ್ತಾಯಗೊಂಡ ಅಂತರರಾಷ್ಟ್ರೀಯ ಸ್ಟ್ಯಾಂಡ್ ಅಪ್ ಪೆಡಲಿಂಗ್ ಚಾಂಪಿಯನ್‌ಷಿಪ್‌ನ ಸ್ಪ್ರಿಂಟ್ ವಿಭಾಗದಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.

ಅಸೋಸಿಯೇಷನ್ ಆಫ್ ಪೆಡಲ್ ಸರ್ಫ್ ಪ್ರೊಫೆಷನಲ್ಸ್ (ಎಪಿಪಿ) ವಿಶ್ವ ಟೂರ್‌ನ ಅಂಗವಾಗಿ ಸಸಿಹಿತ್ಲು ಕಡಲ ಕಿನಾರೆಯಲ್ಲಿ ನಡೆದ ಚಾಂಪಿಯನ್ ಷಿಪ್‌ನಲ್ಲಿ ಪೂಜಾರ ಸಹೋದರರಾದ ರಾಜು ಮತ್ತು ಆಕಾಶ್ ಮಿಂಚು ಹರಿಸಿ ಕ್ರಮವಾಗಿ ಮೊದಲ ಎರಡು ಪ್ರಶಸ್ತಿಗಳನ್ನು ಗೆದ್ದುಕೊಂಡರು.

ಪುರುಷರ 200 ಮೀಟರ್ ರೇಸ್‌ನಲ್ಲಿ ಪೆರೆಜ್ 2 ನಿಮಿಷ 37 ಸೆಕೆಂಡುಗಳ ಸಾಧನೆಯೊಂದಿಗೆ ಮೊದಲಿಗರಾದರು. ಸ್ಪೇನ್‌ನ ಕ್ರಿಶ್ಚಿಯನ್ ಆ್ಯಂಡರ್ಸನ್ (2 ನಿ53 ಸೆ) ರನ್ನರ್ ಅಪ್ ಆದರೆ ಹಂಗರಿಯ ಡ್ಯಾನಿಯಲ್ ಹಸ್ಯುಲೊ (2ನಿ 54) ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ 200 ಮೀಟರ್ಸ್ ರೇಸ್‌ನಲ್ಲಿ ಗುರಿ ಮುಟ್ಟಲು ಬರೆರಾಸ್ 2ನಿಮಿಷ 55 ಸೆಕೆಂಡು ತೆಗೆದುಕೊಂಡರು.

ರನ್ನರ್ ಅಪ್ ಇಟಲಿಯ ಬಿಯಾಂಕ ಟೊನ್ಸೆಲಿ 3 ನಿಮಿಷ 38 ಸೆಕೆಂಡುಗಳಲ್ಲಿ ಗುರಿ ತಲುಪಿದರೆ ಥಾಯ್ಲೆಂಟ್‌ನ ಐರಿನ್ ಎನ್ 3 ನಿಮಿಷ 54 ಸೆಕೆಂಡುಗಳಲ್ಲಿ ರೇಸ್ ಪೂರ್ತಿಗೊಳಿಸಿ ಮೂರನೇ ಸ್ಥಾನ ಗಳಿಸಿದರು. ಜೂನಿಯರ್ ವಿಭಾಗದಲ್ಲಿ ರಾಜು ಪೂಜಾರ (4ನಿ 35ಸೆ) ಮೊದಲಿಗರಾದರೆ ಆಕಾಶ್ ಪೂಜಾರ (5ನಿ 35ಸೆ) ರನ್ನರ್ ಅಪ್ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪ್ರವೀಣ್ ಪೂಜಾರ (5 ನಿ 39ಸೆ) ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ಸ್ಪ್ರಿಂಟ್‌ನಲ್ಲಿ ಚಾಂಪಿಯನ್ ಆದ ಸ್ಪೇನ್‌ನ ಎಸ್ಪೆನಾನ್ಜ ಬರೆರಾಸ್ ಸಂಭ್ರಮ

ದೆಹಲಿ: ನೀರು ಸಂಸ್ಕರಣಾ ಘಟಕ ಕೊಳವೆಬಾವಿಗೆ ಬಿದ್ದಿದ್ದ ಯುವಕ

12 ಗಂಟೆಗಳ ಬಳಿಕ ಮೃತದೇಹ ಹೊರಕ್ಕೆ

ನವದೆಹಲಿ (ಪಿಟಿಐ): ದೆಹಲಿಯ ಕೇಶೋಪುರ ಮಂಡಿ ಪ್ರದೇಶದಲ್ಲಿರುವ ಜಲ ಮಂಡಳಿಯ ನೀರು ಸಂಸ್ಕರಣಾ ಘಟಕದ 40 ಅಡಿ ಆಳದ ಕೊಳವೆಬಾವಿಗೆ ಬಿದ್ದಿದ್ದ 30 ವರ್ಷದ ವ್ಯಕ್ತಿಯ ಮೃತದೇಹವನ್ನು 12 ಗಂಟೆಗಳ ಕಾರ್ಯಾಚರಣೆಯ ಬಳಿಕ ಭಾನುವಾರ ಹೊರ ತೆಗೆಯಲಾಗಿದೆ.

ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

'ಕೊಳವೆಬಾವಿಗೆ ಬಿದ್ದ ವ್ಯಕ್ತಿಯ ಮೃತದೇಹವನ್ನು ಹೊರತೆಗೆಯಲಾಗಿದೆ. ಆ ವ್ಯಕ್ತಿ ಕೊಳವೆಬಾವಿ ಇದ್ದ ಕೋಣೆಗೆ ಹೇಗೆ ಪ್ರವೇಶಿಸಿದ್ದರು ಎಂಬುದರ ಕುರಿತು ಪೊಲೀಸರು ತನಿಖೆ ನಡೆಸಲಿದ್ದಾರೆ' ಎಂದು ಸಚಿವೆ ಆತಿಶಿ ಭಾನುವಾರ 'ಎಕ್ಸ್' ಮಾಧ್ಯಮದಲ್ಲಿ ತಿಳಿಸಿದರು.

'ವ್ಯಕ್ತಿಯನ್ನು ರಕ್ಷಿಸಲು ಎನ್‌ಡಿಆರ್‌ಎಫ್ ಮತ್ತು ದೆಹಲಿಯ ಅಗ್ನಿಶಾಮಕ ದಳದ ಸಿಬ್ಬಂದಿ ಅವಿರತವಾಗಿ ಶ್ರಮಿಸಿದ್ದರು ಮತ್ತು ಹಲವು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದ್ದರು' ಎಂದು ಅವರು ಹೇಳಿದರು.

ಕೊಳವೆಬಾವಿಗೆ ವ್ಯಕ್ತಿಯೊಬ್ಬರು ಬಿದ್ದಿರುವ ಕುರಿತು ಶನಿವಾರ ರಾತ್ರಿ ಅಧಿಕಾರಿಗಳಿಗೆ ಮಾಹಿತಿ ಲಭಿಸಿತ್ತು. ಬಳಿಕ ರಕ್ಷಣಾ ಕಾರ್ಯಾಚರಣೆ ನಡೆದಿತ್ತು.

ಕಾಣೆಯಾದವರ ಬಂಧುಗಳು ಕಾರ್ಯಾಚರಣೆ ಸ್ಥಳಕ್ಕೆ: ಯುವಕನ ಮೃತದೇಹವನ್ನು ಕೊಳವೆ ಬಾವಿಯಿಂದ ಹೊರತೆಗೆಯುವ ಕಾರ್ಯಾಚರಣೆ ನಡೆಯುತ್ತಿದ್ದ ವೇಳೆ, ಕಾಣೆಯಾದ ಮಗ ಹಾಗೂ ತಮ್ಮನನ್ನು ಹುಡುಕಿಕೊಂಡು ಇಬ್ಬರು ಮಹಿಳೆಯರು ಸ್ಥಳಕ್ಕೆ ಬಂದಿದ್ದರು.

ಕೊಳವೆಬಾವಿಗೆ ಮಗುವೊಂದು ಬಿದ್ದಿದೆ ಎಂಬ ವದಂತಿ ಹರಡಿದ ಕಾರಣ ಎರಡು ದಿನಗಳ ಹಿಂದೆ ಕಾಣೆಯಾಗಿದ್ದ ಮಗನ ಫೋಟೊ ಹಿಡಿದುಕೊಂಡು ಗೀತಾದೇವಿ ಎಂಬುವವರು ಕಾರ್ಯಾಚರಣೆ ನಡೆಯುತ್ತಿದ್ದ ಸ್ಥಳದಲ್ಲಿ ಕಾದು ಕುಳಿತಿದ್ದರು.

ವಾರದ ಹಿಂದೆ ಕಾಣೆಯಾಗಿದ್ದ ತಮ್ಮನನ್ನು ಹುಡುಕಿಕೊಂಡು ಅನಿತಾ ಎಂಬ ಮಹಿಳೆ ಕೂಡ ಕೊಳವೆ ಬಾವಿ ಇರುವ ಸ್ಥಳಕ್ಕೆ ಬಂದಿದ್ದರು.

'ಕೂಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ನನ್ನ ತಮ್ಮ ಸ್ನೇಹಿತರ ಜೊತೆಗೆ ಮದ್ಯಪಾನ ಮಾಡಲು ಈ ಪ್ರದೇಶಕ್ಕೆ ಬರುತ್ತಿದ್ದ. ಅವನನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದೇನೆ' ಎಂದು ಅನಿತಾ ಅವರು ತಿಳಿಸಿದರು.

ಕೊಳವೆಬಾವಿಗೆ ಬಿದ್ದ ವ್ಯಕ್ತಿಯ ರಕ್ಷಣೆಗಾಗಿ ನಡೆದ ಕಾರ್ಯಾಚರಣೆ –ಪಿಟಿಐ ಚಿತ್ರ

ಸಾತ್ವಿಕ್ – ಚಿರಾಗ್ ಮೋಡಿ

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್: ಭಾರತದ ಲಕ್ಷ್ಯ ಸೇನ್‌ಗೆ ಸೋಲು, ನಿರ್ಗಮನ

ಪ್ಯಾರಿಸ್ (ಪಿಟಿಐ): ವಿಶ್ವದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಭಾನುವಾರ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಕಿರೀಟ ಧರಿಸಿಕೊಂಡರು.

ಚಿರಾಗ್ ಹಾಗೂ ಸಾತ್ವಿಕ್ ಅವರು ಫೈನಲ್‌ನಲ್ಲಿ ಚೀನಾ ತೈಪೆಯ ಲೀ ಝೆ-ಹುಯಿ ಮತ್ತು ಯಾಂಗ್ ಪೊ-ಹ್ಸುವಾನ್ ಅವರನ್ನು ಸೋಲಿಸುವ ಮೂಲಕ ಎರಡನೇ ಬಾರಿಗೆ ಈ ಪ್ರಶಸ್ತಿ ಜಯಿಸಿತು. 2022ರಲ್ಲಿ ಮೊದಲ ಬಾರಿಗೆ ಇಲ್ಲಿ ಗೆದ್ದಿದ್ದರು. 2019ರಲ್ಲಿ ರನ್ನರ್ಸ್ ಅಪ್ ಆಗಿದ್ದರು. ಭಾನುವಾರ ನಡೆದ ಪಂದ್ಯದಲ್ಲಿ ಏಷ್ಯನ್ ಗೇಮ್ಸ್ ಚಾಂಪಿಯನ್ಸ್‌ನ ಲೀ ಮತ್ತು ಯಾಂಗ್ ಅವರನ್ನು 37 ನಿಮಿಷಗಳಲ್ಲಿ 21-11, 21-17 ಅಂತರದಿಂದ ಸೋಲಿಸಿದರು.

ಈ ವರ್ಷ ಮಲೇಷ್ಯಾ ಸೂಪರ್ 1000, ಇಂಡಿಯಾ ಸೂಪರ್ 750 ನಲ್ಲಿ ಎರಡನೇ ಅತ್ಯುತ್ತಮ ಸ್ಥಾನ ಪಡೆದಿದ್ದ ಭಾರತದ ಜೋಡಿ, ಕಳೆದ ವರ್ಷ ಚೀನಾ ಮಾಸ್ಟರ್ಸ್ ಸೂಪರ್ 750ರಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು. ಈ ಇಬ್ಬರು ಪ್ಯಾರಿಸ್ ಒಲಿಂಪಿಕ್ಸ್ ಚಿನ್ನ ಗೆಲ್ಲುವ ನೆಚ್ಚಿನ ಆಟಗಾರರಾಗಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ದಕ್ಷಿಣ ಕೊರಿಯಾದ ಸಿಯೊ ಸೆಯುಂಗ್ ಜೇ ಮತ್ತು ಕಾಂಗ್ ಮಿನ್ ಹ್ಯುಕ್ ಅವರನ್ನು ನೇರ್ ಗೇಮ್‌ಗಳಿಂದ ಸೋಲಿಸಿತ್ತು. ಸೆಮಿಫೈನಲ್‌ನಲ್ಲಿ 21-13, 21-16 ರಿಂದ ದಕ್ಷಿಣ ಕೊರಿಯಾ ಜೋಡಿಯ ವಿರುದ್ಧ ಗೆದ್ದರು. ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮೊದಲ ಗೇಮ್ ಅನ್ನು ನಿರಾಯಾಸವಾಗಿ ಗೆದ್ದ ನಂತರ, ಎರಡನೇ ಗೇಮ್‌ನಲ್ಲಿಯೂ ಮೇಲುಗೈ ಸಾಧಿಸಿದರು.

ಲಕ್ಷ್ಯ ಸೇನ್ ಅವರು ಹಾಲಿ ವಿಶ್ವ ಚಾಂಪಿಯನ್ ಥಾಯ್ಲೆಂಡ್‌ನ ಕುನ್ಲಾವುಟ್ ವಿಟಿಡ್ಸರ್ನ್ ವಿರುದ್ಧ ಸೋತು ಅಭಿಯಾನ ಕೊನೆಗೊಳಿಸಿದರು. ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಕುನ್ಲಾವುಟ್ 20-22, 21-13, 21-11 ಅಂತರದಲ್ಲಿ ಗೆದ್ದರು.

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಸಾಯ್ ಮಿಡಿಯಾ. ಎಕ್ಸ್ ಚಿತ್ರ

ರಣಜಿ ಟ್ರೋಫಿ ಫೈನಲ್: ಹರ್ಷ ದುಬೆ, ಯಶ್ ಠಾಕೂರ್‌ಗೆ ತಲಾ 3 ವಿಕೆಟ್

ಮುಂಬೈಗೆ ಬಲ ತುಂಬಿದ ಶಾರ್ದೂಲ್

ಮುಂಬೈ (ಪಿಟಿಐ): ಶಾರ್ದೂಲ್ ಠಾಕೂರ್ ಅವರ ಆಲ್‌ರೌಂಡ್ ಆಟದ ಬಲದಿಂದ ಮುಂಬೈ ತಂಡವು ಭಾನುವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನ ಮೊದಲ ದಿನದ ಗೌರವ ಗಳಿಸಿತು.

ಟಾಸ್ ಗೆದ್ದ ವಿದರ್ಭ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಂತರರಾಷ್ಟ್ರೀಯ ಕ್ರಿಕೆಟ್ ಆಡಿರುವ ಅನುಭವಿ ಬ್ಯಾಟರ್‌ಗಳಾದ ಶ್ರೇಯಸ್ ಅಯ್ಯರ್ ಮತ್ತು ಅಜಿಂಕ್ಯ ರಹಾನೆ ಅವರ ರನ್ ಬರ ಮುಂದುವರಿಯಿತು.

ವಿದರ್ಭ ತಂಡದ ಹರ್ಷ ದುಬೆ ಮತ್ತು ಯಶ್ ಠಾಕೂರ್ ಅವರ ಧಾಳಿಗೆ ಮುಂಬೈ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಬಲ ಕುಸಿಯಿತು. ಆದರೆ ಶಾರ್ದೂಲ್ (75; 69ಎ, 4X8, 6X3) ಬೀಸಾಟದಿಂದಾಗಿ ತಂಡವು 64.3 ಓವರ್‌ಗಳಲ್ಲಿ 224 ರನ್‌ಗಳನ್ನು ಕಲೆಹಾಕಿತು.

ಇದಕ್ಕೆ ಪ್ರತಿಕ್ರಿಯೆಯಾಗಿ ಇನಿಂಗ್ಸ್ ಆರಂಭಿಸಿದ ವಿದರ್ಭ ತಂಡಕ್ಕೆ ಶಾರ್ದೂಲ್ ಅವರೇ ಮೊದಲ ಪೆಟ್ಟು ಕೊಟ್ಟರು. ವಿದರ್ಭ ಆರಂಭಿಕ ಬ್ಯಾಟರ್ ಧ್ರುವ ಶೋರೆ ಅವರು ಖಾತೆ ತೆರೆಯುವ ಮುನ್ನವೇ ಶಾರ್ದೂಲ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇನ್ನೊಂದೆಡೆ ಮಧ್ಯಮವೇಗಿ ಧವಳ್ ಕುಲಕರ್ಣಿ (9ಕ್ಕೆ2) ಅಮನ್ ಮೊಖಾಡೆ (8 ರನ್) ಮತ್ತು 12 ಎಸೆತ ಎದುರಿಸಿ ಒಂದೂ ರನ್ ಗಳಿಸದ ಕರುಣ್ ನಾಯರ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಇವರಿಬ್ಬರು ಬ್ಯಾಟರ್‌ಗಳನ್ನು ಹಾರ್ದಿಕ್ ತಮೋರೆ ಕ್ಯಾಚ್ ಮಾಡಿದರು.

ವಿದರ್ಭ ತಂಡವು ದಿನದಾಟದ ಮುಕ್ತಾಯಕ್ಕೆ 13 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 31 ರನ್ ಗಳಿಸಿತು.

42ನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಮುಂಬೈ ತಂಡಕ್ಕೆ ಪೃಥ್ವಿ ಶಾ (46 ರನ್) ಮತ್ತು ಭೂಪೆನ್ ಲಾಲ್ವಾನಿ (37 ರನ್) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು. ಆದರೆ, 20ನೇ ಓವರ್‌ನಲ್ಲಿ ಯಶ್ ಠಾಕೂರ್ ಬೌಲಿಂಗ್‌ನಲ್ಲಿ ಭೂಪೆನ್ ಔಟಾದರು. ನಂತರ ಮುಂಬೈ ತಂಡದ ಕುಸಿತ ಆರಂಭವಾಯಿತು.

ತಂಡದ ಮೊತ್ತ 100ರ ಗಡಿ ಮುಟ್ಟುವ ಮುನ್ನವೇ ನಾಲ್ವರು ಬ್ಯಾಟರ್‌ಗಳು ಪೆವಿಲಿಯನ್ ಸೇರಿದ್ದರು. ನಂತರ ಶಾರ್ದೂಲ್ ಚೇತರಿಕೆ ನೀಡಿದರು. ಏಕಾಂಗಿಯಾಗಿ ಬ್ಯಾಟ್ ಬೀಸಿದರು. ತಮಿಳುನಾಡು ವಿರುದ್ಧದ ಸೆಮಿಫೈನಲ್‌ನಲ್ಲಿ ಶಾರ್ದೂಲ್ ಅವರು ಶತಕ ಗಳಿಸಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್– ಮುಂಬೈ 64.3 ಓವರ್‌ಗಳಲ್ಲಿ 224 (ಪೃಥ್ವಿ ಶಾ 46, ಭೂಪೇನ್ ಲಾಲ್ವಾನಿ 37, ಶಾರ್ದೂಲ್ ಠಾಕೂರ್ 75, ತುಷಾರ್ ದೇಶಪಾಂಡೆ 14, ಉಮೇಶ್ ಯಾದವ್ 43ಕ್ಕೆ2, ಹರ್ಷ ದುಬೆ 62ಕ್ಕೆ3, ಯಶ್ ಠಾಕೂರ್ 54ಕ್ಕೆ3) ವಿದರ್ಭ: 13 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 31 (ಅಥರ್ವ್ ತೈಡೆ ಬ್ಯಾಟಿಂಗ್ 21, ಧವಳ್ ಕುಲಕರ್ಣಿ 9ಕ್ಕೆ2, ಶಾರ್ದೂಲ್ ಠಾಕೂರ್ 14ಕ್ಕೆ1)

ಮುಂಬೈ ತಂಡದ ಶಾರ್ದೂಲ್ ಠಾಕೂರ್ ಅವರು ಅರ್ಧಶತಕ ಗಳಿಸಿ ಸಂಭ್ರಮಿಸಿದ ಕ್ಷಣ –ಪಿಟಿಐ ಚಿತ್ರ

ಸಿ.ಕೆ. ನಾಯ್ಡು ಟ್ರೋಫಿ ಫೈನಲ್ : ದೊಡ್ಡ ಮೊತ್ತ ಪೇರಿಸಿದ ಕರ್ನಾಟಕ

ಯಶೋವರ್ಧನ್, ಕೃತಿಕ್ ಶತಕದ ಜೊತೆಯಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶೋವರ್ಧನ್ ಪರಂತಾಪ್ ಮತ್ತು ಕೃತಿಕ್ ಕೃಷ್ಣ ಅವರ ಶತಕದ ಜೊತೆಯಾಟದ ಬಲದಿಂದ ಕರ್ನಾಟಕ ತಂಡವು ಭಾನುವಾರ ಇಲ್ಲಿ ಆರಂಭವಾದ ಕರ್ನಲ್ ಸಿ.ಕೆ. ನಾಯ್ಡು 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ದೊಡ್ಡ ಮೊತ್ತದತ್ತ ದಾಪುಗಾಲಿಟ್ಟಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಉತ್ತರ ಪ್ರದೇಶ ತಂಡದ ಬೌಲರ್‌ಗಳು ಕರ್ನಾಟಕವು 200ರ ಗಡಿ ಮುಟ್ಟುವ ಮುನ್ನವೇ ಐದು ವಿಕೆಟ್ ಗಳಿಸಿದರು.

ಆದರೆ, ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ ಯಶೋವರ್ಧನ್ (ಬ್ಯಾಟಿಂಗ್ 84; 111ಎ) ಮತ್ತು ಕೃತಿಕ್ (ಬ್ಯಾಟಿಂಗ್ 58; 103ಎ) 131 ರನ್ ಸೇರಿಸಿದರು. ಇದರಿಂದಾಗಿ ದಿನದಾಟದ ಕೊನೆಗೆ ಕರ್ನಾಟಕ ತಂಡವು 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 325 ರನ್ ಗಳಿಸಿತು.

ಆತಿಥೇಯ ತಂಡಕ್ಕೆ ಮೆಕ್‌ನೀಲ್ ನರೋನಾ (68; 135ಎ) ಮತ್ತು ಪ್ರಖರ್ ಚತುರ್ವೇದಿ (33; 69ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದರು. 21ನೇ ಓವರ್‌ನಲ್ಲಿ ಕುನಾಲ್ ತ್ಯಾಗಿ ಹಾಕಿದ ಓವರ್‌ನಲ್ಲಿ ಆರಾಧ್ಯ ದೇವ್ ಅವರಿಗೆ ಕ್ಯಾಚಿತ್ತ ಪ್ರಖರ್ ನಿರ್ಗಮಿಸಿದರು.

ಎರಡನೇ ವಿಕೆಟ್ ಜೊತೆಯಾಟದಲ್ಲಿ ನರೋನಾ ಅವರೊಂದಿಗೆ ಅನೀಶ್ (43 ರನ್) 73 ರನ್ ಸೇರಿಸಿದರು. ಇಬ್ಬರೂ ಅದಕ್ಕಾಗಿ 148 ಎಸೆತಗಳನ್ನು ಎದುರಿಸಿದರು. 46ನೇ ಓವರ್‌ನಲ್ಲಿ ಶುಭಂ ಮಿಶ್ರಾ ಎಸೆತವನ್ನು ಆಡುವ ಭರದಲ್ಲಿ ಋತುರಾಜ್ ಮಿಶ್ರಾಗೆ ಕ್ಯಾಚಿತ್ತ ಅನೀಶ್ ನಿರ್ಗಮಿಸಿದರು. ಎರಡು ಓವರ್‌ಗಳ ನಂತರ ನೊರೊನಾ ರನೌಟ್ ಆದರು. ಅನೀಶ್ವರ್ ಗೌತಮ್ 18 ರನ್ ಗಳಿಸಿ ನಿರ್ಗಮಿಸಿದರು.

ಈ ಸಂದರ್ಭದಲ್ಲಿ ಜೊತೆಗೂಡಿದ ಯಶೋವರ್ಧನ್ ಮತ್ತು ವಿಕೆಟ್‌ಕೀಪರ್ ಬ್ಯಾಟರ್ ಕೃತಿಕ್ ಉತ್ತರಪ್ರದೇಶದ ಬೌಲರ್‌ಗಳ ಬೆವರಿಳಿಸಿದರು. ಚೆಂದದ ಡ್ರೈವ್ ಮತ್ತು ಸ್ವೀಪ್ ಗಳ ಮೂಲಕ ಬೌಂಡರಿಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 325 (ಮೆಕ್‌ನಿಲ್ ನರೋನಾ 68, ಪ್ರಖರ್ ಚತುರ್ವೇದಿ 33, ಕೆ.ವಿ. ಅನೀಶ್ 43, ಯಶೋವರ್ಧನ್ ಪರಂತಾಪ್ ಬ್ಯಾಟಿಂಗ್ 84, ಕೃತಿಕ್ ಕೃಷ್ಣ ಬ್ಯಾಟಿಂಗ್ 58, ಶುಭಮನ್ ಮಿಶ್ರಾ 76ಕ್ಕೆ2) ಉತ್ತರಪ್ರದೇಶ ಎದುರು.

ಕರ್ನಾಟಕ ತಂಡದ ಬ್ಯಾಟರ್‌ಗಳಾದ (ಎಡದಿಂದ ಬಲಕ್ಕೆ), ಮೆಕ್‌ನಿಲ್ ನರೊನಾ, ಯಶೋವರ್ಧನ್ ಪರಂತಾಪ್ ಮತ್ತು ಕೃತಿಕ್ ಕೃಷ್ಣ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಸೌದಿ ಗ್ರ್ಯಾನ್ ಪ್ರೀ : ಖುಷ್ ಮೈನಿ ದ್ವಿತೀಯ

ಖುಷ್ ಮೈನಿ. ಎಕ್ಸ್ ಚಿತ್ರ

ಜಿದ್ದಾ (ಸೌದಿ ಅರೇಬಿಯಾ) (ಪಿಟಿಐ): ಭಾರತದ ಖುಷ್ ಮೈನಿ ಅವರು ಭಾನುವಾರ ನಡೆದ ಎಫ್2 ಸೌದಿ ಅರೇಬಿಯಾ ಗ್ರ್ಯಾನ್ ಪ್ರಿ ರೇಸ್‌ನಲ್ಲಿ ಎರಡನೇ ಸ್ಥಾನ ಪಡೆದರು.

ಇನ್ವಿಕ್ಟಾ ರೇಸಿಂಗ್ ಪ್ರತಿನಿಧಿಸುತ್ತಿರುವ ಮೈನಿ ಈ ಹಿಂದೆ ಫಾರ್ಮುಲಾ 2 ರೇಸ್‌ನಲ್ಲಿ ಪೋಲ್ ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ವ್ಯಾನ್ ಅಮರ್ಸ್ಫೂರ್ಟ್ ರೇಸಿಂಗ್‌ನ ಎ ನ್ಜೋ ಫಿಟಿಪಾಲ್ಡಿ ಗೆದ್ದರೆ, ಎಂಪಿ ಮೋಟಾರ್ ನ ಡೆನಿಸ್ ಹೌಗರ್ ಮೂರನೇ ಸ್ಥಾನ ಪಡೆದರು. ಈಗ ಚಾಂಪಿಯನ್‌ಷಿಪ್‌ನಲ್ಲಿ 27 ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿರುವ ಮೈನಿ, ಮಾರ್ಚ್ 22-24ರ ವರೆಗೆ ಮೆಲ್ಬರ್ನ್‌ನಲ್ಲಿ ನಡೆಯಲಿರುವ ಎಫ್2 ಮೂರನೇ ಸುತ್ತಿನಲ್ಲಿ ಸ್ಪರ್ಧಿಸಲಿದ್ದಾರೆ.

'ಉತ್ತಮ ರೇಸ್ ಆಗಿತ್ತು. ನಿಜವಾಗಿಯೂ ಸಂತಸವಾಗಿದೆ. ಕಾರು ಅದ್ಭುತವಾಗಿದೆ' ಎಂದು ಮೈನಿ ಹೇಳಿದರು.

ಐಸಿಸಿ ರ್‍ಯಾಂಕಿಂಗ್: ಭಾರತಕ್ಕೆ ಅಗ್ರಸ್ಥಾನ

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಭರ್ಜರಿ ಜಯಗಳಿಸಿದ ಭಾರತ ಕ್ರಿಕೆಟ್ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಲಗ್ಗೆ ಇಟ್ಟಿದೆ. ಇದರೊಂದಿಗೆ ಎಲ್ಲ ಮೂರು ಮಾದರಿಯ ಕ್ರಿಕೆಟ್‌ನಲ್ಲಿಯೂ ಮೊದಲ ಸ್ಥಾನವನ್ನು ಅಲಂಕರಿಸಿದೆ.

ಭಾನುವಾರ ಐಸಿಸಿಯು ಬಿಡುಗಡೆ ಮಾಡಿದ ರ್‍ಯಾಂಕಿಂಗ್ ಪಟ್ಟಿಯಲ್ಲಿ 122 ರೇಟಿಂಗ್ ಪಾಯಿಂಟ್ಸ್‌ನೊಂದಿಗೆ ಪ್ರಥಮ ಸ್ಥಾನ ಗಳಿಸಿತು. ಆಸ್ಟ್ರೇಲಿಯಾ (117) ಎರಡನೇ ಸ್ಥಾನಕ್ಕಿಳಿಯಿತು. ಇಂಗ್ಲೆಂಡ್ (111), ನ್ಯೂಜಿಲೆಂಡ್ (101) ಮತ್ತು ದಕ್ಷಿಣ ಆಫ್ರಿಕಾ (99) ಕ್ರಮವಾಗಿ ಮೂರರಿಂದ ಐದನೇ ಸ್ಥಾನ ಪಡೆದಿವೆ. ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 121 ರೇಟಿಂಗ್ ಪಾಯಿಂಟ್ಸ್ ಗಳಿಸಿರುವ ಭಾರತ ಪ್ರಥಮ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ (118) ಎರಡನೇ ಸ್ಥಾನದಲ್ಲಿದೆ. ಟಿ20 ಮಾದರಿಯಲ್ಲಿ ಭಾರತ ತಂಡವು 266 ರೇಟಿಂಗ್ ಪಾಯಿಂಟ್ಸ್‌ನೊಂದಿಗೆ ಮೊದಲ ಹಾಗೂ ಇಂಗ್ಲೆಂಡ್ (256) ಎರಡನೇ ಸ್ಥಾನದಲ್ಲಿದೆ.

2023ರ ಸೆಪ್ಟೆಂಬರ್‌ನಿಂದ ಜನವರಿ 2024ರವರೆಗೂ ಭಾರತ ತಂಡ ಅಗ್ರಸ್ಥಾನದಲ್ಲಿತ್ತು.

ಡಬ್ಲ್ಯುಪಿಎಲ್: ಪ್ಲೇ ಆಫ್‌ಗೆ ಪ್ರವೇಶ, ಆರ್‌ಸಿಬಿಗೆ ನಿರಾಶೆ

ಡೆಲ್ಲಿ ಕ್ಯಾಪಿಟಲ್ಸ್‌ಗೆ ರೋಚಕ ಜಯ

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡವು ಭಾನುವಾರ ಇಲ್ಲಿ ನಡೆದ ಮಹಿಳ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 1 ರನ್‌ನಿಂದ ರೋಚಕ ಜಯ ಸಾಧಿಸಿತು. ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿ ಪ್ಲೇಆಫ್‌ಗೆ ಲಗ್ಗೆ ಇಟ್ಟಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 181 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿ ತಂಡಕ್ಕೆ ರಿಚಾ ಘೋಷ್ (51; 29ಎ, 4X4, 6X3) ಮತ್ತು ಎಲಿಸ್ ಪೆರಿ (49 ರನ್) ತಿರುಗೇಟು ನೀಡಿದರು. ಕೊನೆಯ ಎಸೆತದವರೆಗೂ ರೋಚಕತೆ ಕೆರಳಿಸಿದ್ದ ಪಂದ್ಯದಲ್ಲಿ ಡೆಲ್ಲಿ ಮೇಲುಗೈ ಸಾಧಿಸಿತು.

ಜೆಮಿಮಾ ಅರ್ಧಶತಕ: ಡೆಲ್ಲಿ ತಂಡಕ್ಕೆ ಮೆಗ್ ಲ್ಯಾನಿಂಗ್ (29; 26ಎ) ಮತ್ತು ಶಫಾಲಿ ವರ್ಮಾ (23; 18ಎ) ಮೊದಲ ಪವರ್‌ಪ್ಲೇನಲ್ಲಿ 54 ರನ್ ಗಳಿಸಿ ಉತ್ತಮ ಆರಂಭ ನೀಡಿದರು.

ನಂತರ ಜೆಮಿಮಾ (58; 36ಎ, 4X8, 6X1) ಮತ್ತು ಕ್ಯಾಪ್ಸಿ (48; 32ಎ, 4X8) ಮೂರನೇ ವಿಕೆಟ್ ಜೊತೆಯಾಟದಲ್ಲಿ 97 ರನ್ ಸೇರಿಸಿದರು. ಜೆಮಿಮಾ ಅವರ ಆಟವು ಆಕರ್ಷಕವಾಗಿತ್ತು. ಫ್ರಂಟ್‌ಫುಟ್ ಡ್ರೈವ್, ಸ್ವೀಪ್ ಮತ್ತು ಪಂಚ್‌ಗಳು ಗಮನ ಸೆಳೆದವು. ಇನಿಂಗ್ಸ್‌ನ ಕೊನೆಯ ಓವರ್ ಬೌಲಿಂಗ್ ಮಾಡಿದ ಶ್ರೇಯಾಂಕಾ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 181 (ಮೆಗ್ ಲ್ಯಾನಿಂಗ್ 29, ಶಫಾಲಿ ವರ್ಮಾ 23, ಜೆಮಿಮಾ ರಾಡ್ರಿಗ್ಸ್ 58, ಅಲೈಸ್ ಕ್ಯಾಪ್ಸಿ 48, ಮೆರಿಝಾನೆ ಕಾಪ್ ಔಟಾಗದೆ 12, ಶ್ರೇಯಾಂಕಾ ಪಾಟೀಲ 26ಕ್ಕೆ4)

ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 180 (ಸೋಫಿ ಮಾಲಿನ್ 33, ಎಲಿಸ್ ಪೆರಿ 49, ರಿಚಾ ಘೋಷ್ 51, ಸೋಫಿ ಡಿವೈನ್ 26, ಅಲಿಸ್ ಕ್ಯಾಪ್ಸಿ 5ಕ್ಕೆ1, ಶಿಖಾ ಪಾಂಡೆ 34ಕ್ಕೆ1) **ಪಂದ್ಯ ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್‌ಗೆ 1 ರನ್ ಜಯ, **ಪಂದ್ಯದ ಆಟಗಾರ್ತಿ:**ಜೆಮಿಮಾ ರಾಡ್ರಿಗ್ರಸ್

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಜೆಮಿಮಾ ರಾಡ್ರಿಗಸ್ –ಪಿಟಿಐ ಚಿತ್ರ

ಏಷ್ಯನ್ ಕುಸ್ತಿಗೆ ಅರ್ಜುನ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಕುಸ್ತಿಪಟು ಅರ್ಜುನ್ ಹಲಕುರ್ಕಿ ಅವರು ಕಜಕಸ್ತಾನದಲ್ಲಿ ನಡೆಯಲಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಅರ್ಜುನ್ ಹಲಕುರ್ಕಿ

ಭಾನುವಾರ ಸೋನೆಪತ್‌ನಲ್ಲಿ ನಡೆದ ಡಬ್ಲ್ಯುಎಫ್‌ಐ ಆಯೋಜಿಸಿದ್ದ ಆಯ್ಕೆ ಟ್ರಯಲ್ಸ್‌ನಲ್ಲಿ ಗ್ರಿಕೊ ರೋಮನ್ 55 ಕೆ.ಜಿ ವಿಭಾಗದಲ್ಲಿ ಚಿನ್ನ ಗೆದ್ದು ಅರ್ಹತೆ ಗಳಿಸಿದ್ದಾರೆಂದು ಕರ್ನಾಟಕದ ಕುಸ್ತಿ ಸಂಸ್ಥೆ ಅಧ್ಯಕ್ಷ ಬಿ. ಗುಣ ರಂಜನ್ ಶೆಟ್ಟಿ ಅವರು ತಿಳಿಸಿದ್ದಾರೆ.

To Know More, Call 1800 209 8282 | cars.tatamotors.com | ev.tatamotors.com | @officialtatamotorscars | @tatamotorscars | @tatamotors_cars | @TataMotorsCars

^ Ex-Showroom Price New Safari Smart MT, New Nexon Smart MT Petrol and New Harrier Smart MT New Delhi. *All India Ex-Showroom Price I T&C Apply. Specification & price subject to change please check with nearest dealers. #Gold coin offer is valid for deliveries before 31st Mar 2024. All offer from dealer.

KHT MOTORS Whitefield: 7506023988; Domlur: 7506024006, Kolar: 8291028427
KROPEX AUTO Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS Hebbal: 7506023837; Dasarahalli: 9167982568; Kalyana Nagar: 9167163087
CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454; Channarayapatna: 8291025933
KEY MOTORS Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Sunkadakatte Magadi Road: 9167882027, Nelamangala: 9167881890
SREE AUTO Tumkur: 7506024318, Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028
URS KAR Mysore: 7506024258; Hinkal: 8879085248; Mandya: 9619043550; Madikeri: 9619041548; Gonikoppal: 9619038816; Kushalnagara: 9619138205; ChamarajaNagar: 9619138237
AUTOMATRIX Chikmagalur: 9619018060, Hassan: 8391202856